ಎನ್.ಇ.ಪಿ. ಕನ್ನಡ ಭಾಷಾ ಪಠ್ಯ

# ವಿಜ್ಞಾನ ಸೌರಭ – 4

## ಬಿ.ಎಸ್ಸಿ.

ನಾಲ್ಕನೇ ಸೆಮಿಸ್ಟರ್


ಪ್ರಧಾನ ಸಂಪಾದಕರು

ಡಾ. ಪ್ರಶಾಂತ ಜಿ. ನಾಯಕ

ಸಂಪಾದಕರು

ಡಾ. ಶಾಂತರಾಜು

ಡಾ. ಬಸವರಾಜು ಕೆ.ಬಿ.

ಪ್ರೊ. ಲಕ್ಷ್ಮೀನಾರಾಯಣ ಎಚ್.ಎನ್



ಬೆಂಗಳೂರು ನಗರ ವಿಶ್ವವಿದ್ಯಾಲಯ

BENGALURU CITY UNIVERSITY

ಆಗು ನೀ ಅನಿಕೇತನ

BE BOUNDLESS

KANNADA BHASHA PATHYA - VIJNANA SOURABHA :
A Prescribed Text Book for B.Sc. Degree Course (Fourth Semester);
Chief Editor: Prof. Prashanth G. Nayak (Professor of Kannada & Director, Kannada Bharathi, Kuvempu University, Shankaraghatta, B.R. Project. Shimoga Dist.)

Edited By : Dr. Shantharaju, Dr. Basavaraju,
Prof. Lakshminarayana H.N

Publishd by : Bengaluru City University, BENGALURU

Pp : 116 + vii

© Bengaluru City University,

First print : 2022

ಪ್ರಧಾನ ಸಂಪಾದಕರು
**ಡಾ. ಪ್ರಶಾಂತ ಜಿ. ನಾಯಕ**

ಸಲಹಾ ಸಮಿತಿ:
**ಡಾ. ಕೆ.ವೈ. ನಾರಾಯಣಸ್ವಾಮಿ**
**ಡಾ. ಎಂ.ಎಸ್. ಆಶಾದೇವಿ**

ಸಂಯೋಜಕರು:
**ಡಾ. ಬೆಳಕೆರೆ ಲಿಂಗರಾಜಯ್ಯ**

ಬೆಲೆ: ರೂ. 00/–

ಪ್ರಕಾಶಕರು:
ಬೆಂಗಳೂರು ನಗರ ವಿಶ್ವವಿದ್ಯಾಲಯ

# ಕುಲಪತಿಗಳ ಆಶಯ ನುಡಿ

ಬೆಂಗಳೂರು ನಗರ ವಿಶ್ವವಿದ್ಯಾಲಯ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಅನನ್ಯತೆಯನ್ನು ಯುವಜನತೆಗೆ ಮನವರಿಕೆ ಮಾಡಿಕೊಡಲು ಸನ್ನದ್ಧವಾಗಿದೆ. ಕನ್ನಡ ಭಾಷೆಯನ್ನು ಸರ್ವಾಂಗೀಣವಾಗಿ ಆಧುನಿಕ ಬದುಕಿನ ಅಗತ್ಯಕ್ಕೆ ತಕ್ಕಂತೆ ಅಭಿವೃದ್ಧಿಪಡಿಸಬೇಕಾದ ಹೊಣೆಯನ್ನು ಎಲ್ಲಾ ಉನ್ನತ ಶಿಕ್ಷಣ ಸಂಸ್ಥೆಗಳು ಹೊರಬೇಕಿದೆ. ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನದ ಗರಿಮೆ ಸಿಕ್ಕಿರುವುದು; ಕನ್ನಡ ಭಾಷೆಯ ಅಂತಸ್ಥವಾಗಿರುವ ಜ್ಞಾನಕ್ಕೆ ದೊರೆತಿರುವ ಮನ್ನಣೆಯಾಗಿದೆ. ಕನ್ನಡ ಭಾಷೆಯಲ್ಲಿ ಉಪಲಬ್ಧವಿರುವ ಶ್ರೇಷ್ಠ ಸಾಹಿತ್ಯ ಕೃತಿಗಳು, ಅಪರೂಪದ ಶಾಸನಗಳು, ಜಾನಪದ ವಿವಿಧ ವಾಙ್ಮಯಗಳು ಮತ್ತು ಶಾಸ್ತ್ರ ಗ್ರಂಥಗಳು ಕನ್ನಡವನ್ನು ಜ್ಞಾನದ ಭಾಷೆಯಾಗಿ ರೂಪಿಸಲು ಸಹಾಯ ಮಾಡಿವೆ. ಕಳೆದ ಎರಡು ದಶಕಗಳಿಂದ ಕನ್ನಡ ಭಾಷೆಯನ್ನು ತಂತ್ರಜ್ಞಾನದ ಭಾಷೆಯಾಗಿಸುವ ಕಾರ್ಯವೂ ಯಶಸ್ವಿಯಾಗಿ ನಡೆಯುತ್ತಿದೆ. ಬದುಕಿನ ಎಲ್ಲಾ ವಲಯಗಳ ಅವಶ್ಯಕತೆಗೆ ತಕ್ಕಂತೆ ಕನ್ನಡವನ್ನು ಅಂತರಾಷ್ಟ್ರೀಯ ವ್ಯವಹಾರದ ಭಾಷೆಯಾಗಿ ಆಧುನಿಕ ವಿಜ್ಞಾನದ ಸಂಶೋಧನೆಗಳನ್ನು ನಿರ್ವಹಿಸುವ ವಿಜ್ಞಾನ ಭಾಷೆಯಾಗಿ ವಿಸ್ತರಿಸಲು ನಾವು ಬದ್ಧತೆಯಿಂದ ಕೆಲಸ ಮಾಡುವ ಅಗತ್ಯವಿದೆ. ಕುವೆಂಪು ಅವರ ಮಾತಿನಲ್ಲಿ ಹೇಳುವುದಾದರೆ 'ಕನ್ನಡ ಭಾವೋಪಯೋಗಿ ಭಾಷೆಯಾದರೆ ಮಾತ್ರ ಸಾಲದು ಅದು ಲೋಕೋಪಯೋಗಿ ಭಾಷೆಯಾಗಿ ಬಳಸುವ ಅವಶ್ಯಕತೆ ಇದೆ. ಇಂಗ್ಲಿಷ್ ಹಾಗೂ ಹಿಂದಿ ಭಾಷೆಗಳ ಜೊತೆಗೆ ಸೆಣಸುತ್ತಲೆ ಕನ್ನಡ ಭಾಷೆಯು ಕನ್ನಡಿಗರ ಆತ್ಮಸಂಗಾತ ಭಾಷೆಯಾಗಿ ಬಾಳಬೇಕಿದೆ'.

ಕರ್ನಾಟಕ ರಾಜ್ಯವು ದೇಶದಲ್ಲಿ ಹೊಸ ಶಿಕ್ಷಣ ನೀತಿಯನ್ನು ಮೊತ್ತ ಮೊದಲಿಗೆ ಜಾರಿಗೆ ತಂದಿರುವ ರಾಜ್ಯವಾಗಿದೆ. ಪ್ರಸ್ತುತ ಕರ್ನಾಟಕ ಸರ್ಕಾರವು 2020–2021ರ ವರ್ಷವನ್ನು ಕನ್ನಡ ಕಾಯಕ ವರ್ಷವೆಂದು ಘೋಷಿಸಿ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಪ್ರಸರಣಕ್ಕೆ ಅಗತ್ಯವಿರುವ ಕಾರ್ಯಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಿದೆ. ಕಳೆದ ಎಪ್ಪತ್ತೈದು ವರ್ಷಗಳಿಂದಲೂ ಶಿಕ್ಷಣ ಕ್ಷೇತ್ರದಲ್ಲಿ ಅನೇಕ ಬದಲಾವಣೆಗಳು ನಡೆಯುತ್ತಾ ಬಂದಿದ್ದರೂ ಕಲಿಕಾ ಪ್ರಕ್ರಿಯೆ

ವಿದ್ಯಾರ್ಥಿ ಸ್ನೇಹಿಯಾಗಿರಲಿಲ್ಲ ಎಂಬ ಆಪಾದನೆ ಇತ್ತು. ಈಗ ಅನುಷ್ಠಾನಗೊಳ್ಳುತ್ತಿರುವ ಹೊಸ ಶಿಕ್ಷಣ ನೀತಿಯು ಈವರೆಗೆ ಕಲಿಕೆಯಲ್ಲಿ ಇದ್ದ ಜಡತ್ವವನ್ನು ತೆಗೆದುಹಾಕಿದೆ. ವಿದ್ಯಾರ್ಥಿಗಳಿಗೆ ತಮ್ಮ ಇಷ್ಟದ ವಿಷಯಗಳನ್ನು ವಿನ್ಯಾಸಗೊಳಿಸಿಕೊಳ್ಳುವ ಅವಕಾಶ ಮತ್ತು ಕಲಿಕಾ ಸ್ವಾತಂತ್ರ್ಯವನ್ನು ಕಲ್ಪಿಸಿದೆ. ಆಧುನಿಕ ಜ್ಞಾನವನ್ನು ಮತ್ತು ತಂತ್ರಜ್ಞಾನವನ್ನು ಪ್ರಾದೇಶಿಕ ಭಾಷೆಗಳಲ್ಲಿ ಕಲಿಸುವುದರ ಮೂಲಕ ಪ್ರಕ್ರಿಯಾತ್ಮಕವಾದ ಶೈಕ್ಷಣಿಕ ವಾತಾವರಣವನ್ನು ನಿರ್ಮಿಸಲು ಶಿಕ್ಷಣ ನೀತಿ ಮುಂದಾಗಿರುವುದು ಸ್ವಾಗತಾರ್ಹ.

ಈ ಹಿನ್ನೆಲೆಯಲ್ಲಿ ಬೆಂಗಳೂರು ನಗರ ವಿಶ್ವವಿದ್ಯಾಲಯ ರಾಜ್ಯ ಉನ್ನತ ಶಿಕ್ಷಣ ಪರಿಷತ್ ನೀಡಿರುವ ಮಾದರಿ ಪಠ್ಯವಿನ್ಯಾಸವನ್ನು ಅನುಸರಿಸಿ ಕನ್ನಡ ಭಾಷೆಯ ಪಠ್ಯಪುಸ್ತಕಗಳನ್ನು ರೂಪಿಸಿದೆ. ಪಠ್ಯಗಳು ವಿದ್ಯಾರ್ಥಿಸ್ನೇಹಿಯಾಗಿ ಸಂವಾದ ಸ್ವರೂಪದಲ್ಲಿವೆ ಹಾಗೂ ಕನ್ನಡ ಭಾಷೆಯನ್ನು ಕಲಿಯುವ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಾಸಕ್ಕೂ ಮಾರ್ಗದರ್ಶಿಯಾಗಿವೆ. ಈ ಪಠ್ಯಗಳನ್ನು ಪ್ರೀತಿಯಿಂದ ರೂಪಿಸಿದ ಕನ್ನಡ ಅಧ್ಯಯನ ಮಂಡಳಿಯ ಸದಸ್ಯರಿಗೂ, ಎಲ್ಲಾ ಸಂಪಾದಕರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**ಪ್ರೊ. ಲಿಂಗರಾಜಗಾಂಧಿ**
ಕುಲಪತಿಗಳು
ಬೆಂಗಳೂರು ನಗರ ವಿಶ್ವವಿದ್ಯಾಲಯ

# ಪ್ರಧಾನ ಸಂಪಾದಕರ ಮಾತು

ಆಧುನಿಕತೆ ಎನ್ನುವ ಮಾತು ಎಲ್ಲವನ್ನು ತನ್ನ ತೆಕ್ಕೆಗೆ ತೆಗೆದುಕೊಂಡಂತೆ ಬದಲಾವಣೆ ಎನ್ನುವುದನ್ನು ಬಹುಪಾಲು ಎಲ್ಲಾ ನೆಲೆಯಲ್ಲಿಯೂ ಅನಿವಾರ್ಯವೆನ್ನುವಂತಾಗಿಸುತ್ತಿರುವುದು ನಮ್ಮ ನಡುವಿನ ಸರಳವೂ ಸಹಜವೂ ಆದ ಅರಿವಿನಂತಿದೆ. ಸೃಜನಶೀಲತೆ ಮತ್ತು ಕ್ರಿಯಾಶೀಲತೆಗಳ ಅರ್ಥವೂ ಹೀಗೆ ಹೊಸತನ್ನು ನಿರಂತರವಾಗಿ ಕೇಂದ್ರೀಕರಿಸಿ ಕೊಂಡಿರುತ್ತದೆ. ಇದು ಕಲಿಕೆಯ ಹೊತ್ತಿಗೂ ಪರಸ್ಪರ ಕಲಿಯುವವರ ಮತ್ತು ಕಲಿಸುವವರ ನಡುವಿನ ಅನುಸಂಧಾನದ ಪ್ರಕ್ರಿಯೆಯೂ ಹೌದು. ಇದರ ಜೊತೆಗೆ ನಿರಂತರವಾದ ಎಚ್ಚರವೂ ಅತ್ಯಗತ್ಯ. ಕನ್ನಡ ಭಾಷೆ ಮತ್ತು ಸಾಹಿತ್ಯವೆನ್ನುವುದು ಹೀಗೆ ಸದಾತನ್ನನ್ನು ಸವಾಲಿಗೆ ತೆರೆದುಕೊಂಡಂತೆ ಹೊಸತನಕ್ಕೆ ನಿರಂತರವಾಗಿ ಎದುರಾಗುತ್ತಲೇ ಬಂದಿರುವುದು ಗಮನಾರ್ಹವಾದುದು.

ಹೊಸ ಶಿಕ್ಷಣ ನೀತಿ ನಮ್ಮ ಉನ್ನತ ಶಿಕ್ಷಣದ ಹಲವು ಬಗೆಯ ಬದಲಾವಣೆಗೆ ಕಾರಣವಾಗುತ್ತಿರುವ ಸಂದರ್ಭದಲ್ಲಿ ಪದವಿಯ ವಿದ್ಯಾರ್ಥಿಗಳಿಗೆ ಭಾಷೆ ಮತ್ತು ಸಾಹಿತ್ಯದ ಪಠ್ಯವನ್ನು ವಿಶಿಷ್ಟವಾಗಿ ರೂಪಿಸುವ ಜವಾಬ್ದಾರಿಯೊಂದು ಕನ್ನಡತನವನ್ನು ನಮ್ಮತನ ಎಂದುಕೊಂಡ ನಮ್ಮೆಲ್ಲರ ಮೇಲಿದೆ. ಈ ಹಿನ್ನೆಲೆಯಲ್ಲಿ ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಕನ್ನಡ ಅಧ್ಯಾಪಕ ಬಂಧುಗಳು ಮೊದಲ ದಿನದಿಂದಲೂ ಅತ್ಯಂತ ಉತ್ಸಾಹ, ಶ್ರಮ ಮತ್ತು ಬದ್ಧತೆಯಿಂದ ಕಾರ್ಯ ನಿರ್ವಹಿಸಿದ್ದಾರೆ. ಅದರ ಫಲಿತವಾಗಿ ಉತ್ತಮ ಪಠ್ಯಗಳು ವಿದ್ಯಾರ್ಥಿಗಳ ಕೈಸೇರುವಂತಾಗುತ್ತಿದೆ. ಇದಕ್ಕಾಗಿ ಬೆಂಗಳೂರು ನಗರ ವಿಶ್ವವಿದ್ಯಾಲಯದ ಅಧ್ಯಯನ ಮಂಡಳಿಯ ಸದಸ್ಯರಿಗೆ ಹೃದಯ ಪೂರ್ವಕ ಅಭಿನಂದನೆಗಳು. ಪಠ್ಯಗಳನ್ನು ರೂಪಿಸುವಲ್ಲಿ ಶ್ರಮ ವಹಿಸಿದ ಎಲ್ಲಾ ಪಠ್ಯಗಳ ಸಂಪಾದಕರಿಗೂ ಆತ್ಮೀಯ ಕೃತಜ್ಞತೆಗಳು. ನಿರಂತರವಾಗಿ ಸಂಯೋಜನೆಯ ಕಾರ್ಯ ನಿರ್ವಹಿಸಿದ ಆತ್ಮೀಯರಾದ ಡಾ. ಲಿಂಗರಾಜಯ್ಯನವರ ಶ್ರಮವನ್ನು ಸ್ಮರಿಸಲೇಬೇಕು.

ಅಧ್ಯಯನ ಮಂಡಳಿಯ ಅಧ್ಯಕ್ಷನನ್ನಾಗಿ ನನಗೆ ಜವಾಬ್ದಾರಿ ನೀಡಿದ ಬೆಂಗಳೂರು ನಗರ ವಿಶ್ವವಿದ್ಯಾಲಯದ ಸನ್ಮಾನ್ಯ ಕುಲಪತಿಗಳಾದ ಪ್ರೊ. ಲಿಂಗರಾಜಗಾಂಧಿ ಅವರಿಗೆ ಕೃತಜ್ಞತೆಗಳು. ಪ್ರತೀ ಹಂತದಲ್ಲಿಯೂ ನಮ್ಮೊಂದಿಗಿದ್ದು ಸಹಕಾರ ನೀಡಿದ ಪ್ರೊ. ರಮೇಶ್. ಬಿ ಮಾನ್ಯ ಕುಲ ಸಚಿವರು ಪರಿಕ್ಷಾಂಗ ಇವರಿಗೆ ನಮ್ಮ ಧನ್ಯವಾದಗಳು ಮತ್ತು ಶ್ರೀಯುತ ಶ್ರೀಧರ್ ಸಿ.ಎಸ್ ಮಾನ್ಯ ಕುಲ ಸಚಿವರು ಇವರಿಗೆ ನಮ್ಮ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**ಡಾ. ಪ್ರಶಾಂತ ಜಿ. ನಾಯಕ**
ಪ್ರಾಧ್ಯಾಪಕರು

# ಬಿ.ಎಸ್ಸಿ. ನಾಲ್ಕನೇ ಸೆಮಿಸ್ಟರ್ ಕನ್ನಡ ಭಾಷಾ ಪಠ್ಯಕ್ರಮ


**ಘಟಕ I**

**ಆಶಯ: ದಮನಿತ ಲೋಕ** 001

01. ಸಾರ ಹೃದಯನು ನೀನು –ಕನಕದಾಸರು 001
02. ಹೆಣದ ಬಟ್ಟೆ –ಶಾ. ಬಾಲುರಾವ್ 006
03. ಏಕಲವ್ಯ (ನಾಟಕ) –ಡಾ. ಸಿದ್ದಲಿಂಗಯ್ಯ 016
04. ಬದುಕಲು ಇಚ್ಛಿಸುತ್ತೇನೆ, ಸ್ವಾಭಿಮಾನದಿಂದ.... –ತಮಿಳ್ ಸೆಲ್ವಿ 027

**ಘಟಕ II**

**ಆಶಯ: ಸಹಿಷ್ಣುತೆ** 037

01. ಬಿದಿರು ನಾನಾರಿಗಲ್ಲದವಳು –ಶಿಶುನಾಳ ಷರೀಫ 037
02. ಧರ್ಮ ಮತ್ತು ಸಾಮಾಜಿಕ ಜವಾಬ್ದಾರಿ –ಜಿ.ಎಸ್. ಶಿವರುದ್ರಪ್ಪ 038
03. ಶಾಪ ವಿಮೋಚನೆಯ ಸ್ಪರ್ಶ –ಜಯಂತ್ ಕಾಯ್ಕಿಣಿ 047
04. ಭಾರತ ಒಕ್ಕೂಟದಲ್ಲಿ ಧರ್ಮ ಸೌಹಾರ್ದ –ಮಹಾತ್ಮ ಗಾಂಧಿ 050

**ಘಟಕ III**

**ಆಶಯ: ಶ್ರೀಸಾಮಾನ್ಯನ ಬದುಕು** 057

01. ಮೊಸರಿನ ಮಂಗಮ್ಮ –ಮಾಸ್ತಿ ವೆಂಕಟೇಶ ಅಯ್ಯಂಗಾರ್ 057
02. ಮನೆಯಿಂದ ಮನೆಗೆ –ಕೆ.ಎಸ್. ನರಸಿಂಹಸ್ವಾಮಿ 069
03. ಚಂದ್ರಗುತ್ತಿ ಜಾತ್ರೆಯಲ್ಲಿ ನಡೆದ ಕ್ರೌರ್ಯ –ಕಡಿದಾಳ ಶ್ಯಾಮಣ್ಣ 072
04. ಎತ್ತಣ ಮಾಮರ ಎತ್ತಣ ಕೋಗಿಲೆ –ಬೈರಮಂಗಲ ರಾಮೇಗೌಡ 079

**ಘಟಕ IV**


**ಆಶಯ: ಸಂಕೀರ್ಣ** 086

01. ಪುರಾಣಗಳಲ್ಲಿ ಭೂಮಿಯ ಪರಿಕಲ್ಪನೆ 086
–ಡಾ. ಟಿ.ಆರ್. ಅನಂತರಾಮು

02. ಕಾದಿರುವನು ಕ್ಯೂರಿ –ನೇಮಿಚಂದ್ರ 092

03. ಕರ್ನಾಟಕದಲ್ಲಿ ಅಂತರ್ಜಲ ಅಧ್ಯಯನ, 097
ಅಂತರ್ಜಲ ಮಾಲಿನ್ಯ ಸಮಸ್ಯೆ ಮತ್ತು ಪರಿಹಾರ
–ಕೆ.ಸಿ. ಸುಭಾಷ್ ಚಂದ್ರ

04. ಆಹಾರದ ಅವಾಸ್ತವ ಕಲ್ಪನೆಗಳು 107
– ವಸುಂಧರಾ ಭೂಪತಿ

# ಘಟಕ – 1
# ಆಶಯ – ದಮನಿತ ಲೋಕ

ಮನೆಯವರೆಲ್ಲರೂ ಒಟ್ಟಾಗಿ ಶ್ರಮಿಸಿ ದುಡಿದರೆ, ಎರಡು ಪಾವು ಅಕ್ಕಿ ಮತ್ತು ಐದು ಪಾವು ಬತ್ತ ದೊರೆಯುತ್ತದೆ. ಆ ಬತ್ತವನ್ನು ಮನೆಯಲ್ಲಿಯೇ ಕುಟ್ಟಿ, ಕೇರಿದರೆ, ಎರಡು ಪಾವು ಅಕ್ಕಿಗಿಂತ ಮಿಕ್ಕಿ ಸಿಗುವುದಿಲ್ಲ. ಒಂದು ಸೇರು ಅಕ್ಕಿಯನ್ನು ಈ ಆರು ಮಂದಿಯ ಸಂಸಾರ ಸಾಗಬೇಕು. ಸರಿಯಾಗಿ ಸಾಗುವ ದಿನ ಎರಡು ಪಾವು ಅಕ್ಕಿಯನ್ನು ಬೇಯಿಸಿ, ಬೆಳ್ಳಿ ಒಂದು ಉದ್ದದ ಗಂಜಿಯನ್ನು ಮಾಡುತ್ತಾಳೆ. ಅದನ್ನು ಕುಡಿದು, ಕೆಲಸಕ್ಕೆ ಹೊರಟರೆ, ಎರಡನೆಯ ಊಟ, ಸಂಜೆ ಹೊತ್ತು ಮುಳುಗುವದರೊಳಗೆ. ಹೊತ್ತು ಮುಳುಗಿದ ಮೇಲೆ ಚೋಮನ ಗುಡಿಸಲಲ್ಲಿ ದೀಪವನ್ನೇ ಉರಿಸಿದವರಲ್ಲ. ದೀಪ ಉರಿಸಲು ಅವರೇನು ಮುತ್ತು ಸುರಿಯುತ್ತಾರೆಯೇ?

**– ಚೋಮನದುಡಿ**
**ಶಿವರಾಮ ಕಾರಂತ**

# ಸಾರ ಹೃದಯನು ನೀನು

**–ಕನಕದಾಸರು**

ಬಂದನತಿಹರುಷದಲಿ ಮುನಿಕುಲ
ವೃಂದದೊಡನೈತರಲು ರಘುಕುಲ
ನಂದು ಬಿಜಯಂಗೈಸೆ ತಂದನು ರಾಜಮಂದಿರಕೆ,
ಬಂದರೇ ಪ್ರತಿವಾದಿಗಳು ಕರ
ತಂದಿರೇ ನೀವೆನುತ ಮುನಿಕುಲ
ವೃಂದವನು ಸತ್ಕರಿಸಿ ಕುಳ್ಳಿರಿಸಿದನು ಗೌತಮನು

ಇಂತೆಸೆವನಾ ಸಭೆಯೊಳಗೆ ಮತಿ
ವಂತ ನುಡಿದನು ಧಾನ್ಯವರ್ಗದ
ಸಂತತಿಯ ಬರಹೇಳಿಯನೆ ಸೆರೆಮನೆಯೊಳಿರ್ದವರು
ನಿಂತು ಕರಗಳ ಮುಗಿದು ಧರಣೀ

ಕಾಂತ ರಘುವರನೀ ಸುಬುದ್ಧಿಯ
ನೆಂತು ನಮಗರುಹುವಿರಿಯದ ಪೇಳೆಂದ ನೆರದಲೆನ

ಆರು ನುಡಿಯರೆ ನೀವು ಹಿರಿಯರು
ಮೀರಿಸುವರಾರಿವರೊಳಗೆ ಗುಣ
ಸಾರನವನು ಪೇಳೆನಲು ಜಂಭಾರಿ ನಸುನಗುತ
ಸಾರ ಹೃದಯನು ನರೆದಲೆಗ ನಿ
ಸ್ಸಾರನಿ ವ್ರೀಹಿಯೆನಲು ಗುಣನಿಧಿ
ಮಾರುತಾತ್ಮಜ ನೋಡಿದನು ಸನ್ನೆಯಲ್ಲಿ ನಾರದನ

ಎಲ್ಲ ನವಧಾನ್ಯದಲಿ ಈತನೆ
ಬಲ್ಲಿದನು ಹಸಿಯಲ್ಲ ಬಡವರ
ಬಲ್ಲಿದರನಾರೈದು ಸಲಹುವನಿವಗೆ ಸರಿಯುಂಟೆ
ನೆಲ್ಲಿನಲಿ ಗುಣವೇನು ಭಾಗ್ಯದಿ
ಬಲ್ಲಿದರ ಪತಿಕರಿಸುವನು ಅವ
ನಲ್ಲಿ ಸಾರವ ರಾಣೆಯೆಂದನು ಕಪಿಲ ಮುನಿ ನಗುತ

ಸುರಮುನಿಗಳೆಂತೆನಲು ಭೂಸುರ
ವರರು ಸಂತೋಷಿಸಲು ಸಭಿಕರು
ನರೆದಲೆಗ ನೀ ಬಾರೆನುತ ರಾಮನೃಪಾಲ ನೆರೆಮೆಚ್ಚಿ
ಕರೆದು ಕೊಟ್ಟನು ತನ್ನ ನಾಮವ
ಧರೆಗೆ ರಾಘವನೆಂಬ ಪೆಸರಾ
ಯ್ತಿರದೆ ವ್ರೀಹಿ ನಾಚಿದನು ಸಭೆಯಲ್ಲಿ ಶಿರವ ಬಾಗಿಸಿದ

ಅಹುದು ಸುರಪನ ಮಾತು ನಿಶ್ಚಯ
ಮಹುದು ನರೆದಲೆಗನೆ ಸಮರ್ಥನು
ಬಹಳ ಬಲಯುತ ಸೆರೆಗೆ ತಳ್ಳಲು ಕಾಂತಿಗೆಡಲಿಲ್ಲ
ಸಹಜವಿದು ಪರಪಕ್ಷವಾದಡೆ
ವ್ರೀಹಿ ಕರಗಿ ಕಂದಿದನು ಸೆರೆಯಲಿ
ವಿಹಿತವದು ಕೇಳೆಂದು ನಾರದ ನುಡಿದ ನಸುನಗುತ

ಎಡದ ಕಡೆಯಲಿ ಕಪಿಕುಲೇಂದ್ರನ
ಗಡಣ ಬಲದಲಿ ರಾವಣಾನುಜ

ಸಡಗರದಿ ಮುನಿನಿಕರವಿದಿರಲಿ ಹಿಂದೆ ವಾನರರು
ಮಡದಿ ಲಕ್ಷ್ಮಣ ದೇವರಿರ್ವರು
ಬಿಡದೆ ಚಿಮ್ಮಲು ಚಾಮರಂಗಳ
ಪೊಡವಿಪತಿ ಶ್ರೀರಾಮ ಸಿಂಹಾಸನದಿ ರಂಜಿಸಿದ

ನರೆದಲೆಗನಿದು ನೆಲ್ಲು ಹಾರಕ
ಬರಗು ಜೋಳವು ಕಂಬು ಸಾಮೆಯು
ಉರುತರದ ನವಣೆಯಿದು ನವಧಾನ್ಯವೆಂದೆನಲು
ಮೆರೆವ ರಾಸಿಯ ಕಂಡುಯಿದರೊಳು
ಪರಮಸಾರವ ಹೃದಯನಾರೆಂ
ದರಸ ಕೇಳಿದನಿಲ್ಲಿರುತಿಹ ಮಹಾಮುನೀಶ್ವರರ

ದಾಶರಥಿ ಚಿತ್ತೈಸು ನಮ್ಮಯ
ದೇಶಕತಿಶಯ ನರೆದಲೆಗನೇ
ವಾಸಿಯುಳ್ಳವ ನೀತ ಮಿಕ್ಕನ ಧಾನ್ಯವೇಕೆನಲು
ಲೇಸನಾಡಿದೆ ಮುನಿಪ ಗೌತಮ
ದೋಷರಹಿತನು ಪಕ್ಷಪಾತವ
ನೀಸು ಪರಿಯಲಿ ಮಾಡುವ ಶಿವಯೆಂದನಾ ವ್ರೀಹಿಗ

ಏನೆಲವೋ ನರೆದಲೆಗ ನೀನು ಸ
ಮಾನನೇ ಯೆನಗಿಲ್ಲ ನಮ್ಮನು
ದಾನವಾಂತಕ ಬಲ್ಲನಿಬ್ಬರ ಹೆಚ್ಚು ಕುಂದುಗಳ
ಜಾನಕಿ ಪತಿಯ ಸನಿಹದಲಿ ಕುಲ
ಹೀನ ನೀನು ಪ್ರತಿಷ್ಟ ಸುಡು ಮತಿ
ಹೀನ ನೀನೆಂದೆನುತ ಖತಿಯಲಿ ಬೈದು ಭಂಗಿಸಿದ

ಲೋಕ ದಲಧಿಕ ಭೋಜನವಿದೆಂ
ದಾಕೆವಾಳರು ಬುದ್ರರು ಜರೆದು ನಿ
ರಾಕರಿಸಿ ಬಿಡಲಂತು ನೀ ಶೂದ್ರಾನ್ನ ವಾದೆಯಲ
ನಾಕನಳೆಯರು ಸಾಕ್ಷಿ ನಿನ್ನ ವಿ
ವೇಕಿಗಳು ಮೆಚ್ಚುವರೆ ಬಾಹಿರ
ಸಾಕುನಡೆ ನೀನಾವ ಮಾನ್ಯನು ಕಡೆಗೆ ತೊಲಗೆಂದ

ಜನಪರಿಗೆ ಶಿಶುಗಳಿಗೆ ಬಾಂಧವ
ಜನರೆಡೆಗೆ ಬ್ರಹ್ಮರ ಸಮಾರಾ
ಧನೆಗೆ ವಿದ್ಯಾರಂಭ ಕಾಲಕೆ ಸಕಲ ಭೂಸುರರ
ಮನೆಗಳಲಿ ಹರಿದಿವಸ ದೌ ಪಾ
ಸನೆಗಳಲಿ ತಾ ಯೋಗ್ಯನಹುದೆಂ
ದೆನಿಸಿ ಕೊಂಬೆನು ನೀನ ಯೋಗ್ಯನು ಭ್ರಷ್ಟತೊಲಗೆಂದ

ನುಡಿಯ ಕೇಳುತ ಕನಲಿ ಕಂಗಳು
ಕಿಡಿಮೆಸಗಿ ಖತಿಗೊಂಡು ನುಡಿದನು
ಸಿಡಿಲ ಘರ್ಜನೆಯಂತೆ ಸಭೆಯಲಿ ಜರೆದನಾ ವ್ರೀಹಿಯ
ನುಡಿಗೆ ಹೇಸದ ಭಂಡ ನಿನ್ನೊಳು
ಕೊಡುವರೆ ಮರುತ್ತರವ ಕಡು
ಜಡನಲಾ ನಿನ್ನೊಡನೆ ಮಾತೇಕೆಂದ ನರೆದೆಲೆಗ

ಸತ್ಯಹೀನನು ಬಡವರನು ಕ
ಣ್ಣೆತ್ತಿ ನೋಡೆ ಧನಾಢ್ಯರನು ಬೆಂ
ಬತ್ತಿ ನಡೆವವುಪೇಕ್ಷೆ ನಿನ್ನದು ಹೇಳಲೇನದನು
ಹೆತ್ತ ಬಾಣಂತಿಯರು ರೋಗಿಗೆ
ಪಥ್ಯ ನೀನಹೆ ಹೆಣದ ಬಾಯಿಗೆ
ತುತ್ತು ನೀನಹೆ ನಿನ್ನ ಜನ್ಮ ನಿರರ್ಥಕರವೆಂದ

ಸತ್ತದಿನ ದಾರಭ್ಯ ಮನುಜರು
ಮತ್ತೆ ಕರ್ಮವ ಹೊತ್ತು ಪಿಂಡವ
ನಿತ್ತು ತಪ್ಪದೆ ಮತ್ತೆ ವಾಯಸಕುಲವ ಕರಕರದು
ತುತ್ತನಿಡುವರು ಎಳ್ಳು ದರ್ಭೆಗೆ
ತೆತ್ತಿಗನು ನೀನಾದೆ ಕೀರ್ತಿಯ
ಹೊತ್ತು ಕೊಂಡೆ ದುರಾತ್ಮ ನಿನ್ನೊಳು ಮಾತದೇಕೆಂದ

ಮಸೆದುದಿತ್ತಂಡಕ್ಕೆ ಮತ್ಸರ
ಪಿಸುಣ ಬಲರತಿ, ನಿಷ್ಠುರರು ವಾ
ದಿಸಲು ಕಂಡನು ನೃಪತಿ ಮನದಲಿ ನೋಡಿ ನಸುನಗುತ
ಹಿಸುಣರಿವದಿರ ಮತ್ಸರವ ಮಾ

ಣಿಸುವ ಹದನೇನೆನುತ ಯೋಚಿಸಿ
ದಸುರ ಮುನಿಪರ ನೋಡೆ ಗೌತಮ ಮುನಿಪನಿಂತೆಂದ

ಪರಮ ಧಾನ್ಯದೊಳಿಬ್ಬರೆ ಇವ
ರಿರಲಿ ಸೆರೆಯೊಳಗಾರು ತಿಂಗಳು
ಹಿರಿದು ಕಿರಿದೆಂಬಿವರ ಪೌರುಷವರಿಯಬಹುದಿನ್ನು
ಪುರಕೆ ಗಮನಿಸಿ ನಾವು ನಿಮ್ಮನು
ಕರೆಸುವೆವು ಕೇಳೆನುತಯೋಧ್ಯಾ
ಪುರಿಗೆ ಪಯಣವ ಮಾಡ ಹೇಳಿದನಾ ವಿಭೀಷಣಗೆ

ಅವರ ಪಾದಾಂಬುಜಕೆ ವಂದಿಸಿ
ಪವನಸುತ ಬಿನ್ನೈಸಿದನು ರಾ
ಘವ ನೃಪಾಲನು ಕಳುಹೆ ಬಂದೆನು ನಿಮ್ಮ ದರುಶನಕೆ
ಅವಧಿ ಸವೆದುದು ಸೆರೆಮನೆಯೊಳಿ
ರ್ದ ವರ ನೊಡಗೊಂಡೀಕ್ಷಣವೇ ನೀ
ವವನಿಪನ ಸಂಮುಖಕೆ ಚಿತ್ತೈಸೆಂದು ಕೈ ಮುಗಿದೆ

# ಹೆಣದ ಬಟ್ಟೆ

**–ಮೂಲ : ಪ್ರೇಮ್‌ಚಂದ್, ಕನ್ನಡಕ್ಕೆ : ಶಾ. ಬಾಲುರಾವ್**

ಅಪ್ಪ ಮಗ ಇಬ್ಬರೂ ಜೋಪಡಿಯ ಬಾಗಿಲಲ್ಲಿ ಆರಿಹೋದ ಅಗ್ಗಿಷ್ಟಿಕೆಯ ಮುಂದೆ ಮೌನವಾಗಿ ಕುಳಿತಿದ್ದರು. ಒಳಗೆ ಮಗನ ಪ್ರಾಯದ ಹೆಂಡತಿ ಬುಧಿಯಾ ಪ್ರಸವ ವೇದನೆಯಿಂದ ನರಳಾಡುತ್ತಿದ್ದಳು. ಬಿಟ್ಟು ಬಿಟ್ಟು ಅವಳ ಬಾಯಿಂದ ಎದೆ ನಡುಗಿಸುವಂತಹ ಶಬ್ದ ಬರುತ್ತಿತ್ತು; ಅದನ್ನು ಕೇಳಿದಾಗ ಅಪ್ಪ ಮಕ್ಕಳಿಬ್ಬರೂ ಎದೆ ಹಿಡಿದುಕೊಳ್ಳುತ್ತಿದ್ದರು. ಚಳಿಯ ರಾತ್ರಿ; ಪ್ರಕೃತಿ ಮೌನದಲ್ಲಿ ಮುಳುಗಿತ್ತು. ಹಳ್ಳಿಗೆ ಹಳ್ಳಿಯೇ ಕತ್ತಲಲ್ಲಿ ಕರಗಿ ಹೋಗಿತ್ತು.

ಘೀಸು ಹೇಳಿದ – "ನೋಡಿದರೆ ಉಳಿಯೋಲ್ಲ ಅಂತ ಕಾಣುತ್ತೆ. ಇಡೀ ದಿನ ಅಲೆದಾಡೋದರಲ್ಲೇ ಹೋಯಿತು. ಹೋಗು, ಏನಾಗ್ತಿದೆ ಅಂತ ನೋಡಿಕೊಂಡು ಬಾ".

ಮಾಧವ ಕೋಪದಿಂದ ಹೇಳಿದ– "ಸಾಯೋದೇ ಆದರೆ ಬೇಗ ಯಾಕೆ ಸಾಯಬಾರದು! ನೋಡಿ ಏನು ಮಾಡಲಿ?"

"ನೀನು ಮಹಾ ನಿಷ್ಕರುಣಿ ಕಣೋ! ವರ್ಷಪೂರ್ತಿ ಯಾರ ಕೂಡ ಸುಖ ಸಂತೋಷದಲ್ಲಿ ಕಳೆದೆಯೋ ಅವಳಿಗೆ ಇಷ್ಟು ವಿಶ್ವಾಸಗೇಡಿಯಾಗೋದೆ!"

"ನನ್ನಿಂದ ಅವಳ ಗೋಳಾಟಾನ, ಅವಳು ಕೈಕಾಲು ಬಡಿಯೋದನ್ನ ನೋಡೋಕ್ಕೆ ಆಗೋಲ್ಲ."

ಅವರು ಚಮ್ಮಾರ ಜಾತಿಯವರು. ಇಡೀ ಹಳ್ಳಿಯಲ್ಲಿ ಕೆಟ್ಟ ಹೆಸರು ಸಂಪಾದಿಸಿದ್ದರು. ಅಪ್ಪ ಘೀಸು ಒಂದು ದಿನ ಕೆಲಸ ಮಾಡಿದರೆ ಮೂರು ದಿನ ಆರಾಮ ಮಾಡುತ್ತಿದ್ದ. ಮಗ ಮಾಧವ ಎಂತಹ ಮೈಗಳ್ಳನೆಂದರೆ ಅರ್ಧ ಗಂಟೆಯ ಕೆಲಸಕ್ಕೆ ಒಂದು ಗಂಟೆ ಚಿಲುಮೆ ಕುಡಿಯುತ್ತಿದ್ದ. ಇದರಿಂದಾಗಿ ಎಲ್ಲೂ ಕೂಲಿಗೆಲಸ ಸಿಗುತ್ತಿರಲಿಲ್ಲ. ಮನೆಯಲ್ಲಿ ಒಂದು ಹಿಡಿ ಕಾಳಿದ್ದರೆ ಸಾಕು ಕೆಲಸ ಮಾಡುವುದಿಲ್ಲವೆಂದು ಅವರು ಶಪಥ ಮಾಡಿದ್ದರು. ಒಂದೆರಡು ಹೊತ್ತು ಉಪವಾಸಬಿದ್ದ ಮೇಲೆ ಘೀಸು ಮರ ಹತ್ತಿ ಒಂದಿಷ್ಟು ಕೊಂಬೆ ಮುರಿದು ತರುತ್ತಿದ್ದ; ಮಾಧವ ಪೇಟೆಗೆ ಹೋಗಿ ಅದನ್ನು ಮಾರಿ ಬರುತ್ತಿದ್ದ. ಆ ಹಣ ಕೈಲಿರುವವರೆಗೆ ಇಬ್ಬರೂ ಅಲ್ಲಿ ಇಲ್ಲಿ ಅಲೆದಾಡುತ್ತ ಕಾಲ ಹಾಕುತ್ತಿದ್ದರು. ಹೊಟ್ಟೆಗಿಲ್ಲದ ಸ್ಥಿತಿ ಬಂದಾಗ ಮತ್ತೆ ಕೊಂಬೆ ಕಡಿಯುವುದು, ಇಲ್ಲವೇ ಕೂಲಿಗೆಲಸ ಹುಡುಕಿಕೊಂಡು ಓಡಾಡುವುದು, ಹಳ್ಳಿಯಲ್ಲಿ ಕೆಲಸಕ್ಕೇನೂ ಕೊರತೆಯಿರಲಿಲ್ಲ. ಬೇಸಾಯಗಾರರ ಹಳ್ಳಿಯೆಂದ ಮೇಲೆ ಮೈಮುರಿದು ದುಡಿಯುವವರಿಗೆ ಹತ್ತಾರು ಕೆಲಸ ಸಿಗುತ್ತದೆ. ಇಬ್ಬರಿಂದ ಕೂಡಿ ಒಬ್ಬ ಮಾಡುವಷ್ಟು ಕೆಲಸ ಪಡೆದು, ಅಷ್ಟರಿಂದಲೇ ತೃಪ್ತಿಯಾಗುವುದರ ವಿನಃ ಬೇರೆ ದಾರಿಯಿಲ್ಲವೆನ್ನುವ ಸ್ಥಿತಿ ಬಂದಾಗ ಮಾತ್ರ ಜನ

ಅವರನ್ನು ಕೆಲಸಕ್ಕೆ ಕರೆಯುತ್ತಿದ್ದರು. ಇಬ್ಬರೂ ಸಾಧುಗಳಾದರೂ ಆಗಿದ್ದಿದ್ದರೆ ಯಾವ ಸಂಯಮನಿಯಮಗಳ ಅವಶ್ಯಕತೆಯೂ ಇಲ್ಲದೆ ಧೈರ್ಯಸಂತೋಷಗಳಿಂದ ಇರಬಹುದಾಗಿತ್ತು. ಹಾಗಿತ್ತು ಅವರ ಪ್ರಕೃತಿ! ಅವರದ್ದು ವಿಚಿತ್ರ ಜೀವನ. ಒಂದೆರಡು ಮಣ್ಣಿನ ಮಡಕೆಗಳನ್ನು ಬಿಟ್ಟರೆ ಅವರಿಗೆ ಬೇರೆ ಯಾವ ಆಸ್ತಿಯೂ ಇರಲಿಲ್ಲ. ಹರಿದ ಹಳೆಯ ಚಿಂದಿಯಿಂದ ತಮ್ಮ ಮಾನ ಮುಚ್ಚಿಕೊಂಡು ಬದುಕುತ್ತಿದ್ದರು. ಪ್ರಾಪಂಚಿಕ ಚಿಂತೆಗಳಿಂದ ಮುಕ್ತರಾಗಿದ್ದರು! ಸಾಲದ ಭಾರ ಹೇರಿಕೊಂಡಿತ್ತು. ಬೈಗುಳವನ್ನೂ ಸಹಿಸುತ್ತಿದ್ದರು. ಏಟನ್ನೂ ತಿನ್ನುತ್ತಿದ್ದರು. ಆದರೂ ದುಃಖವೆಂಬುದು ಸ್ವಲ್ಪವೂ ಇರಲಿಲ್ಲ. ವಾಪಸ್ಸು ಬರುವುದೆಂಬ ಆಸೆ ಏನೇನೂ ಇಲ್ಲದೆಯೇ ಜನ ಅವರಿಗೆ ಚೂರುಪಾರು ಸಾಲ ಕೊಡುತ್ತಿದ್ದರು – ಅಂತಹ ದೈನ್ಯವಿತ್ತು ಅವರಲ್ಲಿ. ಬಟಾಣಿ ಆಲೂಗಡ್ಡೆಗಳ ಕಾಲದಲ್ಲಿ ಇತರರ ಹೊಲದಿಂದ ಅವನ್ನು ಕಿತ್ತುತಂದು ಹುರಿದೋ, ಸುಟ್ಟೋ ತಿನ್ನುತ್ತಿದ್ದರು. ಇಲ್ಲವೇ ನಾಲ್ಕೈದು ಕಬ್ಬಿನ ಜಲ್ಲೆ ಕಡಿದು ತಂದು ರಾತ್ರಿಯ ಹೊತ್ತು ಅಗಿದು ತಿನ್ನುತ್ತಿದ್ದರು. ಇದೇ ಆಕಾಶ ವೃತ್ತಿಯಲ್ಲಿ ಘೀಸೂ ಅರವತ್ತು ವರ್ಷ ಕಳೆದಿದ್ದ. ಮಾಧವ ಸುಪುತ್ರ; ಅಪ್ಪನ ಹೆಜ್ಜೆ ಹಿಡಿದು ನಡೆದಿದ್ದ. ಅಷ್ಟೇ ಅಲ್ಲ, ಅವನ ಹೆಸರು ಇನ್ನೂ ಉಜ್ವಲವಾಗಿ ಬೆಳಗುತ್ತಿತ್ತು.

ಈಗ ಸಹ ಇಬ್ಬರೂ ಅಗ್ಗಿಷ್ಟಿಕೆಯ ಮುಂದೆ ಕುಳಿತು ಯಾರದೋ ಹೊಲದಿಂದ ಅಗೆದು ತಂದಿದ್ದ ಆಲೂಗಡ್ಡೆಯನ್ನು ಸುಡುತ್ತಿದ್ದರು. ಘೀಸುವಿನ ಹೆಂಡತಿ ಸತ್ತು ಎಷ್ಟೋ ಕಾಲವಾಗಿತ್ತು. ಮಾಧವ ಕಳೆದ ವರ್ಷ ತಾನೇ ಮದುವೆ ಮಾಡಿಕೊಂಡಿದ್ದ. ಹೆಂಡತಿ ಬಂದಂದಿನಿಂದ ಅವಳು ಮನೆಯಲ್ಲಿ ವ್ಯವಸ್ಥೆಯ ತಳಪಾಯ ಹಾಕಿದ್ದಳು. ಹಿಟ್ಟು ಬೀಸಿಯೋ, ಹುಲ್ಲು ಕತ್ತರಿಸಿಯೋ ದಿನವೂ ಸೇರಿನಷ್ಟು ಹಿಟ್ಟನ್ನು ಹೇಗೋ ಹೊಂದಿಸಿ ಈ ನಾಚಿಕೆಗೇಡಿಗಳ ಹಸಿದ ಹೊಟ್ಟೆ ತುಂಬಿಸುತ್ತಿದ್ದಳು. ಅವಳು ಬಂದಾಗಿನಿಂದ ಇವರಿಬ್ಬರೂ ಇನ್ನೂ ಹೆಚ್ಚು ಆಲಸಿಗಳೂ ಆರಾಮಪ್ರಿಯರೂ ಆಗಿಬಿಟ್ಟಿದ್ದರು. ಅಷ್ಟೇ ಅಲ್ಲ, ಕೊಂಚ ಜಂಬ ತೋರಿಸಲೂ ಶುರು ಮಾಡಿದ್ದರು. ಯಾರಾದರೂ ಕೆಲಸಕ್ಕೆ ಬರಹೇಳಿದರೆ. ಹಿಂದೆ ಮುಂದೆ ನೋಡದೆ ಎರಡು ಪಟ್ಟು ಕೂಲಿ ಕೇಳುತ್ತಿದ್ದರು. ಈಗ ಅದೇ ಹೆಂಗಸು ಪ್ರಸವ ವೇದನೆಯಿಂದ ಸಾಯುತ್ತಿದ್ದಾಳೆ; ಪ್ರಾಯಶಃ ಇವರಿಬ್ಬರೂ ಅವಳು ಸತ್ತರೆ ತಾವು ಆರಾಮವಾಗಿ ನಿದ್ರೆ ಮಾಡಬಹುದೆಂದು ಕಾಯುತ್ತಿದ್ದಾರೋ ಏನೋ!

ಘೀಸು ಆಲೂಗಡ್ಡೆ ಎತ್ತಿಕೊಂಡು ಸಿಪ್ಪೆ ಸುಲಿಯುತ್ತ ಹೇಳಿದ– "ಹೋಗಿ ನೋಡಿ ಬಾರೋ, ಅವಳ ಸ್ಥಿತಿ ಹೇಗಿದೆ ಅಂತ. ಇನ್ನೇನು, ಭೂತಚೇಷ್ಟೆ ಇರಬೇಕು. ಇಲ್ಲಂತೂ ದೆವ್ವ ಬಿಡಿಸೋಕ್ಕೆ ಓಝುನೂ*" ಒಂದು ರೂಪಾಯಿ ತೊಗೋತಾನೆ!"

* ಮಂತ್ರಮಾಟಗಳಿಂದ ದೆವ್ವ ಭೂತ ಬಿಡಿಸುವ ವೃತ್ತಿಯವನು.

ತಾನು ಮನೆಯೊಳಗೆ ಹೋದರೆ ಎಲ್ಲಿ ಅಪ್ಪ ಆಲೂಗಡ್ಡೆಯ ಹೆಚ್ಚು ಭಾಗವನ್ನು ಮುಗಿಸಿಬಿಡುವನೋ ಎಂದು ಮಾಧವನಿಗೆ ಭಯ. ಅವನಂದ "ನನಗಂತೂ ಒಳಗೆ ಹೋಗೋಕ್ಕೆ ಭಯವಾಗುತ್ತೆ!"

"ನಾನಿಲ್ಲೇ ಇರೋವಾಗ ಭಯ ಏತರದು?"

"ಹಾಗಾದರೆ ನೀನೇ ಹೋಗಿ ಯಾಕೆ ನೋಡಿ ಬರಬಾರದು?"

"ನನ್ನ ಹೆಂಡತಿ ಇರೋವಾಗ ಮೂರು ದಿನ ಅವಳ ಬದಿ ಬಿಟ್ಟು ಅಲ್ಲಾಡಲಿಲ್ಲ! ನನ್ನನ್ನ ನೋಡಿದರೆ ಸೊಸೆಗೆ ನಾಚಿಕೆಯಾಗೋಲ್ಲವೆ? ಇದುವರೆಗೆ ಯಾರ ಮುಖ ಸಹ ನೋಡಿಲ್ಲವೋ ಇವತ್ತು ಅವಳ ಬೆತ್ತಲೆ ಮೈ ನೋಡಲೆ? ಅವಳಿಗೆ ಮೈ ಮೇಲೆ ಪ್ರಜ್ಞೆಯೂ ಇರಲಾರದೇನೋ? ಅವಳು ನನ್ನನ್ನ ನೋಡಿದರೆ ಬಿಡುಬೀಸಾಗಿ. ಕೈಕಾಲು ಸಹ ಬಡೀಲಾರಳು!"

"ಮಗುವೇನಾದರೂ ಆಗಿಬಿಟ್ಟರೆ ಏನು ಗತಿ ಅಂತೀನಿ? ಮನೇಲಿ ಶುಂಠಿ, ಬೆಲ್ಲ ಎಣ್ಣೆ ಒಂದು ಚೂರೂ ಇಲ್ಲ."

"ಎಲ್ಲಾ ಬರುತ್ತೆ. ದೇವರು ಕೋಡೋವಾಗ, ಇದುವರೆಗೆ ಒಂದು ಕಾಸು ಸಹ ಬಿಚ್ಚದೇ ಇರೋ ಜನ ನಾಳೆ ತಾವಾಗಿಯೇ ಕರೆದು ರೂಪಾಯಿ ಕೊಡ್ತಾರೆ. ನನಗೆ ಒಂಬತ್ತು ಮಕ್ಕಳಾಗಿದ್ದವು. ಮನೇಲಿ ಯಾವಾಗಲೂ ಏನೂ ಇರ್ತಿರಲಿಲ್ಲ. ಆದರೆ ದೇವರು ಹೇಗೋ ಕಷ್ಟದಿಂದ ಪಾರುಮಾಡಿಯೇ ಮಾಡಿದ."

ಯಾವ ಸಮಾಜದಲ್ಲಿ ಹಗಲೂರಾತ್ರಿ ಶ್ರಮಪಡುವವರ ಸ್ಥಿತಿ ಸಹ ಇವರದ್ದಕ್ಕಿಂತ ಹೆಚ್ಚೇನೂ ಚೆನ್ನಾಗಿರಲಿಲ್ಲವೋ, ಎಲ್ಲಿ ರೈತರ ದೌರ್ಬಲ್ಯಗಳಿಂದ ಲಾಭ ಪಡೆಯುವುದನ್ನು ಬಲ್ಲ ಜನ ಅವರೊಂದಿಗೆ ವ್ಯವಹಾರ ಮಾಡಿ ಅವರಿಗಿಂತ ಹೆಚ್ಚು ಶ್ರೀಮಂತರಾಗಿದ್ದರೋ ಅಲ್ಲಿ ಇಂತಹ ಮನೋವೃತ್ತಿ ಹುಟ್ಟುವುದು ಆಶ್ಚರ್ಯವೇನಲ್ಲ. ಘೀಸು ರೈತರಿಗಿಂತ ಬಹುಪಾಲು ಹೆಚ್ಚು ಬುದ್ಧಿವಂತನೆಂದೇ ಹೇಳಬೇಕು. ಅವನು ವಿಚಾರ ಶೂನ್ಯರಾದ ರೈತರ ಗುಂಪಿನೊಂದಿಗೆ ಒಂದಾಗುವುದರ ಬದಲು ಕೆಲಸಗೇಡಿಗಳಾದ ಕೀಳುಜನರ ತಂಡದಲ್ಲಿ ಹೋಗಿ ಸೇರಿಕೊಂಡಿದ್ದ. ಅವನಲ್ಲಿ ಆ ಜನರ ನೀತಿ ನಿಯಮಗಳನ್ನು ಪಾಲಿಸುವ ಶಕ್ತಿಯಿರಲಿಲ್ಲ ನಿಜ. ಈ ಕಾರಣದಿಂದಾಗಿ ಅವನ ಗುಂಪಿನ ಇತರರು ಹಳ್ಳಿಯ ಮುಖಂಡರೂ ಮುಂದಾಳುಗಳೂ ಆಗಿದ್ದರೆ ಇಡೀ ಹಳ್ಳಿ ಇವನನ್ನು ಕಂಡು ಹೀಯಾಳಿಸುತ್ತಿತ್ತು. ಆದರೂ ಸಹ, ತಾನು ದುಃಸ್ಥಿತಿಯಲ್ಲಿದ್ದರೇನಂತೆ ರೈತರಂತೆ ಮೈ ಮುರಿದು ಕೆಲಸ ಮಾಡಬೇಕಾಗಿಲ್ಲವಲ್ಲ ಎಂಬ ಸಮಾಧಾನ ಘೀಸುವಿಗಿತ್ತು. ಅವನ ಸರಳತೆ, ಶಾಂತಿಪ್ರಿಯತೆಗಳಿಂದ ಬೇರೆಯವರು ಅನುಚಿತವಾಗಿ ಲಾಭ ಪಡೆಯುವಂತಿರಲಿಲ್ಲ.

ಇಬ್ಬರೂ ಆಲೂಗಡ್ಡೆ ತೆಗೆದು ತೆಗೆದು ಇನ್ನೂ ಬಿಸಿಯಾಗಿರುವಾಗಲೇ

ತಿನ್ನತೊಡಗಿದ್ದರು. ನಿನ್ನೆಯಿಂದ ಅವರೇನನ್ನೂ ತಿಂದಿರಲಿಲ್ಲ. ಆಲೂಗಡ್ಡೆ ಆರುವ ತನಕ ಕಾಯುವಷ್ಟು ಸಹ ಅವರಿಗೆ ತಾಳ್ಮೆಯಿರಲಿಲ್ಲ. ಎಷ್ಟೋ ಸಲ ಇಬ್ಬರ ನಾಲಿಗೆಯೂ ಸುಟ್ಟಿತು. ಸಿಪ್ಪೆ ಸುಲಿದ ಮೇಲೆ ಆಲೂಗಡ್ಡೆಯ ಹೊರಭಾಗ ತುಂಬ ಬಿಸಿಯಾಗಿರುವಂತೆ ತೋರುತ್ತಿರಲಿಲ್ಲ. ಆದರೆ ಕಚ್ಚಿದೊಡನೆಯೇ ನಾಲಿಗೆ. ಅಂಗಳು, ಗಂಟಲುಗಳನ್ನು ಸುಡುತ್ತಿತ್ತು. ಆ ಸುಡುಗೆಂಡವನ್ನು ಬಾಯಲ್ಲಿಟ್ಟು ಕೊಂಡಿರುವುದಕ್ಕಿಂತ ನುಂಗಿ ಹೊಟ್ಟೆಯೊಳಗೆ ಸೇರಿಸುವುದು ಎಷ್ಟೋ ಮೇಲೆನಿಸುತ್ತಿತ್ತು. ಅಲ್ಲಿ ಅವನ್ನು ತಣ್ಣಗೆ ಮಾಡಲು ಬೇಕಾದಷ್ಟು ಸಾಮಗ್ರಿಗಳಿದ್ದವು. ಇದರಿಂದಾಗಿ ಇಬ್ಬರೂ ಬೇಗ ಬೇಗ ನುಂಗಿಕೊಳ್ಳುತ್ತಿದ್ದರು. ಆದರೂ ಈ ಸಾಹಸದಿಂದಾಗಿ ಅವರ ಕಣ್ಣಲ್ಲಿ ನೀರು ಸುರಿಯುತ್ತಿತ್ತು.

ಘೀಸುವಿಗೆ ಇಪ್ಪತ್ತು ವರ್ಷಗಳ ಹಿಂದೆ ತಾನು ಭಾಗವಹಿಸಿದ್ದ ಠಾಕೂರನ ದಿಬ್ಬಣದ ನೆನಪಾಯಿತು. ಆವತ್ತಿನ ಊಟದಲ್ಲಿ ಸಿಕ್ಕಿದ್ದ ತೃಪ್ತಿ ಅವನ ಜೀವನದಲ್ಲಿನ ಸದಾ ನೆನಪಿಡುವ ಸಂಗತಿಯಾಗಿತ್ತು. ಇವತ್ತಿನವರೆಗೂ ಅದರ ನೆನಪು ಹಸನಾಗಿತ್ತು! ಅವನು ಹೇಳಿದ– "ಆ ಊಟಾನ ಮರೀಲಾರೆ. ಅದಾದ ಮೇಲೆ ಅಂಥ ಊಟ, ಅಷ್ಟು ಹೊಟ್ಟೆ ಭರ್ತಿಯಾಗಿ ಮತ್ತೆ ಸಿಕ್ಕಿಲ್ಲ ನೋಡು. ಹೆಣ್ಣಿನ ಕಡೆಯೋರು ಎಲ್ಲರಿಗೂ ಹೊಟ್ಟೆ ತುಂಬ ಪೂರಿ ಬಡಿಸಿದ್ದರು– ಎಲ್ಲರಿಗೂ! ಚಿಕ್ಕೋರು, ದೊಡ್ಡೋರು ಎಲ್ಲರೂ ಪೂರಿ ತಿಂದರು. ಅದೂ ಅಸಲೀ ತುಪ್ಪದಲ್ಲಿ ಕರಿದದ್ದು! ಚಟ್ನಿ, ರಾಯತ, ಮೂರು ತರಹ ಗಟ್ಟಿಪಲ್ಯ, ಒಂದು ನೀರುಪಲ್ಯ, ಮೊಸರು, ಮಿಠಾಯಿ, ಆ ಊಟ ಎಷ್ಟು ರುಚಿಯಾಗಿತ್ತು ಅಂತ ಈಗೇನು ಹೇಳಲಿ? ಯಾವ ಅಡೆತಡೆಯೂ ಇರಲಿಲ್ಲ. ಬೇಕಾದ್ದನ್ನ ಕೇಳಬಹುದಾಗಿತ್ತು. ಬೇಕಾದಷ್ಟು ತಿನ್ನಬಹುದಾಗಿತ್ತು. ಜನ ಹೇಗೆ ತಿಂದರು. ಹೇಗೆ ತಿಂದರು ಅಂದರೆ ಯಾರೂ ನೀರು ಸಹ ಕುಡೀಲಿಲ್ಲ. ಬಡಿಸೋರು ಬಿಸಿಬಿಸಿಯಾದ, ದುಂಡುದುಂಡಾದ, ಘಮ್ ಅನ್ನೋ ಕಚೋರೀನ* ಎಲೇಗೆ ಹಾಕಿಬಿಡೋರು. ಬೇಡ ಬೇಡ ಅಂದರೂ, ಎಲೆ ಮೇಲೆ ಅಡ್ಡಗೈ ಹಾಕಿ ತಡೆದರೂ ಬಡಿಸಿಬಿಡೋರು. ಕೈ ತೊಳೆದುಕೊಂಡಾದ ಮೇಲೆ ಏಲಕ್ಕಿ ಹಾಕಿ ಕಟ್ಟಿದ ಬೀಡವೂ ಸಿಕ್ಕಿತು. ಆದರೆ ನನಗೆ ಬೀಡ ಇಸಕೊಳ್ಳೋ ಅಷ್ಟು ಪ್ರಜ್ಞೆ ಎಲ್ಲಿತ್ತು? ನಿಂತುಕೊಳ್ಳೋಕ್ಕೆ ಆಗ್ತಿರಲಿಲ್ಲ. ದಡದಡ ಅಂತ ಹೋಗಿ ಕಂಬಳಿ ಹಾಸಿ ಮಲಕ್ಕೊಂಡು ಬಿಟ್ಟೆ. ಹೊಳೆ ಹರಿದ ಹಾಗೆ ಹರಿಯೋ ಮನಸ್ಸು ಆ ಠಾಕೂರನದು".

ಈ ಎಲ್ಲ ಭಕ್ಷ್ಯಗಳ ರುಚಿಯನ್ನೂ ಮನಸ್ಸಿನಲ್ಲಿಯೇ ಸವಿಯುತ್ತ ಮಾಧವ ಹೇಳಿದ– "ಈಗ ನಮಗೆ ಯಾರೂ ಅಂಥ ಊಟ ಹಾಕೋಲ್ಲ."

"ಈಗ ಯಾರು ಏನು ಊಟ ಹಾಕಾರು? ಆ ಕಾಲ ಬೇರೆ ಇತ್ತು. ಈಗ ಎಲ್ಲರಿಗೂ

* ಒಂದು ಬಗೆಯ ಕರಿದ ತಿಂಡಿ.

ದುಡ್ಡುಳಿಸೋದೊಂದು ಗೊತ್ತು. ಮದುವೇಲಿ ಖರ್ಚು ಕೂಡದು. ಸತ್ತಾಗ ಖರ್ಚು ಕೂಡದು! ಬಡವರ ಹಣಾನ ಗುಡ್ಡೆ ಹಾಕಿಹಾಕಿ ಎಲ್ಲಿಡ್ತಾರಂತೆ ಇವರು. ಗುಡ್ಡೇ ಹಾಕೋದರಲ್ಲಿ ಯಾರೂ ಏನೂ ಕಡಿಮೆಯಿಲ್ಲ. ಖರ್ಚಿನಲ್ಲಿ ಮಾತ್ರ ಎಲ್ಲರಿಗೂ ಕೈ ಹಿಡಿಯೋದು ಗೊತ್ತಾಗುತ್ತೆ."

"ನೀನು ಒಂದಿಪ್ಪತ್ತು ಪೂರೀನಾದರೂ ತಿಂದಿರಬೇಕು."

"ಇಪ್ಪತ್ತಕ್ಕೂ ಜಾಸ್ತಿಯೇ!"

"ನಾನಿದ್ದಿದ್ದರೆ ಐವತ್ತು ತಿಂದುಬಿಡ್ತಿದ್ದೆ."

"ನಾನು ಸಹ ಐವತ್ತಕ್ಕಿಂತ ಕಡಿಮೆಯೇನೂ ತಿಂದಿಲ್ಲ. ಚೆನ್ನಾಗಿ ಗಟ್ಟಿಮುಟ್ಟಾಗಿದ್ದೆ, ಒಳ್ಳೇ ಪಡ್ಡೇ ಹುಡುಗ. ನೀನು ನನ್ನ ಅರ್ಧದಷ್ಟು ಇಲ್ಲ."

ಆಲೂಗಡ್ಡೆ ತಿಂದು ಇಬ್ಬರೂ ನೀರು ಕುಡಿದರು. ಅದೇ ಅಗ್ಗಿಷ್ಟಿಕೆಯ ಮುಂದೆ ಧೋತಿ ಹೊದ್ದು ಮೈಮುದುಡಿಕೊಂಡು ಮಲಗಿದರು– ಎರಡೂ ದೊಡ್ಡ ಹೆಬ್ಬಾವುಗಳು ಸುರುಳಿಸುತ್ತಿಕೊಂಡು ಬಿದ್ದಿವೆಯೋ ಎಂಬಂತೆ.

ಬುಧಿಯಾ ಇನ್ನೂ ನರಳುತ್ತಲೇ ಇದ್ದಳು.

## 2

ಬೆಳಗಾಗ ಮಾಧವ ಎದ್ದು ಕೊಠಡಿಯೊಳಗೆ ಹೋಗಿ ನೋಡಿದಾಗ ಅವನ ಹೆಂಡತಿಯ ಮೈ ತಣ್ಣಗಾಗಿತ್ತು. ಮುಖದ ಮೇಲೆ ನೊಣಗಳು ಮುತ್ತಿಕೊಂಡು ಮೊರೆಯುತ್ತಿದ್ದವು. ಕಣ್ಣುಗುಡ್ಡೆ ಕಲ್ಲಿನಂತಾಗಿ ಮೇಲೆ ಸಿಕ್ಕಿಹಾಕಿಕೊಂಡಿತ್ತು. ಇಡೀ ದೇಹ ಧೂಳಿನಲ್ಲಿ ಮುಸುಕಿತ್ತು. ಮಗು ಹೊಟ್ಟೆಯೊಳಗೇ ಸತ್ತಿತ್ತು.

ಮಾಧವ ಘೀಸುವಿನ ಬಳಿ ಓಡುತ್ತ ಬಂದ. ಇಬ್ಬರೂ 'ಅಯ್ಯಯ್ಯೋ' ಎಂದು ಜೋರಾಗಿ ಅರಚುತ್ತ ಎದೆ ಬಡಿದುಕೊಳ್ಳತೊಡಗಿದರು. ಇವರ ಗೋಳಾಟವನ್ನು ಕೇಳಿ ನೆರೆಹೊರೆಯವರೂ ಓಡಿಬಂದರು; ಸಂಪ್ರದಾಯದ ಪ್ರಕಾರ ಈ ದುರ್ಭಾಗ್ಯರಿಗೆ ಸಮಾಧಾನ ಹೇಳತೊಡಗಿದರು.

ಆದರೆ ಅತಿಯಾಗಿ ಗೋಳಾಡಲು ಅವಕಾಶವಿರಲಿಲ್ಲ. ಹೆಣದ ಬಟ್ಟೆ ಹಾಗೂ ಸೌದೆಗೆ ಏರ್ಪಾಡು ಮಾಡಬೇಕಾಗಿತ್ತು. ಮನೆಯಲ್ಲಿ ಹಣದ ಸ್ಥಿತಿ ಹದ್ದಿನ ಗೂಡಿನ ಮಾಂಸದಂತಿತ್ತು.

ಅಪ್ಪ ಮಕ್ಕಳಿಬ್ಬರೂ ಅಳುತ್ತ ಹಳ್ಳಿಯ ಜಮೀನುದಾರನ ಬಳಿ ಹೋದರು. ಅವನಿಗೆ ಇವರ ಮುಖ ಕಂಡರೆ ಸಾಕು, ಹೇಸಿಗೆ ಬರುತ್ತಿತ್ತು. ಅವನು ಎಷ್ಟೋ ಸಲ ಇವರನ್ನು ಕಳ್ಳತನ ಮಾಡಿದ್ದಕ್ಕೆ, ವಾಯಿದೆಯ ಪ್ರಕಾರ ಕೆಲಸಕ್ಕೆ ಬರದಿದ್ದುದಕ್ಕೆ ಕೈಯಾರೆ ಹೊಡೆದಿದ್ದ. ಅವನು ಕೇಳಿದ– "ಏನಲೇ ಘಿಸುವಾ, ಯಾಕೋ ಅಳ್ತಿದಿ? ಈಗೆಲ್ಲಿ ನೀನು ಕಾಣಿಸೋದೇ ಇಲ್ಲವಲ್ಲ. ಈ ಹಳ್ಳೀಲಿ ಇರೋಕ್ಕೆ ಇಷ್ಟವಿಲ್ಲ ಅಂತ ಕಾಣುತ್ತೆ."

ಘೀಸು ನೆಲಕ್ಕೆ ತಲೆಮುಟ್ಟಿಸಿ ಅಡ್ಡಬಿದ್ದು ಕಣ್ಣಿನಲ್ಲಿ ನೀರು ತುಂಬಿಕೊಂಡು ಹೇಳಿದ – "ಮಹಾಸಂಕಟದಲ್ಲಿದ್ದೀನಿ, ಸ್ವಾಮಿ. ಮಾಧವನ ಹೆಂಡತಿ ನಿನ್ನೆ ರಾತ್ರಿ ಹೋಗಿಬಿಟ್ಟಳು. ರಾತ್ರಿಯೆಲ್ಲಾ ಒದ್ದಾಡ್ತಿದ್ದಳು. ನಾವಿಬ್ಬರೂ ಅವಳ ತಲೆದಸೀಲೇ ಕೂತಿದ್ದೆವು. ನಮ್ಮ ಕೈಯಲ್ಲಾದ ಔಷಧಿ–ಚಿಕಿತ್ಸೆ ಮಾಡಿದೆವು. ಆದರೆ ನಮ್ಮ ಕೈಬಿಟ್ಟು ಹೊರಟು ಹೋದಳು. ಈಗ ಒಂದು ರೊಟ್ಟಿ ಬಡಿದು ಕೊಡೋರೂ ಇಲ್ಲದ ಹಾಗಾಯಿತು. ಹಾಳಾಗಿಹೋದೆವು. ಸ್ವಾಮಿ, ಮನೆ ನಾಶವಾಗಿ ಹೋಯಿತು. ನಾನು ನಿಮ್ಮ ಗುಲಾಮ. ನಿಮ್ಮ ಹೊರತು ಅವಳನ್ನ ಮಣ್ಣು ಮಾಡಿಸೋರು ಯಾರಿದ್ದಾರೆ? ನಮ್ಮ ಹತ್ತಿರ ಇದ್ದದ್ದೆಲ್ಲಾ ಔಷಧಿ–ಚಿಕಿತ್ಸೆಗೇ ಹೋಯಿತು. ದಣಿಗಳಿಗೆ ದಯಬಂದರೆ ಅವಳ ಹೆಣ ಮಣ್ಣು ಕಾಣುತ್ತೆ. ನಿಮ್ಮನ್ನ ಬಿಟ್ಟು ಬೇರೆ ಯಾರ ಮನೆಬಾಗಿಲಿಗೆ ಹೋಗಲಿ?"

ಜಮೀನುದಾರನೇನೋ ದಯಾಳು. ಆದರೆ ಘೀಸುವಿಗೆ ದಯೆ ತೋರಿಸುವುದೆಂದರೆ ಕರಿಯ ಕಂಬಳಿಗೆ ಬಣ್ಣ ತೊಡೆದಂತೆ. ಅವನಿಗೆ 'ನಡಿ, ಜಾಗ ಬಿಟ್ಟು ಹೊರಡು' ಎಂದು ಅನ್ನೋಣವೆಂದು ಮನಸ್ಸಾಯಿತು! ಹೇಳಿಕಳಿಸಿದರೂ ಬರದವನು ಈಗ ತನಗೆ ಅಗತ್ಯ ಬಿದ್ದಿದೆಯೆಂದು ಬಂದು ಹೊಗಳುತ್ತಿದ್ದಾನೆ. ಕಳ್ಳ ಸೂಳೇಮಗ, ಬದ್ಮಾಶ್! ಆದರೆ ಈಗ ಕೋಪ ಇಲ್ಲವೇ ಶಿಕ್ಷೆಗೆ ಹೊತ್ತಲ್ಲ. ಒಳಗಿಂದೊಳಗೇ ಕುದಿಯುತ್ತಿದ್ದರೂ ಜಮೀನುದಾರ ಎರಡು ರೂಪಾಯಿ ತೆಗೆದೆಸೆದ. ಆದರೆ ಅವನ ಬಾಯಿಂದ ಸಮಾಧಾನದ ಒಂದು ಮಾತಾದರೂ ಬರಲಿಲ್ಲ. ಅವನು ಘೀಸುವಿನ ಕಡೆ ನೋಡಲೂ ಇಲ್ಲ. ಹೆಗಲಮೇಲಿನ ಭಾರ ಕಳೆದುಹೋದಂತೆ ಸುಮ್ಮನಿದ್ದ.

ಜಮೀನುದಾರನೇ ಎರಡು ರೂಪಾಯಿ ಕೊಟ್ಟ ಮೇಲೆ ಹಳ್ಳಿಯ ವರ್ತಕ ಸಾಹುಕಾರರಿಗೆ ಇಲ್ಲವೆನ್ನುವ ಸಾಹಸವೆಲ್ಲಿ ಬರಬೇಕು? ಘೀಸು ಜಮೀನುದಾರನ ಹೆಸರೆತ್ತಿಕೊಂಡು ಡಂಗುರ ಸಾರುವುದನ್ನು ಚೆನ್ನಾಗಿ ಕಲಿತಿದ್ದ. ಒಬ್ಬರು ಎರಡಾಣೆ ಕೊಟ್ಟರು; ಇನ್ನೊಬ್ಬರು ನಾಲ್ಕಾಣೆ ಕೊಟ್ಟರು. ಒಂದು ಗಂಟೆಯೊಳಗೆ ಘೀಸುವಿನ ಹತ್ತಿರ ಐದು ರೂಪಾಯಿಯಷ್ಟು ದೊಡ್ಡ ಗಂಟಾಯಿತು. ಎಲ್ಲೋ ಒಂದಿಷ್ಟು ದವಸ ಸಿಕ್ಕಿತು; ಇನ್ನೆಲ್ಲೋ ಸೌದೆ ಸಿಕ್ಕಿತು. ಮಧ್ಯಾಹ್ನದ ಹೊತ್ತಿಗೆ ಘೀಸು ಮಾಧವರು ಹೆಣದ ಬಟ್ಟೆ ತರಲು ಪೇಟೆಗೆ ಹೋದರು. ಈ ಕಡೆ ಜನ ಬೊಂಬುಹಗ್ಗಕ್ಕೆ ಅಣಿಮಾಡುತ್ತಿದ್ದರು.

## 3

ಪೇಟೆ ತಲುಪಿದಾಗ ಘೀಸು ಕೇಳಿದ – "ಸುಡೋಕ್ಕೆ ಬೇಕಾದಷ್ಟು ಸೌದೆ ಸಿಕ್ಕಿದೆ ಅಲ್ಲವೇನೋ, ಮಾಧವ?"

ಮಾಧವ ಹೇಳಿದ – "ಹೌದು, ಸೌದೆ ಬೇಕಾದಷ್ಟಿದೆ. ಹೆಣಕ್ಕೆ ಬಟ್ಟೆ ಬೇಕು ಅಷ್ಟೆ."

"ನಡಿ, ಯಾವುದಾದರೂ ತೆಳ್ಳಗಿರೋ ಬಟ್ಟೆ ಕೊಂಡುಕೊಳ್ಳೋಣ."

"ಮತ್ತೇನು? ಹೆಣ ಎತ್ತೋ ಹೊತ್ತಿಗೆ ರಾತ್ರಿಯಾಗಿರುತ್ತೆ. ಆ ಹೊತ್ತಿನಲ್ಲಿ ಹೆಣದ ಬಟ್ಟೆ ಯಾರಿಗೆ ಕಾಣುತ್ತೆ?"

"ಬದುಕಿರೋವಾಗ ಮೈ ಮುಚ್ಚೋಕ್ಕೆ ಚಿಂದೀಗೆ ಗತಿಯಿಲ್ಲದೆ ಇರೋರಿಗೆ ಸತ್ತ ಮೇಲೆ ಹೊಸ ಬಟ್ಟೆ ಬೇಕು. ಎಂಥ ಕೆಟ್ಟ ಪದ್ಧತಿ ಇದು!"

"ಬಟ್ಟೆ ಹೆಣದ ಜೊತೇಲೇ ಸುಟ್ಟು ಹೋಗುತ್ತೆ!"

"ಇನ್ನೇನು, ಉಳಿಯುತ್ತೆಯೆ? ಇದೇ ಐದು ರೂಪಾಯಿ ಮೊದಲೇ ಸಿಕ್ಕಿದಿದ್ದರೆ ಏನಾದರೂ ಔಷಧಿ–ಚಿಕಿತ್ಸೆ ಮಾಡಿಸಬಹುದಾಗಿತ್ತು."

ಇಬ್ಬರೂ ಇನ್ನೊಬ್ಬನ ಮನಸ್ಸಿನಲ್ಲಿ ಏನಿದೆಯೆಂದು ಗ್ರಹಿಸಲು ಪ್ರಯತ್ನಿಸುತ್ತಿದ್ದರು. ಪೇಟೆಯಲ್ಲಿ ಅತ್ತಿಂದಿತ್ತ ಅಲೆದಾಡುತ್ತಿದ್ದರು. ಒಂದು ಬಟ್ಟೆ ಅಂಗಡಿಯಿಂದ ಇನ್ನೊಂದು ಬಟ್ಟೆ ಅಂಗಡಿಗೆ ಹೋದರು; ಬಗೆಬಗೆಯ ಬಟ್ಟೆ ನೋಡಿದರು– ರೇಶಿಮೆ ಬಟ್ಟೆ ಹತ್ತಿಯ ಬಟ್ಟೆ. ಆದರೆ ಯಾವುದೂ ಸರಿಕಾಣಲಿಲ್ಲ. ಅಷ್ಟರಲ್ಲಿ ಸಂಜೆಯಾಯಿತು. ಆಗ ಅವರಿಬ್ಬರೂ ಹೇಗೋ ಏನೋ ಒಂದು ಹೆಂಡದಂಗಡಿಯ ಮುಂದೆ ಬಂದು ನಿಂತರು. ಮೊದಲೇ ಇತ್ಯಾರ್ಥವಾಗಿತ್ತೋ ಎಂಬಂತೆ ಒಳಹೋದರು. ಒಳಹೋಗಿ ಕೊಂಚ ಹೊತ್ತು ಇಬ್ಬರೂ ಏನೂ ಮಾಡಲು ತಿಳಿಯದೆ ನಿಂತಿದ್ದರು. ಆಮೇಲೆ ಘೀಸು ಮಾಲಿಕನ ಬಳಿಗೆ ಹೋಗಿ ಹೇಳಿದ –"ನಮಗೂ ಒಂದು ಬಾಟಲು ಕೊಡಿ, ಸಾಹೂಜಿ." ಹಿಂದೆಯೇ ತಿನ್ನಲು ತಿಂಡಿ ಬಂತು, ಹುರಿದ ಮೀನು ಬಂತು, ವರಾಂಡದಲ್ಲಿ ಕೂತು ಇಬ್ಬರೂ ಶಾಂತಿಯಿಂದ ಕುಡಿಯತೊಡಗಿದರು.

ಬೇಗಬೇಗನೆ ಕೆಲವಾರು ಗುಟುಕು ಕುಡಿದಾದ ಮೇಲೆ ಇಬ್ಬರ ಮನಸ್ಸೂ ಉಲ್ಲಾಸಗೊಂಡಿತು.

ಘೀಸು ಹೇಳಿದ –"ಹೆಣಕ್ಕೆ ಬಟ್ಟೆ ಹೊದಿಸೋದರಿಂದ ಏನು ಲಾಭ? ಕೊನೆಗೆ ಸುಟ್ಟು ಬೂದಿಯಾಗುತ್ತೆ. ಸೊಸೆಯ ಜೊತೆಯಂತೂ ಹೋಗೋಲ್ಲ."

ತಾನು ಪಾಪಿಯಲ್ಲವೆಂಬುದಕ್ಕೆ ದೇವತೆಗಳನ್ನು ಸಾಕ್ಷಿಗೆ ಕರೆಯುತ್ತಿದ್ದಾನೆಯೋ ಎಂಬಂತೆ ಆಕಾಶದ ಕಡೆ ನೋಡುತ್ತ ಮಾಧವ ಹೇಳಿದ – "ಲೋಕಾರೂಢಿ ಅಷ್ಟೇ ಅಲ್ಲದೆ ಹೋಗಿದ್ದರೆ ಬ್ರಾಹ್ಮಣರಿಗೆ ಸಾವಿರಾರು ರೂಪಾಯಿ ಯಾರು ಕೊಡ್ತಿದ್ದರು? ಪರಲೋಕದಲ್ಲಿ ಏನು ಸಿಗುತ್ತೆ ಬಿಡುತ್ತೆ ಅಂತ ಕಂಡೋರು ಯಾರು?"

"ದೊಡ್ಡ ಮನುಷ್ಯರ ಹತ್ತಿರ ಹಣವಿರುತ್ತೆ. ಬೇಕಾದ ಹಾಗೆ ಚೆಲ್ಲಬಹುದು. ನಮ್ಮ ಹತ್ತಿರ ಚೆಲ್ಲೋಕೆ ಏನಿದೆಯಂತೆ?"

"ಆದರೆ ಜನಕ್ಕೆ ಏನು ಉತ್ತರ ಹೇಳ್ತಿ? ಬಟ್ಟೆ ಎಲ್ಲಿ ಅಂತ ಜನ ಕೇಳ್ತಾರೋ ಇಲ್ಲವೋ"?

ಘೀಸು ಹೇಳಿದ – "ಹಣ ಸೊಂಟದಿಂದ ಬಿದ್ದುಹೋಯ್ತು ಅಂದುಬಿಡೋಣ

ಕಣ್ಣೋ. ತುಂಬ ಹುಡುಕಿದೆವು. ಸಿಗಲಿಲ್ಲ ಅನ್ನೋಣ. ಜನಕ್ಕೆ ನಂಬಿಕೆ ಬರದಿರಬಹುದು. ಆದರೆ ಅವರೇ ಮತ್ತೆ ದುಡ್ಡು ಕೊಡ್ತಾರೆ."

ಬೇಡದೆಯೇ ಬಂದ ಈ ಸೌಭಾಗ್ಯವನ್ನು ಕಂಡು ನಗುತ್ತ ಮಾಧವ ಹೇಳಿದ "ಬಹು ಒಳ್ಳೆಯವಳು. ಸತ್ತರೂ ನಮಗೆ ಚೆನ್ನಾಗಿ ತಿನ್ನಿಸಿ, ಕುಡಿಸಿ ಸತ್ತಳು."

ಅರ್ಧ ಬಾಟಲಿಗೂ ಹೆಚ್ಚು ಕರಗಿ ಹೋಯಿತು. ಘೀಸು ಎರಡು ಸೇರು ಪುರಿ ತರಿಸಿದ. ಜೊತೆಗೇ ಚಟ್ನಿ, ಉಪ್ಪಿನಕಾಯಿ, ಮಾಂಸದ ಪಲ್ಯ, ಹೆಂಡದಂಗಡಿಯ ಮುಂದೆಯೇ ತಿಂಡಿಯ ಅಂಗಡಿಯಿತ್ತು. ಮಾಧವ ಓಡಿಹೋಗಿ ಎಲ್ಲವನ್ನೂ ಎಲೆಯಲ್ಲಿ ಕಟ್ಟಿಸಿಕೊಂಡು ತಂದ. ಇನ್ನೂ ಒಂದೂವರೆ ರೂಪಾಯಿ ಖರ್ಚಾಗಿ ಹೋಯಿತು. ಉಳಿದಿದ್ದ ಹಣವೆಂದರೆ ತೀರಾ ಕಡಿಮೆ.

ಕಾಡಿನಲ್ಲಿ ಹುಲಿ ತನ್ನ ಬೇಟೆಯನ್ನು ತಿಂದು ಮುಗಿಸುವಂತೆ ಇಬ್ಬರೂ ಜರ್ಬಾಗಿ ಕೂತು ಪೂರಿ ತಿನ್ನುತ್ತಿದ್ದರು. ಯಾರಿಗೇ ಆಗಲಿ ಏನೂ ಉತ್ತರ ಕೊಡಬೇಕೆಂಬ ಭಯವಿರಲಿಲ್ಲ. ಕೆಟ್ಟ ಹೆಸರು ಬರುವುದೆಂಬ ಚಿಂತೆಯಿರಲಿಲ್ಲ. ಈ ಭಾವನೆಗಳನ್ನೆಲ್ಲಾ ಅವರು ಎಂದೋ ಗೆದ್ದುಬಿಟ್ಟಿದ್ದರು.

ಘೀಸು ವೇದಾಂತಿಯಂತೆ ಹೇಳಿದ "ನಮ್ಮ ಆತ್ಮತೃಪ್ತಿಯಾಗ್ತಿದೆ ಅಂದಮೇಲೆ ಅವಳಿಗೆ ಗಂಡುಮಗುವಾಗದೆ ಇರುತ್ತೆಯೆ?"

ಮಾಧವ ಶ್ರದ್ಧೆಯಿಂದ ತಲೆತಗ್ಗಿಸಿ ಆ ಮಾತನ್ನು ಸಮರ್ಥಿಸಿದ "ಖಂಡಿತವಾಗಿಯೂ ಆಗುತ್ತೆ. ದೇವರೇ, ನೀನು ಅಂತರ್ಯಾಮಿ. ಅವಳನ್ನ ವೈಕುಂಠಕ್ಕೆ ಕರಕೊಂಡು ಹೋಗು. ನಾವಿಬ್ಬರೂ ಮನಸಾರೆ. ಆಶೀರ್ವಾದ ಮಾಡ್ತಿದೀವಿ. ಇವತ್ತು ಸಿಕ್ಕಂಥ ಊಟ ನಮ್ಮ ಜನ್ಮದಲ್ಲೇ ಸಿಕ್ಕಿರಲಿಲ್ಲ."

ಕ್ಷಣಕಾಲದ ನಂತರ ಮಾಧವನ ಮನಸ್ಸಿನಲ್ಲಿ ಒಂದು ಶಂಕೆ ಹುಟ್ಟಿಕೊಂಡಿತು. ಅವನಂದ–"ಒಂದಲ್ಲ ಒಂದು ದಿನ ನಾವೂ ಅಲ್ಲಿಗೆ ಹೋಗೇ ಹೋಗ್ತೀವಿ."

ಘೀಸು ಈ ಸರಳ ಪ್ರಶ್ನೆಗೆ ಏನೂ ಉತ್ತರ ಕೊಡಲಿಲ್ಲ. ಅವನು ಪರಲೋಕದ ವಿಷಯ ಚಿಂತಿಸಿ ಈ ಲೋಕದ ಆನಂದವನ್ನು ಕೆಡಿಸಿಕೊಳ್ಳಬಯಸಲಿಲ್ಲ.

"ನನಗೆ ಯಾಕೆ ಬಟ್ಟೆ ಹೊದಿಸಲಿಲ್ಲ ಅಂತ ಅವಳು ಅಲ್ಲಿ ನಮ್ಮನ್ನ ಕೇಳಿದರೆ ಏನು ಉತ್ತರ ಕೊಡ್ತಿ?"

"ಕೇಳ್ತಾಳೆ, ನಿನ್ನ ತಲೆ!"

"ಕೇಳೋದಂತೂ ಖಂಡಿತ."

"ಅವಳಿಗೆ ಬಟ್ಟೆ ಹೊದಿಸೋಲ್ಲ ಅಂತ ನಿನಗೆ ಹೇಗೆ ಗೊತ್ತು? ನನ್ನನ್ನೇನು ಅಷ್ಟು ಕತ್ತೆ ಅಂತ ತಿಳಕೊಂಡೆಯಾ? ಈ ಪ್ರಪಂಚದಲ್ಲಿ ಅರವತ್ತು ವರ್ಷದಿಂದ

ಕತ್ತೆಕಾಯಿಕೊಂಡಿದೀನಿ ಅಂದುಕೊಂಡೆಯಾ? ಅವಳಿಗೆ ಬಟ್ಟೆ ಸಿಗುತ್ತೆ. ಇದಕ್ಕಿಂತ ಒಳ್ಳೇ ಬಟ್ಟೆಯೇ ಸಿಗುತ್ತೆ."

ಮಾಧವನಿಗೆ ನಂಬಿಕೆ ಬರಲಿಲ್ಲ. ಅವನಂದ– "ಯಾರು ಕೊಡ್ತಾರೆ? ಇದ್ದ ಹಣಾನೆಲ್ಲಾ ನೀನು ಉಡಾಯಿಸಿಬಿಟ್ಟೆ. ಅವಳು ಕೇಳೋದು ನನ್ನನ್ನ. ಅವಳ ಹಣೆಗೆ ಕುಂಕುಮ ಹಚ್ಚಿದೋನು ನಾನು ತಾನೇ?"

ಘೀಸು ರೇಗಿ ಹೇಳಿದ "ಅವಳಿಗೆ ಬಟ್ಟೆ ಸಿಗುತ್ತೆ ಅಂತ ನಾನು ಹೇಳ್ತಿದೀನಿ. ನೀನು ಯಾಕೆ ನಂಬೋಲ್ಲ?"

"ಯಾರು ಕೊಡ್ತಾರೆ ಅಂತ ಯಾಕೆ ಹೇಳಬಾರದು."

"ಈಗ ಯಾರು ಕೊಟ್ಟರೋ ಅವರೇ ಕೊಡ್ತಾರೆ. ಆದರೆ ಈಗ ಹಣ ನಮ್ಮ ಕೈಗೆ ಬರೋಲ್ಲ ಅಷ್ಟೇ."

ಕತ್ತಲು ಹೆಚ್ಚಾದಂತೆಲ್ಲಾ ಆಕಾಶದಲ್ಲಿ ನಕ್ಷತ್ರಗಳು ಹೆಚ್ಚು ಹೆಚ್ಚಾಗಿ ಹೊಳೆಯತೊಡಗಿದವು. ಅದರೊಡನೆ ಹೆಂಡದಂಗಡಿಯ ಕಳೆಯೂ ಹೆಚ್ಚುತ್ತ ಹೋಯಿತು. ಒಬ್ಬರು ಹಾಡುತ್ತಿದ್ದರು; ಇನ್ನೊಬ್ಬರು ಬಡಾಯಿ ಕೊಚ್ಚುತ್ತಿದ್ದರು; ಮತ್ತೊಬ್ಬರು ಸಂಗಡಿಗರನ್ನು ಅಪ್ಪಿಕೊಳ್ಳುತ್ತಿದ್ದರು; ಯಾರೋ ಜೊತೆಗಾರರ ಬಾಯಿಗೆ ಬಾಟಲಿಡುತ್ತಿದ್ದರು.

ಅಲ್ಲಿಯ ವಾತಾವರಣದಲ್ಲಿ ಆನಂದ ತುಳುಕುತ್ತಿತ್ತು; ಗಾಳಿಯಲ್ಲಿ ಅಮಲು ತುಂಬಿತ್ತು. ಅದೆಷ್ಟೋ ಜನ ಇಲ್ಲಿ ಬಂದು ಒಂದು ಗುಟುಕು ಕುಡಿದೇ ಮತ್ತರಾಗುತ್ತಿದ್ದರು. ಮಧ್ಯಕ್ಕಿಂತ ಹೆಚ್ಚಾಗಿ ಇಲ್ಲಿನ ಹವೆ ಅವರಿಗೆ ಅಮಲೇರಿಸುತ್ತಿತ್ತು. ಬದುಕಿನ ಜಂಜಾಟ ಅವರನ್ನು ಇಲ್ಲಿಗೆ ಎಳೆದುತರುತ್ತಿತ್ತು. ಕೊಂಚ ಹೊತ್ತು ಅವರು ತಾವು ಬದುಕಿದ್ದೇವೆಯೋ ಸತ್ತಿದ್ದೇವೆಯೋ ಎಂಬುದನ್ನೂ ಮರೆಯುತ್ತಿದ್ದರು! ಆ ಸ್ಥಿತಿಯಲ್ಲಿ ಅವರು ಬದುಕಿಯೂ ಇರಲಿಲ್ಲ, ಸತ್ತೂ ಇರಲಿಲ್ಲ.

ಈ ಅಪ್ಪ ಮಕ್ಕಳಿಬ್ಬರೂ ಚಪ್ಪರಿಸಿ ಚಪ್ಪರಿಸಿ ಆನಂದ ಸವಿಯುತ್ತಿದ್ದರು. ಎಲ್ಲರ ಗಮನವೂ ಇವರ ಕಡೆ ಹರಿದಿತ್ತು. ಇಬ್ಬರೂ ಅದೆಷ್ಟು ಭಾಗ್ಯವಂತರು! ಇಬ್ಬರಿಗಾಗಿಯೇ ಒಂದು ಪೂರ್ತಿ ಬಾಟಲಿದೆ!

ಹೊಟ್ಟೆ ತುಂಬ ತಿಂದ ಮೇಲೆ ಮಾಧವ ಎಲೆಯಲ್ಲಿ ಉಳಿದಿದ್ದ ಪೂರಿಯನ್ನು ಇವರ ಕಡೆ ಹಸಿವಿನಿಂದ ನೋಡುತ್ತ ನಿಂತಿದ್ದ ಬಿಕಾರಿಯೊಬ್ಬನಿಗೆ ಕೊಟ್ಟುಬಿಟ್ಟ. ಬದುಕಿನಲ್ಲಿ ಮೊತ್ತಮೊದಲ ಬಾರಿಗೆ ಹೀಗೆ 'ಕೊಡುವ' ಹೆಮ್ಮೆ, ಆನಂದ, ಉಲ್ಲಾಸಗಳನ್ನು ಅನುಭವಿಸಿದ.

ಘೀಸು ಹೇಳಿದ– "ತೊಗೊಂಡು ಹೋಗು. ತಿಂದು ಚೆನ್ನಾಗಿ ಹರಸು. ಇದನ್ನ ಸಂಪಾದಿಸಿದವಳು ಹೋಗಿಬಿಟ್ಟಳು. ನೀನು ಹರಿಸಿದರೆ ಆ ಹರಕೆ ಅವಳಿಗೆ ಖಂಡಿತ

ತಲುಪುತ್ತೆ. ನಿನ್ನ ಒಂದೊಂದು ರೋಮವೂ ಹರಸಲಿ. ಬಲು ಕಷ್ಟದಿಂದ ಸಂಪಾದಿಸಿದ್ದು ಇದು!"

ಮಾಧವ ಮತ್ತೆ ಆಕಾಶದ ಕಡೆ ನೋಡುತ್ತ ಹೇಳಿದ – "ಅವಳು ವೈಕುಂಠಕ್ಕೆ ಹೋಗ್ತಾಳಪ್ಪ. ಅಲ್ಲಿ ವೈಕುಂಠದ ರಾಣಿಯಾಗಿ ಮೆರೀತಾಳೆ."

ಘೀಸು ಎದ್ದುನಿಂತ. ಉಲ್ಲಾಸದ ತೆರೆಗಳ ಮೇಲೆ ತೇಲುತ್ತಿರುವವನಂತೆ ಹೇಳಿದ "ಹೌದು ಕಣೋ, ಮಗು. ವೈಕುಂಠಕ್ಕೆ ಹೋಗ್ತಾಳೆ. ಯಾರಿಗೂ ಸತಾಯಿಸಲಿಲ್ಲ. ಯಾರ ಮೇಲೂ ದಬ್ಬಾಳಿಕೆ ಮಾಡಲಿಲ್ಲ. ಸತ್ತು ನಮ್ಮ ಬದುಕಿನ ಒಂದು ದೊಡ್ಡ ಬಯಕೆಯೇನಿತ್ತೋ ಅದನ್ನ ಪೂರೈಸಿದಳು. ಅವಳಲ್ಲದೇ ಮತ್ತೆ ಯಾರು ಈ ದೊಡ್ಡ ದೊಡ್ಡ ಮನುಷ್ಯರು ವೈಕುಂಠಕ್ಕೆ ಹೋಗ್ತಾರೆಯೆ? ಎರಡೂ ಕೈಯಿಂದ ಬಡವರನ್ನ ಲೂಟಿ ಮಾಡಿ, ತಮ್ಮ ಪಾಪ ತೊಳಕೊಳ್ಳೋಕ್ಕೆ ಗಂಗೇಲಿ ಮಿಂದು ಗುಡೀಲಿ ಅಭಿಷೇಕ ಮಾಡಿಸ್ತಾರಲ್ಲ ಅವರು ಹೋಗ್ತಾರೆಯೆ?"

ಶ್ರದ್ಧೆಯ ಈ ಬಣ್ಣ ತಕ್ಷಣ ಬದಲಾಯಿತು. ಅಮಲಿನ ಸ್ವಭಾವವೆಂದರೆ ಅಸ್ಥಿರತೆ. ದುಃಖ ನಿರಾಶೆಗಳು ತಲೆಹಾಕಿದವು.

ಮಾಧವ ಹೇಳಿದ – "ಆದರೆ ಬದುಕಿನಲ್ಲಿ ಅವಳು ತುಂಬ ದುಃಖ ಅನುಭವಿಸಿದಳು ಕಣಪ್ಪಾ. ಸಾಯುವಾಗ ಎಷ್ಟೊಂದು ದುಃಖ ನುಂಗಿಕೊಂಡು ಸತ್ತಳು." ಅವನು ಕೈಯಿಂದ ಕಣ್ಣನ್ನು ಮುಚ್ಚಿಕೊಂಡು ಅಳತೊಡಗಿದ. ಬಿಕ್ಕಳಿಸಿ ಬಿಕ್ಕಳಿಸಿ ಅತ್ತ.

ಘೀಸು ಸಮಾಧಾನ ಹೇಳಿದ – "ಯಾಕೆ ಅಳ್ತಿ, ಮಗು. ಸಂತೋಷದ ಸಂಗತಿ ಅಂದರೆ ಅವಳು ಈ ಮಾಯಾಜಾಲದಿಂದ ಬಿಡುಗಡೆ ಪಡೆದಳು. ಬಂಧನ ಹರೀತು. ತುಂಬ ಭಾಗ್ಯವಂತೆ. ಇಷ್ಟು ಚಿಕ್ಕ ವಯಸ್ಸಿನಲ್ಲಿ ಮಾಯಾಮೋಹಗಳ ಬಂಧನ ತೊಡೆದು ಹಾಕಿದಳು."

ಇಬ್ಬರೂ ಎದ್ದು ನಿಂತು ಹಾಡತೊಡಗಿದರು;

ಮಾಯಾವಿ, ಕಣ್ಣ ಹಿಂಗೇಕೆ ಕುಣಿಸುವಿಯೆ?

ಮಾಯಾವಿ!

ಪಡಖಾನೆಯ ಕುಡುಕರೆಲ್ಲರ ಕಣ್ಣೂ ಇವರ ಮೇಲೆಯೇ ಇದ್ದವು. ಇಬ್ಬರೂ ಮತ್ತರಾಗಿ ಹಾಡುತ್ತಿದ್ದರು. ಆಮೇಲೆ ಇಬ್ಬರೂ ಕುಣಿಯತೊಡಗಿದರು. ಹಾರಿದರು, ನೆಗೆದರು, ಬಿದ್ದರು, ಮೈ ಕುಲುಕಿದರು, ಮುಖದಲ್ಲಿ ಭಾವ ತೋರಿಸಿದರು. ಅಭಿನಯ ಮಾಡಿದರು. ಕೊನೆಗೆ ಮದಮತ್ತರಾಗಿ ಅಲ್ಲೇ ಕೆಳಗೆ ಬಿದ್ದರು.

# ಏಕಲವ್ಯ

**–ಸಿದ್ದಲಿಂಗಯ್ಯ**

## ದೃಶ್ಯ–4

**(ನಿಟ್ಟುಸಿರು ಬಿಡುತ್ತ ದ್ರೋಣರು ನಿಂತಿರುವಂತೆಯೇ ಬೆಳಕಿನ ಬದಲಾವಣೆ. ದ್ರೋಣರ ನಿರ್ಗಮನದ ನಂತರ ಏಕಲವ್ಯನ ಪ್ರವೇಶ)**

ಏಕಲವ್ಯ : ಕನಸು ನನಸಾಗಲಿಲ್ಲ. ತಾಯಿಯ ಹರಕೆ ಫಲಿಸಲಿಲ್ಲ. ಕಾಡಿನಲ್ಲಿ ಪ್ರಾಣಿ ಪಕ್ಷಿಗಳ ಮುಂದೆ, ಮರಗಿಡಗಳ ನಡುವೆ ವೀರನಾದ ಮನುಷ್ಯನಾಡಿನಲ್ಲಿ ಮಾನವರ ಮುಂದೆ ಬೇಡದವನಾಗುತ್ತಾನೆ ಎಂದು ನಂಬಿರಲಿಲ್ಲ. ಕೀಳು ಕುಲದ ಕಳಂಕ ಆಕಾಶಕ್ಕಿಂತಲೂ ಅಗಲವಾದದ್ದು. ಭೂಮಿಗಿಂತಲೂ ಭಾರವಾದದ್ದು. ನಾನು ಜಗತ್ತಿನ ಸುಂದರ ಸಂಗತಿಗಳಿಂದ ದೂರವಾದವನು. ಲೋಕದಲ್ಲಿ ನಾನೀಗ ಅಸಹಾಯಕ.

ಅಶ್ವತ್ಥಾಮ : (ಪ್ರವೇಶಿಸಿ) ಏಕಲವ್ಯ, ಅಸಹಾಯಕತೆಯೇ ಜಗತ್ತನ್ನೂ ನಮ್ಮ ಬದುಕಿನ ಗತಿಯನ್ನೂ ನಿರ್ಧರಿಸೋ ಪ್ರಬಲ ಶಕ್ತಿ.

ಏಕಲವ್ಯ : ಯಾರು ನೀನು?

ಅಶ್ವತ್ಥಾಮ : ಕೆಲವು ಕ್ಷಣಗಳ ಹಿಂದೆ ಯಾರಿಂದ ನೀನು ತಿರಸ್ಕೃತನಾದೆಯೋ ಆ ದ್ರೋಣಾಚಾರ್ಯರ ಮಗ ಅಶ್ವತ್ಥಾಮ. ಕಾಡಿನ ಏಕಲವ್ಯನ ಸ್ನೇಹಾಕಾಂಕ್ಷಿ.

ಏಕಲವ್ಯ : ಆಶ್ಚರ್ಯ! ಅಪ್ಪನಿಗೆ ಬೇಡವಾದ ನಾನು ಮಗನಿಗೆ ಒಡನಾಡಿ ಹೇಗಾದೇನು?

ಅಶ್ವತ್ಥಾಮ : ನಿನ್ನ ಹುಟ್ಟಿನ ಬಗ್ಗೆ ಬೇಸರಬೇಡ. ನಿನ್ನ ಜನ್ಮದ ಬಗ್ಗೆ ಜಿಗುಪ್ಸೆ ಸಲ್ಲದು. ನಿನ್ನ ಬೇಸರ, ಜಿಗುಪ್ಸೆಗಳಿಗೆ ಕಾರಣವೇ ಇಲ್ಲ. ರಾಜಕುಮಾರರ ವರ್ತನೆಯಿಂದ ಎದೆಗುಂದಬೇಡ. ಹಾಗೆ ನೋಡಿದರೆ ಈ ರಾಜಮಕ್ಕಳ ದರ್ಪದಿಂದ ನಿನ್ನಷ್ಟೇ ಅವಮಾನ ನನಗೂ ಆಗಿದೆ. ಅವರ ಸೊಕ್ಕು ಸೆಡವುಗಳಿಂದ ನಾನೂ ನೊಂದಿದ್ದೇನೆ. ರಾಜಕುಮಾರರು ನಿನ್ನನ್ನು ನಡೆಸಿಕೊಂಡ ರೀತಿಯಿಂದ ನನಗೆ ಸಿಟ್ಟು ಬಂತು. ಆದರೆ ನಾನೂ ಅಸಹಾಯಕ. ಅವರ ಅನ್ನದ ಹಂಗು ನಮ್ಮದು.

ಏಕಲವ್ಯ : ರಾಜಕುಮಾರರ ಅಹಂಕಾರ. ನಿಮ್ಮ ಅನ್ನದ ಹಂಗು... ನನ್ನನ್ನು ಈ ಜನ್ಮದಲ್ಲಿ ವಿದ್ಯೆಯಿಂದ ದೂರಮಾಡಿವೆ.

ಅಶ್ವತ್ಥಾಮ : ಚಿಂತಿಸಬೇಡ ಏಕಲವ್ಯ. ಮನಸ್ಸಿದ್ದಲ್ಲಿ ಮಾರ್ಗ. ಬಿಲ್ಲುವಿದ್ಯೆ ಕೇವಲ ವಿನಾಶಕ್ಕಾಗಿ ಮಾತ್ರವಲ್ಲ, ಅದು ಸೃಷ್ಟಿಯ ರಕ್ಷಣೆ ಮತ್ತು ಪೋಷಣೆಗಾಗಿ ಎಂಬುದನ್ನು ನಿನ್ನನ್ನು ನೋಡಿ ತಿಳಿದೆನು. ಬಿಲ್ಲು ವಿದ್ಯೆ ರಾಜಕುಮಾರರಿಗೆ ಬಾಹುಬಲದ ಪ್ರದರ್ಶನಕ್ಕಾಗಿ. ನಿನ್ನಂಥವರಿಗೆ ಅದು ಲೋಕಕಲ್ಯಾಣದ ಸಾಧನ.

ಏಕಲವ್ಯ : ಆದರೆ ನನ್ನ ಹಂಬಲ ಕೈಗೂಡುವ ದಾರಿಗಳೆಲ್ಲಾ ಮುಚ್ಚಿವೆ.

ಅಶ್ವತ್ಥಾಮ : ನಿರಾಶನಾಗಬೇಡ ಏಕಲವ್ಯ. ನನ್ನ ತಂದೆಯವರಲ್ಲಿ ನಿನಗೆ ವಿದ್ಯೆ ಕಲಿಸಬೇಕೋ ಅಥವಾ ಬೇಡವೋ ಎನ್ನುವುದರ ಬಗ್ಗೆ ಖಚಿತವಾದ ನಿಲುವಿತ್ತೋ ಇಲ್ಲವೋ ಗೊತ್ತಿಲ್ಲ. ಆದರೆ ನಿನ್ನ ಆಸೆಯನ್ನು ಪೂರೈಸಲು ಒಂದು ಮಾರ್ಗವಂತೂ ನನಗೆ ಗೋಚರಿಸುತ್ತಿದೆ.

ಏಕಲವ್ಯ : ಏನದು?.....

ಅಶ್ವತ್ಥಾಮ : ರಾಜಕುಮಾರರಿಗೆ ಕಲಿಸೋ ಮೊದಲು ನಮ್ಮ ತಂದೆ ನನಗೆ ಪ್ರತಿದಿನ ಬೆಳಿಗ್ಗೆ ಬಿಲ್ಲುವಿದ್ಯೆ ಹೇಳಿಕೊಡುತ್ತಾರೆ. ನೀನು ಯಾವುದಾದರೂ ಮರದ ಮರೆಯಲ್ಲಿ ನಿಂತು ಎಲ್ಲವನ್ನೂ ಚೆನ್ನಾಗಿ ಕಲಿತುಕೋ. ನನ್ನಿಂದ ಇಷ್ಟು ಮಾತ್ರ ಸಾಧ್ಯ.... ಏಕಲವ್ಯ.

ಏಕಲವ್ಯ : ಧನ್ಯ, ಅಶ್ವತ್ಥಾಮ ನಾನು ಧನ್ಯ.
(ಕತ್ತಲಾಗುವುದು, ನಂತರ ರಂಗದ ಒಂದು ಬದಿಯಲ್ಲಿ ಅಶ್ವತ್ಥಾಮನಿಗೆ ದ್ರೋಣರು ಬಿಲ್ಲವಿದ್ಯೆ ಕಲಿಸುತ್ತಿರುವಾಗ ಇನ್ನೊಂದು ಬದಿಯಲ್ಲಿ ಏಕಲವ್ಯ ಅದನ್ನು ಅನುಕರಣೆ ಮಾಡುತ್ತಿರುವನು)

ದ್ರೋಣ : (ಪ್ರವೇಶಿಸಿ) ಇಲ್ಲಿ ನೀನು ಹೀಗೆ ಅಭ್ಯಾಸ ಮಾಡುವುದು ನಿನಗೂ ಯೋಗ್ಯವಲ್ಲ. ನನಗೂ ಕ್ಷೇಮವಲ್ಲ. ಬೇಡ ಹೊರಟುಹೋಗು.

ಏಕಲವ್ಯ : ಗುರುದೇವ, ಈ ರೀತಿಯಲ್ಲಾದರೂ ವಿದ್ಯೆ ಕಲಿಯುವ ಭಾಗ್ಯ ಕರುಣಿಸಿ

ದ್ರೋಣ : ಬಿಲ್ಲುವಿದ್ಯೆಯ ಬಗ್ಗೆ ನಿನಗಿರುವ ಪ್ರಾಮಾಣಿಕವಾದ ಆಸಕ್ತಿಯನ್ನು ನೋಡಿ ನಿಜವಾಗಿಯೂ ನನ್ನ ಮನಸ್ಸು ಸಂಕಟಪಡುತ್ತಿದೆ. ಶಿಷ್ಯನ ಶ್ರದ್ಧೆಗೆ ಯಾವ ಗುರು ತಾನೇ ಸ್ಪಂದಿಸುವುದಿಲ್ಲ. ಆದರೆ ನಾನು ಅಸಹಾಯಕ.

ಏಕಲವ್ಯ : ಗುರುಗಳೇ, ನೀವು ನನಗೆ ವಿದ್ಯೆ ಕಲಿಸದಿದ್ದರೂ ಚಿಂತೆ ಇಲ್ಲ. ನಿಮಗೆ

ಕಲಿಸುವ ಮನಸ್ಸಿದೆ ಎಂಬ ಒಂದು ಮಾತು ಸತ್ಯವಾದರೆ ಅಷ್ಟೇ ಸಾಕು. ನಾನು ಕಾಡಿಗೆ ಹೋಗುತ್ತೇನೆ. ಆಶೀರ್ವದಿಸಿ ಗುರುದೇವ.

(ಏಕಲವ್ಯ ಹೊರಡುವನು. ಅವನನ್ನೇ ನೋಡುತ್ತಾ ನಿಂತಿದ್ದ ದ್ರೋಣಾಚಾರ್ಯರು... ಅಶ್ವತ್ಥಾಮನನ್ನು ಗಮನಿಸುವರು. ಅಶ್ವತ್ಥಾಮ ತಂದೆಯನ್ನು ನೋಡಿ ನಿರ್ಗಮಿಸುವನು. ರಂಗದಲ್ಲಿ ಕತ್ತಲಾಗುವುದು)

# ದೃಶ್ಯ–5

**(ರಂಗದ ಮೇಲೆ ದ್ರೋಣ, ಭೀಷ್ಮರ ಆಗಮನ)**

ಭೀಷ್ಮ : ಹೇಗೆ ಸಾಗಿದೆ ನಿಮ್ಮ ವಿದ್ಯಾದಾನ? ವಿಶ್ವದಲ್ಲೇ ಅಪ್ರತಿಮರಾದ ಪರಾಕ್ರಮಿಗಳನ್ನು ಸೃಷ್ಟಿಸುವ ಕೆಲಸ ನಿಮ್ಮಿಂದಲ್ಲದೆ ಯಾರಿಂದಲೂ ಸಾಧ್ಯವಿಲ್ಲ. ಜಗತ್ತನ್ನೇ ನಡುಗಿಸಬಲ್ಲ ವೀರರನ್ನು ನೀವು ತರಪೇತುಗೊಳಿಸುತ್ತಿದ್ದೀರಿ. ಇದಕ್ಕಿಂತ ಸಂತೋಷದ ಕೆಲಸ ಇನ್ನೊಂದಿಲ್ಲ.

ದ್ರೋಣ : ಹಿರಿಯರೆ, ನನ್ನ ತರಪೇತಿಯ ಜೊತೆಗೆ ನಿಮ್ಮ ಪ್ರೋತ್ಸಾಹ ಹರಕೆ ಆಶೀರ್ವಾದಗಳೂ ಸೇರಿಕೊಂಡಿವೆ. ಯೋಗ್ಯರಾದ ಶಿಷ್ಯರಿಗೆ ಕಲಿಸುವುದಕ್ಕಿಂತ ದೊಡ್ಡ ಭಾಗ್ಯ ಯಾವುದು?

ಭೀಷ್ಮ : (ದ್ರೋಣರು ಅಕಾಶವನ್ನು ದಿಟ್ಟಿಸುತ್ತ ನಿಂತದ್ದನ್ನು ಸೂಕ್ಷ್ಮವಾಗಿ ಗಮನಿಸಿ) ಆಚಾರ್ಯ ನಿಮ್ಮ ಮುಖದಲ್ಲಿ ಸಂತೋಷ ಸಂತೃಪ್ತಿಯ ನಡುವೆಯೂ ಎಲ್ಲೋ ಒಂದು ಅತೃಪ್ತಿಯ ಎಳೆ ಇರುವಂತಿದೆ. ಆನಂದದ ನಡುವೆ ಆತಂಕ ಸುಳಿದಾಡುವ ಸೂಚನೆಯಿದೆ. ಇದು ಸುಳ್ಳಲ್ಲ ತಾನೆ?

ದ್ರೋಣ : ಅಂಥದ್ದೇನಿಲ್ಲ ಪೂಜ್ಯರೆ.

ಭೀಷ್ಮ : ನಿಮ್ಮ ಮುಖವನ್ನು ನೋಡಿ ಮನಸ್ಸನ್ನು ಓದಬಲ್ಲೆ. ನಿಮ್ಮ ಶಿಷ್ಯರ ಭವಿಷ್ಯದ ಬಗೆಗೆ ನಿಮಗಿರುವ ಕಾಳಜಿಯನ್ನು ಅರ್ಥ ಮಾಡಿಕೊಳ್ಳಬಲ್ಲೆ.

ದ್ರೋಣ : ನಾನು ಈ ಬಗ್ಗೆ ಹಲವು ಬಾರಿ ಯೋಚಿಸಿದ್ದೇನೆ. ಜಗತ್ತಿನ ಅನೇಕ ಕೊಲೆ ಸುಲಿಗೆಗಳಿಗೆ ರಕ್ತಪಾತಕ್ಕೆ, ಅಗಣಿತವಾದ ಅಂಗವಿಕಲತೆಗೆ, ಅಸಂಖ್ಯಾತ ವೈಧವ್ಯಕ್ಕೆ, ನಿರ್ದಯವಾದ ಕಿಚ್ಚಿಗೆ ಇಂಬು ಕೊಡಲಿರುವವನು ನಾನೇ ಅನಿಸುತ್ತದೆ. ಮುಂದಾಗಲಿರುವ ಮಹಾನ್ ನರಮೇಧಕ್ಕೆ ಮೂಲವಾಗುವ ಅಪರಾಧಿಯ ಸ್ಥಾನದಲ್ಲಿ ನನ್ನನ್ನು ನಾನು ಎಷ್ಟೋ ಸಾರಿ ಕಲ್ಪಿಸಿಕೊಂಡಿದ್ದೇನೆ. ದಾಯಾದಿಗಳ ಕಗ್ಗೊಲೆಗೆ, ಬಂಧುಗಳ ನಡುವಿನ

ಹತ್ಯೆಗೆ ಸಜ್ಜುಗೊಳಿಸುತ್ತಿರುವ ಹೃದಯಹೀನ ದ್ರೋಣಾಚಾರ್ಯ ಎಂಬ ಆಲೋಚನೆ ಮನಸ್ಸನ್ನು ಹೊಕ್ಕು ಘೋರ ಸಂಕಟಕ್ಕೆ ಈಡಾಗುತ್ತೇನೆ.

ಭೀಷ್ಮ : ಆಚಾರ್ಯ ನಿಮ್ಮ ಮನಸ್ಸನ್ನು ಅರ್ಥಮಾಡಿಕೊಳ್ಳಬಲ್ಲೆ. ಮಾನವೀಯತೆ, ಹೃದಯವಂತಿಕೆಗಳು ರಾಜಾಶ್ರಯದಲ್ಲಿ ಅಳುವ ಬದಲು ನರಳುತ್ತವೆ ನಿಜ. ನಿಮ್ಮ ಶಿಷ್ಯರೂ ಆದ ನನ್ನ ಮೊಮ್ಮಕ್ಕಳು ಮುಂದೆ ಅನುಭವಿಸಲಿರುವ ದುರಂತವನ್ನು ನಿಮಗಿಂತ ಚೆನ್ನಾಗಿ ನಾನು ಊಹಿಸಿದ್ದೇನೆ. ಇದಕ್ಕಾಗಿ ಚಡಪಡಿಸುವ ಕಾರಣವಿಲ್ಲ. ಲೋಕ ಕಲ್ಯಾಣಕ್ಕೆ ಅನಿವಾರ್ಯವಾದ ದುರಂತವೊಂದರ ಸಂಭವಕ್ಕಾಗಿ ನಾವೆಲ್ಲ ದುಡಿಯುತ್ತಿದ್ದೇವೆ.

ದ್ರೋಣ : ಆ ಲೋಕದ ಅಪಮಾನ, ನಿಂದೆ, ಅನ್ನದ ಹಂಗು, ಅಹಂಕಾರಗಳ ಜೊತೆಗೆ ಶ್ರದ್ಧೆ, ವಿನಯ, ನಿಷ್ಠೆ, ವಿಧೇಯತೆಗಳ ಸಂಘರ್ಷವನ್ನು ಹೆಚ್ಚಿಸುವ ಲೋಕಕಲ್ಯಾಣ ಅರ್ಥಹೀನವಲ್ಲವೇ?

ಭೀಷ್ಮ : ಇಲ್ಲೇ ನೀವು ಎಡವುತ್ತಿದ್ದೀರಿ ಆಚಾರ್ಯ, ಈ ಲೋಕವ್ಯವಸ್ಥೆಯನ್ನು ಕಿಂಚಿತ್ತೂ ಊನವಾಗದಂತೆ ಕಾಪಾಡುವುದಕ್ಕಿಂತ ಮಿಗಿಲಾದ ಲೋಕ ಕಲ್ಯಾಣ ಯಾವುದು? ನಮ್ಮ ವ್ಯವಸ್ಥೆ ಹಲವು ಮೌಲ್ಯಗಳನ್ನು ಆಧರಿಸಿ ನಿಂತು, ಬದುಕೇ ಒಂದು ಸೂತ್ರಕ್ಕೆ ಬದ್ಧವಾಗಿದೆ. ಈ ಲೋಕದಲ್ಲಿ ಮುಗಿಲೆತ್ತರದ ತೆಂಗಿನ ಮರಗಳಿವೆ. ಸಣ್ಣಪುಟ್ಟ ತುಳಸಿಗಿಡಗಳೂ ಇವೆ. ಹೆಮ್ಮಾವಿನ ಮರಗಳಿವೆ. ಅವುಗಳನ್ನು ಬಳಸಿದ ನವಿರಾದ ಬಳ್ಳಿಗಳಿವೆ. ಖಗಮೃಗಗಳಲ್ಲಿಯೂ ಸಾಕಷ್ಟು ಏರುಪೇರುಗಳಿವೆ. ಇನ್ನು ಮನುಜರಲ್ಲಿ ಬಡವ ಶ್ರೀಮಂತರಿದ್ದಾರೆ. ಬೇಡುವವರೂ ನೀಡುವವರೂ ಇದ್ದಾರೆ. ಆರಸರೂ ಆಳುಗಳೂ ಈ ನೆಲದ ಮೇಲಿದ್ದಾರೆ. ಲೋಕದ ಮಾನವ ಜೀವಿಗಳ ನಡುವೆ ತರತಮ ಸಂಬಂಧಗಳನ್ನು ಉಳಿಸಿಕೊಂಡು ಬರುವುದೇ ನಮ್ಮೆಲ್ಲರ ಜವಾಬ್ದಾರಿ. ಭಗವಂತನಿಂದ ಸೃಷ್ಟಿಯಾದ ಲೋಕರೂಢಿಗೆ ಕುಂದಾದರೆ ಭಗವಂತನಿಗೇ ಅವಮಾನ ಮಾಡಿದಂತೆ.

ದ್ರೋಣ : ಅಂದರೆ ನಮ್ಮ ಬದುಕಿನ ಏರುಪೇರುಗಳನ್ನು, ಅಸಂಗತ ವಿಚಾರಗಳನ್ನು ಕಾಪಾಡುವುದೇ ಪ್ರಮುಖವೆಂದಾಯಿತಲ್ಲವೇ?

ಭೀಷ್ಮ : ಅಚಾರ್ಯ ನಾನು ನಮ್ಮ ಧರ್ಮಸೂತ್ರಗಳಿಗೆ ಅನುಗುಣವಾಗಿ ಹೇಳುತ್ತಿದ್ದೇನೆ. ಎಷ್ಟೇ ಆಗಲಿ ಅದು ರಚಿತವಾದದ್ದು ಬ್ರಾಹ್ಮಣೋತ್ತಮರಿಂದ ಅಲ್ಲವೇ? ನೀವೇ ಬರೆದದ್ದನ್ನು ಚಾಚೂ ತಪ್ಪದೆ ಪಾಲಿಸುವುದಷ್ಟೇ ಕ್ಷತ್ರಿಯರ ಕೆಲಸ. (ನಗು)

ದ್ರೋಣ : ಪೂಜ್ಯರೇ ನೀವು ಬರೆಸಿದ್ದರಿಂದ ನಾವೇಕೆ ಬರೆದಿರಬಾರದು?

ಭೀಷ್ಮ : ಅದೇನೆ ಇರಲಿ, ಸೂಕ್ಷ್ಮವಾದ ಸಂಗತಿಗಳತ್ತ ಗಮನ ಕೊಡೋಣ. ಕ್ಷತ್ರಿಯರು ರಾಜ್ಯವನ್ನು ಆಳಲು ಅರ್ಹರಾದವರು. ನಮ್ಮ ಪದ್ಧತಿಗಳನ್ನು ಜೀವನವನ್ನು ಅವರು ರಕ್ಷಿಸುತ್ತಾರೆ ನಿಜ. ಆದರೆ ಈ ಕ್ಷತ್ರಿಯ ಬಲವಷ್ಟೇ ನಿರ್ಣಾಯಕವಲ್ಲ. ಕ್ಷತ್ರಿಯರ ಬಾಹುಬಲಕ್ಕೆ ಬ್ರಾಹ್ಮಣರ ಬುದ್ಧಿಯ ಬಲ ಅಗತ್ಯವಾಗಿ ಬೇಕಾಗಿದೆ.

ಆಚಾರ್ಯ, ಜಗತ್ತನ್ನು ಅಳಲು, ನಿಯಂತ್ರಿಸಲು ಸಮರ್ಥರಾಗುವಂತೆ ಕ್ಷತ್ರಿಯರನ್ನು ಸಿದ್ಧಗೊಳಿಸುವುದರಲ್ಲಿ ನಿಮ್ಮ ಸಾರ್ಥಕತೆ ಅಡಗಿದೆ.

ನಿಮ್ಮ ತೊಳಲಾಟಗಳನ್ನು ಅರ್ಥಮಾಡಿಕೊಳ್ಳಬಲ್ಲೆ ಆಚಾರ್ಯ. ಕ್ಷತ್ರಿಯ ಬ್ರಾಹ್ಮಣರ ನಡುವಿನ ಸ್ಥಾನಮಾನಗಳ ವ್ಯತ್ಯಾಸವನ್ನು ನಾನಿಲ್ಲಿ ಹೇಳುತ್ತಿಲ್ಲ. ಜಗತ್ತಿನ ಎಲ್ಲ ಜೀವಿಗಳನ್ನೂ ಕ್ಷತ್ರಿಯರು ನಿಯಂತ್ರಿಸುತ್ತಾರೆ. ಆದರೆ ಬ್ರಾಹ್ಮಣರು ಲೋಕದ ಎಲ್ಲ ಜೀವಿಗಳ ಆತ್ಮಗಳ ಅಧಿಕೃತ ಒಡೆಯರು. ಆತ್ಮಲೋಕದ ಸಾಮ್ರಾಟರಾದ ನಿಮ್ಮ ಮುಂದೆ ನಾವು ಎಷ್ಟರವರು ಆಚಾರ್ಯ!

ದ್ರೋಣ : ನಿಮ್ಮ ಖಚಿತವಾದ ಆಲೋಚನೆಗಳಿಗೂ ಅವುಗಳನ್ನು ಸ್ಪಷ್ಟವಾಗಿ ವ್ಯಕ್ತಮಾಡುವ ವಿಧಾನಕ್ಕೂ ನಾನು ಮಾರುಹೋಗಿದ್ದೇನೆ.

ಭೀಷ್ಮ : ನಿಮ್ಮ ಜವಾಬ್ದಾರಿ ಹೆಚ್ಚಿನದು ಆಚಾರ್ಯ. ಈ ಮಕ್ಕಳು ಇನ್ನೂ ಚಿಕ್ಕವರು. ವಿವೇಕ ಬಲಿಯದವರು. ಪಾಂಡು ಸತ್ತುಹೋದ. ಧೃತರಾಷ್ಟ್ರ ಕುರುಡ. ರಾಜ್ಯರಥವನ್ನು ಸಮರ್ಥವಾಗಿ ಮುನ್ನಡೆಸುವವರು ಇಲ್ಲದೆ ರಾಜ್ಯದ ಸ್ಥಿತಿ ಆತಂಕಕಾರಿಯಾಗಿದೆ. ಈ ಕೊರತೆಯನ್ನು ತುಂಬಿ ಸೇವೆಗೆ ಒದಗಿದ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು.

ದ್ರೋಣ : ನನ್ನ ಶಿಷ್ಯರು ರಾಜ್ಯಾಧಿಕಾರವನ್ನು ಸುಸೂತ್ರವಾಗಿ ನಡೆಸುವ ಸಾಮರ್ಥ್ಯವುಳ್ಳವರೆಂಬುದಕ್ಕೆ ಇನಿತೂ ಅನುಮಾನ ಬೇಡಿ ಪೂಜ್ಯರೇ.

ಭೀಷ್ಮ : (ನೋವಿನಿಂದ) ಬೆಳೆಯುವ ಪೈರು ಮೊಳಕೆಯಲ್ಲಿ ಎಂಬಂತೆ ಈಗಾಗಲೇ ದಾಯಾದಿ ಮತ್ಸರದ ವಿಷ ಹೊಗೆಯಾಡುತ್ತಿದೆ. ವಿವೇಕ ಇವರ ಕೈ ಜಾರಿಹೋದರೆ ನಿಮ್ಮ ಶ್ರಮವೆಲ್ಲಾ ನಿಷ್ಫಲ.

ದ್ರೋಣ : ನನ್ನನ್ನು ಸದಾ ಕಾಡುವ ಬಾಧೆ ಇದೇ ಪೂಜ್ಯರೇ. ನನ್ನಿಂದ ವಿದ್ಯೆ ಕಲಿತ ಇವರು ಶತ್ರುಗಳ ವಿರುದ್ಧ ಹೋರಾಡುವ ಬದಲು ತಾವೇ ಕಚ್ಚಾಡಿ ನಿರ್ನಾಮವಾಗುವ ಸೂಚನೆಗಳು ಕಾಡಿ ನನ್ನ ನೆಮ್ಮದಿಯನ್ನು ಕೆಡಿಸುತ್ತಿವೆ.

ಭೀಷ್ಮ : ಆಚಾರ್ಯ, ಜಗತ್ತಿನ ನಾಟಕರಂಗದಲ್ಲಿ ವಿಧಿಯ ಬರವಣಿಗೆಯನ್ನು ಮೀರುವವರು ಯಾರು? ಆತಂಕವನ್ನು ಕಡಿಮೆ ಮಾಡಿಕೊಂಡು ಕಾರ್ಯೋನ್ಮುಖರಾಗಿ ಜಗತ್ತನ್ನೇ ತಲ್ಲಣಗೊಳಿಸುವ ಶೂರರು ನಿಮ್ಮೆದುರು ಸದಾ ಶಿರಬಾಗಿ ನಿಲ್ಲುವ ಸುಖಕ್ಕಿಂತ ನಿಮಗೆ ದೊಡ್ಡ ಸುಖವಿಲ್ಲ. ಅಧಿಕಾರ ಗ್ರಹಣಕ್ಕಾಗಿ, ತನ್ಮೂಲಕ ನಡೆಯುವ ಲೋಕ ಕಲ್ಯಾಣಕ್ಕಾಗಿ ಸಲ್ಲುವ ನಿಮ್ಮ ಕಾಣಿಕೆಗೆ ಬೆಲೆ ಕಟ್ಟಲಾದೀತೇ ಆಚಾರ್ಯ.

ದ್ರೋಣ : ಪೂಜ್ಯರೇ, ನಿಮ್ಮ ನಿರೀಕ್ಷೆಗೂ ಮೀರಿ ಶಿಕ್ಷಣ ಕೊಡಲು ಶ್ರಮಪಡುತ್ತೇನೆ.

ಭೀಷ್ಮ : ನಾನಿನ್ನು ಬರಲೇ ಆಚಾರ್ಯ.

ದ್ರೋಣ : ಹೋಗಿ ಬನ್ನಿ ಪೂಜ್ಯರೇ.

(ಕತ್ತಲಾಗುವುದು)

# ದೃಶ್ಯ–6

**(ದ್ರೋಣರ ಪ್ರತಿಮೆಯನ್ನು ಹೊತ್ತ ಏಕಲವ್ಯ ಕುಣಿಯುತ್ತಾ ಬಂದು ರಂಗದ ಮಧ್ಯದಲ್ಲಿ ಪ್ರತಿಷ್ಠಾಪಿಸುವನು. ಅಭ್ಯಾಸ ಮಾಡುತ್ತಿದ್ದಂತೆಯೇ)**

ಹಾಡು : ಮಾನಾಭಿಮಾನವೋ ನಿನ್ನದು ಗುರುವೇ
ಮಾನಾಭಿಮಾನ.
ಗುರು ನಿನ್ನ ಹೆಸರನು ಮನದಲಿ ನೆನೆಯುವೆ
ಕರುಣಾಸಾಗರ ಮೂರ್ತಿ ಉದ್ಧರಿಸಯ್ಯೊ ನನ್ನ
ಮಾನಾ ಅಭಿಮಾನ ನಿನ್ನದು ಗುರುವೇ.
ಕಾನನದೊಳು ನಿನ್ನ ಪೂಜೆಯ ಗೈಯ್ಯುವೆ
ಅರಸು ಮಕ್ಕಳ ಗುರುವೆ ಉದ್ಧರಿಸಯ್ಯೊ ನನ್ನ
ಮಾನಾ ಅಭಿಮಾನ.
(ಕತ್ತಲಾಗುವುದು)

# ದೃಶ್ಯ–7

**(ಕಾಡಿನಲ್ಲಿ ದ್ರೋಣಾರ್ಜುನರು)**

ಅರ್ಜುನ : ಗುರುಗಳೇ, ಅಗೋಚರವಾದ ಬಾಣ ನಮ್ಮ ಬೇಟೆನಾಯಿಯ ಬಾಯಿ ಮುಚ್ಚಿಸಿದ್ದು ದೊಡ್ಡ ವಿಸ್ಮಯ. ಈ ಸಾಹಸಿ ಮಾನವನಂತೂ ಅಲ್ಲ, ಅವನು ದೇವನೋ ಗಂಧರ್ವನೋ ಇರಬೇಕು.

ದ್ರೋಣ : ಇಂಥ ಪರಾಕ್ರಮಿಗಳು ಇರುವುದು ಆಶ್ಚರ್ಯವೇನಲ್ಲ. ಧ್ವನಿಯನ್ನು ಗ್ರಹಿಸಿಯೇ ಬಾಣ ಪ್ರಯೋಗಿಸುವುದು ಶಬ್ದವೇಧಿ. ಈ ವಿದ್ಯೆಯನ್ನು ಬಲ್ಲವನು ಕಾಡಿನಲ್ಲಿರುವುದು ಸೋಜಿಗ.
(ಏಕಲವ್ಯನು ಪ್ರವೇಶಿಸುವನು)

ಏಕಲವ್ಯ : ಗುರುಗಳೇ ತಾವು ಇಲ್ಲಿ? (ನಮಸ್ಕರಿಸುವನು) ನನ್ನ ಊಹೆ ನಿಜವಾಯ್ತು. ಬಂದ ಸದ್ದು ಬೇಟೆನಾಯಿಯದೇ ಎಂಬುದು ನಿಮ್ಮನ್ನು ಕಂಡು ನಿಜವಾಯಿತು.

ದ್ರೋಣ : ಅಯ್ಯಾ ಯುವಕ, ನೀನಾರು?

ಏಕಲವ್ಯ : ಗುರುಗಳೇ ನಾನು ಏಕಲವ್ಯ. ಕೆಲವು ಗಳಿಗೆಯ ಹಿಂದೆ ವಿಚಿತ್ರವಾದ ಸದ್ದೊಂದು ಕೇಳಿಸಿತು. ಸದ್ದು ಬರುವ ಕಡೆ ಬಾಣ ಬಿಟ್ಟೆ. ಅದನ್ನೇ ಹುಡುಕುತ್ತ ಬಂದೆ. ತಮ್ಮನ್ನು ಕಂಡೆ.

ಅರ್ಜುನ : ನಮ್ಮಂಥ ರಾಜಕುಮಾರರಿಗೆ ಗೊತ್ತಿರದ ಈ ವಿದ್ಯೆಯನ್ನು ನೀನು ಕಲಿತದ್ದು ಹೇಗೆ? ನಿನ್ನ ಗುರುಗಳಾರು?

ದ್ರೋಣ : ನಿನ್ನ ಗುರುಗಳು ನನಗಿಂತ ದೊಡ್ಡವರಿರಲೇಬೇಕು? ತರುಣ, ಯಾರು ನಿನ್ನ ಗುರುಗಳು?

ಏಕಲವ್ಯ : ಅವರು ಮಹಾನ್ ಬಿಲ್ಲೋಜರು. ಹದಿನಾಲ್ಕು ಲೋಕದಲ್ಲೂ ಹೆಸರಾದ ದ್ರೋಣಾಚಾರ್ಯರು, ಕುರುಕುಲ ವಿದ್ಯಾಗುರುಗಳಾದ ತಾವು.

ಅರ್ಜುನ : ಗುರುಗಳೇ?

ದ್ರೋಣ : ಅರ್ಜುನ, ಈಗ ನೆನಪಾಗುತ್ತಿದೆ. ಕನಸಿನಂತೆ, ಕಳೆದ ಜನ್ಮದ ಕಥೆಯಂತೆ ಎಲ್ಲಾ ಅರಿವಿಗೆ ಬರುತ್ತಿದೆ. (ಏಕಲವ್ಯನ ಕಡೆಗೆ ತಿರುಗಿ) ನೀನು ಅಂದು ನನ್ನನ್ನು ಕಂಡ ಬೇಡರ ಹುಡುಗ ಏಕಲವ್ಯ ಅಲ್ಲವೇ?

ಏಕಲವ್ಯ : ಹೌದು, ವಿದ್ಯಾವಿಹೀನವಾಗಿದ್ದ ನನ್ನನ್ನು ಅಂದು ತಾವು ಸ್ವೀಕರಿಸಲಿಲ್ಲ.

ತಮ್ಮ ಕೃಪೆಯಿಂದ ಇಂದು ವಿದ್ಯಾಸಂಪನ್ನ ನಾಗಿದ್ದೇನೆ. ದಯವಿಟ್ಟು ನನ್ನ ಜೋಪಡಿಗೆ ಬನ್ನಿ. ನನ್ನ ಸೇವೆಯನ್ನು ಸ್ವೀಕರಿಸಿ.

ದ್ರೋಣ : ಬಹಳ ಸಂತೋಷ ಏಕಲವ್ಯ. ನನ್ನನ್ನು ಮೀರಿಸಿದ ಬಿಲ್ಲುಗಾರನಾಗಿದ್ದೀಯೆ.

ಅರ್ಜುನ : ಗುರುಗಳೇ ಎಂಥ ಮಾತನಾಡಿಬಿಟ್ಟಿರಿ. ಏಕಲವ್ಯ ನಿಮ್ಮನ್ನು ಮೀರಿಸಿದ ಬಿಲ್ಲುಗಾರನೇ? ಜಗತ್ತಿನಲ್ಲೇ ಶ್ರೇಷ್ಠ ಬಿಲ್ಲುಗಾರನನ್ನಾಗಿ ಮಾಡುತ್ತೇನೆಂದು ನೀವು ನನಗೆ ಕೊಟ್ಟ ವಚನ ಭಂಗವಾಯಿತೇನು?

ದ್ರೋಣ : ಸತ್ಯವನ್ನು ಒಪ್ಪಿಕೊಳ್ಳಲು ಸಂಕೋಚವೇಕೆ? ಏಕಲವ್ಯ ಮಹಾನ್ ಪರಾಕ್ರಮಿ, ಶಬ್ದವೇಧಿ ವಿದ್ಯೆ ಅವನಿಗಲ್ಲದೆ ಮತ್ತಾರಿಗೂ ಸಿದ್ಧಿಸಿಲ್ಲ.

ಅರ್ಜುನ : ಛೆ, ಏಕಲವ್ಯ ಒಬ್ಬ ಯಃಕಶ್ಚಿತ್ ಬೇಡ. ಅವನಿಗೆ ಶಬ್ದವೇಧಿ ವಿದ್ಯೆ ಸಿದ್ಧಿಯೇ? ಅರಸು ಕುಲದ ನಾನೆಲ್ಲಿ, ಕೀಳು ಕುಲದ ಈ ಕುನ್ನಿಯೆಲ್ಲಿ?

ದ್ರೋಣ : ವಿದ್ಯೆಗೆ ಅಂತಸ್ತಿನ ಅಂತರವಿಲ್ಲ. ಕಷ್ಟಪಟ್ಟು ಕಲಿತವರಿಗೆ ಅದು ಒಲಿಯುತ್ತದೆ ಎಂದು ಈಗ ದಢಪಟ್ಟಿದೆ.

ಏಕಲವ್ಯ : ನನ್ನನ್ನು ಅಂದು ಹೊರಗಟ್ಟಿದ ಅರ್ಜುನ ನೀನೇ ಅಲ್ಲವೆ? ಕುಲದ ಮಾತೇಕೆ? ಶಕ್ತಿ ಇಲ್ಲದವರು ಕುಲದ ಹಿರಿಮೆಯ ಮೊರೆ ಹೋಗುತ್ತಾರೆ.

ಅರ್ಜುನ : ಏಕಲವ್ಯ, ನಾನು ಅಶಕ್ತನೇ? ನೀನು ಅಧರ್ಮಿ. ನಿಷಾದನಿಗೆ ವಿದ್ಯೆಯ ಸಿದ್ಧಿ ಶಾಸ್ತ್ರದಲ್ಲಿ ನಿಷಿದ್ಧ. ಹೀಗಿದ್ದೂ ನೀನು ಪ್ರವೀಣನಾದದ್ದು ತಪ್ಪು.

ಏಕಲವ್ಯ : ಅರ್ಜುನ, ಅರಸು ಕುಮಾರರಿಗೆ ಇದು ಬಿಲ್ಲುವಿದ್ಯೆ. ಬೇಡರಿಗೆ ಕುಲಕುಸುಬು. ನನ್ನ ಗುರುಗಳ ಕೃಪೆಯಿಂದ ಪರಿಣಿತಿ ಗಳಿಸಿದೆ.

ಅರ್ಜುನ : ಗುರುಗಳೇ ಇದು ಸತ್ಯವೇ?

ದ್ರೋಣ : ಏಕಲವ್ಯ, ನಾನು ನಿನಗೆ ಗುರು ಹೇಗಾದೆ? ನೀನು ಬೇಡಿಕೊಂಡಾಗ ಹೊರಗಟ್ಟಿದ ನಾನು ಗುರುವೇ?

ಏಕಲವ್ಯ : ಹೌದು, ತಾವೇ ನನ್ನ ಗುರುಗಳು. ಮನೆಯಲ್ಲಿ ನಿಂತು ಗುರುವಿನ ಶಕ್ತಿಯನ್ನು ಅರಿಯುತ್ತಾ ಹೋದೆ. ಪ್ರತಿಮೆಯನ್ನು ಮಾಡಿ, ಅದರ ಚೈತನ್ಯವನ್ನು ನನ್ನ ದೇಹ ಮನಸ್ಸುಗಳ ಅಂಗುಲಂಗುಲದಲ್ಲೂ ತುಂಬಿಕೊಂಡೆ. ಗುರು ಕಣ್ಮುಂದೆಯೇ ಇರಬೇಕಿಲ್ಲ. ಕನಸಿನಲ್ಲೂ ಕಲಿಸುತ್ತಾನೆ. ನೀವೇ ನನ್ನ ಗುರುಗಳು.

ದ್ರೋಣ : ಏಕಲವ್ಯ, ಇಂದು ನಾನು ಧನ್ಯನಾದೆ.

ಅರ್ಜುನ : ಗುರುಗಳೇ ನಿಮಗೆ ಇದು ಉಚಿತವಾದುದಲ್ಲ. ನಿಮ್ಮ ಧನ್ಯತೆಯಲ್ಲಿ

ಕೊಟ್ಟ ಮಾತಿಗೆ ತಪ್ಪಿದ ಪಾತಕ ಇರುವುದನ್ನು ಮರೆತಿದ್ದೀರಿ. ವಚನಭ್ರಷ್ಟರಾಗಿ ನನ್ನನ್ನು ವಂಚಿಸಿದಿರಿ.

ದ್ರೋಣ : ಅರ್ಜುನ, ನಾನು ಸಂಕಟದಲ್ಲಿ ಸಿಕ್ಕಿದ್ದೇನೆ. ನಿನಗೆ ಮಾತು ಕೊಟ್ಟಿದ್ದು ನಿಜ. ಆದರೆ ಏಕಲವ್ಯ ಮಹಾನ್ ಪರಾಕ್ರಮಿ ಎಂಬುದೂ ಅಷ್ಟೇ ನಿಜ.

ಅರ್ಜುನ : ಅಂತೂ ನನ್ನ ಬದುಕಿನಲ್ಲಿ ಕಿಚ್ಚೊಂದನ್ನು ಹತ್ತಿಸಿದಿರಿ.

ದ್ರೋಣ : ನಿಜ, ಮಾತಿಗೆ ತಪ್ಪಿದ ಪಾಪಿ ನಾನು.

ಏಕಲವ್ಯ : ಗುರುಗಳೇ?

ದ್ರೋಣ : ಹೌದು, ಏಕಲವ್ಯ.

ಅರ್ಜುನ : ಏಕಲವ್ಯ, ನಿನ್ನ ಬಿಲ್ಲುವಿದ್ಯೆಯ ಸಿದ್ಧಿ ಗುರುಗಳ ಸಂಕಟಕ್ಕೆ ನಾಂದಿಯಾಗಿದೆ.

ಏಕಲವ್ಯ : ಹಾಗಾದರೆ ಗುರುಗಳನ್ನು ಸಂಕಟದಿಂದ ಪಾರುಮಾಡುವ ಜವಾಬ್ದಾರಿ ನನ್ನದು. ಗುರುವಿನ ಗೌರವ ಕಾಯುವುದಕ್ಕಿಂತ ದೊಡ್ಡ ಸುಖವಿಲ್ಲ. ಗುರುವೇ ದಾರಿತೋರಿ.

ದ್ರೋಣ : ಕೊಟ್ಟ ಮಾತು ಉಳಿಯಲು ಇರುವುದೊಂದೇ ಮಾರ್ಗ. ಗುರುಧನ್ಯತೆಗೆ ಶಿಷ್ಯನ ಸರ್ವಸಮರ್ಪಣೆಯಾಗಬೇಕು.

ಏಕಲವ್ಯ : ಹೇಳಿ ಗುರುದೇವ, ಪ್ರಾಣ ಕೊಟ್ಟಾದರೂ ನಿಮ್ಮನ್ನು ಕಾಯುತ್ತೇನೆ.

ದ್ರೋಣ : ನಿನ್ನ ಪ್ರಾಣ ಕೇಳುತ್ತಿಲ್ಲ ಏಕಲವ್ಯ, ಸಾಮಾನ್ಯ ಗುರುಕಾಣಿಕೆಯನ್ನು ಬಯಸುತ್ತೇನೆ.

ಏಕಲವ್ಯ : ಧನ್ಯನಾದೆ. ಇಷ್ಟು ದಿನ ಗುರುಕಾಣಿಕೆ ಅರ್ಪಿಸುವ ಯೋಗಕ್ಕಾಗಿ ಗಳಿಗೆಗಳನ್ನು ಎಣಿಸುತ್ತಿದ್ದೆ. ಆ ಕಾಲವೂ ಬಂತು. ಏನು ಕಾಣಿಕೆ ಕೊಡಲಿ? ಅಪ್ಪಣೆಯಾಗಲಿ ಗುರುದೇವ.

ದ್ರೋಣ : ನಿನ್ನಬಲಗೈ ಹೆಬ್ಬೆರಳನ್ನು ಕೊಡು ಏಕಲವ್ಯ.

ಏಕಲವ್ಯ : ಅಷ್ಟೇ ತಾನೆ. ಖಂಡಿತವಾಗಲೂ ಕೊಡುತ್ತೇನೆ. ನಾನು ಬಿಲ್ಲುವಿದ್ಯೆ ಕಲಿಸಿರೆಂದು ಗುರುಗಳನ್ನು ಕೇಳಲು ಬಂದಾಗ ಈ ಬೇಡ ಯಾವ ಗುರುಕಾಣಿಕೆ ಕೊಡಬಲ್ಲನೆಂದು ಹಂಗಿಸಿದೆಯಲ್ಲವೇ ಅರ್ಜುನ, ಇದೋ ಗುರು ಬಯಸಿದ ಕಾಣಿಕೆಯನ್ನೇ ಕೊಡುತ್ತಿದ್ದೇನೆ. (ಎಂದು ಚಂಡೆಯ ಗತಿಗನುಗುಣವಾಗಿ ಕುಣಿಯುತ್ತಾ ಬೆರಳನ್ನು ಕತ್ತರಿಸುವನು).

ಹಾಡು : ಹೆಬ್ಬಂಡೆ ಮೇಲೆ ಹೆಬ್ಬೆರಳ ಕತ್ತರಿಸಿ
ಗುರುವಿಗೆ ಕೊಟ್ಟಾನೋ....
ಬೆರಳನ್ನು ಕೊಟ್ಟೋನು ಬಾಳನ್ನೇ ಕೊಟ್ಟಿದ್ದ

ಉಳಿದದ್ದು ಇನ್ನೇನೋ?

ಏಕಲವ್ಯ : (ಹಾಡು ಮುಗಿಯುತ್ತಿದ್ದಂತೆಯೇ ಕೈಯೆತ್ತಿ ಗುರುವಿನ ಕಡೆಗೆ ತೋರಿಸುತ್ತಾನೆ)
(ಪರದೆಯ ಹಿಂದಿನಿಂದ ಮನುಷ್ಯನ ಧ್ವನಿ)

ಮನುಷ್ಯ : ಏಕಲವ್ಯ ಹುಲಿಯೊಂದು ಅಟ್ಟಿಸಿಕೊಂಡು ಬರುತ್ತಿದೆ, ಇತ್ತಕಡೆಯೇ ಬರುತ್ತಿದೆ. ಬಾಣ ಪ್ರಯೋಗಿಸು.

ಏಕಲವ್ಯ : (ಬಾಣಪ್ರಯೋಗಕ್ಕೆ ಸಿದ್ಧನಾಗುವನು. ಹೆಬ್ಬೆರಳಿಲ್ಲದ ಅರಿವಾಗಿ) ಸಾಧ್ಯವಿಲ್ಲ. ಅಯ್ಯೋ ಬಾಣ ಬಿಡಲಾರೆ. (ಅರ್ಜುನ, ದ್ರೋಣರನ್ನು ಆತಂಕದಿಂದ ನೋಡುವನು).

ಅರ್ಜುನ : ನಿನ್ನ ಮನಸ್ಸಿಗೆ ನೋವಾಗಿದ್ದರೆ ನನ್ನನ್ನು ಕ್ಷಮಿಸು ಏಕಲವ್ಯ.

ಏಕಲವ್ಯ : ಅರ್ಜುನ ನೀನು ಬಂದ ಕೆಲಸವಾಯಿತಲ್ಲ. ದಯವಿಟ್ಟು ಹೊರಟು ಹೋಗು.

ದ್ರೋಣ : (ಏನೋ ಹೇಳಲು ಪ್ರಯತ್ನಿಸಿ ಸಾಧ್ಯವಾಗದೆ ಹೊರಡುವನು. ತಾಯಿಯ ಪ್ರವೇಶ).

ತಾಯಿ : ಏನೀ ರಕ್ತ? ಯಾರದೀ ಹೆಬ್ಬೆರಳು? ಅಯ್ಯೋ ಏಕಲವ್ಯ ನಿನ್ನ ಹೆಬ್ಬೆರಳನ್ನು ಕತ್ತರಿಸಿದವರಾರು?

ಏಕಲವ್ಯ : ಅಮ್ಮಾ, ಆಗಬಾರದ್ದೇನೂ ಆಗಿಲ್ಲ. ನಾನು ಗುರುಕಾಣಿಕೆ ಕೊಟ್ಟೆ ಅಷ್ಟೆ.

ತಾಯಿ : ಅಯ್ಯೋ! (ಎಂದು ಕೈ ಹಿಡಿದುಕೊಳ್ಳುವಳು)

ಹಾಡು : ಅಯ್ಯೋ ಮಗನೆ, ಹೀಗಾಯ್ತೆ ನಿನ್ನ ಕಥೆಯು, ನಿನ್ನ ಗತಿಯು!
ಗುರುವೇಕೆ ನಿನ್ನ ಬೆರಳ ಬೇಡಾಲು ಬಂದಾನೋ
ವೀರರೊಳಗೆ ನೀನು ಘನವೀರನಾಗಿದ್ದೆ.... ಅಯ್ಯೋ ಮಗನೆ!
ರೆಕ್ಕೆಯು ಸುಟ್ಟಂತ ಹಕ್ಕಿಯು ನೀನಾದೆ
ನಖಗಳ ಕಿತ್ತಂಥ ಸಿಂಹದ ತೆರನಾದೆ.
ಶಿಷ್ಯನ ಕೊಲ್ಲುವ ಕೊಲೆಗಾರ ಗುರುವೇನೋ
ಗುರುವಿನ ಮಾತಿಗೆ ಮರುಳಾಗಿ ಹಾಳಾದೆ... ಅಯ್ಯೋ ಮಗನೆ!

ತಾಯಿ : ಅವರು ಯಾರಾದರೇನು? ಹೆಬ್ಬೆರಳನ್ನು ಕಸಿದವರು ನನ್ನ ಕಂದನನ್ನು ಕೊಂದರು. ನನ್ನ ಕರುಳಬಳ್ಳಿಯನ್ನು ಹೊಸಕಿ ಹಾಕಿದರು. ಕಿಂಚಿತ್ತೂ ಕರುಣೆ ಇಲ್ಲದ ಅವನೆಂಥ ಗುರು ಮಗನೇ? ಅವನು ಗುರುವಲ್ಲ, ಕೊಲೆಗಡುಕ.

ಏಕಲವ್ಯ : ಅಮ್ಮ ನನ್ನ ಗುರು ದ್ರೋಣಾಚಾರ್ಯರು ಇಲ್ಲಿಗೆ ಬಂದಿದ್ದರು. ನನ್ನ

ಈ ಸ್ಥಿತಿ ಅವರ ದರ್ಶನದ ಫಲ.

ತಾಯಿ : ಮಗನೇ ನಿನ್ನ ಗುರುಗಳು ಸಾವಿನ ರೂಪದಲ್ಲೇಕೆ ಬಂದರು! ಅಯ್ಯೋ ದೈವವೇ! ಏಕಲವ್ಯ. ನೀನು ಉತ್ತಮ ಕುಲದವರನ್ನು ನಂಬಿ ಹಾಳಾದೆ. ಹಾಡುವನ ಕೊರಳನ್ನು ಹಿಸುಕಿದಂತೆ, ಬಾಣ ಹೂಡುವ ನಿನ್ನ ಬೆರಳನ್ನು ಕತ್ತರಿಸಿದರಲ್ಲ.

ಏಕಲವ್ಯ : ಅಮ್ಮ ಆಗಲೇ ಹೇಳಿದೆನಲ್ಲ ನಾನೇ ಕತ್ತರಿಸಿಕೊಂಡದ್ದು.

ತಾಯಿ : ಹೌದು ಏಕಲವ್ಯ, ನೀನೇ ಕತ್ತರಿಸಿಕೊಳ್ಳುವಂತೆ ಮಾಡಿದರು. ಇದು ಕೊಲೆಗಿಂತ ಕಟುಕತನ.

ಏಕಲವ್ಯ : ಆದದ್ದಾಯಿತು. ಸಮಾಧಾನ ಮಾಡಿಕೋ ಅಮ್ಮ.

ತಾಯಿ : ಸಮಾಧಾನ? ಮಗನೇ ನನಗೆಲ್ಲಿಯ ಸಮಾಧಾನ? ನಾನೀಗ ಎಲ್ಲವನ್ನೂ ಕಳೆದುಕೊಂಡವಳು. ನಮ್ಮೆಲ್ಲರ ಬಾಳನ್ನು ಹಾಳು ಮಾಡಿದ ನಿನ್ನ ಗುರುವಿನ ಬಾಳು ಹಾಳಾಗಲಿ. (ನಿರ್ಗಮಿಸುವಳು).

ಏಕಲವ್ಯ : (ಏನನ್ನೋ ನಿರ್ಧರಿಸಿದವನಂತೆ ಬಿಲ್ಲನ್ನು ಬಲಗೈಗೆ ಹಸ್ತಾಂತರಿಸಿ ಎಡಗೈಯಲ್ಲಿ ಬಾಣ ಹಿಡಿದು ನಿಲ್ಲುವನು. ರಂಗದ ಮಧ್ಯಭಾಗಕ್ಕೆ ಜಿಗಿದು ಬರುವನು)

ಹಾಡು : ಏಕಲವ್ಯನು ಸಿಡಿದು ಬಂದ
ಆಕ್ರೋಶದಿಂದ ಏಕಲವ್ಯನು ಸಿಡಿದು ಬಂದ
ನವ ಚೇತನದಿಂದ ಏಕಲವ್ಯನು ಸಿಡಿದು ಬಂದ
ವನದಲಿ ಕ್ರಾಂತಿಯ ದುಂದುಭಿ ಮೊಳಗಿಸಿ
ಪಾಂಡುನಂದನನ ನಿಂದಿಸಿ ಬಂದ ॥ಏಕಲವ್ಯ॥
ಎಡದ ಕಯ್ಯಲಿ ಬಾಣವ ಬಿಟ್ಟು
ಅಡಿಯೆಲ್ಲವ ನಡುಗಿಸಿ ಬಿಟ್ಟ ॥ಏಕಲವ್ಯ॥
ತಾನು ಬಂದಾ ತಾನು ಬಂದಾ ತಾನು ಬಂದಾ
ನವ ಚೇತನದಿಂದ
ಹೊಸ ಜನ್ಮದಿಂದ
ಬಲು ಕ್ರೋಧದಿಂದಾ

(ಹಾಡು ಮುಗಿಯುತ್ತಿದ್ದಂತೆ ಏಕಲವ್ಯನ ಕುಣಿತವೂ ಮುಗಿದು, ರಂಗದ ಮೇಲೆ ಕತ್ತಲಾಗುವುದು)

# ಓದು ಪಠ್ಯ :
# ಬದುಕಲು ಇಚ್ಛಿಸುತ್ತೇನೆ, ಸ್ವಾಭಿಮಾನದಿಂದ....

**–ಸ್ಮೈಲ್ ಸ್ಮಿತ, ಕನ್ನಡಕ್ಕೆ : ತಮಿಳ್ ಸೆಲ್ವಿ**

ನಾನು ಪುಣೆಯಿಂದ ತಮಿಳುನಾಡಿಗೆ ಹಿಂದಿರುಗಿ ಬಂದುದರ ಕಾರಣ ಒಂದು ಕೆಲಸವನ್ನು ಹುಡುಕಿಕೊಳ್ಳುವುದು ಮಾತ್ರವಲ್ಲ. ನನ್ನ ಗುರುತನ್ನು ನನ್ನ ಇರುವಿಕೆಯ ಅರ್ಥವನ್ನು ಸ್ಥಿರಪಡಿಸುವುದೇ ಆಗಿತ್ತು.

ಸ್ವಾತಂತ್ರ್ಯ, ಬಿಡುಗಡೆ ಎಂಬ ಪದಗಳನ್ನು ಈ ಪುಸ್ತಕದಲ್ಲಿ ನಾನು ಹಲವೆಡೆ ಬಳಸಿದ್ದೇನೆ. ಆದರೆ ನಿಜವಾಗಿಯೂ ನಾವು ಬಯಸುವ ಸ್ವಾತಂತ್ರ್ಯ ಯಾವುದೆಂದರೆ ಕಾನೂನು ಬದ್ಧವಾದ ಅಂಗೀಕಾರವನ್ನು ಹೊಂದಿರುವ ಸಾಮಾಜಿಕ ಅಂತಸ್ಥನ್ನು ಪಡೆಯುವುದು.

ಇದಕ್ಕಾಗಿ ನಾನು ಏನು ಮಾಡಬೇಕು? ಮೊದಲು ನನ್ನ ವಿಷಯವನ್ನೇ ತೆಗೆದುಕೊಂಡು ಪ್ರಯತ್ನವನ್ನು ಆರಂಭಿಸಿದೆ. 'ಶರವಣನ್' ಎಂಬ ನನ್ನ ಹೆಸರನ್ನು ಕಾನೂನುಬದ್ಧವಾಗಿ 'ಲಿವಿಂಗ್ ಸ್ಮೈಲ್ ವಿದ್ಯಾ' ಎಂದು ಬದಲಿಸಿಕೊಳ್ಳಲು ನಿರ್ಧರಿಸಿದೆ. ಅದಕ್ಕಾಗಿ ಸರ್ಕಾರಿ ಮುದ್ರಣ ಸಾಮಗ್ರಿ ಹಾಗೂ ಮುದ್ರಣಾಲಯ (Stationary and press) ದ ಇಲಾಖೆಗೆ ಅರ್ಜಿ ಸಲ್ಲಿಸಿದೆ.

'ನೀವೇಕೆ ಹೆಸರನ್ನು ಬದಲಿಸಿಕೊಳ್ಳುತ್ತೀರಾ?' ಎಂದು ನನ್ನನ್ನು ಪ್ರಶ್ನಿಸಿದರು. ನನಗಾದ ಲಿಂಗ ಬದಲಾವಣೆಯ ಶಸ್ತ್ರಚಿಕಿತ್ಸೆಯ ವಿವರಗಳನ್ನೆಲ್ಲ ತಿಳಿಸಿದೆ. ಆದರೂ, ನಾನು ಅರ್ಜಿ ಸಲ್ಲಿಸಿದ ಕೆಲದಿನಗಳ ನಂತರ, 'ಸರಿಯಾದ ಕಾರಣವನ್ನು ತಿಳಿಸದೆ ಹೆಸರನ್ನು ಬದಲಾಯಿಸಲು ಸಾಧ್ಯವಿಲ್ಲ' ಎಂದು ಒಂದು ಪತ್ರ ಬಂತು.

ನನಗೆ ಬೇರೆ ದಾರಿ ಕಾಣದೆ ಹೆಸರು ಬದಲಾಯಿಸಿಕೊಳ್ಳುವುದಕ್ಕಾಗಿ ಒಬ್ಬ ಒಳ್ಳೆಯ ವಕೀಲರನ್ನು ಹುಡುಕತೊಡಗಿದೆ. 'ಸೆಳಿಯನ್' ಅಂಕಲ್ ಅವರ ಸಲಹೆಯ ಮೇರೆಗೆ ಮಧುರೆಯ ಪ್ರಖ್ಯಾತ ವಕೀಲರೂ, ಸ್ತ್ರೀವಾದಿ ಚಿಂತಕರೂ ಆದ ರಜನಿಯವರನ್ನು ಸಂಪರ್ಕಿಸಿದೆ. ಅವರು ಈಗಾಗಲೇ 2002ರಲ್ಲಿ ಪ್ರಿಯಾ ಬಾಯಿ ಎನ್ನುವ ಒಬ್ಬ ಹಿಜಡಾ ಜೊತೆ ಸೇರಿ, ಹಿಜಡಾಗಳಿಗೂ ಮತ ಚಲಾಯಿಸುವ ಹಕ್ಕನ್ನು ನೀಡಬೇಕೆಂದು ಒತ್ತಾಯಿಸಿ ಒಂದು ಮೊಕದ್ದಮೆಯನ್ನು ನೋಂದಾಯಿಸಿದ್ದರು. ಆ ಪ್ರಯತ್ನದಲ್ಲಿ ಯಶಸ್ಸನ್ನೂ ಕಂಡಿದ್ದರು. ಆದರೆ ದೊರೆತ ತೀರ್ಪು ಸ್ಪಷ್ಟವಾಗಿರಲಿಲ್ಲ. ಎಂದರೆ ಹಿಜಡಾಗಳು ತಾವು ಬಯಸಿದರೆ ತಮ್ಮನ್ನು ಒಬ್ಬ ಹೆಣ್ಣು ಎಂದೋ ಒಂದು ಗಂಡು ಎಂದೋ ಬರೆದುಕೊಳ್ಳಬಹುದು ಎಂದು ತೀರ್ಪು ನೀಡಲಾಗಿತ್ತು. ಅದು ಏನೇ ಆಗಲಿ.

ಈ ತೀರ್ಪಿನ ಒಂದು ಬಹುಮುಖ್ಯ ಪರಿಣಾಮವೆಂದರೆ ಇಂದು ತಮಿಳುನಾಡಿನಲ್ಲಿ ಕೆಲವು ಹಿಜಡಾಗಳ ಬಳಿಯಾದರೂ ಮತದಾರರ ಗುರುತಿನ ಚೀಟಿಗಳಿವೆ.

ಆದರೆ ಮತ ಚಲಾಯಿಸುವ ಹಕ್ಕನ್ನು ಮಾತ್ರ ಇಟ್ಟುಕೊಂಡು ಏನು ತಾನೇ ಮಾಡಲು ಸಾಧ್ಯ? ಹಿಜಡಾಗಳ ಬದುಕಿನಲ್ಲಿ ಯಾವುದೇ ಬೆಳವಣಿಗೆಯನ್ನಾಗಲೀ ಬದಲಾವಣೆಯನ್ನಾಗಲೀ ಈ ತೀರ್ಪು ಉಂಟು ಮಾಡಲಿಲ್ಲ. ಹೆಸರು ಮತ್ತು ಲಿಂಗವನ್ನು ಎಲ್ಲಾ ಪ್ರಮಾಣಪತ್ರಗಳಲ್ಲೂ ಬದಲಾಯಿಸಿಕೊಳ್ಳದಿದ್ದರೆ ನಾವು ವಿದ್ಯಾಭ್ಯಾಸವನ್ನು ಮುಂದುವರೆಸುವುದಕ್ಕಾಗಲೀ ಯಾವುದಾದರೂ ಕೆಲಸವನ್ನು ಸಂಪಾದಿಸಿಕೊಳ್ಳುವುದಕ್ಕಾಗಲೀ ಸಾಧ್ಯವೇ ಇಲ್ಲ. ಕನಿಷ್ಠ ಪಕ್ಷ ಬ್ಯಾಂಕ್‌ನಲ್ಲಿ ಒಂದು ಅಕೌಂಟನ್ನು ಕೂಡ ತೆರೆಯಲು ಸಾಧ್ಯವಿಲ್ಲ. ಆದ್ದರಿಂದಲೇ ನನ್ನ ಹೆಸರು ಹಾಗೂ ಲಿಂಗ ಬದಲಾಯಿಸಿ ಪ್ರಮಾಣ ಪತ್ರ ಕೊಡಿಸುವಂತೆ ರಜನಿಯವರ ಬಳಿ ವಿನಂತಿಸಿಕೊಂಡೆ.

ಅವರ ಸಲಹೆಯ ಮೇರೆಗೆ ನಾನು ಹುಟ್ಟಿದ ಊರಾದ ತಿರುಚ್ಚಿಯ ಜಿಲ್ಲಾಧಿಕಾರಿಯವರಿಗೂ, ನಾವು ವಾಸಿಸುತ್ತಿದ್ದ ಪ್ರಾಂತ್ಯದ ತಾಲ್ಲೂಕು ಕಚೇರಿಗೂ ಪ್ರಧಾನ ಕಾರ್ಯದರ್ಶಿಗಳ ಕಾರ್ಯಾಲಯಕ್ಕೂ ಹೋಗಿ ನನ್ನ ಪರಿಸ್ಥಿತಿಗಳನ್ನೆಲ್ಲ ವಿವರಿಸಿ ಒಂದು ಮನವಿಯನ್ನು ಸಿದ್ಧಪಡಿಸಿ. ನನ್ನ ಹೆಸರಿನ ಬದಲಾವಣೆಗೆ ಸಹಕರಿಸುವಂತೆ ವಿನಂತಿಸಿಕೊಂಡೆ.

ಕೆಲದಿನಗಳ ನಂತರ ತಿರುಚ್ಚಿ ಜಿಲ್ಲೆ. ಶ್ರೀರಂಗಂನ ತಾಲೂಕು ಕಛೇರಿಯಿಂದ ನೇರವಾಗಿ ಬರುವಂತೆ ತಿಳಿಸಿ ನನಗೆ ಒಂದು ಪತ್ರ ಬಂತು. ನಾನು ಹುಟ್ಟಿ ಬೆಳೆದ ಊರೇ ತಿರುಚ್ಚಿಯಾಗಿದ್ದರೂ ತಾಲೂಕು ಕಛೇರಿ ಎಲ್ಲಿದೆ ಎಂದು ಕಷ್ಟಪಟ್ಟು ಹುಡುಕಿಯೇ ಕಂಡು ಹಿಡಿಯಬೇಕಾಯಿತು. ಹೋಗಿ ಮೇಲಾಧಿಕಾರಿಯನ್ನು ಭೇಟಿಯಾದೆ.

'ಏನಮ್ಮಾ ನಿನ್ನ ಸಮಸ್ಯೆ?' ಎಂದರು.

ಇದುವರೆಗೂ ಎಷ್ಟೋ ಜನರ ಮುಂದೆ, ಎಷ್ಟೋ ಸಲ ಹೇಳಿದ್ದೇನೆ. ಈಗ ಮತ್ತೊಮ್ಮೆ ಅವರಿಗೂ ವಿವರಿಸಿದೆ.

'ರೇಷನ್ ಕಾರ್ಡ್ ಇದ್ರೆ ಕೊಡೀಮ್ಮಾ...'

'ನನ್ನತ್ರ ರೇಷನ್ ಕಾರ್ಡ್ ಇಲ್ಲ ಸಾರ್... ಮನೆಯಲ್ಲಿ ಕೇಳಿದ್ರೂ ಕೊಡೋ ಹಾಗಿಲ್ಲ ಸಾರ್...'

'ಹಾಗಾದ್ರೆ ನಿಮ್ಮ ವಿಳಾಸವನ್ನು ಕೊಟ್ಟಿಟ್ಟು ಹೋಗಿ. ನಾವು ಎಲ್ಲ ವಿಚಾರಿಸಿದ ಮೇಲಷ್ಟೇ ಏನಾದ್ರೂ ಹೇಳೋಕೆ ಸಾಧ್ಯ....' ಎಂದರು.

ನಾನು ಅಲ್ಲಿಂದ ಹೊರಟು ಬಂದೆ.

ಇದಾದ ಮೇಲೆ ನನ್ನ ಹೆಸರು ಹಾಗೂ ಲಿಂಗವನ್ನು ಬದಲಾಯಿಸಿ ಕೊಡುವಂತೆ ನಾನು ಸಲ್ಲಿಸಿದ್ದ ಮನವಿಯನ್ನು ಅವರೂ ತಮಿಳುನಾಡಿನ ಮುದ್ರಣ ಸಾಮಗ್ರಿ ಹಾಗೂ ಮುದ್ರಣ ಇಲಾಖೆಗೆ ಕಳಿಸಿಕೊಟ್ಟರು. ಹಾಗೆ ಕಳಿಸಿಕೊಟ್ಟ ದಾಖಲೆಯ ಪ್ರತಿಯೊಂದು ನನಗೂ ಬಂದು ತಲುಪಿತು. ನನ್ನಲ್ಲಿ ಎಲ್ಲೋ ಸ್ವಲ್ಪ ನಂಬಿಕೆ ಮೂಡಿತು.

ಕೆಲವೇ ದಿನಗಳಲ್ಲಿ ಆ ಇಲಾಖೆಯಿಂದ ನನಗೊಂದು ಪತ್ರ ಬಂತು. ಅದರಲ್ಲಿ ನನ್ನ ಹೆಸರು ಹಾಗೂ ಲಿಂಗ ಬದಲಾವಣೆ ಮಾಡಿದ್ದಲ್ಲಿ. ಅದಕ್ಕೆ ಅಗತ್ಯವಾದ ವೈದ್ಯಕೀಯ ಪ್ರಮಾಣ ಪತ್ರಗಳನ್ನು ಸಲ್ಲಿಸುವಂತೆ ತಿಳಿಸಲಾಗಿತ್ತು.

ಈಗಾಗಲೇ ನಾನು ಅವರಿಗೆ ನನ್ನ ವಿದ್ಯಾಭ್ಯಾಸದ ಪ್ರಮಾಣ ಪತ್ರದ ಪ್ರತಿಗಳನ್ನೂ, ತಿರುಚ್ಚಿಯ ಆಸ್ಪತ್ರೆಯಲ್ಲಿ ನನಗೆ ಅಪೆಂಡಿಕ್ಸ್ ಆಪರೇಷನ್ ನಡೆದಾಗ ಅಲ್ಲಿನ ಡಾಕ್ಟರ್ ಕೊಟ್ಟಿದ್ದ ರಿಪೋರ್ಟ್‌ನಲ್ಲಿದ್ದ ನನ್ನ ಲಿಂಗ ಬದಲಾವಣೆಯ ದಾಖಲೆಯ ಪ್ರತಿಯನ್ನೂ ಕೊಟ್ಟಿದ್ದೆ.

ಆದರೂ ಈಗ ಅವರು ಹೀಗೆ ಪತ್ರ ಬರೆದುದರಿಂದ. 'ನನಗೆ ನಡೆದ ಈ ಶಸ್ತ್ರಚಿಕಿತ್ಸೆ ಸರ್ಕಾರದ ಅನುಮತಿ ಇಲ್ಲದೆಯೇ ನಡೆಯಿತೆಂದೂ. ಅಲ್ಲದೆ ಆ ಶಸ್ತ್ರಕ್ರಿಯೆ ಎಲ್ಲಿ ನಡೆಯಿತು ಎಂಬುದು ಕೂಡ ನನಗೆ ತಿಳಿಯದೆಂದೂ. ಈ ಎಲ್ಲ ಕಾರಣಗಳಿಂದ ನನ್ನ ಹತ್ತಿರ ಯಾವುದೇ ವೈದ್ಯಕೀಯ ಪ್ರಮಾಣ ಪತ್ರದಲ್ಲಿ ಈ ಬಗೆಗಿನ ಮಾಹಿತಿ ನಮೂದಾಗಿರುವುದಾಗಿಯೂ, ಬೇಕಾದರೆ ಅದನ್ನು ಆಧಾರವಾಗಿ ಬಳಸಿಕೊಳ್ಳಬಹುದೆಂದು...' ಎಲ್ಲ ವಿವರಗಳನ್ನೂ ಬರೆದು ಅಂಚೆಯ ಮೂಲಕ ಕಳಿಸಿಕೊಟ್ಟೆ.

ಆ ಪತ್ರಕ್ಕೆ ಅತಿ ಶೀಘ್ರದಲ್ಲೇ ಒಂದು ಉತ್ತರ ಬಂತು. ಸರ್ಕಾರದ ಅನುಮತಿಯಿಲ್ಲದೆ ನಡೆದ ಶಸ್ತ್ರಚಿಕಿತ್ಸೆಯನ್ನು ಗಣನೆಗೆ ತೆಗೆದುಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದ ನಿಮ್ಮ ಹೆಸರು ಬದಲಾವಣೆಯ ಮನವಿಯನ್ನು ಅಂಗೀಕರಿಸಲಾಗದು.

ಬೇರೆ ದಾರಿಯಿಲ್ಲದೆ ಮೊಕದ್ದಮೆಯನ್ನು ಮುಂದುವರೆಸಿದೆ. ಅದರ ಫಲವಾಗಿ ನನ್ನ ಹೆಸರು ಬದಲಾವಣೆಯನ್ನು ಕುರಿತು ಪರಿಶೀಲನೆ ಮಾಡುವಂತೆ ನ್ಯಾಯಾಲಯ ಅದೇಶ ನೀಡಿತು. ಇನ್ನೇನು ಬೇಕು. ಹೇಗಾದರೂ ಸರಿ ನನ್ನ ಹೆಸರು ಬದಲಾವಣೆಯಾಗೇ ಬಿಡುತ್ತದೆ ಎಂದು ಕಾಯುತ್ತಿದೆ.

ಆ ದಿನಗಳಲ್ಲಿ ಹಿಜಡಾಗಳಿಗೆ ಸರ್ಕಾರಿ ಆಸ್ಪತ್ರೆಯಲ್ಲಿ ಲಿಂಗಬದಲಾವಣೆಯ ಶಸ್ತ್ರಚಿಕಿತ್ಸೆ ನಡೆಯಲಿದೆ ಎಂದೂ, ಅದಕ್ಕಾಗಿ ಪ್ರಮಾಣ ಪತ್ರಗಳನ್ನು ನೀಡಲಾಗುವುದೆಂದೂ ಒಂದು ಸುದ್ದಿ ಕೇಳಿಬಂತು. ವೈದ್ಯಕೀಯ ಪರಿಶೋಧನೆಯ ನಂತರ ಅವರು ಕಾಲೇಜುಗಳಲ್ಲಿ ಹಿಜಡಾಗಳಾಗಿದ್ದುಕೊಂಡೇ ತಮ್ಮ ವಿದ್ಯಾಭ್ಯಾಸವನ್ನು ಮುಂದುವರೆಸಬಹುದೆಂದೂ ಹೇಳಿದರು. ಹೇಗಾದರೂ ಸರಿ ಒಳ್ಳೆಯದು

ನಡೆಯಬಹುದೆಂದು ನಂಬಿಕೊಂಡಿದ್ದೆ. ತಮಿಳುನಾಡಿನ ಸರ್ಕಾರಿ ಮುದ್ರಣ ಸಾಮಗ್ರಿ ಹಾಗೂ ಮುದ್ರಣ ಇಲಾಖೆಯಿಂದ ಯಾವುದಾದರೂ ಉತ್ತರ ಬರಬಹುದೆಂದು ಮೂರು ತಿಂಗಳವರೆಗೂ ಕಾಯುತ್ತಿದ್ದೆ. ತಿಂಗಳುಗಳು ಉರುಳಿದ್ದಷ್ಟೇ ನಡೆದಷ್ಟು. ಅದಕ್ಕಿಂದ ಹೆಚ್ಚು ದಿನ ಕಾಯುವ ಅಗತ್ಯವಿಲ್ಲ ಎಂದು ಭಾವಿಸಿ ನಾನೇ ನೇರವಾಗಿ ಹೋಗಿ ವಿಚಾರಿಸಿದೆ. 'ಇಲ್ಲಾ ಕಣ್ರಿ, ನಮಗೆ ಪರಿಶೀಲಿಸುವಂತೆ ಮಾತ್ರವೇ ಆದೇಶ ಬಂದಿರುವುದು ನಮ್ಮಿಂದ ಪರಿಶೀಲಿಸುವುದು ಸಾಧ್ಯವಿಲ್ಲ' ಎಂದು ಕಡಾಖಂಡಿತವಾಗಿ ಹೇಳಿಬಿಟ್ಟರು.

ನಾನೂ ಸುಮ್ಮನಿರದೆ ಅವರೊಂದಿಗೆ ವಾದಕ್ಕಿಳಿದೆ. ನನ್ನ ಕಾಟವನ್ನು ತಾಳಲಾರದೆ. 'ಹಾಗಾದರೆ ಮಧುರೆಯ ಮೆಡಿಕಲ್ ಕಾಲೇಜಿನ ಡಾಕ್ಟರ್ ಹತ್ತಿರ ಒಂದು ಸರ್ಟಿಫಿಕೇಟ್ ತೆಗೆದುಕೊಂಡು ಬನ್ನಿ. ಅವರು ಕೊಡುವ ಸರ್ಟಿಫಿಕೇಟ್‌ನ ಆಧಾರದಿಂದ ಏನಾದ್ರೂ ಮಾಡೋಕ್ಕೆ ಸಾಧ್ಯವಾಗಬಹುದು' ಎಂದರು.

ಈ ಬಗ್ಗೆ ಅವರಿಂದ ಕಾಗದ ಬರುವವರೆಗೂ ಮತ್ತೆ ಕಾದೆ. ಆಮೇಲೆ ಮಧುರೆಯ ರಾಜಾಜಿ ಸರ್ಕಾರಿ ಆಸ್ಪತ್ರೆಗೆ ಹೋಗಿ ಪಡಬಾರದ ಪಾಡುಪಟ್ಟೆ. ನನ್ನ ಪರಿಸ್ಥಿತಿಯನ್ನು ಅವರಿಗೆ ವಿವರಿಸಿ ಹೇಳುವುದೇ ಒಂದು ದೊಡ್ಡ ಕೆಲಸವಾಗಿತ್ತು. ಹೇಗೋ ಒಂದು ರೀತಿಯಲ್ಲಿ ನನ್ನ ಸಮಸ್ಯೆಗಳನ್ನೆಲ್ಲ ಅವರಿಗೆ ವಿವರಿಸಿ, ನನ್ನನ್ನು ಪರೀಕ್ಷಿಸಲು ಸಮ್ಮತಿಸಿ, ಕಡೆಗೂ ಹೇಗೋ ಆ ಪರೀಕ್ಷೆಯ ವರದಿಯನ್ನು ಪಡೆದುಕೊಂಡೆ. ಅಲ್ಲಿ ಎಷ್ಟೊಂದು ಬಗೆಯ ಅಣಕಗಳು. ಅಪಹಾಸ್ಯಗಳು! ಅಬ್ಬಬ್ಬಾ!

ಫೆಬ್ರವರಿ 2005ರಲ್ಲಿ ಆರಂಭವಾದ ನನ್ನ ಈ ಪ್ರಯತ್ನ ಆಗಸ್ಟ್ 2006ರಲ್ಲಿ ನನ್ನನ್ನು ರಾಜಾಜಿ ಆಸ್ಪತ್ರೆಯವರೆಗೂ ಕರೆದುಕೊಂಡು ಹೋಯಿತು. ನನ್ನ ಹಕ್ಕು. ನನ್ನ ಇಷ್ಟದ ಪ್ರಕಾರ ಬದುಕುವ ನನ್ನ ಹಕ್ಕು. ನನ್ನ ಹೆಸರನ್ನು ನಾನು ಇಚ್ಛಿಸಿದಂತೆ ಬದಲಾಯಿಸಿಕೊಳ್ಳುವ ನನ್ನ ಹಕ್ಕು. ಅದಕ್ಕಾಗಿ ತಮಿಳುನಾಡು ಮುದ್ರಣ ಸಾಮಗ್ರಿ ಮತ್ತು ಮುದ್ರಣ ಇಲಾಖೆಯಿಂದ, ತಾಲ್ಲೂಕು ಕಛೇರಿ, ವಕೀಲರ ಕಚೇರಿ, ಮಧುರೆಯ ಸರ್ಕಾರಿ ಆಸ್ಪತ್ರೆ – ಹೀಗೆ ಎಲ್ಲೆಲ್ಲಿಗೋ ಅಲೆದಾಡಿ ಕಚೇರಿಯಲ್ಲಿ ನಾನು ತೆಗೆದುಕೊಳ್ಳಬಹುದಾದ ಗರಿಷ್ಠ ರಜಕ್ಕಿಂತಲೂ ಹೆಚ್ಚು ರಜಗಳನ್ನು ತೆಗೆದುಕೊಂಡದ್ದಾಯಿತು. ಈ ನಾಡಿನಲ್ಲಿ ಒಬ್ಬ ವ್ಯಕ್ತಿ ನ್ಯೂಮರಾಲಜಿ, ಮತ ಬದಲಾವಣೆ, ಹೆಸರುಬಲ, ರಾಶಿ ಈ ಕಾರಣಗಳಿಗಾಗಿ ಹೆಸರು ಬದಲಾಯಿಸಿಕೊಳ್ಳಲು ಬಯಸಿದರೆ ಕೇವಲ ಒಂದೇ ತಿಂಗಳಲ್ಲಿ ಅದು ಸಾಧ್ಯವಾಗುತ್ತದೆ. ಎಷ್ಟೋ ಮಂದಿ ರಾಜಕೀಯ ನಾಯಕರು ಹೀಗೆ ತಮ್ಮ ಹೆಸರನ್ನು ಬದಲಿಸಿಕೊಂಡಿದ್ದಾರೆ. ಆದರೆ ನನ್ನ ಅವಶ್ಯಕತೆಗಾಗಿ, ನನ್ನ ಹಕ್ಕಿಗಾಗಿ ನಾನು ನನ್ನ ಹೆಸರನ್ನು ಬದಲಾಯಿಸಿಕೊಳ್ಳಲು ಬಯಸಿದೆ. ಅದಕ್ಕಾಗಿ ಒಂದೂವರೆ ವರ್ಷಗಳ ಕಾಲ ತೀವ್ರವಾಗಿ ಪ್ರಯತ್ನಿಸಿದೆ. ಇನ್ನೂ ಫಲ ಮಾತ್ರ ಸಿಕ್ಕಿಲ್ಲ.

ನಾನು ಎಲ್ಲೆಲ್ಲಿ ಹೋಗುತ್ತೇನೋ ಅಲ್ಲೆಲ್ಲ ನನ್ನ ಕತೆ. ನನ್ನ ನೋವು, ನನಗೆ ನಡೆದ ಆಪರೇಷನ್. ಅದು ನಡೆದ ವಿಧಾನ ಹೀಗೆ ಎಷ್ಟೋ ವೈಯಕ್ತಿಕ ಹಾಗೂ ಆಂತರಿಕ ವಿಷಯಗಳ ಬಗ್ಗೆ ಪ್ರಶ್ನಿಸಿ, ಪ್ರಶ್ನಿಸಿ ನನ್ನನ್ನು ಮಾನಸಿಕವಾಗಿ ಹಿಂಸಿಸಿದರು. ಎಲ್ಲವೂ ನನ್ನನ್ನು ಗಾಯಗೊಳಿಸುವಂತಹ ಪ್ರಶ್ನೆಗಳೇ. ಆದರೂ ಎಲ್ಲವನ್ನೂ ಸಹಿಸಿಕೊಂಡು ಎಲ್ಲರಿಗೂ ಉತ್ತರಿಸಿದೆ. ಎಷ್ಟೋ ಅವಮಾನಗಳು, ಎಷ್ಟೊಂದು ಪೆಟ್ಟುಗಳು.

ವಸತಿ ಗೃಹದಿಂದ ಆಫೀಸಿಗೆ ಹೋಗುವ ದಾರಿಯಲ್ಲಿ ಒಮ್ಮೊಮ್ಮೆ ಕೆಲವರು ಧುತ್ತನೆ ನನ್ನೆದುರಿಗೆ ಬಂದು ನಿಂತು. 'ಲೋ! ಇದು ಹೆಣ್ಣೋ ಗಂಡೋ...?' ಎಂದು ಜೋರುದನಿಯಲ್ಲಿ ಕೇಳುತ್ತಿದ್ದರು. ನಾನು ಒಳಗೇ ಕುಮಿಲಿ ಹೋಗುತ್ತಿದ್ದರೆ ಸುತ್ತಲೂ ನಿಂತ ಆ ನಾಯಿಗಳು ಜೋರಾಗಿ ನಗುತ್ತಿದ್ದವು. ಹೆದರಿಕೆ ಆವರಿಸಿಕೊಳ್ಳುತ್ತಿರಲು ಏನು ಮಾಡುವುದೆಂದು ತೋಚದೆ ಅಲ್ಲಿಂದ ಮಿಂಚಿನ ವೇಗದಲ್ಲಿ ಮುಂದೆ ಸಾಗಿ ಕಚೇರಿ ತಲುಪಿ ಅಲ್ಲಿ ಯಾರಿಗೂ ಕಾಣದಂತೆ ಕಣ್ಣೀರು ಸುರಿಸುತ್ತಿದ್ದೆ. ಕೆಲವೊಮ್ಮೆ ತಡೆದುಕೊಳ್ಳಲು ಸಾಧ್ಯವಿಲ್ಲದೆ ಆನಂದ್ ಸಾರ್ ಬಳಿ ಹೋಗಿ ಎಲ್ಲವನ್ನೂ ಹೇಳಿಕೊಳ್ಳುತ್ತಿದ್ದೆ.

ಗಂಡಸರು ಮಾತ್ರವಲ್ಲ, ಕೆಲವೊಮ್ಮೆ ಹೆಂಗಸರೂ ಕೂಡ ನನ್ನನ್ನು ನೋಡಿ ವ್ಯಂಗ್ಯವಾಗಿ ಮಾತಾಡುತ್ತಿದ್ದರು. ತಮ್ಮೊಳಗೇ ಗೇಲಿ ಮಾಡಿಕೊಂಡು ನಗುತ್ತಿದ್ದರು. ಅಸಹನೀಯವಾದ ವೇದನೆಯಿಂದಲೂ, ಏನೂ ಮಾಡಲಾಗದ ಅಸಹಾಯಕತೆಯಿಂದಲೂ ಎಲ್ಲವನ್ನೂ ಒಳಗೇ ನುಂಗಿಕೊಂಡು ಸುಮ್ಮನೆ ನನ್ನ ಹಾದಿಯಲ್ಲಿ ನಾನು ಸಾಗುತ್ತಿದ್ದೆ. ಬಟ್ಟೆ ಅಂಗಡಿ, ಬೇಕರಿ, ಜ್ಯೂಸ್ ಅಂಗಡಿ, ಡಿಪಾರ್ಟ್‌ಮೆಂಟಲ್ ಸ್ಟೋರ್ ಹೀಗೆ ಎಲ್ಲಾ ಕಡೆಗಳಲ್ಲೂ ನನ್ನ ಧ್ವನಿಯನ್ನು ಕೇಳಿದ ಕೂಡಲೇ ಅದು ಹೇಗೋ ನನ್ನ ಪ್ರತಿರೋಧಿಗಳು ಹುಟ್ಟಿಕೊಳ್ಳುತ್ತಿದ್ದರು.

ಒಂದು ದಿನ, ದಾರಿಯಲ್ಲಿದ್ದ ಚಿಕ್ಕ ಬಾಲಕರು ನನ್ನನ್ನು ನೋಡಿ. 'ಊರಾಚೆಯ ಹುಣಸೆಮರ....' ಎಂಬ ಹಾಡನ್ನು ಜೋರಾಗಿ ಹಾಡ ತೊಡಗಿದರು. ಹೆಚ್ಚೆಂದರೆ ಅವರಿಗೆ ಹತ್ತು–ಹನ್ನೊಂದು ವರ್ಷಗಳಿರಬಹುದಷ್ಟೇ ಇವರಿಗೆಲ್ಲ ಯಾರು ಹೇಳಿಕೊಡುತ್ತಾರೆ? ನನ್ನನ್ನು ನೋಡಿದ ಕೂಡಲೇ ಅಣಕಿಸುವ ಬುದ್ಧಿ ಇವರಲ್ಲಿ ಹೇಗೆ ಹುಟ್ಟಿಕೊಳ್ಳುತ್ತದೆ? ಹುಟ್ಟಿನಿಂದಲೇ ಅವರಲ್ಲಿ ಅದು ಇರುತ್ತದೆಯಾ? ರಕ್ತದಲ್ಲೇ ಸೇರಿಕೊಂಡಿರುತ್ತದೆಯಾ? ಇದು ಕೂಡ ಒಂದು ರೀತಿಯಲ್ಲಿ ಶೋಷಣೆಯ ಮನೋಭಾವ ತಾನೇ? ಜಾತಿ. ಕುಲ, ಮತ, ಭಾಷೆ ಈ ಯಾವ ವ್ಯತ್ಯಾಸವೂ ಇದರಲ್ಲಿಲ್ಲ. ಅವಳು ಹಿಜಡಾನಾ? ಅಣಕಿಸು, ಅವಕಾಶ ಸಿಕ್ಕರೆ ಆಕ್ರಮಣ ನಡೆಸು, ಅವಮಾನಿಸು, ಅಳಿಸು, ಹೆದರಿ ಓಡಿಹೋಗುವಂತೆ ಮಾಡು....

ಇದೆಂತಹ ಜಗತ್ತು? ಆಶ್ಚರ್ಯದಿಂದ ನಾನು ಆ ಹುಡುಗರನ್ನೇ ನೋಡುತ್ತಿದ್ದೆ. ಅವರಲ್ಲಿ ಒಬ್ಬ ಹುಡುಗ ತಾನು ಕುಡಿಯುತ್ತಿದ್ದ ನೀರಿನ ಪ್ಯಾಕೆಟ್‌ನ್ನು ಖಾಲಿ ಮಾಡಿ ನನ್ನ

ಮೇಲೆ ಬೀಸಿ ಎಸೆದು ಅಲ್ಲಿಂದ ಓಡಿ ಹೋದ. ಸ್ವಲ್ಪ ದೂರದಲ್ಲಿ ನಿಂತು ಈ ದೃಶ್ಯವನ್ನು ನೋಡುತ್ತಿದ್ದ ಕೆಲವರು ಯುವಕರು ನಗುತ್ತಿದ್ದರು. ಕೆಲವು ಹೆಂಗಸರೂ ಕೂಡ.

ನನಗೆ ಅರ್ಥವಾಗದಿರುವುದು ಇದೇ. ನಾನು ಇವರಿಗೆ ಏನು ಮಾಡಿದೆ? ನನ್ನಿಂದಾದ ತಪ್ಪಾದರೂ ಏನು? ಅಷ್ಟಕ್ಕೂ ನೋಡಿದ ಕೂಡಲೇ ನನ್ನನ್ನು ಗೇಲಿ ಮಾಡುವ ಹಾಗೆ ನಾನು ಅತಿಯಾದ ಮೇಕಪ್ಪನ್ನೂ ಮಾಡಿಕೊಳ್ಳುತ್ತಿರಲಿಲ್ಲ. ತುಂಬ ಸರಳವಾಗಿಯೇ ಇರುತ್ತಿದ್ದೆ. ಹುಟ್ಟಿನಿಂದಲೇ ನನಗೆ ದೊರೆತ ಬಣ್ಣ. ನನಗೆ ದೊರೆತ ದೇಹ, ನನಗೆ ದೊರೆತ ಸಹಜವಾದ ಹೆಣ್ತನ. ಏಕೆ ಇವೆಲ್ಲ ಇವರಿಗೆ ಅರ್ಥವಾಗುತ್ತಿಲ್ಲ.

ಬೇಸರ, ಸಹಿಸಿಕೊಳ್ಳಲಾಗದ ವೇದನೆ, ಇವಷ್ಟೇ ನನ್ನ ಬದುಕಿನಲ್ಲಿ ನಿರಂತರವಾಗಿ ಕಡೆಯವರೆಗೂ ಉಳಿದುಬಿಡುವುವೇನೋ ಎಂಬ ಆತಂಕ. ನನ್ನ ಕಚೇರಿ ಹಾಗೂ ವಸತಿಗೃಹವನ್ನು ಹೊರತುಪಡಿಸಿ ನಾನು ಸಾಗುತ್ತಿದ್ದ ಬೀದಿಗಳು. ನನ್ನ ಪ್ರಯಾಣ. ನನ್ನ ಸಂಚಾರ ಎಲ್ಲವೂ ನಾನು ಒಂದು ನರಕದಲ್ಲಿ ಇರುವಂತಹ ಭಾವನೆಯನ್ನೇ ನನ್ನಲ್ಲಿ ಹುಟ್ಟಿಸುತ್ತಿದ್ದವು. ಯುವಕರ ವಕ್ರ ನೋಟ. ಯುವತಿಯರ ಅನಾಗರಿಕವಾದ ನಗು. ಎಳೆಯ ಮನಸ್ಸುಗಳೊಳಗೆ ಇರುವ ವಿಷ. ಹೀಗೆ ಯಾವುದಾದರೂ ಒಂದು ಸದಾ ನನ್ನನ್ನು ಕಾಡುತ್ತಲೇ ಇತ್ತು.

ಮಧುರೆಯನ್ನು ನಗರವೆಂದು ನನ್ನಿಂದ ಹೇಳಲು ಸಾಧ್ಯವಿಲ್ಲ. ಅದೊಂದು ದೊಡ್ಡ ಗ್ರಾಮ. ಜನಸಂದಣಿಯಿಂದ ಕೂಡಿದ ಗ್ರಾಮ. ತಮಿಳು ನಾಡಿನಲ್ಲಿರುವ ಉಳಿದ ನಗರಗಳ ಬಗ್ಗೆ ನನಗೆ ಗೊತ್ತಿಲ್ಲ. ಆದರೆ ಮಧುರೆಯಲ್ಲಿ ನನ್ನಂತೆ ಒಂಟಿಯಾಗಿ ನಡೆದಾಡುವವರಿಗೆ ಯಾವ ಬಗೆಯ ರಕ್ಷಣೆಯೂ ಇಲ್ಲವೇ ಇಲ್ಲ.

ಕೆಲವೊಮ್ಮೆ ನಾನು ಯಾವುದಾದರೂ ಸಭೆ, ಸಮಾರಂಭಗಳಿಗೆಂದು ಚೆನ್ನೈಗೆ ಒಂಟಿಯಾಗಿಯೇ ಬಂದು ಹೋಗಿದ್ದೇನೆ. ಆದರೆ ಅಲ್ಲಿ ನಾನೇನು ಅಂತಹ ಸಮಸ್ಯೆಗಳನ್ನು ಎದುರಿಸಿಲ್ಲ ಅದಕ್ಕೆ ಹೋಲಿಸಿ ನೋಡಿದರೆ ಮಧುರೆಗಿಂತ ಚೆನ್ನೈ ವಾಸಿ ಎನಿಸುತ್ತದೆ.

ಆದ್ದರಿಂದಲೇ ನನ್ನ ಹೆಸರು ಬದಲಾವಣೆಗೆ ಸಂಬಂಧಿಸಿದಂತೆ ಮಧುರೆಯಲ್ಲಿ ಪ್ರಯತ್ನಿಸುವುದಕ್ಕಿಂತ ಚೆನ್ನೈನಲ್ಲಿ ಪ್ರಯತ್ನಿಸುವುದೇ ಒಳ್ಳೆಯದು ಎಂದು ನನಗನ್ನಿಸಿತು. ಹಾಗನ್ನಿಸಿದ ಕೂಡಲೇ ಮಧುರೆಯಲ್ಲಿ ನನ್ನ ಕೆಲಸಕ್ಕೆ ರಾಜೀನಾಮೆ ಕೊಟ್ಟುಬಿಟ್ಟೆ. ಸ್ವ-ರಕ್ಷಣೆ ಮಾತ್ರ ನನ್ನ ಉದ್ದೇಶವಾಗಿರಲಿಲ್ಲ.

ಚೆನ್ನೈಗೆ ಹೋಗಿ ಅರುಣಮ್ಮನ ಮನೆಯಲ್ಲಿ ಉಳಿದುಕೊಂಡು ಗೆಳೆಯ ಸೆಂದಿಲ್‌ನ ಸಹಾಯದೊಂದಿಗೆ ಮತ್ತೆ ಕೆಲಸ ಹುಡುಕಲು ಆರಂಭಿಸಿದೆ. ನಾನು ಅಸಹಾಯಕಳಾಗಿದ್ದ ಆ ಪರಿಸ್ಥಿತಿಯಲ್ಲಿ ಅವರಿಬ್ಬರೂ ನನಗೆ ನೀಡಿದ ಆದರವನ್ನು ನಾನು ಮರೆಯಲು ಸಾಧ್ಯವೇ ಇಲ್ಲ.

ಹೇಗೋ ಒಂದು ಕೆಲಸ ಕೂಡ ಸಿಕ್ಕಿತು. ಸ್ವಯಂ ಸೇವಾ ಸಂಸ್ಥೆಗಳಲ್ಲಿ ಕೆಲಸಕ್ಕೆ ಹೋಗುವುದು ಬೇಡ ಎಂಬ ತೀರ್ಮಾನಕ್ಕೆ ಬಂದಿದ್ದ ನನಗೆ. 'ಸ್ವಯಂ' ಎಂಬ ಹೆಸರಿನ ಸೇವಾಸಂಸ್ಥೆಯಲ್ಲೇ ಕೆಲವ ಮಾಡುವ ಅವಕಾಶ ಸಿಕ್ಕಿತು.

ಕೆಲಸ ಮಾತ್ರ ಅಲ್ಲ, ಉಳಿದುಕೊಳ್ಳಲು ಜಾಗವನ್ನೂ ನೀಡಿದ ಅಪರೂಪದ ಸಂಸ್ಥೆ ಅದು.

ಅದನ್ನೊಂದು ಸಂಸ್ಥೆ ಎಂದು ಹೇಳಲು ಸಾಧ್ಯವಿಲ್ಲ. ಏಕೆಂದರೆ ಅದೊಂದು ಕುಟುಂಬ. ಆಶ್ರಯ ಬೇಡಿ ಬರುವ ಎಲ್ಲರನ್ನೂ ತನ್ನೊಳಗೆ ಸೇರಿಸಿಕೊಳ್ಳುವ ಮಾಯಾಲೋಕ. ಅಲ್ಲಿದ್ದ ಮುತ್ತುರಾಮನ್–ಉಮಾ ಇವರಿಬ್ಬರದೂ ತಂದೆ ತಾಯಿಗಳ ಹೃದಯ. ಅವರು ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದ ದಿನಗಳಿಂದಲೂ ಅನಾಥ ಮಕ್ಕಳಿಗೆ ಆಶ್ರಯ ನೀಡುತ್ತಾ ಬಂದಿದ್ದಾರೆ. ಎಲ್ಲರಿಗೂ ಉತ್ತಮವಾದ ಶಿಕ್ಷಣ. ಅದೂ ಉಚಿತವಾಗಿ ತಮ್ಮ ಈ ಕನಸನ್ನು ನನಸಾಗಿಸುವುದಕ್ಕಾಗಿಯೇ 'ಸಿರಗು (ರೆಕ್ಕೆ) ಮಾಂಟೆಸರಿ ಶಾಲೆ' ಆರಂಭವಾದದ್ದು. ಇದು ಚೆನ್ನೈನ ಪಾಳವೇಡು ಪೇಟೆಯಲ್ಲಿದೆ. ಸುಮಾರು ಮುನ್ನೂರು ಮಕ್ಕಳು ಈ ಶಾಲೆಯಲ್ಲಿ ಓದುತ್ತಿದ್ದಾರೆ. ಎಂತಹ ಅದ್ಭುತವಾದ ವಿಷಯ!

ಒಳ್ಳೆಯ ಜಾಗ. ಸಾಕಷ್ಟು ಭದ್ರತೆ. ಸ್ನೇಹಮಯವಾದ ವಾತಾವರಣ. ತೃಪ್ತಿಕರವಾದ ಕೆಲಸ. ಸಹಜವಾದ ಜೀವನ ನಡೆಸಲು ಯಾವ ಕೊರತೆಯೂ ಇಲ್ಲ. ಆದರೆ ನಾನು ಕೈಗೊಂಡ ಪ್ರಯತ್ನಗಳಷ್ಟೇ ಇನ್ನೂ ಪೂರ್ತಿಯಾಗಿಲ್ಲ. ನಾನು ಶರವಣನ್ ಅಲ್ಲ. ವಿದ್ಯಾ ಸರ್ಕಾರ ಇದನ್ನು ಯಾವಾಗ ತಾನೇ ಅಂಗೀಕರಿಸುತ್ತದೋ ಗೊತ್ತಿಲ್ಲ.

ಭಾರತ ಗುಲಾಮಗಿರಿಯಿಂದ ವಿಮುಕ್ತಿ ಹೊಂದಿ ಅರವತ್ತ ವರ್ಷಗಳೇ ಸಂದಿವೆ. ಹಲವಾರು ಬದಲಾವಣೆಗಳು. ಕೆಲವೊಂದು ನಿರಾಸೆಗಳು. ಆದರೂ ಪ್ರಜಾಪ್ರಭುತ್ವ ಮಾತ್ರ ಭದ್ರವಾಗಿ ನೆಲೆಯೂರಿದೆ. ದಲಿತವಾದ, ಸ್ತ್ರೀವಾದ ಇವುಗಳ ಬಗ್ಗೆ ಅನ್ನಿಸಿದ್ದನ್ನು ಮಾತನಾಡಬಹುದು. ಪತಾಕೆ ಹಾರಿಸಬಹುದು. ಇವುಗಳಿಗೂ ಸಾಮಾಜಿಕವಾಗಿ ಸಂಪೂರ್ಣ ಸ್ವಾತಂತ್ರ್ಯ–ಅಂಗೀಕಾರ ಇಲ್ಲದಿದ್ದರೂ ಎಲ್ಲೆಡೆಯೂ ನಿರಾತಂಕವಾಗಿ ವಿವಾದಗಳು ನಡೆಯುತ್ತಿವೆ. ಅಂತಹ ಸಭೆ–ಸಮಾರಂಭಗಳಿಗೆ ಜನರ ಅಂಗೀಕಾರವೂ ಸಿಗುತ್ತದೆ. ಸಾರ್ವಜನಿಕರೂ ಅವುಗಳಲ್ಲಿ ಭಾಗವಹಿಸುತ್ತಾರೆ.

ಆದರೆ ಸ್ತ್ರೀಯರಿಗಿಂತಲೂ ಹೆಚ್ಚು ನಿರ್ಲಕ್ಷ್ಯಕ್ಕೊಳಗಾದ, ದಲಿತರಿಗಿಂತಲೂ ಹೆಚ್ಚು ಶೋಷಣೆಗೆ ಗುರಿಯಾದ, ಅಲ್ಪ ಸಂಖ್ಯಾತರಿಗಿಂತಲೂ ಅತಿ ಅಲ್ಪಸಂಖ್ಯಾತರಾದ ಹಿಜಡಾಗಳು ಮಾತ್ರ ಯಾವ ಬಗೆಯ ಸಾಮಾಜಿಕ ಅಂಗೀಕಾರವೂ ಇಲ್ಲದೆ ಬದುಕನ್ನು ಸಾಗಿಸಬೇಕಾಗಿದೆ. ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ...? ಉಹ್ಞೂಂ ಯಾವುದೂ ಇಲ್ಲ. ನಿರಂತರವಾಗಿ ಮಾನಗೆಟ್ಟ ಬದುಕಷ್ಟೇ ಹಿಜಡಾಗಳ ಪಾಲಿಗೆ ಉಳಿದಿರುವುದು.

ಹಿಜಡಾಗಳ ಹೀನಾಯ ಬದಕಿಗೆ ಸಂಬಂಧಿಸಿದ ದಾಖಲೆಗಳು ಕೂಡ ಎಲ್ಲೋ ಅಲ್ಲೊಂದು ಇಲ್ಲೊಂದಷ್ಟೇ ಕಣ್ಣಿಗೆ ಬೀಳುತ್ತವೆ. ಬಹಿರಂಗವಾಗಿ ಮಾತನಾಡಲೂ ಕೂಡ ಸಾಧ್ಯವಿಲ್ಲದಂತಹ ಅನರ್ಹ ಬದುಕೇನು ಇದು? ನನಗೇನೂ ಅರ್ಥವಾಗುತ್ತಿಲ್ಲ.

ಹೆತ್ತವರು, ಒಡಹುಟ್ಟಿದವರು, ಬಂಧುಗಳು, ಗೆಳೆಯರು ಹೀಗೆ ಎಲ್ಲರ ನಡುವೆ ಹುಟ್ಟಿ ಬೆಳೆದು, ದಿನಗಳು ಕಳೆದಂತೆ ತನ್ನ ಸಹಜತೆಯನ್ನು ಅರ್ಥ ಮಾಡಿಕೊಂಡು, ಅದನ್ನು ಪ್ರಕಟಪಡಿಸುವಾಗ ಅವಮಾನ, ಹೊಡೆತ, ನೋವು ತಿಂದು ಕುಟುಂಬದವರಿಂದ ತಿರಸ್ಕರಿಸಲ್ಪಟ್ಟು, ಮನೆ ಬಿಟ್ಟು ಹೋಗಬೇಕಾದ ಹಿಜಡಾಗಳ ಬದುಕಿನ ಬಗೆಗಿನ ಕನಿಷ್ಠಮಟ್ಟದ ಜ್ಞಾನ ಈ ಸಮಾಜಕ್ಕೆ ಎಷ್ಟರಮಟ್ಟಿಗಿದೆ? ಇಂದಿನವರೆಗೂ ಸಮಾಜಕ್ಕೂ ಮಾಧ್ಯಮಗಳಿಗೂ ಅವರೊಂದು ಅಪಹಾಸ್ಯದ ವಸ್ತುವೇ ಆಗಿದ್ದಾರೆ. ಹಲವು ಸಿನಿಮಾಗಳಲ್ಲಿ ಹಿಜಡಾಗಳನ್ನು ಕೇವಲವಾಗಿ ಚಿತ್ರಿಸಿ ತೋರಿಸುವಾಗಲೆಲ್ಲಾ ನನಗೆ ಮೈ ಹತ್ತಿಕೊಂಡು ಉರಿಯುತ್ತದೆ. ನಮ್ಮ ನೋವನ್ನು ಅರ್ಥ ಮಾಡಿಕೊಳ್ಳಲು ಏಕೆ ಇವರಿಂದ ಸಾಧ್ಯವಾಗುತ್ತಿಲ್ಲ?

ಕುಟುಂಬವಿಲ್ಲ. ಕೆಲಸವೂ ಇಲ್ಲ. ರಕ್ಷಣೆಯಂತೂ ಇಲ್ಲವೇ ಇಲ್ಲ. ಯಾವುದೂ ಇಲ್ಲ ಇಲ್ಲ ಎಂದೇ ತಿರಸ್ಕರಿಸಿ ಸಮಾಜದೊಳಗಿಂದ ಹಿಜಡಾಗಳನ್ನು ದೂರ ಅಟ್ಟಿಬಿಟ್ಟಿದ್ದಾರೆ. ಹೀಗೆ ಅಟ್ಟಲ್ಪಟ್ಟವರೆಲ್ಲರೂ ಒಂದಾಗಿ ಸೇರಿ ಆಯಾ ಪ್ರದೇಶಗಳಲ್ಲಿ ಆಯಾ ಪರಿಸ್ಥಿತಿಗೆ ತಕ್ಕಂತೆ ಒಂದು ಕುಟುಂಬ ವ್ಯವಸ್ಥೆಯನ್ನು ನಿರ್ಮಿಸಿಕೊಂಡು ಆಯಾ ಪ್ರಾಂತ್ಯಗಳ ಆಚರಣೆ. ಸಂಪ್ರದಾಯಗಳನ್ನು ಒಪ್ಪಿಕೊಂಡು ತಮಗೆ ತಕ್ಕಂತೆ ಅವುಗಳನ್ನು ಅಲ್ಪಸ್ವಲ್ಪ ಬದಲಾಯಿಸಿಕೊಂಡು, ತಮ್ಮೊಳಗೇ ಅತ್ತು, ತಮ್ಮೊಳಗೇ ನಕ್ಕು. ಸಂತೋಷ ಪಟ್ಟು ಹೇಗೋ ಒಂದು ರೀತಿ ಬದುಕು ಸವೆಸುತ್ತಿದ್ದಾರೆ.

ಹೊಟ್ಟೆ ಎಂಬುದೊಂದು ಇಲ್ಲದಿದ್ದರೆ ಯಾವ ಹಿಜಡಾವೂ ಇಲ್ಲಿ ಯಾವ ದಂಧೆಯನ್ನೂ ಮಾಡಲಾರಳು. ವ್ಯಭಿಚಾರಕ್ಕಿಳಿಯಲಾರಳು. ಭಿಕ್ಷೆ ಬೇಡಲಾರಳು. ಇದರಲ್ಲಿ ಯಾವ ಸಂಶಯವೂ ಬೇಡ.

ಬದುಕಲು ಅಗತ್ಯವಾದ ಎಲ್ಲ ಕಿಟಕಿ–ಬಾಗಿಲುಗಳೂ ಮುಚ್ಚಿಕೊಳ್ಳುವುದರಿಂದಲೇ ಅಸಹಾಯಕ ಪರಿಸ್ಥಿತಿಯಲ್ಲಿ, ತಮ್ಮ ಸ್ವಾಭಿಮಾನವನ್ನು ಕಳೆದುಕೊಂಡು ಕೈಚಾಚಿ ಭಿಕ್ಷೆ ಬೇಡಿಯೋ, ದೇಹ ಮಾರಿಯೋ ಬದುಕು ನಿರ್ವಹಿಸಬೇಕಾಗಿದೆ. ಇದನ್ನು ಯಾರೂ ಅರ್ಥ ಮಾಡಿಕೊಳ್ಳದಿರುವುದೇ ನಮಗೆ ತುಂಬ ಬೇಸರದ ಸಂಗತಿ.

ಯೋಚಿಸಿ ನೋಡಿದರೆ ಹೆಂಗಸರನ್ನೇ ಕನಿಷ್ಠವಾಗಿ ಭಾವಿಸುವ ಈ ಸಾಮಾಜಿಕ ವ್ಯವಸ್ಥೆಯಲ್ಲಿ ಗಂಡಾಗಿ ಹುಟ್ಟಿದ ಒಬ್ಬ ವ್ಯಕ್ತಿ ಹೆಣ್ಣಾಗಿ ಬದಲಾದರೆ ಗಂಡು ಜಾತಿಗೂ, ಒಟ್ಟು ಗಂಡಸುತನಕ್ಕೂ ನಡೆಯುವ ಅವಮಾನವೆಂದು ಭಾವಿಸುವ ಸಾಮಾನ್ಯವಾದ ಪುರುಷ ಪ್ರಧಾನ ಯೋಚನೆಯೇ, ಹಿಜಡಾಗಳನ್ನು ಹೆಣ್ಣೆಂದು ಒಪ್ಪಿಕೊಳ್ಳಲು ಸಾಧ್ಯವಾಗದುದರ ಮೂಲವಿರಬಹುದೇ ಎಂದು ಅನ್ನಿಸುತ್ತದೆ.

ಗಂಡಸರ ನಡುವೆ ಗುಲಾಮರಂತೆಯೇ ಬದುಕು ಸವೆಸಿ ಅಭ್ಯಾಸವಾಗಿ ಹೋದ ಕೆಲವು ಹೆಂಗಸರೂ ಕೂಡ ಇದೇ ಅಭಿಪ್ರಾಯವನ್ನು ಮೈಗೂಡಿಸಿಕೊಂಡು ಬಿಡುತ್ತಾರೆ.

ಇಂತಹ ಪರಿಸ್ಥಿತಿಯಲ್ಲಿ ಒಂದು ಮನೆಯಲ್ಲಿ ಒಬ್ಬ ಹಿಜಡಾ ವಾಸಿಸುತ್ತಾಳೆಂದರೆ ಅದು ಆ ಕುಟುಂಬಕ್ಕೇ ಅವಮಾನವೆಂದು ಭಾವಿಸಲಾಗುತ್ತದೆ. ಅವಳ ಇರುವಿಕೆ, ಕುಟುಂಬದ ಇತರ ಸದಸ್ಯರ ಬೆಳವಣಿಗೆಯನ್ನೂ, ಅವರ ಸಹಜ ಬದುಕನ್ನೂ ಪ್ರಶ್ನೆಗೀಡು ಮಾಡುತ್ತದೆ ಎಂದೇ ಅವರು ಭಾವಿಸುತ್ತಾರೆ. ಈ ಸಮಸ್ಯೆಗಳೆಲ್ಲ ಪರಿಹಾರವಾಗಬೇಕಾದರೆ ನಮಗೆ ಬೇಕಾದುದೆಲ್ಲಾ ಒಂದೇ ಒಂದು ಮಾತ್ರ. ಅದು ಕಾನೂನು ಬದ್ಧವಾದ ಅಂಗೀಕಾರ. ಸಮಾಜದ ಅಪಹಾಸ್ಯದಿಂದ ರಕ್ಷಣೆ ಸಿಗುವುದರೊಂದಿಗೆ, ಸಾರ್ವಜನಿಕ ಸ್ಥಳಗಳಲ್ಲಿ ನಾವೂ ಸಹಜವಾಗಿ ನಡೆದಾಡಲು ಇದರಿಂದ ಅನುಕೂಲವಾಗುತ್ತದೆ. ಆದರೆ ಸರ್ಕಾರ ಏಕೆ ಈ ಬಗ್ಗೆ ಯೋಚಿಸುವುದೇ ಇಲ್ಲ. ಹಿಜಡಾಗಳ ಹುಟ್ಟನ್ನೂ. ಇರುವಿಕೆಯನ್ನೂ ತಪ್ಪಿಸಲು ಸಾಧ್ಯವಿಲ್ಲದಿರುವಾಗ ಅವರ ಲಿಂಗ ಬದಲಾವಣೆಯ ಶಸ್ತ್ರ ಚಿಕಿತ್ಸೆಯನ್ನೇಕೆ ಕಾನೂನುಬದ್ಧವಾಗಿಸಬಾರದು? ಇದು ಎಷ್ಟೋ ದೇಶಗಳಲ್ಲಿ ಈಗಾಗಲೇ ಚಾಲ್ತಿಯಲ್ಲಿದೆ. ಈ ದೇಶದಲ್ಲಿ ಮಾತ್ರ ಏಕಿಲ್ಲ? ಈ ಬಗ್ಗೆ ಯಾರೂ ಯೋಚಿಸಲೂ ಕೂಡ ಏಕೆ ಸಿದ್ಧವಾಗಿಲ್ಲ?

ಹಿಜಡಾಗಳನ್ನು ರೋಗಿಷ್ಠ ಲೈಂಗಿಕ ಕಾರ್ಯಕರ್ತರೆಂದು ಮಾತ್ರ ಭಾವಿಸಿ ರಚನೆಯಾಗಿರುವ ಒಂದು ಸರ್ಕಾರಿ ಆದೇಶವಿದೆ (ಸಂ. 377). ಇದನ್ನು ತಿದ್ದುಪಡಿ ಮಾಡಿ ಸರಿಯಾದ ಚಿಕಿತ್ಸೆ ಹಾಗೂ ಮಾನಸಿಕ ಪರೀಕ್ಷೆಗಳನ್ನು ನಡೆಸಿ ಆಕೆ ಒಬ್ಬ ಹಿಜಡಾ ಎಂದು ನಿರ್ಧಾರವಾದರೆ ಆಕೆಗೆ ಕಾನೂನು ಬದ್ಧವಾಗಿ ಲಿಂಗಬದಲಾವಣೆಯ ಚಿಕಿತ್ಸೆ (ಸೆಕ್ಸ್ ರೀ ಆಸೈನ್‌ಮೆಂಟ್ ಸರ್ಜರಿ) ನಡೆಸಲು ಸರ್ಕಾರ ಮುಂದೆ ಬರಬೇಕು. ಸಾಧ್ಯವಾದರೆ ಅವರಿಗಾಗಿ ಮೀಸಲಾತಿಯನ್ನೂ ನೀಡಬೇಕು. ಸ್ವತಂತ್ರ ಸಹಜ ಸರಳ ಬದುಕಿಗೆ ನಾವು ಕೇಳುವ ಸಹಾಯಗಳಿವು.

ಶಾಲಾ ಪಠ್ಯಗಳಲ್ಲೂ ಕೂಡ ಹಿಜಡಾಗಳನ್ನು ಪರಿಚಯಿಸಬಹುದು. ದಾರಿಯಲ್ಲಿ ನಮ್ಮನ್ನು ನೋಡಿ ಹಲ್ಲು ಗಿಂಜುತ್ತಾ, ಅಪಹಾಸ್ಯ ಮಾಡುತ್ತಾ... ಮತ್ತೊಂದು ತಲೆಮಾರು ನಮ್ಮನ್ನು ಅವಮಾನಪಡಿಸುವುದನ್ನು ತಪ್ಪಿಸಲು ಇದು ನೆರವಾಗಬಹುದು. ವಯಸ್ಕರ ಶಿಕ್ಷಣ, ರಾತ್ರಿ ಶಿಕ್ಷಣ, ಮನೆಮನೆಗೆ ಶಿಕ್ಷಣ ಇತ್ಯಾದಿ ಪದ್ಧತಿಗಳಿವೆ. ಅವುಗಳಿಲ್ಲೆಲ್ಲಾ ಕೂಡ ಹಿಜಡಾಗಳ ಬಗ್ಗೆಯೂ ಒಂದು ಪಠ್ಯವನ್ನು ಸೇರಿಸಿ, ಅವರ ಕಷ್ಟಗಳ ಬಗ್ಗೆಯೂ ವಿವರಿಸಿ ಅದನ್ನು ಅರ್ಥಮಾಡಿಸಬೇಕು. ಹಿಜಡಾಗಳನ್ನು ಒಪ್ಪಿಕೊಳ್ಳಲೂ, ಅವರನ್ನು ಗೌರವಿಸಲೂ ಹೇಳಿಕೊಡಬೇಕು. ಸೆನ್ಸಾರ್ ಮಂಡಳಿಯವರು, ಚಲನಚಿತ್ರಗಳಲ್ಲಿ ಹಿಜಡಾಗಳನ್ನು ಹೀಯಾಳಿಸುವ ದೃಶ್ಯಗಳನ್ನು ತಡೆಹಿಡಿಯಬೇಕು.

ಸರ್ಕಾರ ಮನಸ್ಸಿಟ್ಟರೆ ಖಂಡಿತ ಇದು ಸಾಧ್ಯ!

ಸರ್ಕಾರ ಒಂದು ಹೆಜ್ಜೆ ಮುಂದಿಟ್ಟರೆ ನಂತರ ಸಮಾಜ ಕೂಡ ಇನ್ನೊಂದು ಹೆಜ್ಜೆ ಮುಂದಿಡುತ್ತದೆ. ಸಾಮಾಜಿಕ ಅಂಗೀಕಾರ ಸಿಕ್ಕ ಮೇಲೆ ನಮ್ಮ ನಮ್ಮ ಕುಟುಂಬಗಳು ನಮ್ಮನ್ನು ಒಪ್ಪಿಕೊಳ್ಳಲು ಹೆಚ್ಚಾಗಿ ಯಾವ ಸಮಸ್ಯೆಗಳೂ ಇರಲಾರವೆಂದೇ ಭಾವಿಸುತ್ತೇನೆ.

ಯಾವ್ಯಾವುದಕ್ಕೋ ಘೋಷಣೆ ಕೂಗುವ ನಮ್ಮ ರಾಜಕೀಯ ನಾಯಕರು ಈ ಕಡೆಯೂ ಸ್ವಲ್ಪ ಪ್ರಯತ್ನಿಸಬಾರದೇ?

ಸ್ವರ್ಗಬೇಕೆಂದೇನೂ ನಾನು ಕೇಳುತ್ತಿಲ್ಲ. ನರಕ ಬೇಡ ಎಂದಷ್ಟೇ ನಾನು ಒದ್ದಾಡುತ್ತಿರುವುದು. ನನ್ನಂತೆಯೇ ಇರುವ ಇತರ ಹಿಜಡಾಗಳಿಗಾಗಿಯೂ!

ಅರ್ಥಮಾಡಿಕೊಳ್ಳುವಿರಾ? ಹಾಗಿದ್ದರೆ ಧನ್ಯವಾದ!

# ಘಟಕ – 2
# ಆಶಯ – ಸಹಿಷ್ಣುತೆ

ಕಸವರಮೆಂಬುದು ನೆರೆ ಸೈ
ರಿಸಲಾರ್ಪೊಡೆ ಪರವಿಚಾರಮಂ ಧರ್ಮಮುಮಂ
ಕಸವೇಂ ಕಸವರಮೇನು
ಬ್ಬಸಮಂ ಬಸಮಲ್ಲದಿರ್ದು ಮಾಡುವರೆಲ್ಲಂ

**–ಶ್ರೀ ವಿಜಯ, ಕವಿರಾಜಮಾರ್ಗ**

## ಬಿದಿರು ನಾನಾರಿಗಲ್ಲದವಳು –ಶಿಶುನಾಳ ಷರೀಫ

ಬಿದಿರು ನಾನಾರಿಗಲ್ಲದವಳು ॥ಪ॥
ಹುಟ್ಟುತ ಹುಲ್ಲಾದೆ
ಬೆಳೆಯುತ ಮರವಾದೆ
ಸುಂದರ ಸ್ತ್ರೀಯರಿಗೆ ಕೇರುವ ಮೊರವಾದೆ ॥1॥
ಮುದುಕಗೆ ಬಡಿಗ್ಯಾದೆ
ಮುತ್ತ್ಯಾಗ ಬೆತ್ತವಾದೆ
ದೊಡ್ಡ ದೊಡ್ಡ ಮಹಾತ್ಮರಿಗೆ ಕೈಯೊಳಗೆ ಬೆತ್ತವಾದೆ ॥2॥
ಅಂಬಿಗನಿಗೆ ಕೋಲಾದೆ
ದಂಡಿಗಿ ನಾನಾದೆ
ನೀಟುಳ್ಳ ಹುಡುಗರಿಗೆ ಬೇಟೆಯ ಬಡಿಗ್ಯಾದೆ ॥3॥
ಪಲ್ಲಕ್ಕಿಗೆ ದಂಡಿಗಿಯಾದೆ
ಪತ್ರಿಗೆ ಬುಟ್ಟಿಯಾದೆ
ಎಲ್ಲಮ್ಮನ ಗುಡ್ಡದೊಳಗೆ ಅಡ್ಲಿಗಿ ನಾನಾದೆ ॥4॥
ಹಂದರ ಹಾಲಗಂಬನಾದೆ
ದಂಡಿ ಬಾಸಿಂಗನಾದೆ
ದೊಡ್ಡ ದೊಡ್ಡ ಮಠದೊಳಗೆ ಕಜ್ಜಾಯ ಬುಟ್ಟಿಯಾದೆ ॥5॥
ತಿಪ್ಪಿಯ ತೆಳಗಿದ್ದೆ
ಅದರುದ್ಧ ಬೆಳದಿದ್ದೆ
ಸಿದ್ಧರಾಮೇಶ್ವರನಿಗೆ ನಂದಿಕೋಲಾದೆ ॥6॥
ದೇಶದೊಳು ಶಿಶುನಾಳ–
ಧೀಶನ ಮಠದೊಳಗೆ
ಸಾಧುರ ಕೈಯೊಳಗೆ ಏಕದಾರಿ ಕೊಳಿವೆಯಾದೆ ॥7॥

# ಧರ್ಮ ಮತ್ತು ಸಾಮಾಜಿಕ ಜವಾಬ್ದಾರಿ

**–ಜಿ.ಎಸ್. ಶಿವರುದ್ರಪ್ಪ**

ವಾಸ್ತವದಿಂದ ಪ್ರಾರಂಭಿಸೋಣ.

ಈ ನಾವೆಲ್ಲ ಅದು ಹೇಗೋ ಒಂದಲ್ಲ ಒಂದು ಮತ–ಧರ್ಮಕ್ಕೆ ಸೇರಿದವರಾಗಿದ್ದೇವೆ. ಹೀಗಿರುವುದು ನಮ್ಮ ಆಯ್ಕೆಯೇನೂ ಅಲ್ಲ; ಅಥವಾ ಕಾಣದ ದೇವರಿಗೆ ಯಾವತ್ತೋ ಅರ್ಜಿ ಸಲ್ಲಿಸಿದ್ದರ ಪರಿಣಾಮವೂ ಅಲ್ಲ! ಇದು ಕೇವಲ ಆಕಸ್ಮಿಕ. ಹೀಗೆ ಆಕಸ್ಮಿಕವಾಗಿ ಹುಟ್ಟಿಬಂದ ಹಾಗೂ ಯಾವುದೋ ಧರ್ಮವೊಂದನ್ನು ನಂಬಿಕೊಂಡ ಮತ್ತು ಆಚರಿಸುವ ಕುಟುಂಬವನ್ನೊಳಗೊಂಡ ಸಮುದಾಯ ಅಥವಾ ಸಮಾಜಕ್ಕೆ ಸೇರಿದ ನಾವು, ಆ ಧರ್ಮದ ಆಚಾರ–ವಿಚಾರ–ಶ್ರದ್ಧೆ ಇತ್ಯಾದಿಗಳ ಪರಂಪರೆಯೊಳಕ್ಕೆ ಬಂದ ನಾವು, ಇದೇ ರೀತಿ ನಮ್ಮ ಪರಿಸರದಲ್ಲಿ ಮತ್ತು ಅದರಾಚೆಯ ವಿಶಾಲ ಪ್ರಪಂಚದೊಳಗಿನ ದೇಶಗಳ ಸಮುದಾಯಗಳೂ ಹೀಗೆಯೇ ಯಾವುದೋ ಒಂದು ನಿರ್ದಿಷ್ಟ ಧರ್ಮಕ್ಕೆ ಸೇರಿದವರಾಗಿದ್ದಾರೆ ಎಂಬುದನ್ನು ಗುರುತಿಸುತ್ತೇವೆ. ಅಂತೂ ಜಗತ್ತಿನ ಜನಸಮುದಾಯವೆಲ್ಲ ಯಾವುದೋ ಒಂದು ಧರ್ಮಕ್ಕೆ ಸೇರಿದವನೆಂಬ ಹಿನ್ನೆಲೆಯಲ್ಲಿ ಧರ್ಮಕ್ಕೂ ಸಮಾಜಕ್ಕೂ ಇರುವ ಸಂಬಂಧಗಳನ್ನು ಕುರಿತು ಯೋಚಿಸುತ್ತೇವೆ.

ಧರ್ಮ ಎಂದ ಕೂಡಲೇ ಥಟ್ಟನೆ ಗೋಚರವಾಗುವ ಕೆಲವು ಲಕ್ಷಣಗಳು ಇವು: ಪ್ರತಿಯೊಂದು ಧರ್ಮದ ಹಿಂದೆ ಅದನ್ನು ಸ್ಥಾಪಿಸಿದ ಅಥವಾ ಪ್ರವರ್ತನಗೊಳಿಸಿದ ಒಬ್ಬ ವ್ಯಕ್ತಿ, ಆತಪ್ರವಾದಿಯೋ, ಸಂತನೋ, ಆಚಾರ್ಯನೋ, ಅವತಾರಪುರುಷನೋ ಇದ್ದಾನೆ. ಹಿಂದೂ ಧರ್ಮಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ, ಅದು ಇತರ ಧರ್ಮಗಳಂತೆ ಯಾವ ಒಬ್ಬ ನಿರ್ದಿಷ್ಟವಾದ ವ್ಯಕ್ತಿಯಿಂದಲೂ ಸ್ಥಾಪಿತವಾದುದಲ್ಲ. ಅದು ಅನೇಕ ತತ್ವಜ್ಞಾನಿಗಳು ಪ್ರತಿಪಾದಿಸಿದ ಹಲವು ಪರ್ಯಾಯ ಚಿಂತನೆಗಳ ಒಂದು ಸ್ರೋತ ಅಥವಾ ಪ್ರವಾಹ ಎಂದು ಹೇಳಬಹುದು. ಎರಡನೆಯ ಲಕ್ಷಣವೆಂದರೆ, ಒಂದು ಧರ್ಮದ ಮೂಲದಲ್ಲಿ ಇರುವ ಈ ವ್ಯಕ್ತಿ ಅಥವಾ ಶಕ್ತಿ ಪ್ರತಿಪಾದಿಸಿದ ಆಧ್ಯಾತ್ಮಿಕ ಧಾರ್ಮಿಕ, ಸಾಮಾಜಿಕ ಸ್ವರೂಪದ ಮಾರ್ಗದರ್ಶಕ ತತ್ತ್ವಜ್ಞಾನ ಅಥವಾ ಬೋಧನೆಗಳನ್ನು ಒಳಗೊಂಡ ಗ್ರಂಥಗಳಿರುತ್ತವೆ. ನಿದರ್ಶನಕ್ಕೆ ಹೇಳುವುದಾದರೆ, ಕ್ರೈಸ್ತರಿಗೆ ಬೈಬಲ್, ಮುಸ್ಲಿಮರಿಗೆ ಖುರಾನ್, ಹಿಂದೂಗಳಿಗೆ ಭಗವದ್ಗೀತೆ, ಬೌದ್ಧರಿಗೆ ತ್ರಿಪಿಟಕಗಳು, ವೀರಶೈವರಿಗೆ ವಚನಗಳು– ಸಿದ್ಧಾಂತ ಶಿಖಾಮಣಿ ಇವುಗಳನ್ನು ಹೆಸರಿಸಬಹುದು. ಮೂರನೆಯದು ಈ ಗ್ರಂಥಗಳನ್ನು ಕುರಿತು ಕಾಲದಿಂದ ಕಾಲಕ್ಕೆ ವ್ಯಾಖ್ಯಾನ ಬರೆದ ಆಚಾರ್ಯರಿದ್ದಾರೆ ಮತ್ತು ಬೋಧಕರಿದ್ದಾರೆ. ಎಲ್ಲಕ್ಕೂ ಮಿಗಿಲಾಗಿ

ಪ್ರತಿಯೊಂದು ಧರ್ಮಕ್ಕೂ ಒಂದು ದೇವರ ಕಲ್ಪನೆ ಇರುತ್ತದೆ. ಅದನ್ನು ಸಾಕಾರಗೊಳಿಸುವ ಗುಡಿಗಳೂ, ಮಠಗಳೂ ಇವೆ. ಇವುಗಳನ್ನು ಆಶ್ರಯಿಸಿಕೊಂಡ ಪೂಜಾರಿಗಳೂ, ಪುರೋಹಿತರೂ, ಗುರುಗಳೂ ಅವರು ಹುಟ್ಟುಹಾಕಿದ ಪೂಜಾವಿಧಾನಗಳೂ ರಿಚ್ಯುಯಲ್ಲುಗಳೂ, ಅವುಗಳ ಜತೆಗೆ ಬೆಸೆದುಕೊಂಡ ಅತಿಮಾನುಷ ಕಲ್ಪನೆಗಳೂ, ಮತ್ತು ಭಕ್ತಾದಿಗಳೂ ಇರುತ್ತಾರೆ. ಇದು ಧರ್ಮ ಎಂದ ಕೂಡಲೆ ಕಣ್ಣಿಗೆ ಕಟ್ಟುವ ವಿವಿಧ ಸಂಗತಿಗಳ ಒಂದು ಹೆಣಿಗೆ ಅಥವಾ Network ಇಲ್ಲಿ ಪ್ರತ್ಯೇಕವಾಗಿ ಹೇಳಬೇಕಾದ ಮಾತೇನೆಂದರೆ, ಎಲ್ಲ ಧರ್ಮಗಳಿಗೂ ಒಂದು ದೇವರ ಕಲ್ಪನೆ ಇದೆ ಎಂಬ ಮಾತು ಜೈನ ಹಾಗೂ ಬೌದ್ಧ ಧರ್ಮಗಳಿಗೆ ಅನ್ವಯಿಸುವುದಿಲ್ಲ. ಪ್ರತಿಯೊಂದು ಜೀವಿಗೂ ಒಂದಲ್ಲ ಒಂದು ದಿನ ದೇವನಾಗುವ ಅಧಿಕಾರ ಮತ್ತು ಅವಕಾಶಗಳಿವೆ ಎಂಬುದನ್ನು ಎತ್ತಿ ಹಿಡಿದ ಹೆಗ್ಗಳಿಕೆ ಜೈನಧರ್ಮಕ್ಕೆ ಇದೆ. ಬುದ್ಧ ಸ್ಥಾಪಿಸಿದ ಧರ್ಮ ದೇವರಿಲ್ಲದ ಧರ್ಮವಾಗಿತ್ತು. ದೇವರ ಮೇಲಿನ ನಂಬಿಕೆಯು ಧರ್ಮಕ್ಕೆ ಅನಿವಾರ್ಯವಾದುದೇನಲ್ಲ; ಕಣ್ಣೆದುರಿಗೆ ದುಃಖಭೂಯಿಷ್ಠವಾದ ಜಗತ್ತು ಇರುವಾಗ, ಅದನ್ನು ನಿರ್ಲಕ್ಷಿಸಿ ದೇವರನ್ನು ಕುರಿತು ಯೋಚಿಸುವುದು ನಿಷ್ಪ್ರಯೋಜಕ ಎಂದು ಹೇಳಿದ. ದೇವರು–ಗುರು–ಶಾಸ್ತ್ರ ಇತ್ಯಾದಿಗಳ ನೆರವಿಲ್ಲದೆಯೇ ಮನುಷ್ಯ ತನ್ನ ಬಿಡುಗಡೆಯ ದಾರಿಯನ್ನು ತಾನೇ ಕಂಡುಕೊಳ್ಳಬಲ್ಲ– ಎಂಬ ಮಾತನ್ನು ಜಗತ್ತಿನ ಚರಿತ್ರೆಯಲ್ಲಿ ಮೊಟ್ಟಮೊದಲಿಗೆ ಹೇಳಿದವನು ಬುದ್ಧ. ಜೈನ–ಬೌದ್ಧ ಧರ್ಮಗಳು ಮೂಲದಲ್ಲಿ 'ದೇವರ' ಬಗೆಗೆ ಏನೂ ಹೇಳದಿದ್ದರೂ, ಆಯಾ ಧರ್ಮಗಳವರಿಗೆ ತೀರ್ಥಂಕರರೂ, ಬುದ್ಧನೂ ದೇವತಾ ವಿಗ್ರಹಗಳಾಗಿ ಪರಿಣಮಿಸಿದರೆಂಬುದು ಬೇರೆಯ ಮಾತು.

ಇಂಥ ಯಾವುದಾದರೊಂದು ಧರ್ಮವನ್ನು ಒಪ್ಪಿಕೊಂಡ ಹಾಗೂ ಆಚರಿಸುವ ವಿವಿಧ ಜನಸಮುದಾಯ ಅಥವಾ ಒಂದು ಸಮಾಜ ಆರ್ಯಾಧರ್ಮದ ನಿರ್ದೇಶನಕ್ಕೆ ಅನುಗುಣವಾದ ಜೀವನಕ್ರಮವೊಂದನ್ನು ಅಥವಾ ಸಂಸ್ಕೃತಿಯನ್ನು ಕಟ್ಟಿಕೊಳ್ಳುತ್ತದೆ. ಮನುಷ್ಯನ ಅಸ್ತಿತ್ವಕ್ಕೆ ಒಂದು ನಂಬಿಕೆಯ ನೆಲೆಯನ್ನೂ ಸಾಮಾಜಿಕ ಸ್ವಾಸ್ಥ್ಯವನ್ನೂ ಕಲ್ಪಿಸುವ ಧರ್ಮ ಎನ್ನುವುದು ಮನುಷ್ಯನ ಆಧ್ಯಾತ್ಮಿಕ ಹಾಗೂ ಸಾಮಾಜಿಕ ಅವಶ್ಯಕತೆಯ ಪರಿಣಾಮವಾಗಿದೆ. ಒಂದು ಕುಟುಂಬದ ವ್ಯಕ್ತಿಯಾಗಿ, ಒಂದು ಸಮಾಜದ ಸದಸ್ಯನಾಗಿ ಬದುಕಬೇಕಾದರೆ ಯಾವ ಯಾವ ಲೌಕಿಕ, ನೈತಿಕ ಹಾಗೂ ಆಧ್ಯಾತ್ಮಿಕ ವಿಚಾರಗಳನ್ನೂ, ನಿಲುವುಗಳನ್ನೂ, ಮೌಲ್ಯಗಳನ್ನೂ ರೂಢಿಸುವುದರ ಮೂಲಕ ಒಂದು ಸಮಾಜದ ಎಲ್ಲರನ್ನೂ ಒಂದುಗೂಡಿಸುವ, ಒಂದು ವ್ಯವಸ್ಥೆಗೆ ತರುವ ವಿಧಾನವೇ ಧರ್ಮ. 'ಯಾವುದು ಸಮಾಜಕ್ಕೆ ಒಂದು ಧಾರಣಶಕ್ತಿಯನ್ನು ತಂದುಕೊಡುತ್ತದೋ ಅದೇ ಧರ್ಮ' ಎಂಬ ಸುಪ್ರಸಿದ್ಧ ಸಂಸ್ಕೃತೋಕ್ತಿಯ ಅರ್ಥವೇ ಇದು.

ಗಮನಿಸಬೇಕಾದ ಸಂಗತಿ ಎಂದರೆ ಜಗತ್ತಿನ ಎಲ್ಲ ಧರ್ಮಗಳು ಮನುಷ್ಯನು ತನಗಿಂತ ದೊಡ್ಡದಾದ ಆ ಪರಾತ್ಪರ ಅಥವಾ ದೇವರು ಒಬ್ಬನೇ ಎಂದು ಹೇಳುತ್ತವೆ. ಮನುಷ್ಯರೆಲ್ಲರೂ ಸಮಾನರು ಎಂದು ಹೇಳುತ್ತವೆ. ಶಾಂತಿಯನ್ನು-ಕರುಣೆಯನ್ನು-ಪ್ರೀತಿಯನ್ನು ಒತ್ತಿ ಹೇಳುತ್ತವೆ. ಯಾವ ಧರ್ಮವೂ ಸಹಜೀವಿಗಳನ್ನು ಹಿಂಸಿಸಬೇಕೆಂದಾಗಲೀ ದ್ವೇಷಿಸಬೇಕೆಂದಾಗಲೀ ಹೇಳುವುದಿಲ್ಲ. ಬದಲು ಎಲ್ಲರನ್ನೂ ಪ್ರೀತಿಸಬೇಕೆಂದು ಹೇಳುತ್ತವೆ.

ಆದರೆ ಜಗತ್ತಿನಲ್ಲಿ ಧರ್ಮದ ಹೆಸರಿನಲ್ಲಿ ಯಾಕೆ ಇಷ್ಟು ಸಂಘರ್ಷಗಳಾಗಿವೆ, ಯಾಕಿಷ್ಟು ರಕ್ತಪಾತವಾಗಿದೆ? ಮನುಷ್ಯರನ್ನು ಬೆಸೆಯಬೇಕಾದ ಈ ಧರ್ಮಗಳು ಯಾಕೆ ಧುತ್ತೆಂದು ಅಡ್ಡಗೋಡೆಗಳಾಗಿ ನಿಲ್ಲುತ್ತಿವೆ!

ಕಾರಣ, ಮನುಷ್ಯನ ಸ್ವಾರ್ಥ ಹಾಗೂ ಅವೈಚಾರಿಕತೆಗಳೇ ಹಾಗೂ ಆ ಮೂಲಕ ಧರ್ಮದ ಸ್ವರೂಪವನ್ನು ಕುರಿತ ಹ್ರಸ್ವಬುದ್ಧಿಯ ಅಪವ್ಯಾಖ್ಯಾನಗಳೇ ಈ ಪೂರ್ವಪೀಠಿಕೆಯ ಹಿನ್ನೆಲೆಯಲ್ಲಿ ಒಂದು ಧರ್ಮಕ್ಕೆ ಇರುವ ಸಾಮಾಜಿಕ ಜವಾಬ್ದಾರಿಯನ್ನು ಕುರಿತು ಕೆಲವು ಸಂಗತಿಗಳನ್ನು ಪ್ರಸ್ತಾಪಿಸೋಣ:

ದೇವರಾಗಲಿ, ದೇವಸ್ಥಾನಗಳಾಗಲಿ, ಧರ್ಮವಾಗಲಿ ಇರುವುದು ಮನುಷ್ಯರಿಂದ ಮನುಷ್ಯರಿಗಾಗಿ ಎಂಬುದನ್ನು ಮೊದಲು ತಿಳಿದುಕೊಳ್ಳಬೇಕಾಗಿದೆ. ಯಾವುದೇ ಒಂದು ಧರ್ಮ ಸಮುದಾಯದ ಶ್ರೇಯಸ್ಸನ್ನು ಸಾಧಿಸಬೇಕಾದರೆ ಅದು ತನ್ನ ಸಮಾಜದ ಎಲ್ಲ ವರ್ಗದವರನ್ನೂ ಸಮಾನರೆಂದು ಪರಿಗಣಿಸುವುದು ಅದರ ಸಾಮಾಜಿಕ ಜವಾಬ್ದಾರಿಯಾಗಿದೆ. ಯಾಕೆಂದರೆ ನಿಜವಾದ ಧಾರ್ಮಿಕ ಮನಃಸ್ಥಿತಿ ಎಂದರೆ ಮನುಷ್ಯರೆಲ್ಲರ ಏಕತೆ ಹಾಗೂ ಸಮಾನತೆಯನ್ನು ಕಾಣುವ ಮತ್ತು ಕಟ್ಟುವ ನಿಲುವು.

ಎಲ್ಲ ಧರ್ಮಗಳೂ ಹೇಳುತ್ತವೆ. ಮನುಷ್ಯರೆಲ್ಲರೂ ಸಮಾನರು. ಆದರೆ ವಾಸ್ತವಸ್ಥಿತಿ ದೃಢಪಡಿಸುತ್ತದೆ. ಮನುಷ್ಯರೆಲ್ಲರೂ ಸಮಾನರಲ್ಲ. ಇವುಗಳಲ್ಲಿ ಮೊದಲನೆಯದು 'ನಿಜವಾದ ಸತ್ಯ,' ಎರಡನೆಯದು ಸಾಮಾಜಿಕ ಸತ್ಯ. ಆದರೆ ಈ ಎರಡೂ ಒಂದಕ್ಕೊಂದು ವಿರುದ್ಧವಾದ ಸಂಗತಿಗಳಾದ ಕಾರಣ ಒಂದು ನಿಜ. ಮತ್ತೊಂದು ಸುಳ್ಳು. ಮೊದಲನೆಯದು 'ಸಹಜ' ಸತ್ಯ. ಎರಡನೆಯದು 'ಕೃತಕ' ನಿಜವಾದ ಸತ್ಯವನ್ನು ಸಾಮಾಜಿಕ ನೆಲೆಯಲ್ಲಿ ಹೀಗೆ 'ಕೃತಕ'ವನ್ನಾಗಿ ಮಾಡಿದ್ದು, ಅಥವಾ ಬೇರೊಂದು ಮಾತಿನಲ್ಲಿ ಹೇಳುವುದಾದರೆ, ನಿಜವಾಗಿಯೂ ಸಮಾನರಾದ ಮನುಷ್ಯರನ್ನು, ಸಮಾನರಲ್ಲವೆಂಬಂತೆ ವಿಭಜನೆ ಮಾಡಿದ್ದು ಮನುಷ್ಯನ ಸ್ವಾರ್ಥ ಮತ್ತು ಅಹಂಕಾರ. ಧರ್ಮದ ಹೆಸರಿನಲ್ಲಿ ಇದನ್ನು ಸಮರ್ಥಿಸುವುದುಂತೂ ಬೌದ್ಧಿಕ ಅಪ್ರಮಾಣಿಕತೆಯಂತೆ ತೋರುತ್ತದೆ. ಇದಕ್ಕೆ ಕೂಡಲೆ ದೊರೆಯುವ ನಿದರ್ಶನವೆಂದರೆ ಹಿಂದೂ-ವೈದಿಕ ಧರ್ಮದ ಚಾತುರ್ವರ್ಣ ವ್ಯವಸ್ಥೆ. ಇದು ಸ್ಥಾಪಿಸಿದ

ಶ್ರೇಣೀಕರಣದಲ್ಲಿ ಕೆಲವರು ಶ್ರೇಷ್ಠರು, ಕೆಲವರು ಕನಿಷ್ಠರು. ಕೆಲವರು ಮಾತ್ರ ಎಲ್ಲ ಬಗೆಯ ಸವಲತ್ತುಗಳಿಗೂ ಅರ್ಹರು; ಮತ್ತೆ ಕೆಲವರು ಯಾವ ಸವಲತ್ತುಗಳಿಗೂ ಅರ್ಹರಲ್ಲ. ಇಂಥ ನಿಲುವನ್ನು ಪ್ರತಿಪಾದಿಸುವ ವ್ಯವಸ್ಥೆ ಮನುಷ್ಯರ ಸಮಾನತೆಯ ಪರವಾಗಿ ಇಲ್ಲ ಎನ್ನುವುದು ಸ್ಪಷ್ಟವಾಗಿದೆ. ಅಷ್ಟೇ ಅಲ್ಲ ಈ ವ್ಯವಸ್ಥೆಯಲ್ಲಿ ಯಾವ ಯಾವುದು ಎಲ್ಲೆಲ್ಲಿ ಇರಬೇಕೋ ಅದು ಅಲ್ಲಲ್ಲಿಯೇ ಇರಬೇಕು. ಈ ವ್ಯವಸ್ಥೆಯಲ್ಲಿ ಸಂಕರವಾಗದಂತೆ ಅಂದರೆ ಒಂದು ವರ್ಣ ಮತ್ತೊಂದರೊಳಗೆ ಅತಿಕ್ರಮಿಸದಂತೆ ಯಥಾಸ್ಥಿತಿಯನ್ನು ಕಾಪಾಡಿಕೊಂಡು ಬರುವುದು ರಾಜರಾದವರ ಕರ್ತವ್ಯ ಮತ್ತು ಧರ್ಮ ಎಂದು ನೀತಿಶಾಸ್ತ್ರಜ್ಞರು ಶಾಸನಗಳನ್ನು ಬರೆದರು. ಅಷ್ಟೇ ಅಲ್ಲ, ಶತಶತಮಾನಗಳಿಂದ ಭಾಷ್ಯಗಳ ಮೇಲೆ ಭಾಷ್ಯಗಳನ್ನು ಬರೆದ ಯಾವ ಆಚಾರ್ಯರೂ, ಸಾಮಾಜಿಕ ಅಸಮಾನತೆಯನ್ನು ನಿರಂತರವಾಗಿ ಉಳಿಸುವ ಈ ವರ್ಣವ್ಯವಸ್ಥೆಯನ್ನು ತಪ್ಪು ಎನ್ನಲಿಲ್ಲ. ಬದಲಾಗಿ ಅದನ್ನು ಭದ್ರಪಡಿಸಿ ಸಮರ್ಥಿಸಿದರು. ವೈಯಕ್ತಿಕ ನೆಲೆಯಲ್ಲಿ 'ಸರ್ವಂ ಖಲ್ವಿದಂ ಬ್ರಹ್ಮ' ಎಂದೂ, ಮಾನವಿಕ ನೆಲೆಯಲ್ಲಿ 'ಸರ್ವೇಜನಾಃ ಸುಖಿನೋಭವಂತು' ಎಂದೂ ಘೋಷಿಸುವ ಈ ಆಚಾರ್ಯರು, ಸಾಮಾಜಿಕ ನೆಲೆಯಲ್ಲಿ ವರ್ಣವ್ಯವಸ್ಥೆಯ ಪರವಾಗಿ ನಿಲ್ಲುವುದು ಒಂದು ವಿಪರ್ಯಾಸವಾಗಿದೆ. ಇದಕ್ಕೆ ಕಾರಣ ಧರ್ಮ ಮತ್ತು ಸಮಾಜಗಳನ್ನು ಪ್ರತ್ಯೇಕವಾಗಿ ಇರಿಸಿ ಸಿದ್ಧಾಂತಗಳನ್ನು ರೂಪಿಸುವ ಬೌದ್ಧಿಕ ದ್ವಂದ್ವವೇ ಎನ್ನಬಹುದು.

ಒಂದು ಗಮನಿಸಬೇಕಾದ ಸಂಗತಿ ಎಂದರೆ ಭಾರತದ ಚರಿತ್ರೆಯನ್ನು ನೋಡಿದರೆ, ಅದರ ರಾಜ್ಯ ವ್ಯವಸ್ಥೆಗಳಲ್ಲಿ ಸಾಕಷ್ಟು ಬದಲಾವಣೆಗಳಾದರೂ, ಅದರ ಸಾಮಾಜಿಕ ವ್ಯವಸ್ಥೆ ಮಾತ್ರ ಶತಮಾನಗಳ ಕಾಲ ಹೆಚ್ಚು ಬದಲಾಗದೆ 19ನೆಯ ಶತಮಾನದವರೆಗೂ ಸ್ಥಗಿತಗೊಂಡದ್ದಕ್ಕೆ ವರ್ಣಾಶ್ರಮ ಅಥವಾ ಜಾತಿ ವಿಂಗಡಣೆಯ ಕಾರಣ ಎನ್ನುತ್ತಾನೆ ಕಾರ್ಲ್‌ಮಾರ್ಕ್ಸ್, 20ನೆಯ ಶತಮಾನದ ಭಾರತೀಯ ಪುನರುಜ್ಜೀವನದ ನಂತರ, ಕೈಗಾರೀಕರಣ, ಶಿಕ್ಷಣ ಇತ್ಯಾದಿಗಳ ಕಾರಣದಿಂದ ಚಾತುರ್ವರ್ಣ ಎಂಬುದು ಸಾಕಷ್ಟು ಸಡಿಲವಾಗಿದೆ. ಮಿಸಲಾತಿ, ಅಂತರ್‌ಜಾತೀಯ ವಿವಾಹಗಳಿಂದ ವರ್ಣ ವ್ಯವಸ್ಥೆಯ ಪರವಾದ ನಿಲುವು ಬದಲಾಗಿದೆ. ಆದರೆ ಯಾವ ಧಾರ್ಮಿಕ ವ್ಯವಸ್ಥೆ ಒಂದು ಸಮಾಜದ ಕೆಲವರ ಹಿತಾಸಕ್ತಿಯನ್ನು ಕಾಯ್ದುಕೊಳ್ಳುತ್ತ ಇನ್ನುಳಿದ ಬಹುಸಂಖ್ಯಾತ ಸ್ತರಗಳವರನ್ನು ಸದಾ ಶೋಷಣೆಗೆ ಗುರಿಪಡಿಸುತ್ತ ಮೇಲೆ ಮಾತ್ರ ಸರ್ವರ ಸಮಾನತೆಯ ಹುಸಿ ಘೋಷಣೆಗಳನ್ನು ಮಾಡುತ್ತದೆಯೋ ಆ ಧರ್ಮ ಸಾಮಾಜಿಕ ಜವಾಬ್ದಾರಿಯುಳ್ಳದೆಂದು ಹೇಗೆ ಹೇಳುವುದು? ಭಗವಾನ್ ಬುದ್ಧ ಮೊಟ್ಟಮೊದಲ ಬಾರಿಗೆ ಮನುಷ್ಯರ ಸಮಾನತೆಯ ಪರವಾಗಿ ಮಾತನಾಡಿದ. ತನ್ನ ಸಂಘಕ್ಕೆ ಸೇರಿದವರನ್ನು ಕುರಿತು ಬುದ್ಧ ಹೇಳಿದ:

'ನೀವೆಲ್ಲರೂ ಸಮಾನರು. ಸಮುದ್ರಕ್ಕೆ ಹಲವು ದಿಕ್ಕುಗಳಿಂದ ನದಿಗಳು ಹರಿದುಬರುತ್ತವೆ. ಕಡಲನ್ನು ಕೂಡುವ ಮೊದಲು ಅವುಗಳಿಗೆ ತಮ್ಮದೇ ಆದ ಪಾತ್ರರೂಪಗಳೂ, ಹೆಸರುಗಳೂ – ಗಂಗಾ ಸಿಂಧೂ ಯಮುನಾ ಸರಸ್ವತಿ ಹೀಗೆ ಇರುತ್ತವೆ. ಅವೆಲ್ಲ ಸಮುದ್ರವನ್ನು ಸೇರಿದ ಮೇಲೆ ತಮ್ಮ ಹೆಸರು ಆಕಾರಗಳನ್ನು ಕಳೆದುಕೊಂಡು ಸಮುದ್ರವೇ ಆಗಿಬಿಡುತ್ತವೆ. ಹಾಗೆ ನೀವು ಒಪ್ಪಿಕೊಂಡ ಧರ್ಮದಿಂದಾಗಿ ನೀವೆಲ್ಲ ಒಂದೇ.'

ಮಾನವ ಜನಾಂಗವೆಲ್ಲ ಒಂದೇ ಎಂಬ ಕಲ್ಪನೆಯನ್ನು ಜಗತ್ತಿನ ಚರಿತ್ರೆಯಲ್ಲಿ ಮೊಟ್ಟಮೊದಲಿಗೆ ಘೋಷಿಸಿದವನು ಭಗವಾನ್ ಬುದ್ಧನೇ. ಏಸುಕ್ರಿಸ್ತ ಮನುಷ್ಯರ ಸಮಾನತೆಯ ಪರವಾಗಿ ಮಾತನಾಡಿದ; ಗುರುನಾನಕ್ ಕಬೀರರು ಮನುಷ್ಯರ ಸಮಾನತೆಯ ಪರವಾಗಿ ಮಾತನಾಡಿದರು; ಬಸವಣ್ಣನವರು ಹಿಂದೂ ವೈದಕ ಧರ್ಮದ ಚಾತುರ್ವರ್ಣ ವ್ಯವಸ್ಥೆಯನ್ನು ವರ್ಣಸಂಕರದ ಮೂಲಕ ಸ್ಫೋಟಿಸಿ ಶರಣ ಧರ್ಮದ ಚೌಕಟ್ಟಿನಲ್ಲಿ ಮನುಷ್ಯರ ಸಮಾನತೆಯನ್ನು ಸ್ಥಾಪಿಸಲು ಪ್ರಯತ್ನಿಸಿದರು.

ಒಂದು ಧರ್ಮದ ಸಾಮಾಜಿಕ ಜವಾಬ್ದಾರಿ ಎಂದರೆ, ಸಮಾಜದ ಕನಿಷ್ಠ ಘಟಕವಾದ ಕುಟುಂಬ ಜೀವನದ ಸದಸ್ಯರಲ್ಲಿ ಏಕತೆಯನ್ನು ಸಾಧಿಸುವುದು. ಅಂದರೆ ಕುಟುಂಬದ ಗಂಡು – ಹೆಣ್ಣುಗಳಿಬ್ಬರಿಗೂ ಸಾಮಾಜಿಕವಾಗಿ ಆಧ್ಯಾತ್ಮಿಕವಾಗಿ ಸಮಾನವಾದ ಅಧಿಕಾರ ಮತ್ತು ಅವಕಾಶಗಳಿವೆ ಎಂಬುದನ್ನು ಎತ್ತಿಹಿಡಿಯುವುದು.

ಆದರೆ ನಮಗೆ ತೋರುವ ಮಟ್ಟಿಗೆ ಜಗತ್ತಿನ ಯಾವ ಧರ್ಮವೂ ಮಹಿಳೆಯರು ಪುರುಷರಿಗೆ ಸಮಾನ ಎಂಬ ಉದಾರತೆಯಿಂದ ನಡೆದುಕೊಂಡಿಲ್ಲ. ಮಹಿಳೆ ಪುರುಷನಿಗೆ ಅಧೀನಳೆಂಬಂತೆಯೋ, ಒಂದು ವಸ್ತುವೆಂಬಂತೆಯೋ ನಡೆಯಿಸಕೊಳ್ಳಲ್ಪಟ್ಟಿದ್ದಾಳೆ. ಅರಿಸ್ಟಾಟಲ್‌ನಂತಹ ತತ್ವಜ್ಞಾನಿ ಮಹಿಳೆಯರ ಬಾಯಲ್ಲಿ ಪುರುಷರಿಗಿರುವಷ್ಟು ಸಂಖ್ಯೆಯ ಹಲ್ಲುಗಳಿಲ್ಲ ಎಂದು ತಿಳಿದಿದ್ದನಂತೆ!

ಹಿಂದೂ ವೈದಿಕ ಧರ್ಮದ ಪ್ರಕಾರ ಮಹಿಳೆ ಪುರುಷನಷ್ಟು ಶ್ರೇಷ್ಠಳಲ್ಲ; ಪುರುಷರಿಗಿರುವಷ್ಟು ಆಧ್ಯಾತ್ಮಿಕ ಅಧಿಕಾರಗಳಿಲ್ಲ; ಪತಿಯೆ ಪರದೈವ; ಅವಳು ಸದಾ ತಂದೆತಾಯಂದಿರ, ಗಂಡನ ಹಾಗೂ ಮಕ್ಕಳ ಅಧೀನ; ಆದ ಕಾರಣ ಆಕೆ ಸ್ವಾತಂತ್ರ್ಯಕ್ಕೆ ಅರ್ಹಳಲ್ಲ. ಆಕೆ ತಪೋವಿಘ್ನಕಾರಿ; ಮಾಯೆ. ಹಿಂದೆ, ಮೈತ್ರೇಯಿ ಗಾರ್ಗಿ ಮೊದಲಾದ ಬ್ರಹ್ಮವಾದಿನಿಯರಿದ್ದರೆಂದು ಹೇಳಲಾಗಿದ್ದರೂ, 'ಸ್ತ್ರೀ ಶೂದ್ರಾದಿಗಳಿಗೆ ವೇದಾಧ್ಯಯನದ ಅಧಿಕಾರವಿಲ್ಲ' ಎಂಬ ನೀತಿಶಾಸ್ತ್ರಕಾರರ ಮಾತು ಸಮಾಜದಲ್ಲಿ ಅವಳ ಸ್ಥಾನ–ಮಾನಗಳನ್ನು ನಿರ್ದೇಶಿಸುತ್ತದೆ. ಕ್ರೈಸ್ತಧರ್ಮದ ಪ್ರಕಾರ – ಹೆಣ್ಣು, ಗಂಡಿನ ಪತನಕ್ಕೆ ಕಾರಣಳಾದವಳು. ಇಸ್ಲಾಂ ಧರ್ಮದ ಪ್ರಕಾರ ಆಕೆ ಒಂದು ಸ್ವತ್ತು; ಶೋಷಣೆಯ ವಸ್ತು. ಬುದ್ಧ ಕೂಡಾ ಮೊದಮೊದಲು ಹೆಣ್ಣು ಸಂಘಕ್ಕೆ ಸೇರುವುದು

ಬೇಡ ಎಂದ; ಜೈನಧರ್ಮದ ಪ್ರಕಾರ ಸ್ತ್ರೀಯರು ಮೋಕ್ಷಕ್ಕೆ ಅರ್ಹರಲ್ಲ; ಹನ್ನೆರಡನೆಯ ಶತಮಾನದ ಕರ್ನಾಟಕದ ಶರಣ ಧರ್ಮ ಮಾತ್ರ 'ಮೊಲೆ ಮುಡಿ ಬಂದರೆ ಹೆಣ್ಣೆಂಬರು, ಗಡ್ಡ ಮೀಸೆ ಬಂದರೆ ಗಂಡೆಂಬರು; ನಡುವೆ ಸುಳಿವಾತ್ಮನು ಗಂಡೂ ಅಲ್ಲ ಹೆಣ್ಣೂ ಅಲ್ಲ' ಎಂದು ಆತ್ಮ ಪ್ರಾಮಾಣ್ಯದ ಮೂಲಕ ಲಿಂಗಭೇದವನ್ನು ನಿರಾಕರಿಸಿ ಒಂದು ಚಾರಿತ್ರಿಕ ವಿಕ್ರಮವನ್ನೆ ಸ್ಥಾಪಿಸಿತೆಂಬುದನ್ನು ಗಮನಿಸುವುದು ಅಗತ್ಯವಾಗಿದೆ.

ಧರ್ಮಕ್ಕೆ ಇರುವ ಸಾಮಾಜಿಕ ಜವಾಬ್ದಾರಿ ಎಂದರೆ ಅದು ಲೋಕವಾಸ್ತವ ಜೀವನದ ಬಗ್ಗೆ ಯಾವ ಬಗೆಯ ನಿಲುವನ್ನು ಪ್ರತಿಪಾದಿಸುತ್ತದೆ ಎನ್ನುವುದು. ಬೇರೆಯ ಮಾತಿನಲ್ಲಿ ಹೇಳುವುದಾದರೆ ಅದು ಹೆಚ್ಚು ಒತ್ತನ್ನು ಕೊಡುವುದು ಇಹನಿಷ್ಠ ನಿಲುವಿಗೋ ಪರನಿಷ್ಠ ನಿಲುವಿಗೋ?

ಜಗತ್ತಿನ ಎಲ್ಲ ಧರ್ಮಗಳೂ ಜೀವ–ಜಗತ್ತು–ದೇವರು ಈ ಮೂರರ ಸಂಬಂಧವನ್ನು ಕುರಿತು ಚರ್ಚಿಸುತ್ತ, ಮನುಷ್ಯನ ಗುರಿ ಆ ದೈವತ್ವದ ಸಾಕ್ಷಾತ್ಕಾರವೇ ಮತ್ತು ಅದನ್ನು ಸಾಧಿಸಲು ತನ್ನ ಈ ಲೋಕದ ಬದುಕನ್ನು ಅದಕ್ಕೆ ತಕ್ಕ ಸಾಧನೆಯ ನೆಲೆಯನ್ನಾಗಿ ಮಾಡಿಕೊಳ್ಳಬೇಕು – ಎಂದು ಹೇಳುತ್ತವೆ. ಇದರ ಜತೆಗೆ ಈ ಲೋಕದ ಬದುಕನ್ನು ಇಹ ಮತ್ತು ಪರ ಎಂಬು ವಿಭಾಗಿಸಿ ಅನೇಕ ವೇಳೆ ಪರಲೋಕದ ಅಥವಾ ಸ್ವರ್ಗದ ಆಕರ್ಷಣೆಯನ್ನು ಮುಂದೆ ಮಾಡಿ, ವಾಸ್ತವ ಜಗತ್ತಿನ ಬಗ್ಗೆ ಒಂದು ಬಗೆಯ ನಿರಾಕರಣೆಯ ಅಥವಾ ತಿರಸ್ಕಾರದ ನಿಲುವನ್ನು ಬೆಳೆಯಿಸಿವೆ. ನಮ್ಮಲ್ಲಂತೂ ಮನುಷ್ಯನ ಬದುಕೇನಿದ್ದರೂ ಪರಕ್ಕೆ ಟಿಕೇಟ್ ತೆಗೆದುಕೊಂಡು ಇಹದ ವೇಟಿಂಗ್ ರೂಮಿನಲ್ಲಿ ರೈಲಿಗೆ ಕಾಯುತ್ತ ಕೂತಂತ ಮನಃಸ್ಥಿತಿಯನ್ನು ಬಿಂಬಿಸುವಂತೆ ಭಾಸವಾಗುತ್ತದೆ. 'ಅಲ್ಲಿದೆ ನಮ್ಮ ಮನೆ ಇಲ್ಲಿ ಬಂದೆ ಸುಮ್ಮನೆ' ಎಂಬ ದಾಸರ ಉಕ್ತಿ ಈ ಮನೋಧರ್ಮದ ಸಾಕ್ಷಿಯಾಗಿದೆ. ತೀವ್ರ ವೈರಾಗ್ಯವನ್ನು ಪ್ರತಿಪಾದಿಸುತ್ತ, ಲೋಕಜೀವನದ ಬಗ್ಗೆ ಒಂದು ಬಗೆಯ ವಿಮುಖತೆಯನ್ನು ಬೆಳೆಯಿಸಿದ ಬೌದ್ಧ–ಜೈನಧರ್ಮಗಳ ನಿಲುವೂ ಹೆಚ್ಚು–ಕಡಿಮೆ ಹೀಗೇ ಇದೆ. ನಿಜವಾದ ಧರ್ಮವಾಗಲೀ ಧಾರ್ಮಿಕ ಜೀವನವಾಗಲೀ ಜೀವನಪ್ರೀತಿಯನ್ನು ಹಾಗೂ ಬದುಕನ್ನೆದುರಿಸುವ ಧೈರ್ಯವನ್ನು ವ್ಯಕ್ತಿಗಳಲ್ಲಿ ಬಿತ್ತುವುದೆ ಅದರ ಸಾಮಾಜಿಕ ಜವಾಬ್ದಾರಿಗಳಲ್ಲಿ ಮುಖ್ಯವಾದದ್ದು. ಮಹಾ ಅನುಭಾವಿ ಅಲ್ಲಮಪ್ರಭು ಹೇಳಿದ ಮಾತೊಂದು ನೆನಪಾಗುತ್ತದೆ; "ಕೊಟ್ಟ ಕುದುರೆಯನೇರಲರಿಯದೆ ಮತ್ತೊಂದ ಬಯಸುವವರು ವೀರರೂ ಅಲ್ಲ, ಧೀರರೂ ಅಲ್ಲ."

ಈ ಲೋಕಜೀವನವನ್ನು ಒಪ್ಪಿಕೊಳ್ಳಬೇಕು ಎಂದರೆ ಒಬ್ಬ ಧಾರ್ಮಿಕ ಮನುಷ್ಯ ತನ್ನ ಪಾಡಿಗೆ ತಾನು ಬದುಕುತ್ತ ಜಪತಪಾದಿಗಳಲ್ಲಿ ಮಗ್ನವಾಗುತ್ತ ತನ್ನ ಮೋಕ್ಷವನ್ನು ತಾನು ಗಳಿಸಿಕೊಳ್ಳುವುದು ಎಂದಲ್ಲ. ಆತ ಈ ಜಗತ್ತಿನ ಸಹಜೀವಿಗಳ ದುಃಖಕ್ಕೆ ಸ್ಪಂದಿಸುತ್ತ

ಅವರ ನೋವನ್ನು, ಅಜ್ಞಾನವನ್ನು ನಿವಾರಿಸುತ್ತ 'ಬಹುಜನಹಿತ'ಕ್ಕಾಗಿ ಶ್ರಮಿಸುವುದು ಆತನ ಸಾಮಾಜಿಕ ಜವಾಬ್ದಾರಿಯಾಗಿದೆ. 'ಹಸಿದ ಹೊಟ್ಟೆಗೆ ಒಂದು ತುತ್ತು ಅನ್ನವನ್ನು ನೀಡಲಾರದ, ವಿಧವೆಯ ಕಣ್ಣೀರನ್ನು ಒರೆಸಲಾಗದ ಧರ್ಮದಲ್ಲಾಗಲೀ, ದೇವರಲ್ಲಾಗಲೀ ನನಗೆ ನಂಬಿಕೆಯಿಲ್ಲ' ಎಂದು ಸ್ವಾಮಿ ವಿವೇಕಾನಂದರು ಹೇಳಿದ್ದು ಈ ಅರ್ಥದಲ್ಲಿ. ಭಗವಾನ್ ಬುದ್ಧನ ಜೀವಕಾರುಣ್ಯದ ಹಾಗೂ ಏಸುಕ್ರಿಸ್ತನು ಬೋಧಿಸಿದ ಹಾಗೂ ಬದುಕಿದ ಧರ್ಮದ ಸ್ವರೂಪ ಈ ಬಗೆಯದೇ. ಧರ್ಮ ಎಂದರೆ ಮನುಷ್ಯನ ವಾಸ್ತವ ಬದುಕನ್ನು ಸುಧಾರಿಸುತ್ತ, ಅವನೊಳಗಿನ ಪರಮಾರ್ಥದ ಹಂಬಲವನ್ನು ಜಾಗ್ರತಗೊಳಿಸುತ್ತ ಮಾನವ ಪ್ರೇಮವನ್ನು ವಿಸ್ತರಿಸುತ್ತ, ಅವನನ್ನು ಸಹಜೀವಿಗಳ ಸೇವೆಯಲ್ಲಿ ತೊಡಗಿಸುವ ಒಂದು ಸತ್ವವೇ ಸರಿ.

ಧರ್ಮ ಎಂದರೆ Man making ಎಂದು ಸ್ಥಾಮಿ ವಿವೇಕಾನಂದರು ಸೂತ್ರೀಕರಿಸುತ್ತಾರೆ. ಆದರೆ ಈ ಮನುಷ್ಯ ಇಹ–ಪರಗಳ ನಡುವೆ ಹರಿದು ಹಂಚಿಹೋಗಿದ್ದಾನೆ; ಶ್ರೇಣೀಕರಣದ ನಡುವೆ ಛಿದ್ರವಾಗಿದ್ದಾನೆ; ಅರ್ಥಹೀನವಾದ ಆಚರಣೆಗಳ ಸೀಗೇ ಮೆಳೆಯಲ್ಲಿ ಸಿಕ್ಕಿಕೊಂಡಿದ್ದಾನೆ; ಸಾಂಪ್ರದಾಯಿಕವಾದ ವಿಚಾರಗಳ ಸಂಕೋಲೆಯಲ್ಲಿ ಸೆರೆಯಾಗಿದ್ದಾನೆ; ಅವೈಚಾರಿಕತೆಯಲ್ಲಿ ಸ್ಥಗಿತಗೊಂಡಿದ್ದಾನೆ. ಈ ಮನುಷ್ಯನನ್ನೂ, ಅವನನ್ನು ಒಳಕೊಂಡ ಸಮಾಜವನ್ನೂ ವೈಚಾರಿಕವಾಗಿ ಬೆಳೆಯುವಂತೆ ಮಾಡುವುದು ಯಾವುದೇ ಧರ್ಮಕ್ಕೆ ಇರುವ ಸಾಮಾಜಿಕ ಜವಾಬ್ದಾರಿಗಳಲ್ಲಿ ಬಹುಮುಖ್ಯವಾದದ್ದು.

ಕೇವಲ ಭಜನೆ ಮಾಡುವ ಬಾಯಿಗಳನ್ನು ಪ್ರೋತ್ಸಾಹಿಸುವ ಮಠೀಯ ಪರಿಸರದಲ್ಲಿ ವಿಚಾರ ಮಾಡುವ ತಲೆಗಳನ್ನು ತಯಾರಿಸುವುದು ಸುಲಭವಾದ ಕೆಲಸವಲ್ಲ. ತಿರುಪತಿ ತಿಮ್ಮಪ್ಪನಿಗೆ ಪಚ್ಚೆಯ ಪದಕವನ್ನು ಮಾಡಿಸುವುದಾಗಲಿ, ಉಡುಪಿ ಕೃಷ್ಣನನ್ನು ಚಿನ್ನದ ರಥದಲ್ಲಿ ಕೂರಿಸಿ ಉತ್ಸವ ಮಾಡುವುದಾಗಲಿ, ಕೃಷ್ಣನಿಗೆ ವಜ್ರದ ಕವಚವನ್ನು ತೊಡಿಸಿ ರೋಮಾಂಚನಗೊಳ್ಳುವುದಾಗಲಿ, ಜಗದ್ಗುರುಗಳು ಚಿನ್ನದ ಕಿರೀಟ ಧರಿಸಿ ಅಡ್ಡಪಲ್ಲಕ್ಕಿ ಉತ್ಸವಗಳಲ್ಲಿ ಮೆರೆಯುವುದಾಗಲಿ. ಈ ದೇಶದ ಜನಸಂಖ್ಯೆಯ ಅರ್ಧಕ್ಕಿಂತ ಹೆಚ್ಚು ಜನ ಬಡತನದ ರೇಖೆಯೊಳಗೆ ಬದುಕುತ್ತಿರುವ ಸಾಮಾಜಿಕ ಪರಿಸರದಲ್ಲಿ ಅತ್ಯಂತ ಅಮಾನವೀಯವೂ ಅವೈಚಾರಿಕವೂ ಆದ ನಡವಳಿಕೆಗಳಾಗಿವೆ. ಅದಕ್ಕಾಗಿ ಒಂದು ಸಮಾಜದ ಸದಸ್ಯರು, ಪರಂಪರಾಗತವಾದ ವಿಚಾರಗಳನ್ನು ಕುರಿತು, ನಂಬಿಕೆಗಳನ್ನು ಕುರಿತು, ಜೀವವಿರೋಧಿಯಾದ ನಿಲುವುಗಳನ್ನು ಕುರಿತು, ಧರ್ಮದ ಹೆಸರಿನಲ್ಲಿ ಪುರೋಹಿತಶಾಹಿಯ ಶೋಷಣೆಗೆ ಅವಕಾಶವಾಗುವ ಸಂದರ್ಭಗಳನ್ನು ಕುರಿತು ಸ್ಪಷ್ಟವಾಗಿ ಹಾಗೂ ಧೈರ್ಯದಿಂದ ವಿಚಾರ ಮಾಡುವ ಪರಿಸರ ಮತ್ತು ವಾತಾವರಣವನ್ನು ನಿರ್ಮಿಸುವುದು ಧರ್ಮದ ಸಾಮಾಜಿಕ

ಜವಾಬ್ದಾರಿಯಾಗಿದೆ. ಭಗವಾನ್ ಬುದ್ಧ ಮತ್ತು ಬಸವ ಈ ಬಗೆಯ ಕೆಲಸವನ್ನು ಮಾಡಿದವರಲ್ಲಿ ಮುಖ್ಯವಾದವರು. ಬುದ್ಧ ಹೇಳಿದ:

'ಅವರಿವರು ಹೇಳಿದ್ದಾರೆ ಎಂಬ ಕಾರಣಕ್ಕೆ ಯಾವುದನ್ನೂ ಒಪ್ಪಬೇಡ. ಪರಂಪರಾಗತವಾಗಿ ಬಂದದ್ದೆಂಬ ಕಾರಣಕ್ಕೆ ಒಪ್ಪಬೇಡ; ಶಾಸ್ತ್ರಗಳಲ್ಲಿ ಹೇಳಿದೆ ಎಂಬ ಕಾರಣಕ್ಕೆ ಒಪ್ಪಬೇಡ; ಆಚಾರ್ಯರು ಹೇಳಿದ್ದಾರೆ ಎಂಬ ಕಾರಣಕ್ಕೆ ಒಪ್ಪಬೇಡ. ಆದರೆ ಯಾವುದು ಮೌಲಿಕವಾದದ್ದೆಂದು, ಉಪಯುಕ್ತವಾದದ್ದೆಂದು ನಿನಗೆ ತೋರುತ್ತದೊ ಅದನ್ನು ಮಾತ್ರ ಒಪ್ಪಿಕೋ.' ಹಾಗಾದರೆ ಬುದ್ಧ ಹೇಳಿದ್ದನ್ನು ಮಾತ್ರ ಒಪ್ಪಿಕೊಳ್ಳಬೇಕೆ ಎಂದು ಪ್ರಶ್ನಿಸಿದವರಿಗೆ ಹೇಳಿದ: "ನಾನು ಹೇಳಿದ್ದನ್ನು ಕೂಡ ಒಪ್ಪಬೇಕಾಗಿಲ್ಲ" ಎಂಥ ಧೈರ್ಯದ ಹಾಗೂ ವಿನಯದ ಮಾತು!

ಹೀಗೆ ಒಂದು ವೈಚಾರಿಕ ವಾತಾವರಣವನ್ನು ನಿರ್ಮಾಣ ಮಾಡಬೇಕಾದರೆ ಪ್ರತಿಯೊಂದು ಧರ್ಮವೂ ತನ್ನ ಕಾಲದ ಅಗತ್ಯಗಳಿಗೆ ತಕ್ಕಂತೆ 'ನಿರಾಕರಣ ಪ್ರಕ್ರಿಯೆ' 'ಶುದ್ಧೀಕರಣ ಪ್ರಕ್ರಿಯೆ' ಮತ್ತು 'ನವೀಕರಣ ಪ್ರಕ್ರಿಯೆ'ಗಳ ಮೂಲಕ ತನ್ನನ್ನು ತಾನು ಪುನರ್ಭವಗೊಳಿಸಿಕೊಳ್ಳುವುದು ಅಗತ್ಯವಾಗಿದೆ.

ಒಂದು ಧರ್ಮಕ್ಕೆ ಇರುವ ಸಾಮಾಜಿಕ ಜವಾಬ್ದಾರಿಗಳಲ್ಲಿ ತುಂಬ ಮುಖ್ಯವಾದದ್ದೆಂದರೆ: ತನ್ನ ಸಮಾಜದ ಸದಸ್ಯರನ್ನು ಸ್ವಧರ್ಮದ ಅಹಂಕಾರದಿಂದ ವಿಮುಕ್ತಿಗೊಳಿಸುವುದು. ಅಂದರೆ ತನ್ನ ಧರ್ಮದಷ್ಟೆ ಜಗತ್ತಿನ ಉಳಿದೆಲ್ಲ ಧರ್ಮಗಳೂ ಸತ್ಯ ಹಾಗೂ ಶ್ರೇಷ್ಠ ಎಂಬ ತಿಳಿವಳಿಕೆಯನ್ನು ರೂಢಿಸುವುದು. ತನ್ನ ಧರ್ಮವೊಂದೇ ಶ್ರೇಷ್ಠ. ಉಳಿದವು ಅಷ್ಟು ಶ್ರೇಷ್ಠವಲ್ಲ ಎಂದು ತಿಳಿದ ಸಮಾಜ ಯಾವೊತ್ತೂ ವೈಚಾರಿಕವಾಗಿ ಬೆಳೆಯಲಾರದು. ಈ ಸಂದರ್ಭದಲ್ಲಿ ಧರ್ಮವನ್ನು ಕುರಿತು ಭಗವಾನ್ ಬುದ್ಧನು ಹೇಳಿದ ಮಾತೊಂದನ್ನು ನೆನೆಯಬಹುದು. ಅವನು ಹೇಳುತ್ತಾನೆ:

ನನ್ನ ಧರ್ಮವೇ ಶ್ರೇಷ್ಠವೆಂದು ನಾನು ಹೇಳುವುದಿಲ್ಲ.
ನೀನು ಹೋಗಿ ಇತರ ಧರ್ಮಗಳವರನ್ನು ಕೇಳಿ ಬಾ
ಆಮೇಲೆ ನನ್ನನ್ನು ಕೇಳು.
ಯಾವ ಧರ್ಮ ಅತ್ಯುತ್ತಮವೆಂದು ನಿನಗೆ ತೋರುತ್ತದೋ
ಅದನ್ನು ಅನುಸರಿಸು.

ಎರಡು ಸಾವಿರದ ಐನೂರು ವರ್ಷಗಳಿಗೂ ಹಿಂದೆ ಹೇಳಿದ ಈ ಮಾತು, ಈ ದಿನ ಮತಾಂತರಗಳ ಬಗ್ಗೆ ಅನಗತ್ಯವಾದ ಗೊಂದಲಗಳು ಹುಟ್ಟುತ್ತಿರುವ ಸಂದರ್ಭದಲ್ಲಿ, ನಿಜವಾದ ಮಾರ್ಗದರ್ಶಕವಾದ ನಿಲುವನ್ನು ಮಂಡಿಸುತ್ತದೆ. ತನಗೆ ಯಾವ ಮತಧರ್ಮ ಅತ್ಯುತ್ತಮವೆಂದು ತೋರುತ್ತದೆಯೋ ಅದನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ಪ್ರತಿಯೊಬ್ಬ ವ್ಯಕ್ತಿಗೂ ಇರಬೇಕು; ತಾನು ಹುಟ್ಟಿ ಬೆಳೆದ ಮತಧರ್ಮದ

ಕಟ್ಟುಪಾಡುಗಳಲ್ಲಿ ಸ್ಥಗಿತಗೊಳ್ಳಬೇಕಾದ ಅಗತ್ಯವೇನೂ ಇಲ್ಲ. ಆದರೆ ನಿಜವಾಗಿ ವಿರೋಧಿಸಬೇಕಾದುದೆಂದರೆ, ಬಹುಬಗೆಯ ಆಸೆ–ಆಮಿಷಗಳಿಂದಲೋ ಅಥವಾ ಬಲವಂತವಾಗಿಯೋ ಜನರನ್ನು ಮಾತಾಂತರಗೊಳಿಸುವ ಪ್ರಯತ್ನವನ್ನು. ಈ ಯುಗದಲ್ಲಿ, ಎಲ್ಲ ಧರ್ಮಗಳೂ ಮೂಲತಃ ಆ ವಿಶ್ವಧರ್ಮದ ತರಂಗಗಳು ಎಂಬುದನ್ನು ತಮ್ಮ ಯೋಗ ವಿಜ್ಞಾನದ ಪ್ರಯೋಗಶಾಲೆಯಲ್ಲಿ ಸಾಕ್ಷಾತ್ಕರಿಸಿಕೊಂಡ ಶ್ರೀರಾಮಕೃಷ್ಣ ಪರಮಹಂಸರು ಸಾರಿದ ಸಾರವತ್ತಾದ ಸಂದೇಶವೇನೆಂದರೆ: 'ಮತಗಳೆಲ್ಲವೂ ಪಥಗಳು'. ಎಲ್ಲ ಮತಧರ್ಮಗಳೂ, ಆಯಾ ಧರ್ಮೀಯರ ಪರಮಾರ್ಥದ ಕಲ್ಪನೆಯ ಕಡೆಗೆ ಹಾಸಿಕೊಂಡ ಪಥಗಳಾದ ಕಾರಣದಿಂದ, ಜಗತ್ತಿನ ಎಲ್ಲ ಜನರಿಗೂ ಒಂದೇ ಪಥವಿರಬೇಕೆಂದೂ, ಇದ್ದರೆ ಚೆನ್ನಾಗಿತ್ತೆಂದೂ ಯೋಚನೆ ಮಾಡುವುದು ವ್ಯರ್ಥ. ಮಹಾತ್ಮಾ ಗಾಂಧಿ ಹೇಳುತ್ತಾರೆ: 'ಜಗತ್ತಿಗೆಲ್ಲ ಒಂದೇ ಧರ್ಮ ಇರಬೇಕೆನ್ನುವುದು ಈ ಹೊತ್ತಿನ ಅಗತ್ಯವಲ್ಲ; ಬೇಕಾದದ್ದು ಧರ್ಮಗಳ ಬಗ್ಗೆ ಪರಸ್ಪರ ಗೌರವ ಮತ್ತು ಸಹನೆ.' ಬಹುಕಾಲದಿಂದ ಅದು ಹೇಗೋ ಕಾಪಾಡಿಕೊಂಡು ಬಂದ ಕೋಮುಸಾಮರಸ್ಯದ ಆಕೃತಿಗಳು ಧಾರ್ಮಿಕ ಮೂಲಭೂತವಾದಿಗಳಿಂದ ಛಿದ್ರವಾಗುತ್ತಿರುವ ಈ ಹೊತ್ತಿನಲ್ಲಿ ಮಹಾತ್ಮಾ ಗಾಂಧಿಯವರ ಈ ಉಕ್ತಿಯನ್ನು ಕುರಿತು ಪರಿಭಾವಿಸುವ ಸಮಚಿತ್ತ ಯಾರಿಗಿದೆ?

# ಶಾಪ ವಿಮೋಚನೆಯ ಸ್ಪರ್ಶ

**–ಜಯಂತ್ ಕಾಯ್ಕಿಣಿ**

ಕೈ ಕುಲುಕು ಬೆನ್ನು ಚಪ್ಪರಿಸು. ಹಗಲು ಮೃದುವಾಗಿ ತಟ್ಟು, ತಲೆ ಸಣ್ಣಗೆ ನೇವರಿಸು, ಬೆರಳಿಂದ ಗದ್ದ ಸವರು... ಹೀಗೆ ಸಣ್ಣಸಹಜ ಮುದ್ರೆಗಳ ಮೂಲಕ ಆಪ್ತ ಭಾವನೆಗಳನ್ನು ಮಾತಿರದೆ ಹಂಚಿಕೊಳ್ಳಬಲ್ಲೆವು. ಎಲ್ಲ ಕೌಟುಂಬಿಕ, ಸ್ನೇಹಲ ಅನುಬಂಧದ ಕ್ಷಣಗಳನ್ನು. ಇಂಥ ಅರೆಬರೆ ಮಾರ್ದವಪೂರಿತ ಸ್ಪರ್ಶಗಳೆ ಮಿಂಚುಳ್ಳಿಗಳಂತೆ ಮಿನುಗಿಸುತ್ತವೆ. ಜೀವ ಎಷ್ಟು ಸೂಕ್ಷ್ಮ ಎಂದರೆ ಈ ಸ್ಪರ್ಷಗಳ ಪ್ರಾಮಾಣಿಕತೆಯನ್ನು ಕ್ಷಣಾರ್ಧದಲ್ಲಿ ಅದು ಮನಗಾಣಬಲ್ಲದು. ಸೋಗಿನ ಸ್ಪರ್ಶಗಳಿಗೆ ಬಾಡಬಲ್ಲದು. ಸಹಜ ಸ್ಪರ್ಶಗಳಿಗೆ ಹಿಗ್ಗಿ ಹೂವಾಗ ಬಲ್ಲದು.

ಬ್ರಿಟಿಷರಿಂದ ಬಳುವಳಿಯಾಗಿ ಉಳಿದಂತಿರುವ ಈ ಹಸ್ತಲಾಘವವನ್ನೆ ತಗೊಳ್ಳಿ ಇದಕ್ಕೆ ಮರಾಠಿಯಲ್ಲಿ "ಶಸ್ತಾಂದೋಲನ" ಎಂಬ ಭಯಂಕರ ಶಬ್ದವಿದೆ! ಮುಂದೆ ಚಾಚಿದ ಹಸ್ತದಲ್ಲೆ ಮನಸ್ಸಿನ ಪ್ರಕಟ ರೂಪವಿರುತ್ತದೆ. ಹಿಂಜರಿಯು ಹಸ್ತ. ತಣ್ಣಗೆ ಕೊರಡಿನಂತಾದ ಹಸ್ತ. ಬೆಚ್ಚಗಿನ ಅಭಯಹಸ್ತ... ಹೀಗೆ ಒಂದು ಕೈಕುಲುಕಿನಲ್ಲೆ ಎರಡೂ ಮನಸ್ಸುಗಳ ನೆಲೆಗಳು ಸಂವಾದಿಯಾಗುತ್ತವೆ. ಬರೇ ಉಪಚಾರದ ಕೈಕುಲುಕು ಕಿರಿಕಿರಿ ಉಂಟುಮಾಡುತ್ತದೆ. ಕೈಯನ್ನು ಬಿಡಿಸಿಕೊಳ್ಳುವುದೇ ಮಹಾ ಸಮಸ್ಯೆಯಾಗಿ ಬಿಡುತ್ತದೆ. ಗ್ರಹಣ ಬಿಡಿಸಿಕೊಳ್ಳುತ್ತಿರುವ ಸೂರ್ಯನಷ್ಟ ಹಗುರಾಗಿ ನಮ್ಮ ಹಸ್ತವನ್ನು ಮೆಲ್ಲಗೆ ಜಾರಿಸಿ, ಕೊನೆಗೆ ಇನ್ನೂ ಬಂಧಿತವಾಗಿರುವ ಬೆರಳನ್ನು ಹಗೂರ ಎಳೆದು. ತರಗೆಲೆಯಂತೆ ಕಳಚಿಕೊಂಡಾಗ ಜೀವ ಮರಳಿ ಬರುತ್ತದೆ. ಆಗಲೂ ಅವರಿಗೆಲ್ಲ ಬೇಜಾರಾಗುತ್ತೋ ಎಂದು ಆ ಕೈಯಿಂದ ತಲೆಗೂದಲು ಸರಿಪಡಿಸುವುದು. ಕರ್ಚೀಫು ತೆಗೆಯುವುದು ಇತ್ಯಾದಿ ಮಳ್ಳೆಕೆಲಸ ಮಾಡುವುದು ಇದ್ದದ್ದೇ.

ಮದುವೆಯ ರಿಸೆಪ್ಷನ್‌ನಲ್ಲಿ ನಿಂತು. ಒಂದು ಕೈಯಿಂದ ಲಕೋಟೆ ಇಸಕೊಳ್ಳುತ್ತಾ, ಇನ್ನೊಂದು ಕೈಯಿಂದ ಕುಲುಕುತ್ತ ನಿಂತ ಮದುಮಕ್ಕಳಿಗೇ ಗೊತ್ತು ಈ ಔಪಚಾರಿಕ ಒಣಹಸ್ತಲಾಘರದ ಖರೇ ನೋವು. "ಇವರು... ಇವರು..." ಎಂದು ಆ ಗಲಾಟೆಯಲ್ಲಿ ಅತಿಥಿಗಳ ಹೆಸರೇ ನೆನೆಪಾಗದೇ ನವವಧುವಿಗೆ ಪರಿಚಯ ಮಾಡುವ ಮಣಮಣ ನಾಟಕದಲ್ಲಿ ನಿರತನಾಗಿರುವ ಮದುಮಗನ ಸೂಟಿನ ಇಸ್ತ್ರಿಗೆರೆಯಷ್ಟೇ ಈ ಸ್ಪರ್ಶ ನಿರ್ಜೀವವಾಗಿರುತ್ತದೆ. ಫೋಟೋಕ್ಕೆ ಜನ ಜಾಸ್ತಿ ಆಯಿತೆಂದು ದಢಕ್ಕನೆ ನಿಮ್ಮನ್ನು ಪಾಲು ಮಾಡಿದಂತೆ ಬದಿಗೆ ಸರಿಸುವ ಫೋಟೋಗ್ರಾಫರ್‌ನ ಕೈಗೇ ಹೆಚ್ಚಿನ ಜೀವಂತಿಕೆ ಇದೆ!

ಅಜ್ಜನೊಬ್ಬ ರಸ್ತೆದಾಟಲು ಧೈರ್ಯಸಾಲದೆ ನಿಂತಾಗ, ಸುಮ್ಮನೆ ಕೈ ಹಿಡಿದು ರಸ್ತೆ ದಾಟಿಸುತ್ತೀರಲ್ಲ. ಆ ಒಂದೆರಡು ವಿಚಿತ್ರ ರಕ್ತದಾನವಾಗುತ್ತದೆ. ಅದು ಬರೇ ಕೃತಜ್ಞತೆಯಲ್ಲ. ನಿಮ್ಮ ಮುಂದಿನ ದಾರಿಗೆ ಆತ್ಮಿಕ ಇಂಧನವಾಗಬಲ್ಲದ್ದೇನೋ ಅದರಲ್ಲಿರುತ್ತದೆ. ಆಸ್ಪತ್ರೆಯಲ್ಲಿ ಮಲಗಿರುವ ಸಾಲುರೋಗಿಗಳನ್ನು ಮುಂಜಾನೆಯ ಸುತ್ತಿಗೆ ಬಂದ ಡಾಕ್ಟರು ನೋಡಿ ಹೋಗುತ್ತಾರಲ್ಲ. ತಟ್ಟಿ 'ಚೆನ್ನಾಗಿದೀರಾ, ನಾಳೆಗೇ ಮನೆಗ್ಹೋಗ್ತೀರಾ' ಎಂದು ದೇವರಂತೆ ಹೇಳುತ್ತಾರಲ್ಲ–ಅಲ್ಲೂ ಅದೇ ನಿರ್ಭಯದ ಸ್ಪರ್ಶ. ಶಾಲೆಯ ದಾರಿಯಲ್ಲಿ ಮಗುವೊಂದು ರಸ್ತೆ ಗಲಭೆಗೆ ಹೆದರಿ, ಅಪರಿಚಿತರಾಗಿದ್ದರೂ ನಿಮ್ಮ ಸನಿಹ ಸುಳಿದು ಕಿಂಚಿತ್ತೇ ಮೈತಾಗುವಂತೆ ನಿಲ್ಲುತ್ತದಲ್ಲ. ನಂತರ ಆ ಮಗುವೆಲ್ಲೋ, ನೀವೆಲ್ಲೋ ಆದರೆ ಒಂದು ಕ್ಷಣ ಅಭಯದ ಪ್ರಭೆಯನ್ನು ಚಿಮ್ಮಿಸಿದ ನಿಮ್ಮಿಬ್ಬರ ಅಯೋಜಿತ ಕಿಂಚಿತ್ ಸಂಯೋಗದಲ್ಲೇ ಇದೆ ಎಲ್ಲ.

ಆದರೆ ಎಲ್ಲವನ್ನೂ ಗಿಲೀಟುಗೊಳಿಸುವ ಮನುಷ್ಯ, ಅಪ್ಪಟ ಸಹಜ ಸ್ಪರ್ಶಗಳನ್ನೂ ವಿಕೃತಗೊಳಿಸಬಲ್ಲ. ಫ್ಲಾಶ್, ಟಿವಿ ಕ್ಯಾಮೆರಾಗಳೆದುರು ಜರುಗುವ ರಾಜಕಾರಣಿಗಳ ಭೀಭತ್ತ ಆಲಿಂಗನಗಳು, ಹಿರಿಯರೆದುರು ನಡುವನ್ನು ಕಿಂಚಿತ್ತೂ ಬಗ್ಗಿಸದಂತೆ ಮಾಡುವ ನಾಟಕೀಯ 'ಒಕ್ಕೈ' ನಮಸ್ಕಾರಗಳು, ಗ್ರೀಟಿಂಗ್ ಕಾರ್ಡುಗಳಲ್ಲಿ ಬಣ್ಣ ಬಣ್ಣದಲ್ಲಿ ಮುದ್ರಣಗೊಂಡ ಹಗ್ಸ್ ಆಂಡ್ಯ್ ಕಿಸೆಸ್‌ನಷ್ಟೆ ಕೃತ್ರಿಮವಾದ ಪಾರ್ಟಿಯ ವೈಯ್ಯಾರಗಳು, ಆಸರೆಗಾಗಿ ಅಲ್ಲಾಡುತ್ತಿರುವ ದುರ್ಬಲ ಮನದ ಎಳೆಪೋರಿಯರು ಸಿಕ್ಕರೆ ಸಾಕು 'ಹಿರೀತನದ' ನೆಪದಲ್ಲಿ ಬರಸೆಳೆದು ಅಶ್ಲೀಲವಾಗಿ ವರ್ತಿಸತೊಡಗುವ ಹಿರಿಯರು. ಉಳಿದವರಿದ್ದಾಗ ಅತ್ಯಂತ ಸಜ್ಜನ ಶಿಖಾಮಣಿಗಳಾಗಿದ್ದುಕೊಂಡು ಯಾರೂ ಇಲ್ಲದಾಗ ಸಮಯ ಸಾಧಿಸಿ ಏಕಾಕಿ ಹೆಂಗಸರನ್ನು ಸೋಕಲು ಯತ್ನಿಸುವ ಮಾಯಾಮೃಗಗಳು..... ಹೀಗೆ ವಿಕೃತ ಅತಿರೇಕಕ್ಕೆ. ತೆವಲಿಗೆ ಒಯ್ಯಲ್ಪಟ್ಟ ಸ್ಪರ್ಶ ತನ್ನೆಲ್ಲ ತರಂಗಗಳನ್ನು, ಸೂಕ್ಷ್ಮಗಳನ್ನು ಕಳೆದುಕೊಳ್ಳುತ್ತದೆ.

ತನ್ನ ಬೆಚ್ಚನೆ ಸಾನ್ನಿಧ್ಯದಿಂದಲೆ ಮಗುವಿಗೊಂದು ಅಮೃತಮಯ ಆವರಣ ಕೊಡುವ ಹೆಣ್ಣೇ ಈ ವಿಕೃತ ಸ್ಪರ್ಶಗಳ ದಾಳಿಗೆ ತುತ್ತಾಗುವುದು ಎಂಥ ವಿಪರ್ಯಾಸ! ಬಸ್ಸು, ರೈಲುಗಳಲ್ಲಿ, ದೇವಸ್ಥಾನ–ಟಾಕೀಸುಗಳಲ್ಲಿ ಕ್ಯೂಗಳಲ್ಲಿ, ಇಷ್ಟೇ ಏಕೆ, ಆಸ್ಪತ್ರೆಯ ಹೊರಗಿನ ಸಾಲು ಬೆಂಚುಗಳಲ್ಲೂ ಹೆಣ್ಣು ಈ ಸ್ಪರ್ಶಗಳಿಂದ ಬಾಚಾವು ಮಾಡಿಕೊಳ್ಳುತ್ತಲೇ ಇರಬೇಕಾಗಿದೆ. ನಿಸರ್ಗ ಹೆಣ್ಣನ್ನು ಇದಕ್ಕೂ ಸಜ್ಜುಗೊಳಿಸಿಯೇ ರೂಪಿಸಿದಂತಿದೆ. ಹೆಣ್ಣಿಗೆ ಮಾತ್ರ ಗೊತ್ತು ಸಹಸ್ರ ಕಣ್ಣಿನ ಜೊಲ್ಲು ಸುರಿಸುವ ಈ ವಿರಾಟ್ ಪಶುವಿನ ವೈಖರಿಗಳು. ಒಂದು ಕಣ್ಣನೋಟದಲ್ಲಿ. ಒಂದು ಭಂಗಿಯಲ್ಲಿ. ಒಂದು ಸೋಂಕಿನಲ್ಲಿ ಹಠಾತ್ತನೆ ಆಕೆ ಈ 'ರಕ್ಕಸಕೊಳ್ಳ'ವನ್ನು ಪತ್ತೆಹಚ್ಚಬಲ್ಲಳು. ಆಮೆಯಂತೆ ತನ್ನೆಲ್ಲ ಜೀವವನ್ನು ಒಳಗೆಳಕೊಂಡ, ಗುರಾಣಿಯಂಥ ಚಿಪ್ಪಾಗಿ

ಉಳಿದುಬಿಡಬಲ್ಲಳು. ಅಥವಾ ಮುಳ್ಳು ಹಂದಿಯಂತೆ ಅಷ್ಟೆ ಒರಟಾದ ತನ್ನ ಮುಳ್ಳುಗರಿಗೆದರಿ ನಿಲ್ಲಬಲ್ಲಳು. ಅಥವಾ ತನಗೆ ಬೇಕಾದಂತೆ, ಬೇಕಾಗುವ ತನಕ ಪುರುಷ ಮಂಗನನ್ನು ಆಡಿಸಬಲ್ಲಳು. ನಂತರ ಈ ಪಶುಗಳು ಬಾಲ ಮುದುರಿಸಿ ಸೆಲ್ಲಿಲ್ಲದ ಗೊಂಬೆಯಂತೆ ತಮ್ಮ ತಮ್ಮ ಸಾಮಾಜಿಕ ಪಾತ್ರಗಳಿಗೆ ಮರಳಿ, ಇದೇ ನಾಗರಿಕ ಪೋಷಾಕುಗಳಲ್ಲಿ ಹುಳ್ಳಗೆ ಓಡಾಡುವಾಗ ಒಳಗೊಳಗೇ ಹೇಸಿಗೆಯಿಂದ ನಗಬಲ್ಲಳು. ಇಷ್ಟೇ ಇಲ್ಲ, ಇಂಥ ಮೊಂಡು ಸ್ಪರ್ಶಗಳ ಸಂತೆಯಲ್ಲೂ ತನಗೆ ಬೇಕಾದ ಜೀವೋತ್ಕರ್ಷಕ ಸ್ಪರ್ಶಕ್ಕೆ ಅಷ್ಟೇ ತನ್ಮಯತೆಯಿಂದ ಘನತೆಯಿಂದ ಮಿಡಿಯಬಲ್ಲಳು.

ಈಗಷ್ಟೆ ನಿವೃತ್ತರಾದ ಹಿರಿಯರೊಬ್ಬರು ಹೇಳಿದರು. 'ಮೊನ್ನೆ ಯಾವುದೋ ಉಪವನದ ಬಳಿ. ಕಾರನ್ನು ಹತ್ತುವುದರಲ್ಲಿದ್ದ ನಿಟ್ಟೂರು ಶ್ರೀನಿವಾಸರಾಯರನ್ನು ನೋಡಿದೆ. ತೊಂಬತ್ತೇಳು ವರುಷದ ಆ ಸಜ್ಜನರನ್ನು ಸನಿಹದಿಂದ ನಿಂತು ಕಣ್ತುಂಬಿಕೊಳ್ಳುತ್ತಿರುವಾಗ. ಆ ಅಜ್ಜ ತಿರುಗಿ ಅಪರಿಚಿತರಾದ ನನ್ನನ್ನು ತಟ್ಟಿ ಬೆಳಕಿನ ಹೂವಿನಂತೆ ನಕ್ಕರು. ಆ ನಗು ಆ ಸ್ಪರ್ಶ ನನ್ನ ಅಂತರಂಗವನ್ನೆಲ್ಲ ಬೆಳಗಿತು. ಹೊಸ ಜನುಮ ಪಡೆದಂತಾಯಿತು."

ಕಾರ್ಯಕಾರನ, ಪರಿಚಯ, ಅಹಂಕಾರಗಳ ಭಾರವಿಲ್ಲದ ಸ್ಪರ್ಶಗಳ ಸೊಗಸೇ ಹಾಗೇ. ಅದಕ್ಕೆ ಬೇರೆ ಪುರಾವೆ, ಶಿಫಾರಸ್ಸುಗಳ ಬೇಕೇ ಆಗಿಲ್ಲ. ಬಸ್ಸಿನಲ್ಲಿ ಯಾರ್‍ಯಾರದೋ ಮಕ್ಕಳನ್ನು ತಮ್ಮ ತೊಡೆಯ ಮೇಲೆ ನಿದ್ದೆ ಹೋಗಲು ಬಿಡುವ ಅಪ್ಪಟ ಆನಂದ ಅದು. ಇಂಥ ಸ್ಪರ್ಶಗಳ ಮೂಲಕ ಸಾರ್ವತ್ರಿಕವಾದ ಚುಂಬಕಗಾಳಿಯೊಂದು ನಮ್ಮೆಲ್ಲರ ಮೂಲಕ ಹಾದುಹೋಗುತ್ತದೆ. ದೈಹಿಕತೆಯೇ ಜೀವಾಳವಾಗಿರುವ ಐಹಿಕದ ಸಂತೆಯಲ್ಲಿ ಕಲ್ಲಾಗಿಬಿಟ್ಟಿರುವ ನಮಗೆ, ಇಂಥ ಸ್ಪರ್ಶಗಳಿಂದಲೇ ಶಾಪವಿಮೋಚನೆ.

## ಓದು ಪಠ್ಯ :

# ಭಾರತ ಒಕ್ಕೂಟದಲ್ಲಿ ಧರ್ಮ ಸೌಹಾರ್ದ

**–ಮಹಾತ್ಮ ಗಾಂಧಿ**

[ಸಂದರ್ಭ: 'ಭಾರತ ವಿಭಜನೆಯ ಆನಂತರ ಗಾಂಧಿ, ದೆಹಲಿಯಲ್ಲಿ ಹಿಂದು–ಸಿಖ್–ಮುಸ್ಲಿಮ್ ಸೌಹಾರ್ದವನ್ನು ಸ್ಥಾಪಿಸಲು ಹೆಣಗುತ್ತಿದ್ದ ಸಂದರ್ಭದಲ್ಲಿ ತಾ. 12 ಸೆಪ್ಟೆಂಬರ್ 1947ರಂದು ಪ್ರಾರ್ಥನಾ ಸಭೆಯಲ್ಲಿ ಮಾಡಿದ ಭಾಷಣ ಇದು.']

ಮೊತ್ತ ಮೊದಲಿಗೆ ನಾನು ನಿಮಗೆ ಹೇಳಬೇಕಾದ್ದು, ಗಡಿನಾಡು ಪ್ರಾಂತದಿಂದ ನನಗೆ ಬಂದಿರುವ ಸುದ್ದಿಯ ಬಗ್ಗೆ. ಅದನ್ನು ಕೇಳಿ ನನಗೆ ಆಳವಾದ ನೋವುಂಟಾಗಿದೆ. ಗಡಿನಾಡು ಪ್ರಾಂತ್ಯದಲ್ಲಿ ನಾನು ಸಾಕಷ್ಟು ಸಮಯವನ್ನು ಕಳೆದಿದ್ದೇನೆ. ಬಾದಶಾ ಖಾನ್ ನನ್ನ ಜತೆಯಲ್ಲಿದ್ದರು. ಡಾ. ಖಾನ್ ಸಾಹೇಬರ ಜೊತೆಗೆ ನಾನು ವಾಸ್ತವ್ಯ ಮಾಡಿಕೊಂಡಿದ್ದೆ. ಅಲ್ಲಿ ಮುಸ್ಲಿಮ್‌ಲೀಗ್ ಸದಸ್ಯರ ಜೊತೆ ಆಪ್ತಕೂಟಗಳಲ್ಲಿ ನಾನು ಪಾಲ್ಗೊಳ್ಳುತ್ತಿದ್ದೆ. ಈಗ ಅಲ್ಲಿ ಹಿಂದುಗಳು ಮತ್ತು ಸಿಖ್ಖರು ಶಾಂತಿಯಿಂದ ಬದುಕಲಿಕ್ಕಾಗುತ್ತಿಲ್ಲವೆನ್ನುವುದು ತಿಳಿದು ನನಗೆ ಆತಂಕ–ಆಶ್ಚರ್ಯವಾಗುತ್ತಿದೆ. ಹಿಂದು ಮತ್ತು ಸಿಖ್ಖರ ಸಂಖ್ಯೆ ಅಲ್ಲಿ ಸಾಕಷ್ಟಿರುತ್ತಿತ್ತು. ಆದರೆ ಮುಸ್ಲಿಮರಿಗೆ ಹೋಲಿಸಿದರೆ ಇವರ ಸಂಖ್ಯೆ ಕಡಿಮೆಯೇ. ನಿಜವಾಗಿ, ಒಂದು ಮುಗ್ಧ ಹಸುಳೆಯು ಕೂಡಾ ಅಲ್ಲಿ ಸುರಕ್ಷಿತವಾಗಿ ಬದುಕಲು ಸಾಧ್ಯವಾಗಬೇಕು.

ನಾನು ನನ್ನೊಳಗೆ ಏನನ್ನು ಯೋಚಿಸುತ್ತಿದ್ದೇನೋ ಅದನ್ನು ನಿಮಗೂ ತಿಳಿಸಬೇಕು. ಅದೆಂದರೆ, ನಾವು ಕ್ರೋಧಗೊಳ್ಳಬಾರದು ಎನ್ನುವುದು. ನಮಗೆ ತುಂಬ ನೋವಾಗಬಹುದು. ಅದು ಸಹಜವೇ ಕಷ್ಟದಲ್ಲಿರುವ ನಮ್ಮ ಸಹೋದರರ ಬಗ್ಗೆ ನಮಗೆ ಸಹಾನುಭೂತಿ ಕಾಳಜಿಗಳು ಇರಲೇಬೇಕು. ಅಲ್ಲದೆ, 'ನಮ್ಮ ಸಹೋದರರು ಕೊಲೆಯಾಗಿದ್ದಾರೆ, ಅದಕ್ಕಾಗಿ ನಾವೂ ಯಾಕೆ ಮುಸ್ಲಿಮರನ್ನು ಕೊಲ್ಲಬಾರದು?' ಅಂತ ಅನ್ನಿಸುವುದು ಕೂಡಾ ಸಹಜವೇ ಆದರೆ ನಾನು ಮಾತ್ರ, ನನ್ನ ಸಹೋದರನನ್ನು ಕೊಂಚ ನಿಜವಾದ ಅದೇ ವ್ಯಕ್ತಿಯನ್ನು ಕೂಡಾ ಕೊಲ್ಲಲಾರೆ ಹಾಗಿರುವಾಗ ಇನ್ನಿತರ ಮುಗ್ಧ ವ್ಯಕ್ತಿಗಳನ್ನು ಕೊಲ್ಲಲು ನಾನು ತಯಾರಾಗಬೇಕೆ? ಕೆಡುಕನ್ನು ಕೆಡುಕಿನಿಂದಲೇ ಎದುರಿಸುವ ಪರಿಯಲ್ಲಿ ನನಗೆ ನಂಬಿಕೆಯಿಲ್ಲ. ದುಷ್ಟವಾಕ್ ಮತ್ತು ದುಷ್ಟ ಕ್ರಿಯೆಗಳಲ್ಲಿ ತೊಡಗಿಕೊಳ್ಳುವವನು ಪಶುವಾಗುತ್ತಾನೆ; ವಿವೇಕಸಂವೇದನೆಗಳಿಲ್ಲದವನಾಗುತ್ತಾನೆ. ನನ್ನ ಬಾಲ್ಯದ ಒಂದು ಸಂಗತಿಯನ್ನು ಹೇಳುತ್ತೇನೆ. ಆ ಕಾಲಕ್ಕೆ ನಾನು ಸುಮಾರು ಹತ್ತು ವರ್ಷದವನಾಗಿದ್ದಿರಬೇಕು. ನನ್ನ ಅಣ್ಣನು ಕಾಯಿಲೆ ಬಿದ್ದಿದ್ದ. ಅದರಿಂದ ಅವನಿಗೆ

ಬಹುಮಟ್ಟಿಗೆ, ಹುಚ್ಚು ಹಿಡಿದುಬಿಟ್ಟಿತ್ತು. ಆದರೆ ಎಲ್ಲರು ಆತನ ಬಗ್ಗೆ ಕರುಣೆ ತಾಳಿದರು. ಅವನಿಗಾಗಿ ಹಲವು ಡಾಕ್ಟರುಗಳನ್ನು ತಡಕಾಡಿದೆವು. ಜೈಲರ್‌ನನ್ನು ಹುಡುಕಲಿಲ್ಲ. ಅವನನ್ನು ನಾವು ಜೈಲಿಗೆ ಕಳಿಸಲಿಲ್ಲ. ಅವನು ಹುಚ್ಚನಾಗಿದ್ದಾನೆಂದು ಸೈನಿಕರನ್ನು ಕರೆಸಲಿಲ್ಲ. ಆಗ ನನ್ನ ತಂದೆಗೆ ಏನನ್ನು ಬೇಕಾದರೂ ಮಾಡುವ ಸಾಮರ್ಥ್ಯವಿತ್ತು. ಆದರೆ ಆತನು ಯಾತಕ್ಕೆ ಅಂತದೇನನ್ನೂ ಮಾಡಲು ಹೋಗಲಿಲ್ಲ? ಯಾತಕ್ಕೆಂದರೆ, ಏನೇ ಆದರೂ ಅವನು ತನ್ನ ಮಗ. ತನ್ನ ತಂದೆಗೆ ತನ್ನ ಸ್ವಂತ ಮಗನನ್ನೇ ಕೊಲ್ಲಲಿಕ್ಕೆ ಸಾಧ್ಯವಾಗುತ್ತಿತ್ತೇನು? ಅದು ಹೇಗೆ ಸಾಧ್ಯ? ಈ ಎಲ್ಲಾ ಜನರೂ ನನ್ನ ಮಕ್ಕಳ ಹಾಗೆ, ನನ್ನ ಸೋದರರ ಹಾಗೆ ಮುಸ್ಲಿಂರನ್ನು ನಿಮ್ಮ ಶತ್ರುಗಳು ಅಂತ ಭಾವಿಸಬೇಡಿ ಎಂದು ನಾನು ನಿಮ್ಮನ್ನು ಕೇಳಿಕೊಳ್ಳುತ್ತೇನೆ. ನನ್ನ ಆಪ್ತಮಿತ್ರರಾಗಿರುವ ಅನೇಕ ಮುಸ್ಲಿಮರನ್ನು ನಾನು ನಿಮಗೆ ತೋರಿಸಬಲ್ಲೆ. ದೇಶವು ಹಿಂದುಸ್ತಾನ–ಪಾಕಿಸ್ತಾನವೆಂದು ವಿಭಜನೆಗೊಂಡಿದೆಯೆಂದ ಮಾತ್ರಕ್ಕೆ, ಹಿಂದೆ ನಿಂತಿರುವ ಮುಸ್ಲಿಮರನ್ನು ಕೊಲೆಮಾಡುವುದು ಯೋಗ್ಯವಾದದ್ದಲ್ಲ. ಪಾಕಿಸ್ತಾನದ ಸರ್ಕಾರವು ತನ್ನ ಕರ್ತವ್ಯವನ್ನು ಮರೆತಿದೆ. ಇಂಥ ಯಕ್ಷವಲ್ಲದ ನೀತಿಗಳನ್ನು ತಡೆಯಬೇಕೆಂದು ಪಾಕಿಸ್ತಾನದ ಗೌರ್ನರ್ ಜನರಲ್ ಅಜಮ್ ಜಿನ್ನಾರಲ್ಲಿ ನಾನು ವಿನಂತಿಮಾಡಿಕೊಳ್ಳುತ್ತೇನೆ. ಪತ್ರಿಕಾವರದಿಗಳು ಸರಿಯಾಗಿದ್ದರೆ ಹಿಂದುಗಳು ಮತ್ತು ಸಿಖ್ಖರು ಅಲ್ಲಿಯೇ ಉಳಿದುಕೊಂಡಿರುವುದು ಅವರ ಸರ್ಕಾರದ ಸೇವೆಗಾಗಿ ಎಂಬುದನ್ನು ನಾನವರಿಗೆ ಹೇಳುತ್ತೇನೆ. ಈಗ ಆ ಹಿಂದುಗಳು ಮತ್ತು ಸಿಖ್ಖರು ಯಾಕೆ ಭಯಭೀತರಾಗಿದ್ದಾರೆ? ಯಾಕೆಂದರೆ, ಅವರು ಮತ್ತು ಅವರ ಹೆಂಡರು ಸಾವಿನ ಅಂಜಿಕೆಯಲ್ಲಿದ್ದಾರೆ. ತಮ್ಮ ಹೆಂಡಿರ ಮಾನಭಂಗವಾದೀತೆಂದು ಅವರು ಹೆದರಿಕೊಂಡಿದ್ದಾರೆ. ಭಯದಲ್ಲಿರುವುದರಿಂದಲೇ ಅವರು ಅಲ್ಲಿಂದ ಓಡತೊಡಗಿದ್ದು ಸರ್ಕಾರದ ಅಡಿಯಲ್ಲಿ ಯಾವುದು ಹೇಗೆ ನಡೆಯುತ್ತದೆ? ಹಾಗೆ ಬರ್ಬರರಾಗಕೂ....... ಜನರಿಗೆ ಹೇಳಲಿಚ್ಛಿಸುತ್ತೇನೆ. ಪಾಕಿಸ್ತಾನದಲ್ಲಿರುವ ಹಿಂದುಗಳು ಮತ್ತು ಸಿಖ್ಖರು ಸ್ಥಳೀಯ ಮುಸ್ಲಿಮರ ಮೇಲೆ ಸೇಡು ತೀರಿಸಿಕೊಳ್ಳುತ್ತಾರೆ ಎಂದರೆ, ಅದು ಶುದ್ಧ ಬರ್ಬರತೆಯಾಗುತ್ತದೆ. ಪಾಕಿಸ್ತಾನದಲ್ಲಿನ ಹಿಂದುಗಳು ಮತ್ತು ಸಿಖ್ಖರ ಭಯಾನಕ ಅವಸ್ಥೆಯನ್ನು ನಾನು ಕಂಡಿದ್ದೇನೆ. ನಾನು ಲಾಹೋರ್‌ನಲ್ಲಿ ವಾಸಮಾಡಿದ್ದೇನೆ. ನನಗೆ ನೋವಾಗಿಲ್ಲ ಅಂತ ತಿಳಿಯುತ್ತೀರೇನು? ನನಗಾಗಿರುವ ನೋವು ಯಾವುದೇ ಪಂಜಾಬಿ ನಾಗರಿಕನಿಗೆ ಆಗಿರುವ ನೋವಿಗಿಂತ ಕಡಿಮೆಯಾದದ್ದಲ್ಲ ಅಂತ ನಾನು ಹೇಳಬಲ್ಲೆ. ಪಂಜಾಬಿನಿಂದ ಬಂದ ಯಾವನೇ ಹಿಂದು ಅಥವಾ ಸಿಖ್ ನನ್ನ ಹತ್ತಿರ, ತಾನು ತನ್ನ ಸೋದರನನ್ನೋ, ಮಗಳನ್ನೊ, ತಂದೆಯನ್ನೋ ಕಳೆದುಕೊಂಡಿರುವುದಾಗಿ ಹೇಳಿದರೆ ಮತ್ತು ಅದರಿಂದ ತನಗೆ ನನಗಿಂತಲೂ ಹೆಚ್ಚು ತಲ್ಲಣವಾಗಿದೆಯೆಂದು ಹೇಳಿದರೆ, ಆ ಕಳೆದುಹೋದವರು

ನನ್ನ ಸಹೋದರ. ನನ್ನ ಮಗಳು, ನನ್ನ ತಂದೆಯೂ ಹೌದು ಎಂದು ನಾನು ಹೇಳುತ್ತೇನೆ; ನನ್ನ ಹೃದಯವೂ ಅಷ್ಟೇ ತಲ್ಲಣಗೊಳ್ಳುತ್ತದೆ. ನಾನೂ ಒಬ್ಬ ಮನುಷ್ಯನೇ. ನನಗೂ ಕ್ರೋಧವುಂಟಾಗುತ್ತದೆ. ಆದರೆ ಕ್ರೋಧವನ್ನು ನಾನು ನುಂಗುತ್ತೇನೆ. ಅದು ನನಗೆ ಶಕ್ತಿಯನ್ನು ಕೊಡುತ್ತದೆ. ಆ ಶಕ್ತಿಯಿಂದ ನನಗೆ ಸೇಡು ತೀರಿಸಿಕೊಳ್ಳುವುದಕ್ಕಾಗುವುದಿಲ್ಲ. ಸೇಡು ತೀರಿಸಿಕೊಳ್ಳುವುದರಿಂದ, ಅಪರಾಧ ಮಾಡಿದವರು ಆ ಗಂಭೀರ ಅಪರಾಧವನ್ನು ಒಪ್ಪಿಕೊಳ್ಳುವಂತೆ ಮತ್ತು ಪಶ್ಚಾತ್ತಾಪಗೊಳ್ಳುವ ಹಾಗೆ ಮಾಡಲಿಕ್ಕಾದೀತೆ? ಯಾರೋ ಮುಸ್ಲಿಮರು ಧರ್ಮವನ್ನು ನಾಶಗೊಳಿಸುತ್ತಾರೆಂದರೆ ನಾವು ಏನು ಮಾಡಬೇಕು? ಏನು ಮಾಡುತ್ತೇವೆ? ಮುಸ್ಲಿಮರ ಬರ್ಬರ ಕೃತ್ಯವನ್ನು ಮಾಡುತ್ತಿದ್ದರೆ, ಇಲ್ಲಿ ದೆಹಲಿಯಲ್ಲಿರುವ ಹಿಂದುಗಳು ಮತ್ತು ಸಿಖ್ಖರು ಹಾಗೂ ಪಾಕಿಸ್ತಾನದಿಂದ ಓಡಿಬಂದ ಜನಗಳು ತಾವೂ ಬರ್ಬರರಾಗಬೇಕೆ?

ಇವತ್ತು ನಾನು ಜಾಮಾ ಮಸೀದಿಗೆ ಹೋಗಿದ್ದೆ. ಆ ಭಾಗದ ನಿವಾಸಿಗಳನ್ನು ಭೇಟಿ ಮಾಡಿದೆ. ಅವರ ಹೆಂಗಸರನ್ನೂ ಭೇಟಿ ಮಾಡಿದೆ. ಅವರಲ್ಲಿ ಕೆಲವು ಹೆಂಗಸರು ನನ್ನ ಎದುರು ಅತ್ತರು; ತಮ್ಮ ಹಸುಗೂಸುಗಳನ್ನು ತಂದು ತೋರಿಸಿ ಅವುಗಳ ದುಃಸ್ಥಿತಿಗಳನ್ನು ಹೇಳಿಕೊಂಡರು. ಅವರಿಗೆ ನಾನು ಪಂಜಾಬ್ ಮತ್ತು ಗಡಿನಾಡು ಪ್ರಾಂತದ ಹಿಂದು–ಸಿಖ್ಖರ ಸಂಕಟವನ್ನು ಹೋಗಲಾಡಿಸುತ್ತದೆಯೆ? ಒಬ್ಬ ಬರ್ಬರನು ಇನ್ನೊಬ್ಬ ಬರ್ಬರನ ತಪ್ಪನ್ನು ಎತ್ತಿ ಹೇಳುವುದಾದರೂ ಹೇಗೆ? ಅದಕ್ಕಾಗಿಯೇ ನಾನು ನಿಮ್ಮೆಲ್ಲರನ್ನೂ ವಿನಂತಿಸಿಕೊಳ್ಳುತ್ತೇನೆ – ಹಿಂದುಧರ್ಮ ಸಿಖ್ ಧರ್ಮಗಳನ್ನು ಉಳಿಸಿ ಅಂತ. ಹಿಂದುಸ್ತಾನ ಪಾಕಿಸ್ತಾನಗಳನ್ನು ಉಳಿಸಿ, ಇಡೀ ದೇಶವನ್ನು ಉಳಿಸಿ ಅಂತ ಮನವಿ ಮಾಡಿಕೊಳ್ಳುತ್ತೇನೆ. ನಾವು ಕೊನೆತನಕವೂ ಒಳ್ಳೆಯತನದಲ್ಲೇ ಉಳಿದರೆ. ಪಾಕಿಸ್ತಾನದ ಮುಸ್ಲಿಮರು ಕೂಡಾ ಒಳ್ಳೆಯವರಾಗಲೇಬೇಕು. ಅದು ಜಗತ್ತಿನ ನಿಯಮ; ಯಾರೂ ಆ ನಿಯಮವನ್ನು ಬದಲಿಸಲಾರರು. ಧರ್ಮವೆನ್ನುವುದನ್ನು ಸಾಕಷ್ಟು ಅಭ್ಯಾಸ ಮಾಡಿರುವ ಮತ್ತು ಸಮಸ್ತರ ಸೇವೆನ್ನು ಮಾಡಲು ಯತ್ನಿಸಿರುವ ಈ ಮುದುಕನು ಈ ಮಾತುಗಳನ್ನು ಹೇಳುತ್ತಿದ್ದಾನೆ ಎನ್ನುವುದನ್ನು ಪರಿಗಣಿಸಿ. ನನ್ನ 78–79 ವರ್ಷಗಳಲ್ಲಿ ಸಾಕಷ್ಟು ಅನುಭವಗಳನ್ನು ಪಡೆದುಕೊಂಡಿದ್ದೇನೆ. ಇಂಡಿಯಾದ ಹೊರಗೆ ನಾನು ಇಪ್ಪತ್ತು ವರ್ಷಗಳ ಕಾಲ ಬಾಳಿಕೊಂಡಿದ್ದೆ. ನೀಗ್ರೋಗಳ ದೇಶವಾದ ದಕ್ಷಿಣ ಆಫ್ರಿಕದಲ್ಲಿ ನಾನು ನೆಲೆಸಿದ್ದೆ. ಆದರೂ ರಾಮನಾಮವನ್ನು ಬಿಟ್ಟಿರಲಿಲ್ಲ. ಸ್ವಂತದ ಅನುಭವಗಳ ಬೆಳಕಿನಲ್ಲೇ ನಾನು ಹೇಳಬಲ್ಲೆ. ಬೇರೆಯವರ ತಪ್ಪುಗಳಿಗಾಗಿ ಸೇಡು ತೀರಿಸಿಕೊಳ್ಳುವುದು ನಮ್ಮ ಕೆಲಸವಲ್ಲ. ತನಗೆ ಒಳ್ಳೆಯದನ್ನು ಮಾಡಿದವನಿಗೆ ಪ್ರತಿಯಾಗಿ ತಾನೂ ಒಳ್ಳೆಯದನ್ನು ಮಾಡುವವನು 'ಬನಿಯಾ,' ಅಷ್ಟೇ. ಆದರೆ ಅವನು

'ಸುಳ್ಳು ಬನಿಯಾ,' ನಾನು ಸ್ವತಃ 'ಬನಿಯಾ' ಎನ್ನುವುದನ್ನೂ ಹೇಳುತ್ತೇನೆ; ಆದರೆ ನಾನು 'ನಿಜವಾದ ಮಾನವೀಯ ವ್ಯಕ್ತಿಯೆಂದರೆ ಕೆಡು ಮಾಡಿದವನಿಗೆ ಪ್ರತಿಯಾಗಿ ಒಳ್ಳೆಯದನ್ನು ಮಾಡುವವನು. ನನ್ನ ಬಾಲ್ಯದಲ್ಲಿ ಇದನ್ನು ನಾನು ಕಲಿತೆ. ಇದೇ ಸರಿಯಾದದ್ದು ಅಂತ ಈಗಲೂ ನಂಬಿದ್ದೇನೆ. ನೀವೆಲ್ಲರೂ ಕೇಡಿಗೆ ಪ್ರತಿಯಾಗಿ ಒಳ್ಳೆಯದನ್ನು ನೀಡುವಂಥವರಾಗಬೇಕು ಅಂತ ನನ್ನ ಆಸೆ.

ನಾನು ಹೋದಾಗ ಜಾಮಾ ಮಸೀದಿಯಲ್ಲಿ ಜನರು ದುಃಸ್ಥಿತಿಯಲ್ಲಿ ನೆಲೆಸಿಕೊಂಡಿದ್ದರು. ಅಲ್ಲಿ ಶುಕ್ರವಾರದ ದಿನ ಅವರೆಲ್ಲರೂ ಅಷ್ಟು ದೊಡ್ಡ ಸಂಖ್ಯೆಯಲ್ಲಿ ಬಂದುಕೂಡಿಕೊಂಡದ್ದು ಏನೋ ತಮಾಷೆ ನೋಡಲಿಕ್ಕಲ್ಲ. ಕಲ್ಕತ್ತದಲ್ಲಿ ಮತ್ತು ಬಿಹಾರದಲ್ಲಿ ಮುಸ್ಲಿಮರಿಗಾಗಿ ಹಾಗೂ ನೌಖಾಲಿಯಲ್ಲಿ ಹಿಂದುಗಳಿಗಾಗಿ ನಾನು ಸ್ವಲ್ಪ ಕೆಲಸ ಮಾಡಿದ್ದೇನೆ ಅಂತ ಅವರು ಕೇಳಿಕೊಂಡಿದ್ದರು. ನಾನು ಅಲ್ಲಿಗೆ ಭೇಟಿಯಾಗಲು ಹೋದದ್ದು ಅವರಿಗೆ ಒಳ್ಳೆಯದೆಂದು ಕಂಡಿತ್ತು. ನಾನು ಸನಾತನಿ ಹಿಂದು ಮತ್ತು ಆ ಕಾರಣಕ್ಕಾಗಿಯೇ ನಾನು ಮುಸ್ಲಿಮನೂ ಸಿಖ್ಖನೂ ಪಾರ್ಸಿಯೂ ಕ್ರಿಶ್ಚಿಯನ್ನನೂ ಆಗಿದ್ದೇನೆ ಎಂದು ಕೊಂಡವನೊಬ್ಬನು ತಮಗೆ ಸಹಾಯ ಮಾಡಬಲ್ಲನೆ ಎಂಬುದನ್ನು ಅವರು ಕಂಡುಕೊಳ್ಳಲು ಬಯಸಿದ್ದರು. ಒಬ್ಬ ತಾಯಿ, ತನ್ನ ಮಗು ತೀರಿಹೋಯಿತೆಂದೂ ಮುಂದೆ ತಾನೇನು ಮಾಡಬೇಕೆಂದು ನನ್ನನ್ನು ಕೇಳಿದಳು. ನಾನು ಆಕೆಗೆ ಹೇಳಿದೆ; 'ನನ್ನ ಪ್ರೀತಿಯ ತಾಯಿ, ನಾನು ಏನು ತಾನೆ ಹೇಳಬಲ್ಲೆ? ದೇವರನ್ನು ಕುರಿತು ಯೋಚಿಸು. ಆತನು ನಿನ್ನ ಬಗ್ಗೆ ಕರುಣೆ ತೋರಿಸಿಯಾನು. ನಿನ್ನ ಮಗು ತೀರಿದರೇನಾಯಿತು? ಇಲ್ಲಿರುವ ಎಲ್ಲರೂ ತೋರಿಹೋದರೂ ಏನಾದೀತು? ನೀನೇ ಆ ಸಾವಿನ ದಾರಿಯಲ್ಲಿ ನಡೆದಿದ್ದೀಯಲ್ಲವೆ? ಚೂರಿಯಿಂದ ಸಾಯಬಹುದು. ಕಾಲದಿಂದ ಸಾಯಬಹುದು; ನೀನಾದರೂ ಶಾಶ್ವತವಾಗಿ ಬದುಕಿಕೊಂಡೇ ಇರುವುದಿಲ್ಲ, ಅಲ್ಲವೆ? ಆದ್ದರಿಂದ ದೇವರನ್ನು ನೆನೆಸಿಕೋ. ಮಗುವಿನ ಸಾವನ್ನು ಕುರಿತು ಯೋಚಿಸಿ ಅಳುತ್ತ ಕೂತರೆ ನಿನಗೆ ಏನು ಸಿಕ್ಕೀತು?'

ನಾವು ನಮ್ಮ ಸ್ವಂತ ಧರ್ಮವೇನೆಂಬುದನ್ನು ಅರಿತುಕೊಳ್ಳೋಣ. ನಮ್ಮ ಧರ್ಮದ ಬೆಳಕಿನಲ್ಲಿ ಹೇಳುವುದಾದರೆ, ಹಿಂದುಗಳು ಉನ್ಮಾದಗೊಳ್ಳಬಾರದು. ಸಿಖ್ಖರು ಹುಚ್ಚು ಕೆಲಸಗಳಿಗೆ ಕೈಹಾಕಕೂಡದು ಎಂದು ನಾನು ಜನರಿಗೆ ಹೇಳುತ್ತೇನೆ. ತಮ್ಮ ಸ್ಥಳಬಿಟ್ಟು ಬಂದಿರುವ ಮುಸ್ಲಿಮರೆಲ್ಲರನ್ನೂ ಹಿಂದಕ್ಕೆ ಕಳಿಸಿಕೊಡಿ ಅಂತ ನಾನು ಜನರನ್ನು ಕೇಳಿಕೊಳ್ಳುತ್ತೇನೆ. ಈ ಕೂಡಲೇ ಅವರನ್ನು ಹಿಂದಕ್ಕೆ ಕಳಿಸಿಕೊಡಲು ನನಗೆ ಧೈರ್ಯವಿಲ್ಲ. ಆದರೆ, ಅವರನ್ನೆಲ್ಲಾ ಹಿಂದಕ್ಕೆ ಕಳಿಸಬೇಕು ಎನ್ನುವುದನ್ನು ನಾವು ಮನಸ್ಸಿನಲ್ಲಿಟ್ಟು ಕೊಂಡಿರತಕ್ಕದ್ದು. ಈ ಓಡಿಬಂದಿರುವ ಮುಸ್ಲಿಮರು ಮರಳಿ ಹೋಗಿ ತಮ್ಮ ಸ್ಥಳವನ್ನು ಸೇರಿಕೊಳ್ಳುವ ತನಕ ನಮ್ಮ ಮನಸ್ಸಿಗೆ ಶಾಂತಿಯಿರುವುದಿಲ್ಲ. ಇಲ್ಲಿ

ಇನ್ನೊಂದು ಸಂಗತಿಯನ್ನು ಸೂಚಿಸಬೇಕಾದ್ದಿದೆ. ಈಗ ಮುಸ್ಲಿಮರು ತಮ್ಮ ಮನೆಗಳಲ್ಲಿ ಶಸ್ತ್ರಾಸ್ತ್ರಗಳನ್ನು, ಮದ್ದುಗುಂಡು–ಮಶೀನ್‌ಗನ್–ಸ್ಟೆನ್‌ಗನ್‌ಗಳನ್ನು ಇಟ್ಟುಕೊಂಡಿದ್ದಾರೆ. ಅಂತ ಜನರು ನನಗೆ ಹೇಳುತ್ತಿದ್ದಾರೆ. ಈ ಸ್ಟೆನ್‌ಗನ್‌ನ್ನು ನಾನು ನೋಡಿಯೇ ಇಲ್ಲ. ಉದಾಹರಣೆಗೆ ಉತ್ತರಪ್ರದೇಶದಲ್ಲಿ ಈ ವದಂತಿಯಿದೆ. ಆದರೆ ಅದರಿಂದ ನಾವು ಯಾಕೆ ಹೆದರಬೇಕು? ನಾನು ಮುಸ್ಲಿಮರೆಲ್ಲರಿಗೆ ಮಾತ್ರವಲ್ಲ, ದೆಹಲಿಯಲ್ಲಿರುವ ಎಲ್ಲರಿಗೂ ಹೇಳುತ್ತಿದ್ದೇನೆ. ಪಾಕಿಸ್ತಾನದಲ್ಲಿ ಮಾಡಿರುವ ಅಪರಾಧಗಳಿಗಾಗಿಇಲ್ಲಿ ಯಾರೂ ಕೊಲೆಗೊಳ್ಳಬಾರದು ಎಂದು ಪ್ರತಿಯೊಬ್ಬರೂ ದೇವರನ್ನು ಸಾಕ್ಷಿಯಾಗಿಟ್ಟುಕೊಂಡು ಪ್ರಮಾಣ ಘೋಷಿಸಬೇಕು, ನಾವು ನಿಮ್ಮ ಸ್ನೇಹಿತರು; ನಾವೆಲ್ಲರೂ ಭಾರತಕ್ಕೆ ಸೇರಿದವರು ಮತ್ತು ಯಾವತ್ಕಾಲವೂ ಭಾರತಕ್ಕೆ ಸೇರಿಕೊಂಡೇ ಇರುತ್ತೇವೆ– ಎನ್ನಬೇಕು. ದೆಹಲಿಯೇನು ಸಾಮಾನ್ಯವಾದ ಚಿಕ್ಕ ಪ್ರದೇಶವಲ್ಲ. ಇದು ಇಡೀ ರಾಜ್ಯದ ರಾಜಧಾನಿ. ಇಲ್ಲಿ ಭವ್ಯವಾಗಿರುವ ಜಾಮಾ ಮಸೀದಿಯಿದೆ. ಕೋಟೆಯೂ ಇದೆ. ಇವುಗಳನ್ನು ನೀವು ಕಟ್ಟಲಿಲ್ಲ. ಇದನ್ನು ಕಟ್ಟಿದವರು ನಮ್ಮನ್ನು ಆಳಿದ ಮುಘಲರು. ಅವರು ಭಾರತದ ಭಾಗವಹಿಸಿದ್ದರು. ಇವತ್ತು, ಇಲ್ಲಿನ ಮುಸ್ಲಿಮರಿಗೆ ಇಲ್ಲಿಂದ ಬಿಟ್ಟುಹೋಗಲು ಹೇಳುತ್ತೇವಾದರೆ, ಈ ಜಾಮಾ ಮಸೀದಿಯನ್ನು ನೀವೇ ವಶಪಡಿಸಿಕೊಳ್ಳುವಿರಾ? ಅದು ನಿಮ್ಮ ಇರಾದೆಯಾಗಿದ್ದರೆ, ಅದರಿಂದ ಮುಂದೆ ಏನು ಪರಿಣಾಮಗಳಾದಾವೆಂದು ನಿಮಗೆ ತಿಳಿದಿದೆಯೇನು? ಆ ಬಗ್ಗೆ ಸ್ವಲ್ಪ ಯೋಚಿಸಿ. ನಾವು ಹೋಗಿ ಜಾಮಾ ಮಸೀದಿಯಲ್ಲಿ ನೆಲೆಸುತ್ತೇವೆಯೇ? ಅಂಥ ಸೂಚನೆಯನ್ನು ನಾನು ಒಪ್ಪಿಕೊಳ್ಳಲಾರೆ. ಮುಸ್ಲಿಮರಿಗೆ ಆ ಸ್ಥಳಕ್ಕೆ ಭೇಟಿ ಕೊಡಲು ಸಂಪೂರ್ಣ ಅಧಿಕಾರವಿರತಕ್ಕದ್ದು. ಅದು ಅವರಿಗೆ ಸೇರಿರುವಂಥದು. ಆ ಮಸೀದಿಯ ಬಗ್ಗೆ ನಮಗೂ ಹೆಮ್ಮೆಯಿದೆ. ಅದು ಮಹತ್ತರ ಕಲಾತ್ಮಕ ಸೌಂದರ್ಯದಿಂದ ಸೊಗಸುತ್ತಿದೆ. ಅದನ್ನು ನಾವು ಸವರಿ ನೆಲಸಮ ಮಾಡುತ್ತೇವೆಯೆ? ಯಾವತ್ತೂ ಕೂಡ ಹಾಗೆ ಮಾಡಲು ಸಾಧ್ಯವಿಲ್ಲ.

ಇಲ್ಲಿನ ಮುಸ್ಲಿಮರು, ತಾವು ಭಾರತಕ್ಕೆ ಸೇರಿದವರೆಂದೂ ಭಾರತ ಒಕ್ಕೂಟಕ್ಕೆ ವಿಧೇಯರಾಗಿರುವುದಾಗಿಯೂ ಹೃದಯ ತೆರೆದು ಘೋಷಿಸಬೇಕು. ಹಾಗೆಂದು ಅವರಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ. ಅವರು ದೇವರಿಗೆ ಸತ್ಯವಾಗಿ ನಡೆದುಕೊಳ್ಳುವುದಿದ್ದರೆ ಹಾಗೂ ಭಾರತ ಒಕ್ಕೂಟದಲ್ಲೇ ಬದುಕುಲು ಅಪೇಕ್ಷಿಸಿದರೆ. ಅವರು ಹಿಂದುಗಳಿಗೆ ಶತ್ರುಗಳಾಗಿ ಬಾಳಲಿಕ್ಕೆ ಬರುವುದೇ ಇಲ್ಲ. ಹಿಂದುಗಳಿಗೆ ಶತ್ರುಗಳಾಗಿರುವ ಪಾಕಿಸ್ತಾನದ ಮುಸ್ಲಿಮರಿಗೆ ಇಲ್ಲಿನ ಮುಸ್ಲಿಮರು. 'ಹಾಗೆ ಹುಚ್ಚರಾಗಬೇಡಿ' ಎಂದು ಹೇಳಬೇಕು; ಅದು ನನ್ನ ಅಪೇಕ್ಷೆ. 'ನೀವು ಅಂಥ ಹುಚ್ಚುತನದಲ್ಲಿ ಮುಳುಗಿಕೊಂಡರೆ ನಾವು ನಿಮ್ಮ ಜೊತೆ ಸಹಕರಿಸಲಾರೆವು; ನಾವು

ಭಾರತ ಒಕ್ಕೂಟದಲ್ಲಿ ವಿಶ್ವಾಸ ವಿಧೇಯತೆಗಳುಳ್ಳವರು; ತ್ರಿವರ್ಣಧ್ವಜಕ್ಕೆ ವಂದಿಸುವವರು; ಇಲ್ಲಿನ ಸರ್ಕಾರದ ಆಜ್ಞೆಗಳನ್ನು ನಾವು ಪಾಲಿಸುವರು' ಅಂತ ಇವರು ಹೇಳಬೇಕು. ಈ ಮುಸ್ಲಿಮರು ಉಳಿದ ಮುಸ್ಲಿಮರಿಗೆ, ಅವರಲ್ಲಿರುವ ಎಲ್ಲಾ ಶಸ್ತ್ರಾಸ್ತ್ರಗಳನ್ನಿಟ್ಟುಕೊಂಡದ್ದರ ಬಗ್ಗೆ, ಅಂಥವರನ್ನು ಶಿಕ್ಷಿಸದೆ ಕ್ಷಮಿಸಬೇಕಾದ್ದು ಸರ್ಕಾರದ ಕರ್ತವ್ಯ. ನಾನು ಕಲ್ಕತ್ತದಲ್ಲಿ ಮಾಡಿದ್ದು ಇನ್ನೇನನ್ನಲ್ಲ. ಇದನ್ನೇ. ಅಲ್ಲಿ ಜನರು ಶಸ್ತ್ರಾಸ್ತ್ರಗಳ ದೊಡ್ಡ ರಾಶಿಯನ್ನೇ ತಂದು ನನಗೆ ಒಪ್ಪಿಸಿದರು. ಅಂಥವರಲ್ಲಿ ಬಹಳಮಂದಿ ಹಿಂದುಗಳೇ. ಇಲ್ಲಿ, ಮುಸ್ಲಿಮರು ಶಸ್ತ್ರಾಸ್ತ್ರಗಳನ್ನಿಟ್ಟುಕೊಂಡಿದ್ದರೆ ಹಿಂದುಗಳು ಏನನ್ನೂ ಇಟ್ಟುಕೊಂಡಿಲ್ಲವೆ? ಹಿಂದುಗಳು ಯಾವುದೇ ಬಗೆಯ ಶಸ್ತ್ರಾಸ್ತ್ರಗಳನ್ನೂ ಇಟ್ಟುಕೊಳ್ಳಕೂಡದು ಅಂತ ನಾನು ಹೇಳುತ್ತಿದ್ದೇನೆ. ಶಸ್ತ್ರಾಸ್ತ್ರವಿಟ್ಟುಕೊಳ್ಳುವುದಿದ್ದರೆ ಅದಕ್ಕೆ ಅವರು ಬೇಕಾದ ಲೈಸನ್ಸ್‌ನ್ನು ಪಡೆದುಕೊಂಡಿರಬೇಕು. ಪಂಜಾಬಿನಲ್ಲಿ ಪ್ರತಿಯೊಬ್ಬರಿಗೂ ಅಸ್ತ್ರಗಳನ್ನಿಟ್ಟುಕೊಳ್ಳಲು ಪರವಾನಿಗೆ ಕೊಡಲಾಗಿದೆ ಅಂತ ಹೇಳುತ್ತಾರೆ. ಅದರಿಂದ ಪಂಜಾಬಿಗೆ ಯಾವ ಒಳ್ಳೆಯದೂ ಆಗುವುದಿಲ್ಲ. ಪ್ರತಿಯೊಬ್ಬರೂ ಅಸ್ತ್ರವನ್ನಿಟ್ಟುಕೊಂಡಿದ್ದರೆ, ಜನರು ತಮ್ಮಲ್ಲೇ ಹೊಡೆದಾಡಿಕೊಳ್ಳುತ್ತಾರೆ; ಒಬ್ಬರನ್ನೊಬ್ಬರು ಕೊಂದುಕೊಳ್ಳುತ್ತ ಎಲ್ಲರೂ ಸಾಯುತ್ತಾರೆ. ಸರ್ಕಾರಕ್ಕೆ ಶಸ್ತ್ರಾಸ್ತ್ರಗಳು ಬೇಕು; ಸಾಮಾನ್ಯ ನಾಗರಿಕರಿಗೆ ಅದು ಯಾತಕ್ಕೆ? ನಗರವಾಸಿಗಳು ಯಾರೂ ಶಸ್ತ್ರಾಸ್ತ್ರಗಳನ್ನಿಟ್ಟುಕೊಳ್ಳುವ ಅಗತ್ಯವಿಲ್ಲ. ಮುಸ್ಲಿಮರು ತಮ್ಮಲ್ಲಿಟ್ಟುಕೊಂಡಿರುವ ಶಸ್ತ್ರಾಸ್ತ್ರಗಳನ್ನು ಸರ್ಕಾರಕ್ಕೆ ಒಪ್ಪಿಸಿಕೊಡಬೇಕು ಅಂತ ನನ್ನ ಅಪೇಕ್ಷೆ. ಹಿಂದುಗಳು ಕೂಡಾ ತಮ್ಮಲ್ಲಿರುವಂಥವನ್ನು ಹಾಗೆ ಒಪ್ಪಿಸತಕ್ಕದ್ದು. ಪರಸ್ಪರ ಹೆದರಿಕೆಯೆನ್ನುವುದು ಇರಕೂಡದು. ನಾವು ಇತರರಿಗೆ ಹೇಳಬೇಕು, 'ಹೊಗೆ ಎಲ್ಲಿ ಏನೇ ಆದರೂ ಇಲ್ಲಿ ದೆಹಲಿಯಲ್ಲಿ ನಾವು ಸಹೋದರರ ಹಾಗೆ ಬಾಳುತ್ತೇವೆ' ಅಂತ. ಕಲ್ಕತ್ತದಲ್ಲಿ ಇಂಥದು ನಡೆಯಿತು ಮತ್ತು ಅಲ್ಲಿ ಈಗ ಮುಸ್ಲಿಮರು ಸಹೋದರರು ಹಾಗೆ ಬಾಳತೊಡಗಿದ್ದಾರೆ. ಬಿಹಾರದಲ್ಲಿನ ಹಿಂದುಗಳು ಇದೇ ಮಾದರಿಯನ್ನು ಅನುಸರಿಸಿದ್ದಾರೆ. ದೆಹಲಿಯಲ್ಲಿ ನೀವು ಅಂಥದೇ ಸನ್ನಿವೇಶವನ್ನು ನಿರ್ಮಾಣ ಮಾಡಬೇಕು. ಆಗ ನಾನು ತತ್‌ಕ್ಷಣವೇ ಪಂಜಾಬಿಗೆ ಹೋಗಿ. ಅಲ್ಲಿನ ಜನರಿಗೆ ಹೇಳಲಿಕ್ಕಾದೀತು– 'ದೆಹಲಿಯ ಮುಸ್ಲಿಮರು ನೀತಿಯಿಂದ ಬಾಳುತ್ತಿದಾರೆ, ನೋಡಿ' ಅಂತ. ಇದಕ್ಕಾಗಿ ನಾನು ಅವರಿಂದ ಪ್ರತಿಫಲವನ್ನು ಕೇಳಬಹುದು. ಪೂರ್ವ ಪಂಜಾಬಿಗೂ ನಾನು ಹೋಗಬಹುದು. ನಾನು ಎಲ್ಲ ಧರ್ಮಗಳಿಗೂ ಕೂಡಿದವನಾಗಿರುವುದರಿಂದ, ಎಲ್ಲರಿಗೂ ಹೋಗಿ ಹೇಳುವ ಅಧಿಕಾರವಿದೆ. 'ಇಂಥ ಹುಚ್ಚಾಟಕ್ಕೆ ಅವಕಾಶ ಕೊಡಬೇಡಿ' ಅಂತ.

ಮುಸ್ಲಿಮರು ಪಾಕಿಸ್ತಾನವನ್ನು ಅಪೇಕ್ಷಿಸಿದರು; ಅದು ಅವರಿಗೆ ಸಿಕ್ಕಿದೆ. ಈಗ

ಅವರು ಯಾಕೆ ಹೊಡೆದಾಡುತ್ತಾರೆ? ಅವರು ಯಾರ ಜೊತೆ ಹೊಡೆದಾಡುತ್ತಿದ್ದಾರೆ? ಪಾಕಿಸ್ತಾನವನ್ನು ಪಡೆದುಕೊಂಡಿರುವುದರಿಂದ, ಈಗ ಅವರು ಇಡೀ ಭಾರತವನ್ನು ಕೂಡಾ ಅಪೇಕ್ಷಿಸುತ್ತಾರೆಯೆ? ಅದು ಯಾವತ್ತೂ ಸಾಧ್ಯವಾಗುವ ಮಾತಲ್ಲ. ಯಾಕೆ ಅವರು ದುರ್ಬಲ ಹಿಂದುಗಳನ್ನು ಸಿಖ್ಖರನ್ನೂ ಕೊಲ್ಲುತ್ತಿದ್ದಾರೆ? ಈ ಎಲ್ಲ ಸಂಗತಿಗಳನ್ನು ನಾನು ಅವರಿಗೆ ಹೇಳಬೇಕಾಗಿದೆ–

ನಿಮಗೆ ನಮ್ಮ ಇಡೀ ಸರ್ಕಾರವೇ ಇದೆ ಎರಡೂ ಸರ್ಕಾರಗಳು ಒಂದು ಒಪ್ಪಂದಕ್ಕೆ ಬರಲಿ–ಎರಡೂ ದೇಶಗಳಲ್ಲಿ ಆಯಾ ಸರ್ಕಾರಗಳು ಅಲ್ಪಸಂಖ್ಯಾತರನ್ನು ರಕ್ಷಿಸುತ್ತಿದ್ದೇವೆ ಎಂದು ಹೇಳಿಕೊಳ್ಳಲು ಮತ್ತು ಯಾವುವು. ಒಂದು ಮುಸ್ಲಿಮ್ ಹಸುಳೆಯನ್ನೂ ಯಾರೇ ಹೇಗೆ ಬಂದೀತು? ಯಾವನಾದರೂ ಮುಸ್ಲಿಮನು ತನ್ನ ಮನೆಯಲ್ಲಿ ಮಿಶಿನ್‌ಗನ್‌ನ್ನು ಅಡಗಿಸಿಟ್ಟುಕೊಂಡಿದ್ದರೆ ನಾವು ಶಿಕ್ಷಿಸಬಹುದು. ಆದರೆ, ದೇಶಕ್ಕೆ ವಿಧೇಯರಾಗಿರುವ ಯಾರೂ ಮುಟ್ಟಲಿಕ್ಕೆ ಕೂಡದು. ನೀವು ಅಂಥ ಪರಿಸ್ಥಿತಿಯನ್ನು ಆಗ. ಜವಾಹರಲಾಲ್ ಮತ್ತು ಸರ್ದಾರ್ ಪಟೇಲರು–ಕೆಲವು ದಿನಗಳ ಕಾಲ ತನ್ನ ವಿವೇಕವನ್ನು ಕಳೆದುಕೊಂಡಿತ್ತು. ಆದರೆ ತನ್ನ ವಿವೇಕವನ್ನು ಮರಳಿಸಿಕೊಂಡಿದೆ' ಅಂತ ಹೇಳಿಕೊಳ್ಳಲಿಕ್ಕೆ ನನ್ನ ಮುಸ್ಲಿಮ್ ಸ್ನೇಹಿತರು ಕ್ರಮವಾದ ಒಂದು ಹೇಳಿಕೆಯನ್ನು ಅಂತ ಸೂಚಿಸುತ್ತೇನೆ. ಅವರು ತಮ್ಮ ಹೃದಯವನ್ನು ಪರಿಪೂರ್ಣವಾಗಿ ತೊಳೆದು ಶುಚಿಗೊಳಿಸಿಕೊಳ್ಳಬೇಕು. ಸಿಖ್ಖರು ಕೆಲವು ನಿಂತಿದ್ದಾರೆ. ಹಿಂದುಗಳೂ ಹೇಳಿಕೆಗಳನ್ನು ಪ್ರಕಟಿಸಿದ್ದಾರೆ. ನಮ್ಮ ಮನಸ್ಸು ಮತ್ತು ಹೃದಯಗಳು ಶುಚಿಯಾದ ಪಕ್ಷದಲ್ಲಿ ನಾವು ಸೌಹಾರ್ದದಿಂದ ಮಾಡಿ ಬಾಳಬಹುದು. ಏನೇ ಆಗಲಿ, ಆ ದೆಹಲಿಯ ಇಷ್ಟೆಲ್ಲಾ ವ್ಯಾಪಾರ ವ್ಯವಹಾರಗಳೂ, ಇಂಥ ಆಶ್ಚರ್ಯಕಾರಕ ಕಟ್ಟಡಗಳು, ಇಲ್ಲಿನ ಈ ಪರಿಸ್ಥಿತಿ ಮುಂತಾದವು ಹಿಂದು ಮುಸ್ಲಿಮರೆಲ್ಲರಿಗೂ ಸೇರಿದಂಥವು, ಯಾರೊಬ್ಬರದ್ದಲ್ಲ.

# ಘಟಕ – 3

# ಆಶಯ – ಶ್ರೀಸಾಮಾನ್ಯನ ಬದುಕು

ನೇಗಿಲ್ ಲೇಖನಿ ತಕ್ಕಡಿ ಕತ್ತಿ
ನಮಗೆಲ್ಲಂ ಸಮರಸ ಸಂಪತ್ತಿ
'ಶ್ರೀಸಾಮಾನ್ಯ'ರೊ ನಾವು
ಓ ಬನ್ನಿಂ
ಸಾಮಾನ್ಯದ ಪೂಜೆಗೆ ದೀಕ್ಷೆಯ ಕೊಳ್ಳಿಂ

**–ಕುವೆಂಪು**

# ಮೊಸರಿನ ಮಂಗಮ್ಮ

**–ಮಾಸ್ತಿ ವೆಂಕಟೇಶ ಅಯ್ಯಂಗಾರ್**

ಮಂಗಮ್ಮ ನಮಗೆ ಬಹು ವರ್ಷದಿಂದ ವರ್ತನೆಯಾಗಿ ಮೊಸರು ತಂದುಕೊಡುತ್ತಾಳೆ. ಈ ವರ್ತನೆ ಬೆಂಗಳೂರಿನ ತರಹ. ಬೇರೆ ಊರುಗಳಲ್ಲಿ ವರ್ತನೆ ಎಂದರೆ ದಿನವೂ ತಪ್ಪದೆ ಬಂದು ಮೊಸರನ್ನು ಕೊಟ್ಟು ತಿಂಗಳ ಕೊನೆಗೆ ದುಡ್ಡು ತೆಗೆದುಕೊಳ್ಳುವುದಕ್ಕೆ ಹೆಸರು. ಬೆಂಗಳೂರಿನಲ್ಲಿ ಸುಮಾರು ಇಂತಹ ವರ್ತನೆ ಇಲ್ಲ ಅಂತ ಕಾಣುತ್ತದೆ. ಮಂಗಮ್ಮ ಸಾಮಾನ್ಯವಾಗಿ ನಮ್ಮ ಕೇರಿಯ ಕಡೆ ಬಂದಾಗ ನಮ್ಮ ಮನೆಗೂ ಬರುವುದು. 'ಮೊಸರು ತಕ್ಕೋತೀರಾ ಅವ್ವಾ ಒಳ್ಳೇ ಮೊಸರು ತಂದಿದ್ದೀನಿ' ಅಂತ ಹೇಳುವುದು. ನಮಗೆ ಬೇಕಾಗಿದ್ದರೆ ನಾವು ತೆಗೆದುಕೊಳ್ಳುವುದು. ಆ ಹೊತ್ತಿನ ವ್ಯಾಪಾರ ಹೇಗಿದೆಯೋ ಹಾಗೆ ಅವಳಿಗೆ ಆಗಲೇ ದುಡ್ಡು ಕೊಟ್ಟುಬಿಡುವುದು ಅಥವಾ ಮಾರನೆ ದಿವಸ ಕೊಡುವುದು. ಇದು ನಮ್ಮ ಅವಳ ವರ್ತನೆಯ ರೀತಿ. ಅವಳ ಊರು ಆವಲೂರ ಪಕ್ಕದಲ್ಲಿ ಯಾವುದೋ ಒಂದು ಹಳ್ಳಿ. ವೆಂಕಟಾಪುರವೋ ಎಂಥದೋ ಹೆಸರಿನ ಗ್ರಾಮ. ಬರುತ್ತಾ ನಮ್ಮ ಮನೆ ಕಡೇನೇ ಬರಬೇಕು. ಹೋಗುತ್ತಾ ನಮ್ಮ ಮನೆ ಕಡೇನೆ ಹೋಗಬೇಕು. ನಾನು ಸ್ವಲ್ಪ ಒಳ್ಳೆ ಮಾತನಾಡುತ್ತೇನೆ ಅಂತ ಮಂಗಮ್ಮ ಒಂದೊಂದು ದಿನ, ಹಳ್ಳಿಯಿಂದ ಬಂದ ಹಾಗೆ ಒಂದು ಸಲ, ಮೊಸರೆಲ್ಲಾ ಮಾರಿ ಆದ ಮೇಲೆ ಹೋಗುತ್ತಾ ಒಂದು ಸಲ, ಬುರುವುದುಂಟು. ಬಂದು ನಮ್ಮ ಅಂಗಳದಲ್ಲಿ ಸ್ವಲ್ಪ ಹೊತ್ತು ಕುಳಿತಿದ್ದು ನಮ್ಮೆನ್ನೆಲ್ಲ ಸ್ವಲ್ಪ ಮಾತನಾಡಿಸಿ ಎಲೇನೋ ಅಡಿಕೇನೋ ಬಾಯಲ್ಲಿ ಹಾಕಿಕೊಂಡು ಬೇಕಾದರೆ ಎಲೇನೋ ಅಡಿಕೇನೋ ಕೇಳಿ ತಕ್ಕೊಂಡು, ಆಮೇಲೆ ಊರಿಗೆ ಹೋಗುತ್ತಾಳೆ. ಇಂಥ ಸಂದರ್ಭದಲ್ಲಿ ನನಗೆ ಸ್ವಲ್ಪ ಬಿಡುವಾಗಿದ್ದರೆ ಅವಳು

ತನ್ನ ಕಷ್ಟಸುಖವನ್ನೆಲ್ಲ ಹೇಳುತ್ತಾಳೆ; ನನ್ನನ್ನೂ ಏನಾದರೂ ಹೇಳು ಅಂತ ಕೇಳುತ್ತಾಳೆ ನನಗೆ ಕಷ್ಟ ಏನಿದೆ? ಸದ್ಯ ದೇವರು ಎಲ್ಲಾ ಚೆನ್ನಾಗಿ ಇಟ್ಟಿದ್ದಾನೆ. ಏನೋ ಮನೇ ಮಾತು. ಬೆಕ್ಕು ಬಂದು ಹಾಲು ಕುಡೀತು ಅಂತಲೋ. ಇಲಿ ಬಂದು ಕುಂಬಳಕಾಯಿ ತಿಂದಿತು ಅಂತಲೋ. ಏನಾದರೂ ಒಂದು ಮಾತು ನಾನು ಹೇಳಿದರೆ, 'ಅಯ್ಯೋ ಈ ಪರಪಂಚವೇ ಹೀಗೆ.' ಅಂತ ಅವಳ ಅನುಭವದ ತತ್ವವನ್ನು ಹೇಳಿ. ಪ್ರಪಂಚಾನ ಸರಿಯಾಗಿ ನಡೆಸಿಕೊಳ್ಳುವುದು ಹೇಗೆ ಅಂತ ಹೇಳಿಕೊಡುತ್ತಾಳೆ. ಒಟ್ಟಿನಲ್ಲಿ ಮಂಗಮ್ಮ ನನಗೆ ಬಹಳ ಬೇಕಾದವಳು; ನನಗೂ ಅವಳಿಗೂ ಬಹಳ ಸಲಿಗೆ.

ಈಗ ಸುಮಾರು ಒಂದು ತಿಂಗಳ ಹಿಂದೆ ಮಂಗಮ್ಮ ಬೆಳಗಾಗ "ಮೊಸರು ತಕ್ಕೋಳ್ಳುತೀರಾ ಅಮ್ಮಯ್ಯ". ಅಂತ ಬಂದಾಗ ನಾನು ಎಲ್ಲೋ ಒಳಗಿದ್ದೆ ನಮ್ಮ ಹುಡುಗ, "ಊ, ತಕೋತಾರ," ಅಂತ ಅವಳಿಗೆ ಹೇಳಿದ: ಹೋಗಿ ಹತ್ತಿರ ನಿಂತುಕೊಂಡು, "ಕೊಡು ಮೊಸರು." ಅಂತ ಕೈ ಹಿಡಿದ ಮಂಗಮ್ಮ ಗಡಿಗೆಯಿಂದ ಒಳ್ಳೇ ಗರಣೆ ಅಷ್ಟು ತೆಗೆದು ಅವನ ಕೈಗೆ ಹಾಕಿದಳು". "ಜಾಗ್ರತೆ ಬರಹೇಳು ಅಮ್ಮನ್ನ ನಾನು ಹೋಗಬೇಕು," ಅಂತ ಹೇಳಿದಳು. ಅಷ್ಟು ಹೊತ್ತಿಗೆ ನಾನು ಬಂದೆ. ಮಂಗಮ್ಮ. "ಅವ್ವಾ ಬಂಗಾರದಂತ ಮಗನ್ನ ಹೆತ್ತಿಕೊಂಡಿದೀಯಾ ನಿನ್ನ ಗುಣ ಹೆಂಗೋ ಆ ಮೊಗಾನೂ ಹಂಗೇ ಐತೆ. ಆದರೆ ಇದೆಲ್ಲಾ ಏನವ್ವ? ಹುಡುಗ ಬೆಳೆಯೋ ತಂಕಾನೆ. ಬೆಳೆದ ಮೇಲೆ ಯಾವಳೋ ಬರ್ತಾಳೆ. ಈಗ ಅಮ್ಮ ಅಮ್ಮ ಅಂತ ಇರೋ ಮಗ ಆಗ ಅಮ್ಮನ್ನ ನೀನು ಇದ್ದೀಯಾ ಸತ್ಯಾ ಅಂತ ಕೇಳೋಲ್ಲ." ಅಂದಳು. ನಾನು "ಯಾಕೆ ಮಂಗಮ್ಮ, ಏನಾಯಿತು? ಮಗ ನೀ ಹೇಳಿದ ಮಾತು ಕೇಳಲಿಲ್ಲವೇ?" ಎಂದೆ. "ಸರಿ ಬಿಡು ನನ್ನ ತಾಯಿ, ಕೈ ಹಿಡಿದ ಗಂಡನೇ ನನ್ನ ಮಾತು ಕೇಳಲಿಲ್ಲ. ಇನ್ನು ಮಗ ಏನು ಕೇಳಿಯಾನು?" "ಗಂಡ ನಿನ್ನ ಮಾತು ಕೇಳಲಿಲ್ಲವೇ ಮಂಗಮ್ಮ" "ಅಯ್ಯೋ! ನನ್ನ ತಾಯಿ! ನಾನು ಒಳ್ಳೇ ಶಾಲೆ ಉಡಲಿಲ್ಲ. ಇನ್ಯಾವಳೋ ಉಟ್ಟುಕೊಂಡ್ಲು ಶಾಲೆಗೆ ಬೆರಗಾಗಿ ಹೋದ ಅವಳ ತಾವ. ಏನೋ ಹೆಂಗಾದರೂ ಇರ್ಲಿ. ನನ್ನ ಮನೆ ನನ್ನ ಹೆಂಡ್ರು ಅಂತ ಗಂಡಸಿರೋದೇ ಚೆಂದ ಅಂತ ನಾನು ಸುಮ್ಗಿದ್ದೆ. ಆದರೇನವ್ವ ಅಮೃತ ಮಾರಿದಿನಿ; ಗಂಡನ್ನೀಗಿಕೊಂಡಿನಿ. ಏನೋ ನನ್ನ ಪ್ರಾಪ್ತಿ ಆಸೇ ಇತ್ತು ಅವ್ವ ನೀನು ಮಾತ್ರ ನೋಡು. ಗಂಡ ಮನೆಗೆ ಬರೋಹೊತ್ತಿಗೆ ಒಳ್ಳೆ ಶಾಲೆ ಉಟ್ಟುಕೊಂಡು ಓಡಾಡು. ಗಂಡಸರ ಮನಸ್ಸು ಬಹಳ ಚಪಲ ತಾಯಿ. ಅವರ ಕಣ್ಣಿಗೆ ಚೆಂದಾಗಿರೋ ಹಂಗೆ ಶಾಲೇನೋ ರವಿಕೇನೋ ಏನಾದರೂ ಒಂದು ಹೆಂಗಸು ಹಾಕಿಕೊಳ್ಳುತ್ತಾ ಇರಬೇಕು; ಹೂವು ಗಂಧ ತೋರಿದ್ದನ್ನು ತಕ್ಕೊಂಡು ಅವರ ಮನಸ್ಸಿಗೆ ಸಮಾಧಾನ ಇರೋ ಹಂಗೆ ಇಟ್ಟುಕೋಬೇಕು ತಾಯಿ. ನೀನು ಈಗ ಉಟ್ಟೇದೀಯಲ್ಲ ಇಂತಾ ಶಾಲೆ ಏನೋ ಕೆಲ್ಸ ಮಾಡೋವಾಗ. ನಿನ್ನ ಪಾಡಿಗೆ ನೀನು ಮನೇಗೆ ಇರೋವಾಗ ಆಗಬಹುದು. ಬೈಗಿನ ಹೊತ್ತಿಗೆ ಬಂದು ಒಳ್ಳೇ ಶಾಲೆ ಉಟ್ಟುಕೋಬೇಕು". ನನಗೆ ಸ್ವಲ್ಪ

ನಗು ಬಂತು; ಆದರೆ ಇವಳ ಅನುಭವದಿಂದ ಬಂದ ಮಾತಿನ ಬುದ್ಧಿ ಎಷ್ಟು ದೊಡ್ಡದೆಂದು ತೋರಿತು; ಆ ಮಾತನ್ನು ತಂದ ಅವಳ ಅನುಭವದಿಂದ ಅವಳು ನೊಂದಿದ್ದಳೆಂದು ತಿಳಿದು ಸ್ವಲ್ಪ ವ್ಯಥೆಯೂ ಆಯಿತು. ನಾನು, "ಹೌದು ಮಂಗಮ್ಮ ನೀ ಹೇಳೋ ಮಾತು ನಿಜ," ಅಂತ ಹೇಳಿದೆ. ಆಮೇಲೆ ಮಂಗಮ್ಮ ಹೇಳಿದಳು: "ನೋಡು ತಾಯಿ, ಗಂಡ್ಸನ್ನ ಸರಿಯಾಗಿಟ್ಟುಕೋಬೇಕಾದರೆ ನಾಲ್ಕು ಉಪಾಯ. ಅವ್ರು ಇವ್ರು ಹೇಳ್ತಾರೆ ನಾರು ಬೇರು ಇಕ್ಕು ಅಂತ. 'ಮದ್ದಿಕ್ಕಿ ಮಸಣಕ್ಕೆ ಕಳುಹಿಸು,' ಅಂತ ಗಾದೆ ಐತೆ. ಇಂತಾವರ ಮಾತನೆಲ್ಲಾ ಕೇಳಬಾರದು. ಆಗಾಗ ಬಾಯಿಗೆ ರುಚಿಯಾಗಿ ಏನಾದರೂ ಒಂದು ಮಾಡಿಕೊಡೋದು, ಕಣ್ಣಿಗೆ ಚೆಂದಾಗಿ ಶಿಂಗಾರ ಮಾಡಿಕೊಂಡು ಕಷ್ಟ ಇರಲಿ ನಿಷ್ಠೂರ ಇರಲಿ ನಗತಾ ಮಾತ್ನಾಡಿಸೋದು, ಮನೆಗೆ ಬೇಕಾದ್ನ ತುಂಬಾ ತರ್ಸಿಕೊಂಡುಬಿಟ್ಟು ಆಗಾಗ ಕೇಳ್ದೀರ ಇರೋದು, ಮೂರು ಕಾಸು ಆರು ಕಾಸು ಸೇರಿಸಿಕೊಂಡು ಏನಾದರೂ ಸಂದರ್ಭ ಬಿದ್ದಾಗ ಒಂದು ರೂಪಾಯಿ ಕೊಡೋದು, ಇದೂ ಕಾಣವ್ವ ನಾರುಬೇರು. ಮನೆಹೆಂಗ್ಸು ಇದ್ನ ಮಾಡಿದರೆ ಗಂಡ ಅನ್ನೋನು ಮನೇ ನಾಯಹಂಗೆ ಇರ್ತಾನವ್ವ ಇದ್ನ ಮಾಡ್ಲಿಲ್ಲ ಅನ್ನು ಬೀದೀಲಿ ಅಲೀತಾನೆ." ನನಗೆ ಮಂಗಮ್ಮನ ಮಾತಿನ ಚಮತ್ಕಾರದಿಂದ ಆಶ್ಚರ್ಯವಾಯಿತು; ಇನ್ನೆರಡು ಮಾತನಾಡಿ ಅವಳನ್ನು ಅಂದು ಕಳುಹಿಸಿಕೊಟ್ಟೆನು.

ಈಗ್ಗೆ ಹದಿನೈದು ದಿನದ ಹಿಂದೆ ಮಂಗಮ್ಮ ಮನೆಗೆ ಬಂದಾಗ ಬಹಳ ಬೇಸರಪಟ್ಟಿದ್ದಳು ಅಂತ ಕಂಡಿತು. ನಾನು "ಯಾಕೆ ಮಂಗಮ್ಮ ಹೀಗಿದ್ದೀಯಾ?" ಅಂತ ಕೇಳಿದೆ. "ಏನು ಹೇಳೋದವ್ವ ನನ್ನ ಜನ್ಮ ಯಾರಿಗೂ ಬ್ಯಾಡದೀರ ಹೋಯಿತು," ಎಂದು ಹೇಳಿ, ಮಂಗಮ್ಮ ಸೆರಗಿನಿಂದ ಕಣ್ಣನ್ನು ಒರೆಸಿಕೊಂಡಳು. ನಾನು "ಯಾಕಮ್ಮಾ ಏನಾಯ್ತು. ಮಗ ಏನಾದರೂ ಅಂದ್ನೆ?" ಅಂತ ಕೇಳಿದೆ. "ಊ ಅಂದ ಕಾಣವ್ವ ಅವನ ಹೆಂಡ್ರು ಅರಿಯದ ಕುನ್ನಿಮೊಗ ಐತಲ್ಲ ಅದು ಏನೋ ಮಾಡ್ತು ಅಂತ ಅದನ್ನು ಹೊಡೆದಳು. 'ಯಾಕೆ ಗಯ್ಯಾಳೀ, ರಕ್ಕಸೀ ಹಂಗೆ ಅರಿಯದ ಕಂದನ್ನ ಹೊಡೀತಾ ಇದ್ದೀಯಾ' ಅಂದೆ. ನನಗೆ ಎದುರು ಬಿದ್ಲು. ತಾರುಮಾರು ನನ್ನ ಬೈದ್ಲು. 'ಇದೇನೆ ಇದು, ನಿನ್ನ ಗಂಡನ್ನ ಹೆತ್ತ ತಾಯಿ ನಾನು, ನನ್ನ ಇಷ್ಟು ಮಾತು ಅಂತೀಯಾ, ಆಗಲಿ ಅವನೇ ಬರಲಿ ಕೇಳೋಣ.' ಅಂತ ಹೇಳಿದೆ. ಸರದಾರ ಮನೆಗೆ ಬಂದ. 'ನೋಡಪ್ಪಾ ಹುಡುಗನ್ನ ಸುಮ್ಮನೆ ಬಡೀತಾಳೆ. ಬ್ಯಾಡ ಅಂದ್ರೆ ನನ್ನ ಬೈತಾಳಲ್ಲೋ. ನೀನು ಹೆಂಡ್ರಿಗೆ ಒಸಿ ಬುದ್ಧಿ ಹೇಳು.' ಅಂದೆ. ಅವಳು 'ಏನ್ನ ನನಗೆ ಬುದ್ಧಿ ಹೇಳೋದು? ಹೈದ ತಂಟೆ ಮಾಡಿದ್ರೆ ಬ್ಯಾಡ ಅನ್ನೋಕೆ ನನಗೆ ಯದಿಕ್ಕಾರಿ ಇಲ್ಲೋ? ನೀನು ಗಂಡನ್ನ ಹೆತ್ತಂಗೆ ನಾನು ಈ ಮೊಗಾನ್ನೂ ಹೆರಲಿಲ್ಲವೋ? ಯಾತರದದು ಬುದ್ಧಿ ನನಗೆ ಹೇಳಬೇಕಾಗಿರೋದು,' ಅಂದ್ಲು. ಎಷ್ಟಾದರೂ ಅವಳು ಹೆಂಡ್ರು ಕಾಣವ್ವ. ನಾನು ತಾಯಿ. ಅವಳ್ನಂದ್ರೆ ಬದಲಿಗೆ ಅಂತಾಳೆ. ನನ್ನ ಅಂದ್ರೆ ನಾನೇನ ಮಾಡೋಹಂಗಿದ್ದೀನಿ?

ಅವನು 'ಹೌದಮ್ಮ, ಅವಳ ಹೆತ್ತ ಮಗೂನ ಅವಳು ಹೊಡೀತಾಳೆ, ನೀನ್ಯಾಕೆ ಅವಳ ತಂಟೆಗೆ ಹೋಗ್ತೀಯಾ. ನನ್ನ ದಂಡಿಸು,' ಅಂದ. 'ಹಂಗಾದ್ರೆ ನಾನು ಮಾಡಿದ್ದು ತಪ್ಪಾಯ್ತೇನೋ' ಅಂದರೆ. 'ತಪ್ಪೋ ಸರಿಯೋ, ಹೆತ್ತೋಳು ಮಗನ್ನ ದಂಡಿಸಕೂಡದು ಅನ್ನೋಕೆ ಆಗ್ತದೆಯಾ' ಅಂದ. ನಂಗೆ ಕೋಪ ಬಂತವ್ವ ಮಾತು ತಪ್ಪಿ ಬಾಯಾಗ ಬಂತು. 'ಏನೋ ಇದು? ಹೆಂಡ್ರು ನಿನ್ಗೆ ಹಾಕಿರೋ ಮಂಕು ಬೂದೀಲಿ ನಿನ್ಗೆ ಅವಳು ಕಂದನ್ನ ಬಡಿದರೂ ಸರಿಯೆ ನನ್ನ ಬೈದರೂ ಸರಿಯೆ ಆಗದೆ. ಚೆನ್ನಾಗಿ ಹೋಯ್ತಪ್ಪ ನಾಳೆ ಅವಳು ತಾಯೀನ ಆಚೆಗೆ ಕಳಿಸು ಅಂದ್ರೂ ನೀನು ಕಳಿಸೋನೆ' ಅಂದೆ. ಮಗ, 'ಇನ್ನೇನು ಮಾಡೋಕಾಗ್ರದವ್ವ ಹೆಂಡ್ತಿ ಇದ್ರೆ ನಾನಿರೋದಿಲ್ಲ ನಾನಿದ್ರೆ ಹೆಂಡ್ತಿ ಇರೋದು ಬೇಡ ಅಂದ್ರೆ. ದಿಕ್ಕಿಲ್ಲದ ಹೆಂಗ್ಸು ಅವಳ್ನ ಏನು ಮಾಡೋದು?' ಅಂದ. 'ನನಗ್ಯಾರಪ್ಪ ದಿಕ್ಕು' ಅಂದೆ. 'ನಿನ್ಗೇನವ್ವ ದನ ಅದೆ, ಕರ ಅದೆ, ದುಡ್ಡು ಅದೆ, ಕಾಸದೆ. ನಿನ್ನ ನಾನು ಸಾಕಬೇಕಾದ್ದೇನು' ಅಂದ. 'ಹಂಗಾದರೆ ನನ್ನ ಬೇರೆ ಹೋಗು ಅಂತಿಯೇನೋ' ಅಂತ ಕೇಳಿದೆ. 'ನಿನ್ನಿಷ್ಟ ಹೋಗಬೇಕು ಅಂದರೆ ನಾನು ಬ್ಯಾಡ ಅನ್ನೊಲ್ಲ ಅವ್ವ ನಿಮ್ಮ ಪಂಚಾಯ್ತಿ ಸಾಕು ನನಗೆ,' ಅಂತ ಅವ ಅಂದ. 'ಆಗ್ಲಪ್ಪ ಹಂಗಾದ್ರೆ ಈವತ್ತು ಮದ್ಯಾನದಿಂದ ನಾನು ಬ್ಯಾರೆ ಇರ್ತೀನಿ. ನೀನೂ ನಿನ್ನ ಹೆಂಡ್ರೂ ಸುಕವಾಗರ್ರ್ಯಾ,' ಅಂತ ಹೇಳ್ಬಿಟ್ಟು ಇದೋ ಮೊಸರು ತಕ್ಕೊಂಡು ಬಂದಿದ್ದೀನವ್ವ," ಇದನ್ನೆಲ್ಲಾ ಹೇಳಿ ಮಂಗಮ್ಮ ಸುಮ್ಮನೆ ಅತ್ತಳು. ನಾನು ಸಮಾಧಾನ ಮಾಡಿದೆ. "ಸರಿ, ಇದೆಲ್ಲಾ ಏನು ದೊಡ್ಡ ಮಾತು? ಹೋಗತೀಯ, ಎಂದಿನ ಹಾಗೆ ಮನೆಯಾಗೆ ಇದ್ದುಬಿಡ್ತೀಯ; ಎಲ್ಲಾ ತಾನೇ ಸರಿಹೋಗ್ತದೆ, ಬಿಡು ಮಂಗಮ್ಮ" ಹೀಗೆ ಧೈರ್ಯ ಹೇಳಿ, ಮೊಸರನ್ನ ತೆಗೆದುಕೊಂಡು ಅವಳನ್ನು ಕೊಟ್ಟು ಕಳುಹಿಸಿದೆ.

ಮಾರನೆ ದಿನ ಮಂಗಮ್ಮ ಬಂದಾಗ ಹಿಂದಿನ ದಿನದಷ್ಟು ವ್ಯಸನವಿರಲಿಲ್ಲ. ಆದರೆ ಮನಸ್ಸು ಎಂದಿನಂತೆ ಹಗುರವಾಗಿಯೂ ಇರಲಿಲ್ಲ. "ಜಗಳ ಸಮಾಧಾನ ಆಯಿತೋ ಇಲ್ಲೋ ಮಂಗಮ್ಮ?" ಅಂದೆ. ಮಂಗಮ್ಮ "ಎಂತ ಸಮಾಧಾನ ಅವ್ವ? ಆ ಸೊಸಿ ತಾಯಿ ಮಗನಿಗೆ ಸಮಾಧಾನ ಆಗೋಕೆ ಬಿಟ್ಟಾಳ? ನೆನ್ನೆ ಮೊಸರು ಮಾರಿ ಮನೆಗೆ ಹೋದ್ರೆ ನನ್ನ ಮಡಕೆ ಕುಡಿಕೆ ಎಲ್ಲಾನೂ ಒಂದು ಪಕ್ಕಕ್ಕೆ ಇಟ್ಟಿದ್ದಾಳೆ. ಒಂದು ಗುಡಾಣದಾಗೆ ರಾಗಿ, ಒಂದರಾಗೆ ಅಕ್ಕಿ, ಒಂದಿಷ್ಟು ಉಪ್ಪು, ಮೆಣಸಿನಕಾಯಿ ಎಲ್ಲಾನೂ, ತಾನೂ ತನ್ನ ಗಂಡ್ನೂ ಉಂಡದ್ದಾಯಿತು ಅಂತ ಕಾಲು ಚಾಚಿಕೊಂಡು ಕುಳಿತದಾಳೆ. ಹೆಂಗವ್ವ ಜಗಳ ಸಮಾಧಾನ ಆಗೋದು? ನಾನು ಒಂದಿಷ್ಟು ಹಿಟ್ಟು ಬೇಯಿಸಿಕೊಂಡು ತಿಂದೆ ಕಾಣವ್ವ ಬಾಯಾಗ ಹೇಳಿದ್ದಾಯಿತು. ಅವರಿಷ್ಟೇ ಸಾಕು ಅಂದರು. ಮದುವೆಯಾದ ಮೇಲೆ ಮಗ ನಮ್ಮೋನೆ ತಾಯಿ? ಸರಿ, ಅವನಿಗೆ ಬ್ಯಾಡದೆ ಇದ್ದ ಮ್ಯಾಲೆ ನಾನ್ಯಾಕೆ ಮೇಗೆ ಬಿದ್ದು ಹೋಗಬೇಕು? ಬ್ಯಾರೇನೇ ಇದ್ದೀನಿ ಕಾಣವ್ವ ದಿನಾ ಆ ಮಗುವ್ಗೆ ಒಂದಿಷ್ಟು ಮೊಸರು ಕೊಟ್ಟು ಆಮೇಲೆ ಮಾರೋಕೆ ಬರ್ತಾ ಇದ್ದಿ. ಹೊತ್ತೀನೆ

ಆ ಹೊತ್ತಿಗೆ ಸರಿಯಾಗಿ ಅವಳು ಅವನ್ನ ಎಲ್ಲೋ ಕರಕೊಂಡು ಹೋಗಿದ್ದು. ಆ ಹುಡುಗನ್ನ ನಾನು ಮತ್ನಾಡಿಸಕೂಡದು ಅಂತ ಮಾಡುತಾಳೆ ನೋಡು, ತಾ ಬಲ್ಲಿನಿ". ಅಂದಳು. ಎಷ್ಟು ಸಣ್ಣ ಮಾತು ಏನು ರಾಮಾಯಣವಾಗಿ ಕೂತುಕೊಂಡಿತು ಅಂತ ನನಗಾಶ್ಚರ್ಯವಾಯಿತು. ಆದರೆ ಇದಕ್ಕೆ ನಾನೇನೂ ಮಾಡುವ ಹಾಗಿಲ್ಲ. ಇನ್ನು ಯಾವುದೋ ಒಂದೆರಡು ಮಾತನ್ನಾಡಿ ಮಂಗಮ್ಮನನ್ನ ಕಳುಹಿಸಿಕೊಟ್ಟೆ.

ಆಮೇಲೆ ಒಂದೆರಡು ದಿನ ಈ ಮಾತನ್ನು ಎತ್ತಲಿಲ್ಲ ಮಂಗಮ್ಮ "ಅವ್ವಾ ನೀನು ಹಾಕ್ಕೊಳ್ತೀಯಲ್ಲ ಆ ಮಕಮಲ್ ಬಟ್ಟೆ. ಅದು ಗಜಕ್ಕೆ ಏನು ಬೇಲೀ ಅವ್ವ?" ಎಂದಳು. "ಯಾಕೆ, ಮಂಗಮ್ಮ" ಅಂದೆ. "ಇಷ್ಟು ದಿನಾನೂ ಮಗಗೆ ಮೊಮ್ಮಗಗೆ ಅಂತ ಕಾಸಿಗೆ ಕಾಸು ಸೇರಿಸಿದ್ನಿ ಕಾಣವ್ವ ಇನ್ಯಾಕೆ ಸೇರಿಸೋದು. ನಾನು ಒಂದು ಮಕಮಲ್ ಜಾಕೀಟು ಹೊಲಿಸಿಕೊಂಡು ಓಡಾಡ್ತೀನಿ", ಎಂದಳು. "ಅದರ ಜಾಕೀಟು ಏಳೆಂಟು ರೂಪಾಯಿ ಆಗಬಹುದು ಮಂಗಮ್ಮ," ಅಂದೆ. ಆ ದಿನ ಹೋದವಳು ಮಂಗಮ್ಮ ದರ್ಜಿ ಅಂಗಡೀಲಿ ಮಕಮಲ್ ಬಟ್ಟೆ ವ್ಯಾಪಾರ ಮಾಡಿದ್ದಾಳೆ. ಹೊಲಿಯೋದಕ್ಕೆ ಹಾಕಿದ್ದಾಳೆ. ಮಾರನೆ ದಿವಸ ಊರಿಗೆ ಹೋಗುತಾ ಅದನ್ನು ಹಾಕಿಕೊಂಡೇ ಬಂದಿದ್ದಾಳೆ. "ನೋಡಿದಾವ್ವ ನನ್ನ ಸಿಂಗಾರಾನ? ಯಜಮಾನ್ನಿದ್ದಾಗ ಒಂದು ಒಳ್ಳೇ ಶಾಲೆ ತಕ್ಕೊಳಲಿಲ್ಲ ಅವನು ಯಾವೊಳ್ನೋ ನೋಡಿಕೊಂಡು ಹೋದ. ಮಗನಿಗೆ ಕಾಸಿರಲಿ ಅಂತ ಕೂಡಿಸಿಟ್ಟೆ. ಈ ಮಗನ ಸುದ್ದಿ ಹಿಂಗಾಯಿತು. ನೋಡು ನನ ಸಿಂಗಾರಾನ," ಎಂದಳು.

ಮಗನನ್ನು ಬಿಟ್ಟ ದುಃಖದಲ್ಲಿ ಮಂಗಮ್ಮನಿಗೆ ಸ್ವಲ್ಪ ಬುದ್ಧಿ ಭ್ರಮಿಸಿದೆ ಎಂದು ನನಗೆ ತೋರಿತು. ಬಹಳ ಕೋಪ ಬಂದಾಗ ಯಾರಿಗಾದರೂ ಹೀಗಾಗುತ್ತದೆ. ನಾನು ಏನೂ ಹೇಳಲಿಲ್ಲ. ಆದರೆ ಈ ಜಾಕೀಟಿನಿಂದ ಅವಳಿಗೆ ಇತರರೊಂದಿಗೂ ಜಗಳ ಬಂದಿತು. ಅವರ ಊರಿನ ಒಬ್ಬ ಹುಡುಗ ಬೆಂಗಳೂರಿನಲ್ಲಿ ಓದುತ್ತಾ ಇದ್ದಾನಂತೆ. ಅವನು ಪರಂಗಿಯವರ ಹಾಗೆ ಅಥವಾ ನಮ್ಮವರು ವಿದ್ಯಾವಂತರು ಎನ್ನುವವರು ಈಗ ಹಾಕಿಕೊಳ್ಳುವ ಹಾಗೆ ಟೈ. ಕಾಲರ್, ಹಾಕಿಕೊಳ್ಳುವ ನಾಜೂಕುವಂತ. ಅವನು ಮಂಗಮ್ಮನ್ನ ಕಂಡಾಗ, "ಏನವ್ವಾ ಪೂರಾ ಮಕಮಲ್ ಜಾಕೆಟ್ ಹಾಕಿಬಿಟ್ಟೆ." ಅಂದನಂತೆ. ಮಂಗಮ್ಮ "ಯಾಕೋ ಹೈದ ಬಹಳ ಉಚಾಯಿಸಿ ಮಾತ್ನಾಡ್ತೀಯಾ, ನೀನು ಆ ಕುತ್ತಿಗ್ಗೆ ಉರ್ಲು ಹಾಕ್ಕೋಬಹುದಂತೆ. ನಾನು ಜಾಕೀಟು ಯಾಕೆ ಹಾಕ್ಕೋಬಾರದು" ಎಂದಳಂತೆ. ಇವರಿವರಿಗೆ ಮಾತು ನಡೆಯಿತು. ಹತ್ತಿರದ ನಾಲ್ಕು ಜನ ನಕ್ಕರು.

ಮಾರನೆಯ ದಿನ ಮಂಗಮ್ಮ ನನಗೆ ಇದನ್ನು ಹೇಳಿದಳು. ಇತರರು ಹೀಗೆ ಹೇಳುವುದಲ್ಲದೆ ಆ ಸೊಸೆಯಾದವಳು ಮಂಗಮ್ಮ ಕೇಳುವ ಹಾಗೆ ಇತರರೊಂದಿಗೆ "ಸೊಸೆಗೆ ಒಂದು ರವಿಕೆ ಹೊಲಿಸಲಾರದೆ, ಅತ್ತೆ ಬೇರೆ ಸಂಸಾರ ಆಗಿ, ಜಾಕೀಟು

ಹಾಕಿರೋದ ನೋಡಿ," ಅಂದಳಂತೆ. ಮಂಗಮ್ಮ ಸೊಸೆಗೆ ಮದುವೆಯಲ್ಲಿ ಓಲೆ, ಕಡಗ, ಚಳತುಂಬು, ಜಿಮಿಕೆ, ನಾಗರ, ಕಂಠಿ, ಡಾಬು ಇದಿಷ್ಟನ್ನು ಕೊಟ್ಟಿದ್ದಳು. ಆಮೇಲೆ ವರುಷಕ್ಕೆ ಒಂದು ಏನಾದರೂ ಒಡವೆ ತೆಗೆದುಕೊಟ್ಟಿದ್ದಳು. ಅದೆಲ್ಲಾ ಸೊಸೆಗೆ ಜ್ಞಾಪಕವೇ ಇಲ್ಲ ಮಂಗಮ್ಮ ಈ ಮಾತು ಕೇಳುತ್ತಾ ಒಂದೆರಡು ಸಲ ಸುಮ್ಮನೆ ಇದ್ದಳು. ಆಮೇಲೆ ಅವಳಿಗೆ ತಡೆಯಲಿಲ್ಲ ಒಂದು ರಾತ್ರಿ ಹೋಗಿ ಮಗನ್ನ, "ನಿನ್ನ ಹೆಂಡರು ನನ್ನ ಬಹಳ ಮಾತಂತಾಳೆ. ನಾನೇನೋ ಜಾಕೀಟ ಹಾಕಿಕೊಂಡೆ ಅಂತ. ತನಗೆ ಏನೂ ತಕ್ಕೊಡಲಿಲ್ಲವಂತೆ. ನಾನು ಕೊಟ್ಟಿದ್ದೆಲ್ಲಾ ಸುಳ್ಳೇ? ಕಡಗ, ಓಲೆ, ಕಂಠಿ, ನಾಗರ, ಡಾಬು ನಾನು ಕೊಟ್ಟೋವು ಅಲ್ಲೆ?" ಎಂದಳಂತೆ. ಸೊಸೆ ಗಂಡನನ್ನ ಮಾತನಾಡೋಕೆ ಬಿಡಲಿಲ್ಲ. "ಗಂಡ ಇಲ್ಲದ ಮುದುಕಿ ನೀನು ಈಗ ಓಲೇನೂ ಡಾಬೂನೂ ಹಾಕ್ಕೋತೀಯಾ? ತಕ್ಕೊಂಡು ಹೋಗು. ಹಾಕ್ಕೋ" ಎಂದಳು. ಆ ಗಂಡನು ಅವಳಿಗೆ "ಯಾಕೆ ಹೆಣ್ಣೆ, ಇಷ್ಟು ಮಾತು," ಎಂದು, ತಾಯನ್ನು ಕುರಿತು "ಅವ್ವಾ ನಿಮ್ಮ ಜಗಳ ನನಗೆ ಬೇಕಿಲ್ಲ. ನಿನ್ನ ಓಲೆ ಒಡವೆ ಬೇಕು ಎಂದರೆ ತಕ್ಕೊಂಡು ಹೋಗು," ಎಂದನಂತೆ. ಮಂಗಮ್ಮ ಹೇಳಿದಳು: "ನೋಡವ್ವ ಬೀದಿಯೋರ ಕೂಡ ಇಂಥ ಮಾತು ಆಡಬ್ಯಾಡ ಎಂತ ಹೆಂಡರಿಗೆ ಹೇಳವೊಲ್ಲ. ಬೇಕಾದರೆ ಒಡವೆ ತಕ್ಕೊಂಡು ಹೋಗು ಅಂತ ನನ್ನ ಮೇಲೆ ತಪ್ಪು ಹಾಕಿದ ತಾಯಿ. ಯಾಕೆ ಈ ಜನ್ಮ ಇನ್ನು" ಅದನ್ನೆಲ್ಲ ಕೇಳಿ ನನಗೆ ಬಹಳ ವ್ಯಸನವಾಯಿತು. ಇವಳೋ ಮುದುಕಿ. ಅವನು ಒಬ್ಬ ಮಗ. ಅವನ ಹೆಂಡತಿ ಗಂಡನ್ನ ಗಂಡನ ತಾಯನ್ನ ಚೆನ್ನಾಗಿ ನೋಡಿಕೊಳ್ಳಬಾರದೆ? ಇಷ್ಟಕ್ಕೆ ಈ ರಂಪೆಲ್ಲ ಯಾಕೆ? ಮೊಮ್ಮಗನ್ನ ಹೊಡೆಯಬೇಡ ಅಂತ ಮುದುಕಿ ಹೇಳಿದ್ದಕ್ಕೆ ಇದೇಕೆ ಇವರೆಲ್ಲ ಹೀಗೆ ಮಾಡುತ್ತಾರೋ ಎಂದು ನಾನು ಯೋಚಿಸಿದೆ. ಆಮೇಲೆ ನನಗೆ ತೋರಿತು. ಎಲ್ಲಿ ನೋಡಿದರೂ ಜಗಳದ ಕಾರಣ ಹೀಗೆಯೇ ಇರುವುದು. ಒಬ್ಬರೊಬ್ಬರಿಗೆ ಆಗದ ಕಾರಣದಿಂದ ಸಣ್ಣ ವಿಷಯ ದೊಡ್ಡದಾಗುತ್ತದೆ; ಎಲ್ಲಿಲ್ಲದ ಜಗಳ ಹುಟ್ಟುತ್ತದೆ; ಅದಕ್ಕೆ ಸೇರಿದವರಿಗೆಲ್ಲ ಮಿತಿಯಿಲ್ಲದೆ ನೋವು.

ಇದಾದ ಕೆಲದಿನದ ಮೇಲೆ ಮಂಗಮ್ಮ ನನ್ನನ್ನು "ಅವ್ವಾ ನೀವು ಸತ್ಯವಂತರು. ನಂದು ಒಸಿ ಹಣ ಐತೆ ಅದನ್ನ ಎಲ್ಲಿಯಾದರೂ ಈ ಬಾಂಕಿ ಅಂತಾರಲ್ಲ ಅಂತಾ ಕಡೆ ಇರಿಸಿಕೊಂಡಿರವ್ವ ಅದಕ್ಕೆ ಅವರಿವರು ಕಣ್ಣು ಹಾಕುತ್ತಿದ್ದಾರೆ" ಎಂದಳು. ಏನಾಯಿತು ಎಂದು ನಾನು ವಿಚಾರಿಸಿದೆ. "ನಿನ್ನೆ ನೋಡವ್ವಾ, ನಮ್ಮೂರೋನು ರಂಗಪ್ಪ ಅಂತ ಇದಾನೆ, ಅವನು ಸ್ವಲ್ಪ ಜೂಜುಗೀಜು ಆಡೋದುಂಟು. ಸೋಕೀ ಮನುಷ್ಯ. ನಾನು ಮೊಸರು ತಕ್ಕೊಂಡು ಬರತಿರಬೇಕಾದರೆ ದಾರಿಯಲ್ಲಿ ಅದೆಲ್ಲಿಂದಲೋ ಬಂದ. 'ಏನು ಮಂಗಮ್ಮ. ಚಂದಾಗಿದೀಯಾ.' ಅಂದ 'ಏನು ಚಂದ ರಂಗಪ್ಪ ನೀನು ಕಾಣದ ಚಂದ,' ಅಂದೆ. ಅವ ಇದ್ದೋನು 'ಹೌದು ಬಿಡವ್ವ, ನೀ ಹೇಳೋದು ನಿಜಾನೆ, ಈಗಿನ ನಡತೀಲಿ ಯಾರಿಗೆ ಚಂದ ಎಂತಾದ್ದು; ಈಗಿನ ಹುಡುಗರು ಉಚಾಯಿಸಿ ಮಾತಾಡೋದೆ,

ನಮ್ಮಂತ ವಯಿಸಾದೋರು, ಎಲ್ಲಾ ಹಿಂಗಾಯಿತಲ್ಲ ಅನ್ನೋದೆ. ಇನ್ನೇನು ಮಾಡೋದು ಮಂಗಮ್ಮ' ಅಂದ. ಹಂಗೇ ನಡಕೊಂಡು ಬಂದಿವಿ. ದಾರೀಲಿ ತೋಪು ಬಾವಿ ಐತೆ ಏಳು. ಅಲ್ಲಿ ಬರಬೇಕಾದರೆ ನನಗೆ ಭಯ. ಇವ ಏನು ಮಾಡ್ತಾನೋ ಅಂತ. ಈ ಸಂಚಿಯಾಗೆ ಅಷ್ಟು ದುಡ್ಡೈತೆ ಏಳು. ಅದಕ್ಕಾಗಿ ಅವನು ಅಲ್ಲೀಗುಂಟ ಬಂದವನೇ 'ಒಸಿ ಸುಣ್ಣ ಕೊಡುತೀಯಾವ್ವ.' ಎಂದ. ಕೊಟ್ಟೆ ತಕೊಂಡು ಹೋದ. ಈ ಹೊತ್ತು ನಾನು ಬರುತಿರಬೇಕಾದರೆ ಅಲ್ಲೇ ಬಂದು ಜೊತೆಗೆ ಸೇರಿದ ಕಾಣವ್ವ ಆ ಮಾತು ಈ ಮಾತು ಹೇಳಿದೋನೆ ನಡುವೆ. 'ಮಂಗಮ್ಮ ನನಗೆ ಒಸಿ ಸಮಯಾಗ್ಯೆತೆ ಒಂದು ಸ್ವಲ್ಪ ಸಾಲ ಕೊಟ್ಟೀಯಾವ್ವ ಈ ಸಲದ ರಾಗಿ ಮಾರತಾನೇ ಹಿಂದಕ್ಕೆ ಕೊಟ್ಟುಬಿಡತೀನಿ' ಅಂದ. 'ನನ್ನ ತಾವು ದುಡ್ಡೆಲ್ಲೀದಪ್ಪ' ಎಂದೆ. 'ಬಿಡು ಮಂಗಮ್ಮ ನಮಗೆ ತಿಳೀದ. ದುಡ್ಡು ಅಲ್ಲಿ ಇಲ್ಲಿ ಹೂತಿಟ್ಟು ಬರೋದೇನವ್ವ ನನಗೆ ಸಾಲ ಕೊಡು, ನಾನು ಬದುಕಿಕೋತೀನಿ ನಿನಗೂ ಬಡ್ಡಿ ಬರ್ತದೆ,' ಅಂದ. ಸ್ವಲ್ಪ ಹೊತ್ತು ಬಿಟ್ಟುಕೊಂಡು 'ನಿನ್ನ ಮಗನೂ ನೀನು ಜೊತೆಗೆ ಇದ್ದಿದ್ದರೆ ನಾನು ನಿನ್ನ ಕೇಳುತಾ ಇರಲಿಲ್ಲ. ಏನೋ ಸೊಸೆಗೆ ಚೀಕು ಬಾಕು ಮಾಡಿಸೋವ ಅಂತಿರುತೀಯಾ ಎಂತ ನಾನ ಬಲ್ಲೆ. ಈಗ ಅದೇನೂ ಇಲ್ಲವಲ್ಲ ಅಂತ ಕೇಳಿದಿ,' ಅಂದ. ಹೆಂಗಸು ಒಂಟಿ ಆದಳು ಅಂದರೆ ಜನ ನೋಡು ತಾಯಿ, ಅವಳ ಮೇಲೆ ಕಣ್ಣು ಹಾಕುತಾರೆ," ಎಂದಳು. ನಾನು "ನಮ್ಮ ಯಜಮಾನರನ್ನು ಕೇಳಿ ಹೇಳುತ್ತೇನೆ," ಎಂದೆ.

ನಾನು ಯಾಜನಮಾನರ ಸಂಗಡ ಈ ವಿಷಯ ಪ್ರಸ್ತಾಪ ಮಾಡಿರಲಿಲ್ಲ. ಮಾರನೆಯ ದಿನ ಮಂಗಮ್ಮ ಮೊಸರು ಕೊಟ್ಟವಳೆ ಮಡಿಲಿನಿಂದ ಒಂದು ಸಂಚಿ ತೆಗೆದಳು. "ಅವ್ವಾ, ಒಳಗೆ ಹೋಗೋಣ, ಎಣಿಸಿಕೊಳ್ಳವಿಯಂತೆ," ಎಂದಳು. ನಾನು "ನಮ್ಮ ಯಜಮಾನರನ್ನು ಇನ್ನೂ ಕೇಳಿಲ್ಲ, ಇರಲಿ ಇನ್ನೊಂದು ಸಲ ತರುವೆಯಂತೆ," ಎಂದೆ. ಮಂಗಮ್ಮ "ಅವ್ವಾ ನನಗೆ ಬಹಳ ಭಯವಾಗ್ತದೆ ಕಾಣವ್ವಾ ರಂಗಪ್ಪ ಈವೊತ್ತೂ ಬಂದ. ತೋಪಿನ ತಾವು ಕೂತುಕೊ ಮಂಗಮ್ಮ ಹೋಗುವಿಯಂತೆ ಏನು ಅವಸರ.' ಅಂದ. ನನ್ನ ತಾವು ಈ ದುಡ್ಡು ಬೇರೆ, ನನ್ನೆದೆ ಡವಡವ ಬಡುಕೋತಿತ್ತು; ನಿಲ್ಲೋದಿಲ್ಲ ಅಂದರೆ ಹಿಡಿದು ನಿಲ್ಲಿಸಿದೆ ಏನು ಮಾಡೋದು ಅಂತ ಕೂತೆ. ಮನೆ ಮಾತಾಡಿದ ಮಠದ ಮಾತಾಡಿದ. ಆಮೇಲೆ ನನ್ನ ಕೈಹಿಡಿದುಕೊಂಡು 'ಮಂಗಮ್ಮ ನೀನು ಎಷ್ಟು ಚೆನ್ನಾಗಿದೀಯಾ ಅಂತೀಯಾ,' ಅಂದ. ಕೇಳಿದಾ ತಾಯಿ, ಒಳ್ಳೇ ಪರಾಯದಾಗೇ ಯಜಮಾನನಾದೋನು ಈ ಕೈಹಿಡಯೋದ ಬಿಟ್ಟ ಇನ್ನೊಬ್ಬ ಹಿಡೀಲಿಲ್ಲವ್ವ ಇದನ್ನ ಇವ ಈವೊತ್ತು ಹಿಡಿದ. ನಾನು ಕೈಬಿಡಿಸಿಕೊಂಡು, 'ಏನು ರಂಗಪ್ಪಾ ಬಹಳ ಸರಸವಾಡುತೀಯಾ, ನನ್ನ ಚಂದ ಹೇಳೋಕೆ ನೀನೇನು ಮಾಡಿಕೊಂಡ ಗಂಡನಾ, ಬಿಡು,' ಅಂತ ಬೇಗನೇ ಎದ್ದು ಬಂದುಬಿಟ್ಟೇ ತಾಯಿ. ನಿನ್ನೆ ರೂಪಾಯಿ ಕೇಳಿದ, ಈವೊತ್ತು ಮಾನ ಕೇಳಿದ. ಹಸೇಮೇಲೆ ಜೊತೇಗೆ ಕುಂತು ಬಾಸಿಂಗ ಕಟ್ಟಿಕೊಂಡು

ಸೇಸೆ ಹಾಕಿಸಿಕೊಂಡು ಕೈಹಿಡಿದ ಅಂದ ಜೀವ ಎತ್ತಲೋ ಹೋಯಿತವ್ವ ಒಳ್ಳೆ ಪರಾಯದಾಗೆ ಗಂಡ ಬೇಡ ಅಂದ. ಇನ್ನೊಬ್ಬಳಾಗಿದ್ದರೆ, ಮಾಡಿಕೊಂಡ ಗಂಡ ಒಲ್ಲ ಕೂಡಿಕೋ ಬಾರೋ ನಲ್ಲ ಅಂತ ಕುಣಿದಿರೋಳು. ಅಂದರೆ ನಾನು ನನ್ನ ಮರಿಯಾದೆ ಬಿಡಲಿಲ್ಲವ್ವ ಈಗ ಈ ಪೋಲಿ ಬಂದು ದಾರೆ ಎರೆಸಿಕೊಂಡ ಕೈಗಿಂತ ಹೆಚ್ಚಾಗಿ ನನ್ನ ಕೈಹಿಡೀತಾನೆ ನೋಡಿದಾವ್ವಾ," ಎಂದಳು.

ನನಗೆ ಇವಳ ಕತೆ ಏಕೋ ಬಹಳ ಕಷ್ಟಕ್ಕೆ ಬಂದಿತೆಂದು ತೋರಿತು. "ಇದೇನೆಲ್ಲ ಫಜೀತಿ ಮಂಗಮ್ಮ, ಸುಮ್ಮನೆ ಹೋಗಿ, ಆದದ್ದಾಯಿತು ಅಂತ ಮಗನ ಹತ್ತಿರ ಇದ್ದು ಬಿಡೋದು ತಾನೆ," ಎಂದೆ.

"ನಾನು ಇದ್ದೇನವ್ವ, ಅವಳು ಇರಗೊಡಿಸಿದರಲ್ಲವಾ,"

"ಮಗನಿಗೆ ಇದೆಲ್ಲ ಹೇಳು."

"ಅಯ್ಯೋ ನನ್ನವ್ವಾ, ರಂಪುಮಾಡಿ ನನ್ನ ಜಾತಿಯಿಂದ ಓಡಿಸಿಯಾಳು ಆ ಸೊಸೆ, ನನಗೆ ಹೊತ್ತಾಯಿತ್ವ ನಾನು ಬರುತೀನಿ, ಯಜಮಾನರ ಕೇಳಿ ನಾಳೆ ಹೇಳು," ಎಂದು ಮಂಗಮ್ಮ ಹೊರಟು ಹೋದಳು.

ತಿರುಗಿ ಒಂದು ಗಂಟೆಯ ಹೊತ್ತಿಗೆ ಬಂದಳು. "ಅವ್ವಾ ಈ ಹೊತ್ತು ಒಂದು ಕೆಲಸ ಆಯಿತೇ," ಎಂದಳು.

"ಏನಾಯಿತು?"

"ಮೊಗಾಗೆ ಇರಲಿ ಅಂತ ಒಂದಷ್ಟು ಮಿಟಾಯಿ ತಕ್ಕೊಂಡು ಗಡಿಗ್ಯಾಗೆ ಇಟ್ಟುಕೊಂಡೀ ತಾಯಿ," ಮಂಗಮ್ಮ ಮೊದಲು ಮಗು ತನ್ನ ಹತ್ತಿರ ಬರದಂತೆ ಮಾಡಿದರೆಂದು ಹೇಳಿದ್ದಳಲ್ಲ; ಈಗ ಮೊಗಾಗೆ ಎಂದರೆ ಯಾವ ಮಗುವಿಗೆಂದು ನನಗೆ ಅರ್ಥವಾಗಲಿಲ್ಲ. "ಯಾವ ಮಗುವಿಗೆ?" ಎಂತ ನಾನು ಕೇಳಿದೆ. "ಇನ್ಯಾವ ಮೊಗಾವ್ವ, ನಮ್ಮೊಗಾನೇ."" "ನಿನ್ನ ಹತ್ತಿರ ಬರೋದಿಲ್ಲಾ ಅಂತ ನೀ ಹೇಳಿದೆ". "ಹೋಗಬೇಡಾಂತ ಅವರ ಅಮ್ಮ ಹೇಳ್ತಾಳೆ. ಆದರೆ ಮೊಗ ಬರದೀರ ಇರ್ತಾದಾವ್ವ? ಅವರು ಕಾಣದಂತೆ ಯಾವಾಗಲೋ ಬರ್ತದೆ, ಒಸಿ ಹಾಲು ಕುಡೀತದೆ. ಒಸಿ ಮೊಸರು ತಾ ಅನ್ನುತ್ತದೆ. ಏನಾದರೂ ಕೊಟ್ರೆ ಕುಣಿದಾಡ್ತದೆ. ರಂಪು ಮಾಡ್ತದೆ. ನಿಮ್ಮಮ್ಮಿಗೆ ಹೇಳ್ತೇನೆ ನೋಡು ಅಂದರೆ ಬಾಯಿಮುಚ್ಚಿಕೋತದೆ. ಮಕ್ಕಳ ಆಟಾನೇ ಆಟ ಕಾಣವ್ವ ಅದಕ್ಕಿರಲಿ ಅಂತ ಒಂದೀಸು ಮಿಟಾಯಿ ತಕ್ಕೊಂಡು ಗಡಿಗೇಲಿಟ್ಟುಕೊಂಡಿ. ಈ ಸಂಕರಪುರದಾಗೆ ಬರತೀರಬೇಕಾದರೆ ಅಲ್ಲಿ ಒಂದು ಯಾವುದೋ ಮಾವಿನಮರ ಇದೆಲ್ಲ. ಅಲ್ಲಿ ಕೂತಿದ್ದ ಒಂದು ಕಾಗೆ ರಪ್ಪನೆ ಬಂದು ಮಿಟಾಯಿ ಪೊಟ್ನಾನೆತ್ತಿಕೊಂಡು ಹೋಗಿ ಬಿಡ್ತವ್ವ ಈವತ್ತು ಹಿಂಗಾಗಿಬಿಡ್ತಲ್ಲ" ನಾನು "ಒಂದು ಮಿಟಾಯಿ ಪೊಟ್ನೆ ಹೋದರೆ ಏನಾಯಿತು? ತಿರುಗಿ ಮಿಟಾಯಿ ತಕ್ಕೊಂಡ್ರಾಯಿತು." ಎಂದೆ. ಮಂಗಮ್ಮ "ಅದಲ್ಲಾವ್ವ, ಕಾಗೆ ಬಂದು ಮನುಷ್ಯರ್ನ ಮುಟ್ಟಬಾರದು ಅಂತಾರೆ, ಅದಕ್ಕಂದಿ,"

ಅಂದಳು. "ಮುಟ್ಟಿದರೆ ಏನಂತೆ?" ಎಂದೆ. "ಜೀವಕ್ಕೆ ಊನ ಅಂತಾರೆ, ನನಗೇನಾದರೂ ಬಂತೊ ಅಂತ ಹಂಗೆ ಭಯ ಆಯ್ತು ಅನ್ನು. ಆಮೇಲಂದುಕೊಂಡೆ, ಸಂತೋಸಾನೆ ಆಯ್ತು. ಯಾರಿಗೂ ಬ್ಯಾಡದ ಜಲ್ಮ. ನಮ್ಮಪ್ನ ಪಾದದಾಗೆ ಸೇರಿಬಿಡಲೇಳು ಅಂತ ಅಂದುಕೊಂಡೆ. ಅಂತು ಈವತ್ತು ಹಿಂಗಾಯ್ತು." ನಾನು "ಏನು ತಿಕ್ಕಲು ಮಾತ ಹೇಳ್ತೀಯಾ ನೀನು. ಕಾಗೆಗೆ ಸಿಕ್ಕೋ ಹಾಗೆ ಮಿಟಾಯಿ ಇಟ್ಟುಕೊಂಡು ದಾರೀಲಿ ಬರೋದು; ಅದು ಬಂದು ತಕ್ಕೊಂಡ್ರೆ ಜೀವಕ್ಕೆ ಊನ ಅನ್ನೋದು. ಇದು ಯಾವ ಬುದ್ಧಿಮಾತು? ಹೋಗು, ಸುಮ್ಮನೆ ಮನೆಗೆ ಹೋಗು," ಅಂದೆ. "ಅಂಗಾದರೆ, ಭಯ ಇಲ್ಲ ಅಂತೀಯ?" "ಭಯಾನೂ ಇಲ್ಲ ಗಿಯಾನೂ ಇಲ್ಲ, ಜಗಳ ಆಡಿದಷ್ಟೂ ಆಯುಸ್ಸು ಹೆಚ್ಚು ತಿರಿಗಿ ಆ ಸಮಾಚಾರ ಯೋಚನೆ ಮಾಡದೆ ನಗುತಾ ಮನೆಗೆ ಹೋಗು."

ಮಂಗಮ್ಮ ಹೊರಟು ಹೋದಳು. ನಾನು ಇವಳ ಮನಸ್ಸಿನ ಸ್ಥಿತಿಯನ್ನು ಕುರಿತು ಯೋಚಿಸಿ ಆಶ್ಚರ್ಯಪಟ್ಟೆ ಮಗ ಬೇಕು, ಸೊಸೆ ಬೇಕು, ಮೊಮ್ಮಗ ಬೇಕು; ಆದರೆ ತಾನು ಯಜಮಾನಿ ಅಂತ ತನಗೆ ಎಲ್ಲರೂ ಗೌರವ ತೋರಿಸಬೇಕು. ಮನುಷ್ಯನಾದವನಿಗೆ ಈ ಚಪಲ ತಪ್ಪಿದ್ದಲ್ಲ. ಜೀವನದಲ್ಲಿ ಏನೋ ಬೇಸರ. ಆದರೂ ಸಾಯುವುದಕ್ಕೆ ಇಷ್ಟವಿಲ್ಲ. ಆದರೆ ಆ ಇಷ್ಟ ಇಲ್ಲ ಅಂತ ತೋರಿಸಿಕೊಳ್ಳುವುದಕ್ಕೆ ಇಷ್ಟ ಇಲ್ಲ. ಹಳ್ಳಿಯ ಜನ, ತಿಳಿಯದ ಜನ, ಮುಚ್ಚುಮರೆ ಅರಿಯದವರು ಎಂತ ನಾವು ಹೇಳುವ ಇಂಥವರ ಮನಸ್ಸಿನ ಸ್ಥಿತಿಯೇ ಹೀಗೆ ಪರದೆಯ ಹಿಂದೆ ಪರದೆ, ನೆರಿಗೆಯ ಹಿಂದೆ ನೆರಿಗೆ, ಮಡಿಕೆಯ ಮರೆಯಲ್ಲಿ ಮಡಿಕೆ, ಇದು ಏನು ನಾಟಕದ ಸೂತ್ರ ಎಂತ ಎಂದುಕೊಂಡೆ.

ಮಂಗಮ್ಮ ತಿರುಗಿ ಬಂದಾಗ ಇನ್ನೊಂದು ಸಮಾಚಾರ ಹೇಳಿದಳು. ಆ ಮೊಮ್ಮಗ ಅಮ್ಮನ್ನ ಅಪ್ಪನ್ನ ಬಿಟ್ಟು ಬಿಟ್ಟು ಇವಳ ಹತ್ತಿರಲ್ಲೇ ಬಂದುಬಿಟ್ಟಿತಂತೆ. ಅವಳಿಗೆ ಬಹಳ ಸಂತೋಷ. ಆ ಹುಡುಗನ ಧೈರ್ಯ ನೋಡು ಅಂತ. "ಏನವ್ವ, ಚಿಳ್ಳೆ ಒಂದು ಚೋಟುದ್ದ ಐತೆ ಹೈದ. ಅಮ್ಮನ್ನ ಬಿಟ್ಟು ಬರೋದು ಅಂದ್ರೆ ಏನವ್ವ? ನಿನ್ನೆ ಮದ್ಯಾನ ನನ್ನ ಮನೆಗೆ ಬಂದ ಹುಡುಗ ತಿರಿಗಿ ಅಮ್ನ ಹತ್ತಿರಕ್ಕೆ ಹೋಗೋದಿಲ್ಲ ಅಂದುಬಿಡ್ತು. ಇಷ್ಟು ದಿನ ಮುಚ್ಚುಮರೇಲಿ ಬರ್ತಾ ಇದ್ದದ್ದು ಯಾವಾಗ ಮನೆಗೆ ಹೋಗಲ್ಲೋ ಅವರ ಅಮ್ಮ ಬಂದು ರಾದ್ಧಾಂತ ಮಾಡಿದಳು. ಬಾ ನಿನಗೆ ಹೊಡೀತೀನಿ ಅಂದ್ಳು ಹೈದ ನಾನು ಬರೊಲ್ಲ ಅಂತ ನನ್ನ ಕಾಲ್ಹಿಡುಕೊಂಡು ನಿಂತುಬಿಡ್ತವ್ವ ಹೇಗೋ ಅಂತ ಇನ್ನಿಲ್ಲದೆ ಹೇಳ್ದೆ ಅವರಪ್ನು ಬಂದು ಕೇಳ್ದ ಹೋಗಲ್ಲ. ನನ್ನ ತಾವೇ ನಿಂತುಬಿಡ್ತು ತಾಯಿ. ಹತ್ತು ದಿನ ಬೇರೆ ಮನೇಲಿ ಒಬ್ಬಳೇ ಮಲಗಿ ಯಾವಾಗಲಾದರೂ ಒಸಿ ಭಯಪಡುತಾ ಇದ್ದಿ ನಿನ್ನೆ ಈ ಹೈದ ಜೊತೆಗಿದ್ದ ಅಂದದ್ದೆ ಏನೋ ಧೈರ್ಯ ಬಂದುಬಿಡ್ತವ್ವ ಏನೆಂದರೂ ಗಂಡಸು ನೋಡವ್ವ ದೇವರು ನೋಡಿ ಅವನಿಗೆ ಬುದ್ಧಿ ಕೊಟ್ಟದ್ದು. ಬೆಳೆದ

ಮಗ ಬೇಡ ಅಂದ್ರೆ ಈ ಚಿಳ್ಳೆ ಮೊಮ್ಮಗ ನಾನಿದ್ದೀನಿ ಸುಮ್ಗಿರು ಅಂತ ಬಂದುಬಿಟ್ಟಲ್ಲವ್ವ! ರಾಮಾಣ್ಯ ಮಾಡಿದಳು ಸೊಸಿ. ರಾತ್ರಿಯೆಲ್ಲ ಜಪ್ಪಯ್ಯ ಅಂದ್ರೂನೂ ಇದು ಹೋಗಲಿಲ್ಲ. ಬೆಳಗಾಗ ನಾ ಇಲ್ಲಿ ಬರಬೇಕಾದ್ರೆ ನೀನು ಒಂಟಿಯಾಗಿರ್ತೀಯೋ ಅಂತ ಅವರಮ್ಮನ ಮನೆಬಾಕಿಲು ತಾವು ಕರಕೊಂಡು ಹೋಗಿ ನಿಲ್ಲಿಸಿದೆ. ಒಳಗೆ ಹೋತು. ನಾ ಇತ್ಲಾಗೆ ಬಂದಿ," "ಅವಳು ಮಗೂನ ಹೊಡೆದರೆ ಏನು ಮಾಡ್ತೀಯ?" ಅಂತ ನಾನು ಕೇಳಿದೆ. "ಮಗ ಒಪ್ಪೊತ್ತಾದರೂ ಮನೆಗೆ ಬರ್ತಾನಲ್ಲ ಎಂತ ಸಂತೋಷ ಇಲ್ಲವೇ ತಾಯಿ ಅವಳಿಗೆ? ಹತ್ತಿರಲ್ಲೇ ಇದ್ರೆ ಹೊಡೆಯೋಣ ಅನ್ನಿಸತದೆ. ಈಗ ನೋಡವ್ವ ನನ್ಗೆ ಒಂದೇ ಮನೇಗೆ ಇದ್ದಾಗ ನನ್ನ ಸೊಸಿ ಎಂತಾ ಚೆಲುವಿ ಅಂತ ತಿಳೀತಿರಲಿಲ್ಲ ಈಗ ನೋಡ್ತೀನಿ ದೂರದಿಂದ. ಏನೋ ಮುಖ ಗಂಟು ಹಾಕಿಕೊಂಡಾಗ ಹೆಂಗೋ ಇರ್ತದೆ ಅನ್ನು ಮಿಕ್ಕಾದ ಹಂಗೆ ಒಳ್ಳೆ ಚೆಲುವಿ, ಅದಕ್ಕೇ ನನ್ನ ಹೈದ ಮರುಳಾಗಿರೋದು. ಅವನೂ ಹಂಗೆ. ಆಗ ಏಸೊತ್ತಿಗೆ ಮನೆಗೆ ಬಂದ್ನು ಏಸೊತ್ತಿಗೆ ಹೊಲಕೆ ಹೋದ್ನು ನೋಡ್ತಿರಲಿಲ್ಲ. ಈಗ ನನ್ನ ಮನೆ ಬಾಗಿಲಾಗ ಕೂತು, ಇದ್ಯಾಕೆ ಇನ್ನೂ ಬರಲಿಲ್ಲ. ಇದ್ಯಾಕೆ ಇಷ್ಟು ಬೇಗ ಹೊಂಟುಬಿಟ್ಟ ಅಂತ ನೋಡುತಾ ಇದೀನವ್ವ ಅವಳಿಗೂ ಹಂಗೇ ಅಲ್ಲವೇ? ಹೊಡೆದರೆ ನಾಳೆ ಬೆಳಗಾಗ ನಾನು ಮೊಸರು ಮಾರೋಕೆ ಹೊರಟಾಗ ನನ್ನ ಜೊತೆಗೆ ಬಂದುಬಿಡ್ತಾನೆ. ತಿಂಗಳು ದಿನ ಹೊತ್ತು ನೋವುಪಟ್ಟು ಹೆತ್ತ ಮಗನ್ನ ಬಿಟ್ಟುಕೊಟ್ಟಾಳ ತಾಯಿ?" ಇವಳ ಯೋಚನೆ ಎಷ್ಟು ದೂರ ಓಡುತ್ತದೆ ಎಂದು ನನಗೆ ಆಶ್ಚರ್ಯವಾಯಿತು. ಇಷ್ಟರಲ್ಲಿ ಇವಳ ಜಗಳ ಸುಮುಖವಾಗಿ ಕೊನೆಗಾಣುತ್ತದೆಂದು ನನ್ನ ಮನಸ್ಸಿಗೆ ತೋರಿತು.

ಆದದ್ದೂ ಹೀಗೆಯೇ. ಎರಡು ದಿನ ಹುಡುಗ ತಾಯಮನೆಗೆ ಹೋದವನು ಮಾರನೆಯ ದಿನ ಪಾಟೀ ಜೊತೆಗೆ ಬೆಂಗಳೂರಿಗೆ ಬರುತ್ತೇನೆಂದು ಹಠ ಮಾಡಿದ. ಮುದುಕಿ ಮೊಸರಿನ ಗಡಿಗೆ ತಲೇಮೇಲಿಟ್ಟುಕೊಂಡು ಮೊಮ್ಮಗನ್ನ ಕಂಕುಳಲ್ಲಿಟ್ಟುಕೊಂಡು ಮೂರುಮೈಲಿ ಬರೋದು ನಿಜವಾದ ಮಾತೆ? ಏನು ಮಾಡೋದೆಂದು ಅವಳಿಗೆ ತೋರಲಿಲ್ಲ. ಮಗನೂ ಸೊಸೆಯೂ ಕೂಡ ಬಂದು, "ಏನೋ ಆತವಾ ನಾವು ತಪ್ಪು ಮಾಡಿದಿವಿ. ನೀನು ಕೋಪಿಸಿಕೊಂಡ್ರೆ ಹ್ಯಾಗವ್ವ?" ಎಂದರು. ಊರಿನ ಜನವೂ ನಾಲ್ಕು ಜನ ಬಂದು ಇವಳಿಗೆ ಸಮಾಧಾನ ಹೇಳಿದರು. ದೊಡ್ಡಸ್ತಿಕೆ ಕಳಕೊಳ್ಳದ ಹಾಗೆ ಮಂಗಮ್ಮ ತನ್ನಿಷ್ಟದಂತೆ ಸೊಸೆಯ ಜೊತೆಗೆ ಸೇರಿಕೊಂಡಳು. ಆದರೆ ಈ ಮೊಮ್ಮಗ ಅಜ್ಜಿಯ ಜೊತೆಗೆ ಇರಬೇಕು ಅಂತ ಅನ್ನೋದನ್ನ ಹಠ ಮಾಡಿಬಿಟ್ಟ. ಅದರ ಮೇಲೆ ಹೊಸ ಒಂದು ಏರ್ಪಾಡಾಯಿತು. ಮೊದಲಿನಿಂದಲೂ ಹಾಲು ಮೊಸರಿನ ವ್ಯಾಪಾರ ಮಂಗಮ್ಮನ ಕೈಯಲ್ಲಿತ್ತು. ಸೊಸೆ ಬಂದ ಮೇಲೆ ಕೂಡ ಮಂಗಮ್ಮ ಈ ಕೆಲಸ ತನ್ನ ಕೈಲೇ ಇಟ್ಟುಕೊಂಡಿದ್ದಳು. ಹೆಸರಿಗೆ ಮನೆ ಸೊಸೆ ಅಂದಮೇಲೆ ಹಿಟ್ಟು ಸಟ್ಟುಗ ನಿನ್ನದು ಅಂತ ಕಾರಣ. ನಿಜವಾಗಿ, ಮೊಸರು

ಮಾರಿದರೆ ಕೈಲಿಟ್ಟು ಕಾಸು ಓಡಾಡುತ್ತದೆ ಅನ್ನುವುದು. ಈಗ ಈ ಮೊಮ್ಮಗನಾದೋನು ಅಜ್ಜೀ ಜೊತೆಗೆ ಇರಬೇಕು ಅಂತ ಯಾವಾಗ ಹಠ ಮಾಡಿದ. ಸೊಸೆ, "ಏನು ಬಿಸಿಲಲ್ಲಿ ಸುಮ್ಮನೆ ಹೋಗೋದು ಬರೋದು? ವಯಸ್ಸಾದ ಮೇಲೆ ಎಷ್ಟು ದಿನ ಈ ಕೆಲ್ಸ ಮಾಡೋಕಾಗ್ತದೆ? ಹಿಟ್ಟು ಸಟ್ಟುಗ ನೋಡಿಕೊಂಡು ನೀನು ಯಜಮಾನ್ತಿ ಮನೇಲಿರು, ನಾನು ಹೋಗಿ ಮೊಸರು ಮಾರಿಕೊಂಡು ಬರ್ತೀನಿ", ಅಂದಳು. ಮಂಗಮ್ಮ "ಆಗಲಿ," ಅಂದಳು. "ಎಂದಾದರೂ ನಾನು ಹೋಗಿ ಬರ್ತೀನಿ, ದಿನಾ ನೀನು ಹೋಗು," ಎಂದು ಈ ಕೆಲಸವನ್ನು ಸೊಸೆಗೆ ಒಪ್ಪಿಸಿದಳು. ಒಂದು ದಿನ ಅತ್ತೆ ಸೊಸೆ ಇಬ್ಬರೂ ಬಂದರು. ಒಬ್ಬಳ ಕೈಲಿ ಮಗು; ಇನ್ನೊಬ್ಬಳ ತಲೇಮೇಲೆ ಮೊಸರಿನ ಗಡಿಗೆ, "ಇವಳೇ ಕಾಣವ್ವ ನನ್ನ ಸೊಸಿ. ಪಾಪ ಮುದುಕಿ ಯಾಕೆ ಅವಳೇ ಬೇಸಿಕೊಳ್ಳಬೇಕು ಅಂತ ತಿರುಗಿ ಕರಕೊಂಡಾಳೆ ಮನೇ ಒಳಾಕ್ಕೆ. ಸುಮ್ಮನೆ ಬಿಸಿಲಾಗ ಓಡ್ಯಾಡಬೇಡ ಅಂದ್ಲು ಆಗಲಿ ಅಂದಿದೀನಿ. ಇನ್ನು ಮೇಲೆ ಅವಳೇ ಮೊಸರು ತರ್ತಾಳವ್ವ," ಅಂತ ಹೇಳಿ, ಮಂಗಮ್ಮ ನಮ್ಮನ್ನು ಸೊಸೆಗೆ ಒಪ್ಪಿಸಿದಳು. ನಾನು ಅತ್ತೆಯನ್ನೂ ಸೊಸೆಯನ್ನೂ ಮಾತನಾಡಿಸಿ ಸಮಾಧಾನವಾಗಿ ನಡಕೋಬೇಕು ಎಂತ ಬುದ್ಧಿವಾದ ಹೇಳಿ, ಎರಡು ತಲೆ ಅಡಿಕೆಕೊಟ್ಟು ಕಳುಹಿಸಿದೆ. ಈಚೆಗೆ ಆ ಸೊಸೆ ಮೊಸರು ತರುತ್ತಾ ಇದ್ದಾಳೆ.

ಅತ್ತೆಯ ಪರವಾಗಿ ಇಷ್ಟೆಲ್ಲಾ ಮಾತು ಆಯಿತಲ್ಲ. ಈ ಸೊಸೆಯ ಪರವಾಗಿ ಏನಿರಬಹುದು ಅಂತ ನಾನು ಒಂದು ದಿನ, "ಎಲೆ ನಂಜಮ್ಮ ನೀನು ಒಳ್ಳೆ ತಿಳದೋಳ ಹಂಗಿದ್ದೀಯಲ್ಲ. ಅತ್ತೇನ ಮನೆಬಿಟ್ಟು ಓಡಿಸಬಹುದೇನೆ?" ಅಂದೆ. ನಂಜಮ್ಮ ಅದಕ್ಕೆ "ಅತ್ತೇನ ಓಡಿಸೋಕೆ ನಾನೇನು ರಾಚ್ವಸೀನಾವ್ವ? ಅಲ್ರವ್ವಾ, ಅತ್ತೆಯಾದೋಳು ಯಾವ ಮಾತಿಗೂನು ನಾನು ಅಂದುಬಿಟ್ಟು ಆ ಮಗನಾದೋನ್ನ ಮನೆಗಂಡ್ಸು ಅಂತ ನೋಡ್ದೀರಾ ಅವ ಮುಟ್ಠಾಳ ಆಗಿಬಿಟ್ರೆ. ಅವ ಗಂಡನಾಗೋದೇನು, ನಾನು ಹೆಂಡ್ತಾಗೋದೇನು, ನಾನು ಸಂಸಾರ ಮಾಡೋದೇನು? ಏನೋ ಒಳ್ಳೆಯದಾಯಿತು, ಅತ್ತೆ ಹೆತ್ತಳು ಅತ್ತೆ ಸಾಕಿದಳು, ಗಂಡನ್ನ ಬೇಕಾದರೆ ಅವಳೇ ಸ್ವತಂತ್ರ ಅಂತ ಇಟ್ಟುಕೊಳ್ಳಲಿ ಅಂದೆ. ನನ್ನ ಮೊಗಾನ್ನ ನಾನು ಹೊಡೀಕೂಡ್ದು ಅಂತ ಮಾಡಿಬಿಟ್ರೆ ಅತ್ತೆ, ಇದು ಯಾತರ ಸೊಸೀತನ ಅವ್ವಾ?" ಎಂದಳು. "ಮಗ ನಿನ್ನೋನು ಅನ್ನೋದಕ್ಕೆ ಅವನ್ನ ಹೊಡೆಯೋದೆ ಗುರ್ತೇನೆ?" "ಹೊಡೆಯೋದೇ ಆಡಿಸೋದೋ, ಹೊಡೆದಾಗ ಯಾಕೆ ಹೊಡಿತೀಯ ಅನ್ನೋರು ಆಡಿಸಿದಾಗ ಯಾಕೆ ಆಡಿಸುತೀಯಾ ಆಗಬಹುದು. ಇದ್ನೆಲ್ಲ ಯಾರವ್ವ ಯವಹರಣೆ ಹೇಳೋದು? ನನ್ನ ಮಗ್ನು ಅಂದ್ರೆ ನನ್ನ ಮಗ್ನು. ನನ್ನ ಗಂಡ್ನು ಅಂದ್ರೆ ನನ್ನ ಗಂಡ್ನು ಸೊಸಿ ಅಂತ ಬಂದೋಳು ಒಂದು ಮಾತು ಅಂದ್ರೆ ಅನ್ಲಿ ಒಂದು ಏಟು ಹೊಡ್ದರೆ ಹೊಡೀಲಿ ಅಂತ ಅನ್ದೀರಾ ಇದ್ರೆ ನಾನು ಸಂಸಾರ ಮಾಡೋದು ಯಾಕೆ?" ನನಗೆ ಮಂಗಮ್ಮ ಮಾತನಾಡಿದಾಗ ಆ ಮಾತು ಸರಿ ಎಂದು ತೋರಿದ ಹಾಗೆ ಇವಳು ಮಾತನಾಡಿದಾಗ ಇದೂ ಸರಿ ಅಂತ ತೋರಿತು.

"ಹಾಗಾದರೆ, ಈಗ ನಿನಗೆ ಮನೇಲಿ ಸ್ವಲ್ಪ ಸ್ವತಂತ್ರ ಬಂತೋ?" "ಈಗ ಮೊದಲಿಗನ್ನಾ ಮೇಲು ತಾಯಿ, ಹೆಂಗಾದರೂ ಸರಿಸಿಕೊಂಡು ಹೋಗ್ಬೇಕು. ಸರಿಸಿಕೊಳ್ದಿರಾ ಜಗಳ ಮಾಡಿದ್ರೆ ನಮ್ಮತ್ತೇ ಕಾಸನ್ನೆಲ್ಲ ಇನ್ಯಾರಾದರೂ ಬಾಯಿಗೆ ಹಾಕ್ಕೋತಾರೆ. ನಮ್ಮೂರಾಗ ರಂಗಪ್ಪ ಇಂತ ಇದ್ದಾನೆ. ನಮ್ಮ ಅತ್ತೆ ಬೇರೆ ಇದ್ದಾಗ ಅವನು ಅವಳ್ನ ಸಾಲ ಕೇಳಿದ್ನಂತೆ. ಇವಳು ಕೊಡ್ತೀನಿ ಅಂದಳಂತೆ. ಅದ್ನ ಅವ ಹೇಳಿದ. ಅದರ ಮೇಲೆ ನಾನು ಮೊಗಾನ್ನ ಕರೆದು 'ಎಲೋ ನೀನು ಪಾಟೀ ಹತ್ತಿರ ಕರಿಯೋವರೆಗೆ ಇಲ್ಲಿ ಬರಕೂಡದು' ಅಂತ ಕಳ್ಸಿಕೊಟ್ಟೆ ಜಗಳ ಹೆಂಗಾದರೂ ತೀರಿದರೆ ಸಾಕು ಅಂತ ಇದೆಲ್ಲ ಸರಿಮಾಡಿದೆ ತಾಯಿ," "ಹಂಗಾದರೆ ಅಜ್ಜಿ ಹತ್ತಿರಕ್ಕೆ ಮಗು ತಾನೇ ಹೋಗಲಿಲ್ಲವೇ?" "ಮೊಗಾನನೇ ಹೋಯ್ತು ತಾಯಿ. ನಾನು ಕಳ್ಸಿಕೊಟ್ಟೆ" "ಹೀಗೆ ಮಾಡ್ತೀನಿ ಎಂತ ನಿನ್ನ ಗಂಡನಿಗೆ ಹೇಳಿದ್ಯೇನು?" "ಅಯ್ಯೋ ಇದ್ನೆಲ್ಲ ಹೇಳೋರುಂಟೆ ಅವ್ವ ಗಂಡಸರಿಗಿದೇನು ತಿಳೀತದೆ".

ಮಂಗಮ್ಮನಿಗಿಂತ ನಂಜಮ್ಮ ಬುದ್ಧಿಯಲ್ಲೇನೂ ಕಡಿಮೆ ಇಲ್ಲ ಆ ಮನೆಯಲ್ಲಿ ಈಗ ಅತ್ತೆಗೆ ಸೊಸೆಗೆ ಸ್ವಾತಂತ್ರ್ಯದ ಸ್ಪರ್ಧೆ ನಡೆಯುತ್ತಿದೆ. ಅದರ ಮೂರ್ತಸ್ವರೂಪ ಆ ತಾಯ ಮಗ ಈ ಹೆಂಡತಿಯ ಗಂಡ. ಅವನನ್ನು ಬಿಟ್ಟುಕೊಡಕೂಡಲೆಂದು ತಾಯಿ ಮನೋಗತ. ಅವನನ್ನು ಹಿಡಿಯಲೇಬೇಕೆಂದು ಈ ಸೊಸೆಯ ವ್ರತ. ಇದು ಎಲ್ಲಾ ಕಡೆಯಲ್ಲಿಯೂ ನಡೆಯುತ್ತಿರುವ ವ್ಯಾಪಾರ. ಇದರ ಗೆಲುವು ಸೋಲು ಹೀಗೆಯೇ ಎಂದು ಹೇಳುವಂತಿಲ್ಲ. ನೀರೊಳಗಿರುತ್ತ ಮಗುವಿನ ಕಾಲು ಹಿಡಿದಿರುವ ಮೊಸಳೆಯ ಹಾಗೆ ಸೊಸೆ. ಮೇಲೆ ನಿಂತು ಮಗುವಿನ ತೋಳನ್ನು ಹಿಡಿದುಕೊಂಡು ಅದನ್ನು ಉಳಿಸುತ್ತೇನೆ ಎನ್ನುವವಳು ತಾಯಿ. ಮಧ್ಯೆ ಆ ಮಗುವಿನ ಪಾಡು ತಾನೇ ಸ್ವಲ್ಪ ಕಷ್ಟ ಹಳ್ಳಿಯಲ್ಲಾದರೆ ಮೊಸರು ಮಾರುವ ಮಂಗಮ್ಮನ ಮನೇಲಿ, ಪಟ್ಟಣದಲ್ಲಿ ಮೊಸರು ಕೊಳ್ಳುವ ತಂಗಮ್ಮನ ಮನೇಲಿ–ನಡೆಯುತ್ತಾ ಇದೆ ಈ ವ್ಯಾಪಾರ; ಕೊನೆಯ ಅಂಕ ಕಾಣದ ನಾಟಕ.

# ಮನೆಯಿಂದ ಮನೆಗೆ

–ಕೆ.ಎಸ್. ನರಸಿಂಹಸ್ವಾಮಿ

ಮರುಷ ತುಂಬಿದರೆ ಹೊರಮನೆಯಿಂದ ಹೊರಮನೆಗೆ
ವರ್ಗ. ವರ್ಗವೆಂದರೆ ಮತ್ತೆ
ಗಂಟು ಮೂಟೆಯ ಬಿಗಿತ, ಇನ್ನಷ್ಟು ಆಯಾಸ,
ತಿರುಪಿರದ ಲಾಂದ್ರಗಳು, ತಳವಿರದ ಗೊಡೆಗಳು,
ಜರಡಿ, ತೊಟ್ಟಿಲು, ಒನಕೆ – ಇವುಗಳದೆ ಮೆರವಣಿಗೆ!

ಸರಕು ಸುಮ್ಮನೆ ಭಾರ, ಎಸೆಯಬಾರದೆ ಹೇಳು.
'ಎಸೆದರಾಯಿತೆ, ಹೇಳಿ?– ಮೊದಲು ಹೊಸತನು ತನ್ನಿ'
ಸ್ಥಳವಿಲ್ಲ ಬಂಡಿಯಲಿ. 'ಹೊತ್ತು ಸಾಗಿಸಬೇಕು';
ಹೊತ್ತು ಸಾಗಿಸಬೇಕು? ಅದಕ್ಕೆ ಕತ್ತಲೆ ಬೇಕು!
'ಕತ್ತಲೆಗೆ ಕಾಯೋಣ!'
(ಏಳು ಮಕ್ಕಳ ತಾಯಿ, ಸ್ನೇಹಮಯಿ, ನಕ್ಕಳು.)
ನಗೆ ಕೊಲ್ಲುವಂತೆ ಹಗೆ ಕೊಲ್ಲಲಾರದು; ಏಳು,
ಹೊಸಮನೆಗೆ ಹೋಗೋಣ ಮೊದಲು. ಸಂಜೆಗೆ ಬಂದು
ಸಾಗಿಸುವ ಕೆಲಸ ನನಗಿರಲಿ.
ಕಂಬನಿಗೊಳವ
ಕೆಂಗರಿಯ ಮೀನು ಕಲಕಿತ್ತು. ಗೆದ್ದಳು ಹೆಣ್ಣು!
ನಗಬಹುದು ಹೀಗೆ ಒಂದೊಂದು ಸಲ ಬದುಕಿನಲ್ಲಿ.

(ii)

ಒಂದೊಂದು ಮನೆಯ ಬಿಡಲೊಂದೊಂದು ಕಾರಣ.
ಈ ಸಲದ ಅನುಭವ: ಮನೆವಂತ ಒಳ್ಳೆಯವ;
ಅವನ ಹೆಂಡತಿ, ಮಗಳು? – ಒಳ್ಳೆಯವರಿರಬೇಕು!
"ಮನೆಯ ಬಿಡಿ" ಎಂದವರು ನಮಗೆ ಹೇಳಿರಲಿಲ್ಲ,
ಅವರು ಮಾಡಿದ ಕೆಲಸ ಬೇರೆ!

ಓದು ಹತ್ತದ ಮಗಳ ದನಿಯಾದರೂ ಕುದುರಿ
ಮದುವೆ ಹತ್ತಿರವಾಗಲೆನುವ ಹಂಬಲಿನಿಂದ
ಸಂಗೀತ ಪಾಠವನು ಗೊತ್ತುಮಾಡಿದರಷ್ಟೆ!

ಆ ಎಂಟು ತಿಂಗಳೂ ಮಳೆಗಾಲ, ಕಪ್ಪೆಗಳು.
ಮೊದಲು. ಕೊನೆ–ಆ ಹುಡುಗಿ ಕಲಿತ ಒಂದೇ ಚರಣ:–
"ಕೆರೆಯ ನೀರನು ಕೆರೆಗೆ ಚೆಲ್ಲಿ,"
ಎಲ್ಲ ಮಾಡುವ ಕೆಲಸವಿಷ್ಟೆ ಇಲ್ಲಿ!

ಕೆರೆಯ ನೀನು ಕೆರೆಗೆ ಚೆಲ್ಲಿ
ಬೆಳಗಿನಲ್ಲಿ, ಮಧ್ಯಾಹ್ನದಲ್ಲಿ, ಸಂಜೆಯಲ್ಲಿ
ನೀರ ತುಂಬಲು ಇನ್ನು ಸ್ಥಳವಿರದೆ ಮನೆಯಲ್ಲಿ
ಬಂದು ನಿಂತರೆ ನಾವು ನಡುಬೀದಿಯಲ್ಲಿ
'ನೀರ ಚೆಲ್ಲಿದ ಮಂದಿ ನೀವೆಂದು' ಮನೆವಂತ
ಒಟ್ಟು ತೆರಿಗೆಯ ಬಿಗಿದ ನನ್ನ ತಲೆಗೆ!
ನೀರನಳೆಯುವ ಯಂತ್ರ ನಿಜವನ್ನೆ ನುಡಿದಿತ್ತು;
ಇನ್ನೊಂದು ಮನೆಯ ಕದ ನಮಗಾಗಿ ತೆರೆದಿತ್ತು.

(iii)

ಇದ್ದವರಿಗೊಂದು ಮನೆ, ಇಲ್ಲದವರಿಗೆ ನೂರು.
ಇಲ್ಲಿ ಹಿಂದಿದ್ದವರಿಗೆಷ್ಟು ಮಕ್ಕಳೊ ಕಾಣೆ!
ಎಲ್ಲೆಲ್ಲೂ ನೆಲವ ಕೆತ್ತಿವೆ;
ನಲ್ಲಿಗಳ ಮುರಿದಿವೆ;
ದೀಪಗಳ ಕೆಡಿಸಿವೆ;
ಹೂಗಿಡಗಳ ಕಿತ್ತೆಸೆದಿವೆ;
ಎಲ್ಲ ಬಾಗಿಲ ಮೇಲೆ ಸೊನ್ನೆಗಳ ಬರೆದಿವೆ.
ನಾಳೆ ಈ ಹುಡುಗರಿನ್ನೇನು!

ಇಲ್ಲಿ ಹೊಸತನವೆಲ್ಲಿ? ಯಾರೋ ಇದ್ದ ಮನೆಗೆ
ನಾವು ಬಂದಿದ್ದೇವೆ. ನಾವು ಹೊಸಬರೆ? ಅಲ್ಲ.
ಕಂದು ಗೋಡೆಯ ಮೇಲೆ ಇಲ್ಲಣದ ತೆರೆಬಿದ್ದು
ಕಾದಿರುವ ನಾಟಕದ ಹೆಸರು 'ಹೊಸತು.'
ಈ ಮನೆಗೆ ಬಂದೆವೀ ದಿನ.–
ಗಾಜೊಡೆದ ಪಠಗಳ ರಿಪೇರಿಗವಸರವಿಲ್ಲ;
ಪಾತ್ರೆಗಳಿಗಾಗಬೇಕಾದರೆ ಕಲಾಯ
ತಳ್ಳಬಹುದಿನ್ನೊಂದು ವಾರ.

ಹೊಸಚಾಪೆ, ಕಾಲೊರಸಿ – ನಾಳೆ ತರಬಹುದಲ್ಲ?
"ಈಗೇನು ಮಾಡೋಣ?" ಮತ್ತೆ ಕೇಳುವೆಯಲ್ಲ!
ಹೊಕ್ಕ ಮನೆಯೆಲ್ಲ ಹೊಸಮನೆಯೆಂದೆ ಕರೆಯೋಣ;
ಹಳೆಯ ಬಾಗಿಲಿಗೆ ಹೊಸತೋರಣವ ಕಟ್ಟೋಣ;
ಶಾಲೆ ಮಕ್ಕಳ ಹಾಗೆ ಹೊಸತನವ ಕಲಿಯುತ್ತ
ಇನ್ನೊಂದು ವರುಷ ಕಳೆಯೋಣ!

(iv)

ಒಂದೊಂದು ಮನೆಗೆ ಒಂದೊಂದೆ ವರುಷದ ಸರದಿ;
ಅಷ್ಟು ಹೊಸತೇನಲ್ಲ ನಾಳೆಯೋದುವ ವರದಿ.
ಸ್ಮೃತಿಪಥವ ಬೆಳ್ಳಿದಾರದ ಸುರುಳಿ ಬಿಚ್ಚುತಿದೆ;
ಬೆಲೆಯಿರದ ಸರಕ ಸಾಗಿಸಿದೆ ಬಾಗಿದೆ ಬೆನ್ನು;
ಕೆರೆಯ ನೀರನು ಕೆರೆಗೆ ಚೆಲ್ಲಿ ಬಿಳಿಚಿದೆ ಕಣ್ಣು;
ಮಗು ಬರೆದ ಸೊನ್ನೆ; ಮನೆವಂತರಾಡಿದ ಮಾತು;
ನಕ್ಕನಗೆ; ಕಣ್ಣೀರು–
ಒಂದಲ್ಲ, ಎರಡಲ್ಲ, ನಮ್ಮ ಪಾಲಿನ ಪುಣ್ಯ!
ಬಂಡಿಯಲಿ ಸ್ಥಳವಿಲ್ಲ, ಹೊತ್ತು ಸಾಗಿಸಬೇಕು;
ಅದಕೆ ಕತ್ತಲೆ ಬೇಕು.
ಕತ್ತಲೆಗೆ ಕಾಯೋಣ!

(iv)

ಮನೆಯಿಂದ ಮನೆಗೆ, ಹೊರಮನೆಯಿಂದ ಹೊರಮನೆಗೆ
ಮೊದಲ ಮನೆಯಿಂದ
ಆದರವಿರದ, ಕದವಿರದ, ಹೆಸರಿರದ ಇನ್ನೊಂದು ಮನೆಗೆ
ಹೊಸತು ಹಳೆಯದು ಎಲ್ಲ ಯಾತ್ರೆ ಹೊರಟಿದ್ದೇವೆ.
ಅಲ್ಲಿ ತಡೆಯುವರಿಲ್ಲ;
ಒಳಗೆ ಕರೆಯುವರಿಲ್ಲ;
ಇನ್ನೊಂದು ಮನೆಯಿಲ್ಲ;
ಹೊರಮನೆಯ ನೆರಳಿಲ್ಲ;
ಹೋದವರು ಹಿಂದಿರುಗಿ ಬರಲು ಹಾದಿಗಳಿಲ್ಲ;
ಅದೇ ಕಡೆಯ ಮನೆ!
ಬಾಂದಳದ ತಾರೆಗಳ ಓರೆಗಣ್ಣಿನ ಕೆಳಗೆ ಆಗಾಗ ಬೀಸುವುದು ಬಯಲ ಗಾಳಿ.

# ಚಂದ್ರಗುತ್ತಿ ಜಾತ್ರೆಯಲ್ಲಿ ನಡೆದ ಕ್ರೌರ್ಯ

**–ಕಡಿದಾಳ ಶ್ಯಾಮಣ್ಣ**

ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನ ಚಂದ್ರಗುತ್ತಿಯ ರೇಣುಕಾಂಬಾ ದೇವಿಯ ಈ ವರ್ಷದ ಜಾತ್ರೆ ಹಿಂದೆಂದಿಗಿಂತಲೂ ಹೆಚ್ಚಿನ ಕುತೂಹಲ ಕೆರಳಿಸಿತ್ತು. ದಿನಾಂಕ 19, 20, 21ನೇ ದಿನಾಂಕದಂದು ಚಂದ್ರಗುತ್ತಿಯಲ್ಲಿ ಜಾತ್ರೆ ನಡೆಯಿತು. ಜಾತ್ರೆ ಜತೆಗೆ ಬೆತ್ತಲೆ ಸೇವೆಯೂ ಸೇರಿಕೊಂಡಿದ್ದರಿಂದ ಮತ್ತು ಇದನ್ನು ನಿಲ್ಲಿಸುವ ಪ್ರಯತ್ನವೂ ನಡೆಯುವುದೆಂದಿದ್ದರಿಂದ ಜನರ ಗಮನ ಸೆಳೆಯಲು ಕಾರಣವಾಯ್ತು. ಪ್ರತಿವರ್ಷ ಜಾತ್ರೆಯ ಮೂರು ದಿನವೂ ಗಂಡಸರೂ, ಹೆಂಗಸರೂ, ಮಕ್ಕಳೂ ನದಿಯಲ್ಲಿ ಮಿಂದು ಬೆತ್ತಲೆ ಮೈಯಲ್ಲೇ ವರದಾ ನದಿಯಿಂದ ಚಂದ್ರಗುತ್ತಿ ರೇಣುಕಾಂಬ ದೇವಾಲಯದವರೆಗೂ ಬೆತ್ತಲಾಗಿಯೇ ನಡೆದುಕೊಂಡು ಹೋಗಿ ಅಲ್ಲಿ ಬೆತ್ತಲೆ ದೇವರಾದ ರೇಣುಕಾಂಬೆಗೆ ಹರಕೆ ಸಲ್ಲಿಸಿ ವಾಪಸ್ ಮನೆ ಸೇರುತ್ತಾರೆ. ಆರೋಗ್ಯ ಸರಿಯಾಗಲೆಂದೂ, ತಮಗೆ ಮಕ್ಕಳಾಗಲೆಂದೂ, ಓಡಿಹೋದ ಗಂಡ ಬರಲೆಂದೂ ಹೀಗೆ ವೈಯಕ್ತಿಕವಾದ ಕಾರಣಗಳಿಗಾಗಿ ಈ ಹರಕೆಯನ್ನು ಹೇಳಿಕೊಂಡಿರುತ್ತಾರೆ.

ಸಾಮಾನ್ಯವಾಗಿ ಅವಿದ್ಯಾವಂತರೇ ಇದರಲ್ಲಿ ಹೆಚ್ಚಿಗೆ ಪಾಲ್ಗೊಳ್ಳುವವರು. ಆಳವಾಗಿ ಬೇರ್ಬಿಟ್ಟಿರುವ ಈ ಮೂಢನಂಬಿಕೆಯಲ್ಲಿ ಸೊರಬ ತಾಲ್ಲೂಕಿನವರಿಗಿಂತ ಬಯಲು ನಾಡಿನ ತಾಲ್ಲೂಕಿನವರೇ ಹೆಚ್ಚಿಗೆ ಇದರಲ್ಲಿ ಭಾಗವಹಿಸುತ್ತಾರೆ. ಹಿಂದುಳಿದ ವರ್ಗದವರೇ ಹೆಚ್ಚಾಗಿ ಈ ಬೆತ್ತಲೆ ಸೇವೆಯಲ್ಲಿ ಪಾಲ್ಗೊಳ್ಳುವುದನ್ನು ನಾವು ನೋಡಬಹುದಾಗಿದೆ. ಉತ್ತಮ ಜಾತಿಯವರೂ, ಮಧ್ಯಮವರ್ಗದ ವಿದ್ಯಾವಂತರೂ ಈ ಜಾತ್ರೆಗೆ ಬರುತ್ತಾರೆ. ಆದರೆ ಬೇವಿನ ಉಡುಗೆ ಸೇವೆ, ಉರುಳುಸೇವೆ, ಅರೆಬೆತ್ತಲೆ ಸೇವೆಯಲ್ಲಿ ಅವರು ತಮ್ಮ ಹರಕೆಯನ್ನು ಮುಗಿಸುತ್ತಾರೆ. ಜಾತ್ರೆಯ ಮೂರು ದಿನವೂ ಬೆಳಗ್ಗೆ 4 ಘಂಟೆಯಿಂದ ಕತ್ತಲಾಗುವವರೆಗೂ ಈ ಕಾರ್ಯಕ್ರಮ ನಡೆಯುತ್ತದೆ.

ಈ ವರ್ಷ ಅಸೆಂಬ್ಲಿಯಲ್ಲಿಯೂ ಈ ವಿಚಾರದಲ್ಲಿ ಗಂಭೀರವಾದ ಚರ್ಚೆ ನಡೆದು ಈ ಮೂಢನಂಬಿಕೆ ನಿಲ್ಲಿಸಲು ಎಲ್ಲಾ ವಿಧದಲ್ಲಿ ಶ್ರಮಿಸುವುದಾಗಿ ಸರ್ಕಾರ ವಾಗ್ದಾನ ಮಾಡಿತ್ತು. ದ.ಸಂ.ಸ. ವಿಚಾರವಾದಿ ವೇದಿಕೆ ಸೇರಿದಂತೆ ನಾಡಿನ ಹಲವಾರು ಸಂಘ–ಸಂಸ್ಥೆಗಳು ಸರ್ಕಾರದ ಜತೆಗೂಡಿ ಬೆತ್ತಲೆ ಸೇವೆ ನಿಲ್ಲಿಸಲು ಪ್ರಯತ್ನಿಸುವುದೆಂದು ತೀರ್ಮಾನವಾಗಿತ್ತು. ವಿಶ್ವ ಹಿಂದೂ ಪರಿಷತ್ತಿನವರೂ ಸಹ ಈ ವಿಚಾರದಲ್ಲಿ ಬೆತ್ತಲೆ ಸೇವೆ ವಿರುದ್ಧ ಕರಪತ್ರವನ್ನು ಹಂಚಿಸಿದ್ದರು. ಮಾನ್ಯ ಗೃಹಮಂತ್ರಿ ರಾಚಯ್ಯನವರು ಈ ಜಾತ್ರೆ ಸಂಬಂಧದಲ್ಲಿ ಮೂರು ಜನ ಶಾಸಕರ ಸಮಿತಿಯೊಂದನ್ನು ರಚಿಸಿ ಕಳುಹಿಸುವುದಾಗಿ ತಿಳಿಸಿದ್ದರು. ಆದರೆ ಸ್ಥಳದಲ್ಲಿ ಯಾವ ಸಮಿತಿಯೂ ಏನೂ ಕೆಲಸ ಮಾಡಿಲ್ಲ.

ಶಿವಮೊಗ್ಗದಿಂದ ದಿವಾಕರ ಹೆಗ್ಡೆ, ನಟರಾಜ್, ಗೋಪಿನಾಥ್, ಕೇಶವ, ಕೋಡ್ಲು ವೆಂಕಟೇಶ್, ಜಗನ್ನಾಥ್, ಸಹ್ಯಾದ್ರಿ ನಟರಾಜ್ ಮುಂತಾದ ವಿಚಾರವಾದಿ ವೇದಿಕೆಯ ಸದಸ್ಯರು ಒಂದು ವ್ಯಾನಿನಲ್ಲಿ ಅಂದು ಬೆಳಗ್ಗೆ ಚಂದ್ರಗುತ್ತಿಗೆ ಹೊರಟರು. ನಾನೂ ಅವರೊಂದಿಗೆ ಸೇರಿಕೊಂಡೆ. ಒಂಬತ್ತೂವರೆ ಘಂಟೆ ಹೊತ್ತಿಗೆ ಚಂದ್ರಗುತ್ತಿಯ ಬೆತ್ತಲೆ ಸೇವೆಯ ಸ್ನಾನಘಟ್ಟಕ್ಕೆ ಹೋಗಿ ಸೇರಿದೆವು. ನಾವು ಅಲ್ಲಿಂದ ಚಂದ್ರಗುತ್ತಿ ದೇವಸ್ಥಾನಕ್ಕೆ ಹೋಗೋಣ ಅಲ್ಲಿ ಕಾರ್ಯಕರ್ತರು ಏನೇನು ಕೆಲ್ಸ ನೇಮಿಸಿದ್ದಾರೆ. ತಿಳಿದುಕೊಂಡು ಅದರಂತೆ ವರ್ತಿಸುವುದೆಂದು ತೀರ್ಮಾನಿಸಿದೆವು. ನಮ್ಮ ವ್ಯಾನಿನ ಮುಂಭಾಗಕ್ಕೆ 'ಬೆತ್ತಲೆ ಸೇವೆ ನಿಲ್ಲಿಸಿ ಹೆಣ್ಣಿನ ಮಾನ ಉಳಿಸಿ' ಎಂಬ ಬ್ಯಾನರ್ ಇದ್ದುದನ್ನು ಕಂಡು ದೇವಸ್ಥಾನ ಎರಡು ಫರ್ಲಾಂಗ್ ಇರುವಾಗ ಸುಮಾರು 15 ಜನ ಯುವಕರು (ಪಾನನಮತ್ತರಾಗಿದ್ದವರು) ನಮ್ಮ ವ್ಯಾನಿನ ಮೇಲೆ ಬಿದ್ದರು.

'ಇಳಿಯಿರಿ ಯಾರು ನೀವು, ನಮ್ಮ ದೇವಿಯ ಸೇವೆ ನಿಲ್ಲಿಸಲಿಕ್ಕೆ ನಿಮಗೇನು ಹಕ್ಕಿದೆ?' ಎಂದು ಬಾಯಿಗೆ ಬಂದಂತೆ ಮಾತಾಡುತ್ತಿದ್ದರು. ನಾವೆಲ್ಲಾ ವ್ಯಾನಿನಿಂದ ಇಳಿದೆವು. ಉದ್ರಿಕ್ತ ವಾತಾವರಣ ಇದೆ ಎಂದು ತಿಳಿಯಲು ಹೆಚ್ಚಿನ ಹೊತ್ತು ಬೇಕಾಗಲಿಲ್ಲ. ಆ ಸ್ಥಳದಲ್ಲಿದ್ದ ಶಿವಮೊಗ್ಗದ ಮುರುಳೀಧರ ಎಂಬ ಸ್ನೇಹಿತರು ಹಿಂದಿನ ದಿನದಿಂದಲೇ ಚಂದ್ರಗುತ್ತಿಯಲ್ಲಿ ಠಿಕಾಣಿ ಹೂಡಿದ್ದರಿಂದ ಅವರಿಂದ ಪೂರ್ಣ ವಿಷಯ ತಿಳಿದುಕೊಂಡೆವು. ನಿಧಾನಕ್ಕೆ ವ್ಯಾನನ್ನು ಅಪಾಯದಿಂದ ದಾಟಿಸಿದೆವು. ಹರಕೆಯ ಜನ ಕೆಂಗಣ್ಣಿನಿಂದ ನಮ್ಮನ್ನು ನೋಡುತ್ತಿದ್ದುದರಿಂದ ಗುಮಾನಿಗೆ ಅವಕಾಶವಾಗಬಾರದೆಂದು ಹಂಚಿ ಹೊರಟೆವು.

ಆಗ ಸುಮಾರು 11 ಗಂಟೆ ಆಗಿರಬಹುದು. ಬೆತ್ತಲೆ ಸೇವೆ ಬೇಕೆನ್ನುವ ಒಂದು ದೊಡ್ಡ ಬೆಟಾಲಿಯನ್ ತಯಾರಾಗಿತ್ತು. ಈ ಬೆಟಾಲಿಯನ್ನಿನ ತುಕಡಿಗಳು ದೇವಸ್ಥಾನದಿಂದ ನದಿಯ ತೀರದವರೆಗೂ ವ್ಯವಸ್ಥಿತವಾಗಿ ಜೋಗಯ್ಯ. ಜೋಗಿತಿಯರು, ಜೋಗಮ್ಮಗಳು, ಬೆತ್ತಲೆಯಾದವರು ಸೇರಿಕೊಂಡಂತೆ ಇವರ ದುರ್ಬೋಧನೆಗೆ ಒಳಗಾಗಿದ್ದರೂ. "ಇವರೆಲ್ಲ ದೇವರಲ್ಲಿ ನಂಬಿಕೆ ಇಲ್ಲದವರು ಫೋಟೋ ತೆಗೆದು ಹಣ ಸಂಪಾದಿಸುವವರು. ಪತ್ರಿಕೆಯಲ್ಲಿ ಸುದ್ದಿ ಹಾಕುವವರು. ನಾವು ಇವರ ಮಾತಿಗೆ ಮರುಳಾಗಿ ಬೆತ್ತಲೆ ಸೇವೆ ಬಿಡಬಾರದು. ಇದರಿಂದ ದೇವಿಗೆ ಸಿಟ್ಟು ಬಂದು ನಮಗೆ ಕೆಟ್ಟದ್ದು ಮಾಡುತ್ತಾಳೆ. ಆದ್ದರಿಂದ ಇಡೀ ಜಾತ್ರೆಯಲ್ಲಿ ಬೆತ್ತಲೆ ಸೇವೆಗೆ ವಿರುದ್ಧವಾದವರು ಯಾರು ಕಂಡರೂ ಸಂಘಟಿತರಾಗಿ ಅವರನ್ನು ಹೊಡೆದು ಬೆರೆಸಬೇಕು' ಎಂದು ತೀರ್ಮಾನಿಸಿದರು.

ಕೆರಳಿದ ಬೆತ್ತಲಾದ ಹೆಂಗಸರು, ಗಂಡಸರು ಸರ್ಕಾರದ ಸಮಾಜಸೇವಾ ಇಲಾಖೆಯ ಜೀಪಿನಲ್ಲಿದ್ದ ನೌಕರರನ್ನು ಹೊರದೂಡಿ ಜೀಪಿನ ಮೇಲೆಲ್ಲಾ ಕುಳಿತುಕೊಂಡು, ಡ್ರೈವರ್‌ನ ಜುಟ್ಟು ಹಿಡಿದು ತಾವು ಹೇಳಿದಲ್ಲಿಗೆ ಬಿಡೆಂದು

ಹೆದರಿಸುತ್ತಾ, ನರ್ತನ ಮಾಡುತ್ತ 'ಕಡ್ಡಾಯ ಬೆತ್ತಲೆಸೇವೆ ನಡೆಸಿಯೇ ನಡೆಸುತ್ತೇವೆ. ಯಾರೂ ಹೆದರಬೇಡಿ' ಎಂದು ಕೂಗುತ್ತಾ ಬೀದಿಯಲ್ಲಿ ಮೆರವಣಿಗೆ ಮಾಡಿದ್ದು ಮರೆಯಲಾಗದ ದೃಶ್ಯ. (ಏರೋಪ್ಲೇನ್ ಹೈಜಾಕ್ ನೆನಪಿಗೆ ಬರುತ್ತಿತ್ತು)

ಕೇವಲ ನೂರು ಸಂಖ್ಯೆಯ ಒಳಗಿದ್ದ ಪೋಲೀಸನವರನ್ನು ಮೊದಲು ಹಿಂದೆ ಸರಿಯುವಂತೆ ಈ ಗುಂಪು ವ್ಯವಸ್ಥಿತವಾಗಿ ಮಾಡಿತು. ಪೋಲೀಸಿನವರು ಹಿಂದೆ ಸರಿದಂತೆ ಕಂಡು ಬಂದಾಗ ಅಸಲಿಗೆ ಸಿಕ್ಕಿದ ಬೆತ್ತಲೆಸೇವೆ ಪರವಾದರು ಮತ್ತು ಹಲವಾರು ಬೆತ್ತಲೆಯಾದ ಹೆಂಗಸರು ಗಂಡಸರು ಉಗ್ರರೂಪ ತಾಳಿದರು. ಬೆತ್ತಲೆ ಸೇವೆ ವಿರೋಧಿಗಳಿಗೆ ಅಣಕಿಸುವಂತೆ ವ್ಯಂಗ್ಯವಾಗಿ ಮೈ ಬಳಕಿಸುತ್ತ ನೃತ್ಯ ಮಾಡುತ್ತ ಹಿಂಡು ಹಿಂಡು ಬೆತ್ತಲಾದ ಸ್ತ್ರೀ ಪುರುಷರನ್ನು ನೋಡಿ ಎಂಥವರೂ ತಲೆ ತಗ್ಗಿಸುವಂತಿತ್ತು. ಕೈಯಲ್ಲಿ ಕಲ್ಲು, ದೊಣ್ಣೆ ಹಿಡಿದು ಸಾವಿರಾರು ಸಂಖ್ಯೆಯ ಈ ಗುಂಪು ಪೋಲೀಸಿನವರನ್ನು ಈ ಸ್ಥಳದಿಂದ ಓಡುವಂತೆ ಮಾಡಿದರು. ಹಲವಾರು ಪೋಲೀಸರನ್ನು ಸಂಪೂರ್ಣ ಬೆತ್ತಲೆ ಮಾಡಿದರು. ಇದರಲ್ಲಿ ಸ್ಥಳೀಯ ಗೊಂಡಾಗಳು, ಕುಡಿದು ಮತ್ತರಾದ ಜೋಗಯ್ಯ, ಜೋಗಮ್ಮಗಳು, ಬೆತ್ತಲಾದವರಲ್ಲೂ ಕೆಲವರು ಇದರಲ್ಲಿ ಭಾಗವಹಿಸಿದ್ದರು. ನನ್ನಕಣ್ಣೆದುರೇ ಪತ್ರಿಕೆಗಳ ಕ್ಯಾಮರಾಮನ್‌ಗಳ ಅತ್ಯುತ್ತಮ ಕ್ಯಾಮರಾಗಳೆಲ್ಲಾ ಗರಟದ ಚಿಪ್ಪು ಒಡೆವಂತೆ ಎತ್ತಿ ನೆಲಕ್ಕೆ ಹೊಡೆದು ಪುಡಿಯಾದವು. ಪತ್ರಿಕೆಯವರೆಂದು ಗುಮಾನಿ ಬಂದರೆ, ಯಾರಾದ್ರೂ ಬೆತ್ತಲೆ ಸೇವೆ ವಿರುದ್ಧದವರೆಂದು ಗುಮಾನಿ ಬಂದರೆ ಅವರಿಗೆ ಹೊಡೆತ.

ಒಟ್ಟಿನಲ್ಲಿ ಸುಮಾರು ಒಂದೂವರೆ ಲಕ್ಷಕ್ಕೆ ಮಿಕ್ಕಿದ ಚಂದ್ರಗುತ್ತಿಯ ಇಡೀ ಜಾತ್ರೆಯ ಜನ ಕೆರಳಿದ್ದರು. ಬೆತ್ತಲೆಸೇವೆ ವಿರುದ್ಧ ಮನೋಭಾವ ಉಳ್ಳವರ ಸಂಖ್ಯೆ ಅವರು ಪತ್ರಿಕೆಯವರಿರಬಹುದು. ಕ್ಯಾಮರಾದವರಿರಬಹುದು. ಸ್ವಯಂ ಸೇವಕರಿರಬಹುದು. ಪ್ಯಾಂಟು ಶರಟು ಹಾಕಿದ ಪ್ರೇಕ್ಷಕರಿರಬಹುದು. ಮಹನೀಯರು ಮಹಿಳೆಯರೆನ್ನದೆ ಇಡೀ ಜಾತ್ರೆಯ ಕ್ರೌರ್ಯಕ್ಕೆ ಬಲಿಯಾಗ ತೊಡಗಿದರು.

ನಾನು ಮತ್ತು ಗೆಳೆಯ ಕೇಶವ ನಮ್ಮಗಳ ಕ್ಯಾಮರಾ ಕಿಟ್ಟುಗಳನ್ನು ಹೊತ್ತುಕೊಂಡು ನಮ್ಮ ಜೀವ ಉಳಿಸಿಕೊಂಡು ಬೆತ್ತಲಾಗದೆ ಪಾರಾದ ಅನುಭವದ ಚೂರೊಂದನ್ನು ಹೇಳಿಬಿಡ್ತೀನಿ. ಮಧ್ಯಾಹ್ನ 12 ಗಂಟೆ ಸಮಯಕ್ಕೆ ಇಡೀ ಜಾತ್ರೆ ಸಂಪೂರ್ಣ ಉಗ್ರರೂಪ ತಾಳಿತ್ತು. ನದೀದಡದಿಂದ ಮೇಲ್ಭಾಗದಲ್ಲಿ ಜಾತ್ರೆಯ ಅಂಗಡಿಗಳೂ ಬಹುಸಂಖ್ಯೆಯಲ್ಲಿ ಸೇರಿತ್ತು. ಆ ಭಾಗವೇ ಹೆಚ್ಚು ಜನಸಂದಣಿ ಇರುವ ಜಾಗವಾಗಿತ್ತು. ನದಿ ಹತ್ತಿರದ ಪೋಲೀಸರುಗಳು ನಾಪತ್ತೆಯಾದ ಮೇಲೆ ದಲಿತ ಸಂಘರ್ಷ ಸಮಿತಿಯ ಕಾರ್ಯಕರ್ತರ ಮಾತಿಗೆ ಸೊಪ್ಪು ಹಾಕುವವರಿಲ್ಲದಾಯ್ತು.

ದ.ಸಂ.ಸ.ಯ ಪ್ರಮುಖರಾದ ಬಿ. ಕೃಷ್ಣಪ್ಪ ಗಿರಿಯಪ್ಪ ಮುಂತಾದವರನ್ನು ಹುಡುಕಿ ಹುಡುಕಿ ಥಳಿಸಿದರು. ಕೃಷ್ಣಪ್ಪ ಬಸ್ಸು ಹತ್ತಿದಾಗಲೂ ಬಸ್ನೊಳಗೆ ನುಗ್ಗಿ ಮುಖಾ ಮುಸುಡಿ

ನೋಡದೆ ಥಳಿಸಿದರು. ದಿವಾಕರ ಹೆಗ್ಡೆಯೂ ಈ ಬಸ್ಸು ಹತ್ತಿ ಕುಳಿತಿದ್ದರೂ ಮೂಕ ಪ್ರೇಕ್ಷಕನಾಗಬೇಕಾಯ್ತು. ಈ ದೃಶ್ಯದ ಜೊತೆಗೆ ಮತ್ತೊಂದು ಅಮಾನುಷ ದೃಶ್ಯ ನಡೆಯಿತು.

ಹಲವು ಮಹಿಳಾ ಪೊಲೀಸರನ್ನು ಬಟ್ಟೆ ಬಿಚ್ಚಿ ಬಲಾತ್ಕಾರವಾಗಿ ಬೆತ್ತಲು ಮಾಡಿದರು. ಒಬ್ಬಾಕೆಯನ್ನು ಚರಂಡಿಯಲ್ಲಿ ಹಾಕಿ ತುಳಿದರು. ಮತ್ತೊಬ್ಬಾಕೆಯನ್ನು ಬೆತ್ತಲು ಮಾಡಿದ್ದಲ್ಲದೆ ಜೋಗಿತಿಯರು, ಜೋಗಯ್ಯಗಳೂ, ಖೋಜಾಗಳೂ, ಮತ್ತು ಗೂಂಡಾಗಳು ಮನಸ್ಸಿಗೆ ಬಂದಂತೆ ಬೈಯ್ಯುತ್ತಾ ಬೆತ್ತಲೆ ಮೈ ಹಿಸುಕುತ್ತ ಸವಿ ನೋಡಿದರು. ಆಕೆ ದೂರದಲ್ಲಿದ್ದ ಪೋಲೀಸಧಿಕಾರಿಯನ್ನು ದೈನ್ಯದಿಂದ 'ಬಿಡಿಸಿ ಸಾರ್, ಬಿಡಿಸಿ ಸಾರ್, ಸಾಯಿಸ್ತಿದ್ದಾರೆ' ಎಂದು ಕಿರುಚಿಕೊಂಡರೂ ಉಪಯೋಗಕ್ಕೆ ಬರಲಿಲ್ಲ.

ಆಕೆ ಅನುಭವಿಸಿದ ಮಾನಸಿಕ ಹಿಂಸೆಯನ್ನು ನೋಡಿ ಈ ಸ್ಥಳದಲ್ಲಿ ನಿಂತಿದ್ರೇ ಆದ್ರೆ ನಮಗೂ ಬೆತ್ತಲೆಸೇವೆ ನಡೆಯುವುದು ಖಾತರಿ ಎಂದು ಖಚಿತಗೊಂಡ ನಾನು, ಕೇಶವ, ವೆಂಕಟೇಶ್, ಜಗನ್ನಾಥ್ ಮತ್ತು ಜಯರಾಮ್ ಹೆಗ್ಡೆ ಜನಸಮೂಹದಿಂದ ಹೇಗಾದ್ರೂ ಮಾಡಿ ಸರಿಯಲು ಯತ್ನಿಸುತ್ತಿರಬೇಕಾದ್ರೆ ಕುಡಿದು ಮತ್ತಳಾದ ಮತ್ತು ಆವೇಶಭರಿತಳಾದ ಜೋಗಿತಿಯೊಬ್ಬಳು ವೆಂಕಟೇಶನನ್ನು ಹಿಡಿದು "ಹೇಳೋ ಯಾಕ್ಬಂದೀಯಂತ. ಮಜಾ ನೋಡ್ಲಿಕ್ಕೆ ಬಂದೀ ಏನು" ಎಂದು ದಯ್ಯ ಬಂದವರ ಹಾಗೆ ಕೇಕೆ ಹಾಕಿದಳು.

ಇದನ್ನು ನೋಡಿ ಬೆತ್ತಲೆ ಇದ್ದ ಕರಿ ಗಂಡಸೊಬ್ಬ ಪೊಲೀಸನವರ ದೊಣ್ಣೆ ತಾನೇ ಬೀಸುತ್ತಾ 'ಹಿಡಿಯಲೇ ಅವನ್ನ. ಕೆಮರಾ ಆಯ್ತಿ' ಎಂದು ಕೆಂಗಣ್ಣು ಮಾಡುತ್ತಾ ಕುಂಕುಮ, ಅರಿಸಿನ ಹಚ್ಚಿಕೊಂಡ ಮೈ ಕೊಂಕಿಸುತ್ತಾ ನನ್ನತ್ತ ಧಾವಿಸಿದ. 'ಕೇಶವ ಕೆಲಸ ಕೆಡ್ತು ಓಡು ಎಂದು ಹೇಳುತ್ತಾ ನಾನು ಕುಂಡೆಗೆ ಕಾಲು ಕೊಟ್ಟೆ. ಕೇಶವ ಮಿಂಚಿನ ವೇಗದಲ್ಲಿ ಗದ್ದೆಬೈಲು ಬಿದ್ದ. ಬೇಲಿ ಇದ್ದುದರಿಂದ ನನಗೆ ಕ್ಯಾಮರಾ ಚೀಲ ತೆಗೆದುಕೊಂಡು ಓಡುವುದು ಕಷ್ಟವಾಗಿ ಹಿಂದೆ ಬಿದ್ದಿದ್ದೆ. ನನ್ನ ಹಿಂದೆಯೇ ದೊಣ್ಣೆಯ ಸೊಂಯ್ ಸೊಂಯ್ ಶಬ್ದ ಕೇಳಿಸಿತು. ಮತ್ತೆ ದಮ್ಮುಕಟ್ಟಿ ಜೋರಾಗಿ ಓಡಿದೆ. ಜೋರಾಗಿ ಓಡಿದ ಸಿಟ್ಟಿಗೆ ಬೆತ್ತಲೆ ಮನುಷ್ಯ ದೊಣ್ಣೆಯನ್ನು ನನ್ನತ್ತ ಬೀಸಿದ. ನನ್ನ ಮೈ ತಾಗುತ್ತ ದೊಣ್ಣೆ ಮುಂದೆ ಹೋಗಿ ಬಿತ್ತು. ಸ್ವಲ್ಪ ಹೊತ್ತಿನಲ್ಲೇ ನನ್ನ ಹಸಿರು ಟವೆಲ್ ಅವನ ಕೈನಲ್ಲಿತ್ತು. ಸಿಟ್ಟಿಗೆ ಅದನ್ನು ಹರಿದು ಚಿಂದಿ ಚಿಂದಿ ಮಾಡುತ್ತಿದ್ದ.

ಸ್ವಲ್ಪ ಹಿಂದಿರುಗಿ ನೋಡಿದೆ. ಆ ವ್ಯಕ್ತಿ ಏದುಸಿರುಬಿಡುತ್ತ ಏನೋ ಬೈಯ್ಯುತ್ತಾ ನನ್ನ ಹಸಿರು ಟವಲನ್ನು ಪರ್ ಪರ್ ಅಂತ ಹರಿಯುತ್ತಾ, ನಮ್ಮ ಕಡೆ ನೋಡಿ ಅಶ್ಲೀಲ ಸಂಕೇತಗಳನ್ನು ಮಾಡಿ ತೋರಿಸುತ್ತಿದ್ದ ನಂತರ ಶಾಲನ್ನು ಎಸೆದು, ನಮ್ಮಿಬ್ಬರನ್ನು ಬಿಟ್ಟು ವೆಂಕಟೇಶ, ಜಗನ್ನಾಥರ ಕಡೆ ತಿರುಗಿ ಅವರನ್ನು ಬೆರೆಸತೊಡಗಿದ. ಕೂಡಲೇ ನಾನು ಹರಿದು ಚಿಂದಿಯಾಗಿ ಬಿದ್ದಿದ್ದ ಶಾಲನ್ನು ಎತ್ತಿಕೊಂಡು ಅಲ್ಲಿಂದ ಗಿಡಾ ಬಿದ್ದೆ.

ಸ್ವಲ್ಪ ದೂರ ಓಡಿದ ಮೇಲೆ ಯಾರೂ ಕಾಣಿಸದ್ದು ನೋಡಿ ಬದುಕಿದೆಯಾ ಬಡಜೀವವೇ ಎಂದು ಎದುಸಿರು ಬಿಡುತ್ತಾ ನಾವಿಬ್ಬರೂ ನಿಂತಿರಬೇಕಾದ್ರೆ ಎದುರುಗಡೆ ಕೂಗು ಕೇಳಿಸಿತು. ಏನಂತ ನೋಡಿದರೆ ಮುಂದೆ ಪೋಲೀಸರು ಕೆಲವರು ಓಡುತ್ತಿದ್ದಾರೆ. ಅವರನ್ನು ಬೆರೆಸಿಕೊಂಡು ದೊಣ್ಣೆ ಹಿಡಿದ ಗೂಂಡಾಗಳು ಹೋಗುತ್ತಿದ್ದಾರೆ. ಅವರ ಹಿಂದೆ ಪೋಲೀಸ್ ವ್ಯಾನ್ ಹೋಗುತ್ತಿತ್ತು. ಹೂಟೆ ಮಾಡಿದ ಗದ್ದೆಯಲ್ಲಿ ವ್ಯಾನ್ ಹೋಗದಾಯ್ತು. ಓಡುತ್ತಿದ್ದ ಪೊಲೀಸನವರನ್ನು ಹಿಡಿದುಕೊಂಡು ಬಟ್ಟೆ ಬಿಚ್ಚಿಸತೊಡಗಿದರು.

ಪೊಲೀಸಿನವರು ಕೈ, ಕೈ ಮುಗಿಯುತ್ತ 'ನಾವೂ ದೇವರ ಭಕ್ತರು ನಮಗ್ಯಾಕೆ ತೊಂದರೆ ಕೊಡ್ತೀರಿ' ಎಂದು ಹೇಳ್ತಿದ್ದರು. 'ಅದೆಲ್ಲಾ ಕಡೀಗೆ. ನೀವು ಸರ್ಕಾರದ ಕಡೆಯವರು ಅಮ್ಮನ ಸೇವೆ ನಿಲ್ಲಿಸ್ತಿರಾ' ಎಂದು ಕೆಲವು ಶಿಖಂಡಿಗು ಕೈಲ್ಲಿದ್ದ ತ್ರಿಶೂಲದಿಂದ ಅವರ ಖಾಕಿ ಬಟ್ಟೆಯನ್ನು ಪರ್ರ್ ಪರ್ರ್ ಎನ್ನುತ್ತಾ ಹರಿದು ಹಾಕುತ್ತಿದ್ದರು. ಅದೇ ತ್ರಿಶೂಲದಿಂದ ಪೊಲೀಸರ ಮೈಗೆ ತಿವಿಯುತ್ತಿದ್ದರು. 'ಸರ್ಕಾರವಂತೆ ಸರ್ಕಾರ ನಿಮ್ಮವ್ವನ ಸರ್ಕಾರ. ನಮ್ಮವ್ವ ಆಟ ತೋರಿಸಿಯೇ ಬಿಟ್ಟಲ್ಲ. ಹ್ಯಾಗೈತೆ ನಮ್ಮವ್ವನ ಶಕ್ತಿ' ಎಂದು ಹೇಳುತ್ತಿದ್ದರು. ಆ ಗುಂಪಿನಲ್ಲಿದ್ದ ಕೆಲವರು ಗದ್ದೆ ಬೈಲಿನಲ್ಲಿದ್ದ ನಮ್ಮನ್ನು ನೋಡಿದರು. ಕೈನಲ್ಲಿ ಬಿದಿರು ಮುಳ್ಳು ಹಿಡಿದುಕೊಂಡು 'ನಿಲ್ರಲೆ ನನ್ನ ಮಕ್ಕಳ್ರ' ಎಂದು ಬೆದರಿಸಲು ಪ್ರಾರಂಭಿಸಿದರು.

ಕೇಶವ ಹೇಳಿದ 'ಅಯ್ಯೋ ಮುಂದೆ ಹೋಗುವ ಹಾಗಿಲ್ಲ. ಜಾತ್ರೆಗೆ ಬಂದವರು ಹೇತುಕೊಂಡಿದ್ದಾರೆ,' 'ಹೇಲೋ ಪಾಲೋ ಮುಂದೆ ಓಡು' ಎಂದೆ. ದೊಡ್ಡ ದೊಡ್ಡ ಹೇಲು ರಾಶಿ ತಪ್ಪಿಸಿ ಕಿಸುಗಾಲು ಹಾಕುತ್ತ ಇಬ್ಬರೂ ಬಿದ್ದು ಬಿದ್ದು ಗದ್ದೆಬೈಲಿನಲ್ಲಿ ಓಟ ಕಿತ್ತೆವು. ಹಿಂದಕ್ಕೆ ತಿರುಗದೆ ಕ್ಯಾಮರಾ ಚೀಲ ಹೊತ್ತುಕೊಂಡು ಜೀವದಾಸೆ, ಕ್ಯಾಮರಾ ಆಸೆ, ಮನದಾಸೆಯಿಂದ ಓಡಿ ಶತ್ರುಗಳಿಂದ ಮರೆಯಾಗಿ ಕಾಡು ಸೇರಿದೆವು.

ಇದೇ ಓಟವನ್ನು ಯಾವುದಾದ್ರೂ ಕ್ರಾಸ್ ಕಂಟ್ರೀ ರೇಸ್‌ನಲ್ಲಿ ಭಾಗವಹಿಸಿ ಓಡಿದ್ದರೆ ಮೊದಲ ಬಹುಮಾನ ನಮಗಲ್ಲದೇ ಬೇರೆಯವರಿಗೆ ಸಿಗಲು ಸಾಧ್ಯವೇ ಇರಲಿಲ್ಲ.

ದೂರದಲ್ಲೊಬ್ಬ ಯುವಕ ಉರ್ದುವಿನಲ್ಲಿ ನಮ್ಮನ್ನು ಆವೋಜಿ, ಆವೋಜಿ ಎಂದು ಕರೆದ. ಧೈರ್ಯ ಬಂದಂತಾಯ್ತು. ಆದ್ರೂ ಕರೆದು ಹೊಡೆದರೆ ಎಂದು ಅನುಮಾನವೂ ಆಯ್ತು. ಅದೆ ನನ್ನ ಆರನೇ ಇಂದ್ರಿಯಕ್ಕೆ ಹೊಳೆಯಿತು. ನನ್ನ ಬಿಳಿಯಗಡ್ಡ ಅವನಿಗೆ ಮುಸ್ಲಿಂ ಬಾಂಧವನಂತೆ ಕಂಡು ಕರೆದಿರಬೇಕೆಂದು ಧೈರ್ಯ ಮಾಡಿ ಅವನಿದ್ದಲ್ಲಿಗೆ ನಡೆದೆವು. ಅವನು ಉರ್ದುವಿನಲ್ಲಿ 'ಹೆದರಬೇಡಿ, ಇಲ್ಲಿ ಯಾರೂ ಅಂಥವರಿಲ್ಲ. ನಾವೆಲ್ಲಾ ರೈತರು' ಎಂದು ಅವನ ಮನೆಗೆ ಕರೆದ. 'ಬೇಡ, ಶಿವಮೊಗ್ಗ ಸೇರಲು ದಾರಿ ಹೇಳಿ' ಎಂದು ಕೇಳಿದಾಗ 'ನಮ್ಮ ಜನರು ಹಂಗೆ ಮಾಡೋದಿಲ್ಲ. ಅವರೆಲ್ಲ ಬಯಲು ಸೀಮೆಯವರು. ಇಲ್ಲಿ ಹೆದರುವ ಅವಶ್ಯಕತೆ ಇಲ್ಲ' ಎಂದು ಹೇಳಿ ನಾವು ಕೇಳಿದದಾರಿ

ತೋರಿಸಿದ. ನಾವು ಕನ್ನಡದಲ್ಲೇ ಮಾತಾಡಿದ್ದರಿಂದ ಮುಸ್ಲಿಂ ಬಾಂಧವರಲ್ಲ ಎಂದು ತಿಳಿದಿರಬೇಕು.

ಅವರು ಹೇಳಿದ ದಾರಿಯಲ್ಲೇ ಮೈಲಿಗಟ್ಟಲೆ ನಡೆದು ಶಿವಮೊಗ್ಗ ದಾರಿ ಸೇರಿದೆವು. ಅಲ್ಲೇ ಜಾತ್ರೆಗೆಂದು ಹೊರಟ ದೀವರ ಜನಾಂಗದ ರೈತ ಕುಟುಂಬವೊಂದು ಗಲಾಟೆ ನಡೆಯುತ್ತಿದ್ದ ಸ್ಥಳದಿಂದ ಹೇಗೋ ವಾಪಾಸಾಗಿ ಈ ಸುರಕ್ಷಿತ ಸ್ಥಳದಲ್ಲಿ ಗಾಡಿ ಬಿಟ್ಟುಕೊಂಡು ಊಟದ ಬುತ್ತಿಬಿಚ್ಚಿ ಉಣ್ಣತೊಡಗಿತ್ತು. ಸ್ವಲ್ಪ ಹೊತ್ತಿನಲ್ಲಿ ಅಲ್ಲಿಗೊಬ್ಬ ಯುವಕ ಬಂದ. ಅವನ ಕೈನಲ್ಲಿ ಪೊಲೀಸ್ ಲಾಟಿ ಇತ್ತು. ಅವನು ಈ ದೀವರ ಕುಟುಂಬಕ್ಕೆ ಪರಿಚಯದವನಾದ್ದರಿಂದ ತನ್ನ ಅನುಭವವನ್ನು ಅವರಿಗೆ ಪೌರುಷದಿಂದ ಹೇಳುತ್ತಿದ್ದ. 'ಎತ್ತು ಹೊಡೆಯಲಿಕ್ಕೆ ಈ ಕೋಲು ಲಾಯಕ್ ಇದೆ ಕೊಡು' ಎಂದು ಕೇಳಿದಾಗ 'ಮಾರಾಯ ಈಗ ತಾನೆ ಸಾಗರದ ಡಿಎಸ್ಪಿಯನ್ನು ಯಾವ ಮುಲಾಜಿಲ್ಲದೆ ಬೆತ್ತಲೆ ಮಾಡಿ ದೇವಸ್ಥಾನದ ಮೇಲೆ ಕೂರಿಸಿದ್ದೀನಿ. ಬೇರೆಯವರು ಯಾವ ಲೆಕ್ಕಕ್ಕೆ ಇನ್ನೆರಡು ದಿನ ಈ ದೊಣ್ಣೆ ಬೇಕು. ಈ ದೊಣ್ಣೆ ಇವತ್ತು ಎಷ್ಟು ಕೆಲ್ಸ ಮಾಡಿದೆ ಗೊತ್ತಾ?' ಎಂದಾಗ ನಮ್ಮ ಕುತೂಹಲ ಕೆರಳಿತು.

ಅವನು ವಿವರಿಸುತ್ತಿದ್ದ 'ಇವತ್ತು ಬೆಳಗ್ಗೆಯಿಂದ ದೇವಸ್ಥಾನದ ಹತ್ತಿರ ನಾವೆಲ್ಲಾ ಮೀಟಿಂಗ್ ಸೇರಿ ಅಮ್ಮನ ಸೇವೆ ವಿರೋಧ ಮಾಡುವವರಿಗೆ ಸರಿಯಾಗಿ ಪಾಠ ಕಲಿಸಬೇಕು' ಎಂದು ತೀರ್ಮಾನಿಸಿದೆವು. ದೇವಸ್ಥಾನದ ಪೂಜೆಮಾಡುವ ಭಟ್ರು ಕರ್ದು ನಮಗೆಲ್ಲ 'ಊರು ಮನೆಯವರು ಇಷ್ಟೊಂದು ಜನ ಇದ್ಕಂಡು ಆ ಹೊರಗಿಂದ ಬಂದವರಿಗೆ ಬುದ್ಧಿ ಕಲ್ಸಕ್ಕೆ ಆಗಿದಿಲ್ಲೇನು' ಅಂದ್ರು. ಅದ್ಕೆ ನಾವ್ಯಲ್ಲ ಮಾತಾಡ್ಕಂಡು ಈ ಕೆಲ್ಸ ಮಾಡ್ತಿದೀವಿ. ನೀವೇನು ಹೆದರಬೇಡಿ ಜಾತ್ರೆಗೆ ಹೋಗಿ. ಈಗ ಮಧ್ಯಾಹ್ನದ ಮೇಲೆ ರಿಜರ್ವ್ ಪೊಲೀಸ್ ಬರ್ತದೆಂದು ಎಲ್ಲಾ ಅಂತಾರೆ. ಅದಕ್ಕೆ ನಾವೆಲ್ಲ ಅರಗಾಯಿಸ್ತಿದೀವಿ' ಎಂದು.

ಇದನ್ನು ಕೇಳಿ ಭಕ್ತರು ಕೆರಳಿದ್ದಲ್ಲ. ಕೆರಳಿಸಿದ್ದು. ಇದರ ಹಿಂದೆ ಯಾರದ್ದೋ ವ್ಯವಸ್ಥಿತವಾದ ಕೈವಾಡ ಇದೆ ಎಂದು ಅರ್ಥವಾಯ್ತು. 19ನೇ ತಾರೀಖು ಮತ್ತು 20ನೇ ತಾ. ಬೆಳಗ್ಗೆ 10 ಗಂಟೆಯವರೆಗೂ ದಲಿತ ಸಂಘರ್ಷ ಸಮಿತಿಯ ಮತ್ತು ಇತರ ಸಮಾಜ ಸೇವಕರ ಮಾತಿಗೆ ಒಪ್ಪಿ ಬೆತ್ತಲೆ ಸೇವೆ ನಿಲ್ಲಿಸಿ ಬೇವನ ಉಡುಗೆಯಲ್ಲಿ ಮತ್ತು ತುಂಡು ಬಟ್ಟೆಯಲ್ಲಿ ನದಿಯಿಂದ ದೇವಸ್ಥಾನದವರೆಗೂ ಹೋಗಿ ಸೇವೆ ಸಲ್ಲಿಸುತ್ತಿದ್ದ ಭಕ್ತಾದಿಗಳನ್ನು ನೋಡಿ ಹೊಟ್ಟೆಯಲ್ಲಿ ಉರಿಬಿದ್ದ ಸಂಪ್ರದಾಯವಾದಿಗಳು ಮತ್ತು ಬೆತ್ತಲೆ ಸೇವೆ ಬೇಕೆನ್ನುವ ಜಾತ್ರೆಯ ವ್ಯವಸ್ಥಾಪಕ ವರ್ಗ ಒಂದಷ್ಟು ಪುಂಡರ ದಂಡು ತಯಾರು ವರ್ಗ ಮಾಡಿಬಿಟ್ಟಿರಬಹುದೆಂದು ಕೆಲವರ ಊಹೆ.

ಇನ್ನೊಂದು ಅವಿವೇಕ ಈ ಮಧ್ಯೆ ನಡೆದಿದೆ. ಅದೇನೆಂದರೆ ಪರಿಸ್ಥಿತಿ ಮಿತಿಮೀರಿ ಅನಾಹುತಗಳಾಗಬಹುದೆಂದು ತಿಳಿದು ಪೊಲೀಸಿನವರದೂ ಮೈಕಿನಲ್ಲಿ ಬೆತ್ತಲೆ

ಸೇವೆಯನ್ನು ನಾವು ಮಾನ್ಯ ಮಾಡಿದ್ದೇವೆಂದು ಪ್ರಚಾರ ಮಾಡಿದ್ದು ಮತ್ತು ಕೆಲವು ಸಂಘದವರು 'ಬೆತ್ತಲೆ ಸೇವೆ ನಿಲ್ಲಿಸಿ ಎಂದು ಯಾರಿಗೂ ಬಲಾತ್ಕಾರವಿಲ್ಲ. ಯಾರೂ ಬಲಾತ್ಕರಿಸಬಾರದು. ಅದು ತಪ್ಪಾಗುತ್ತದೆ' ಎಂದು ಮೈಕಿನಲ್ಲಿ ದ್ವಂದ್ವಾರ್ಥ ಬರುವಂತೆ ಪ್ರಚಾರ ಮಾಡಿದ್ದು. ಮತ್ತೆ ಕೆಲವರು ಮೈಕಿನಲ್ಲಿ 'ಬೆತ್ತಲೆ ಸೇವೆಗೆ ಜಯವಾಗಲಿ' ಎಂದು ಕೂಗಿಕೊಂಡದ್ದು.

ಈ ರೀತಿಯ ಗೊಂದಲಕ್ಕೆ ಮತ್ತು ಸಾಮೂಹಿಕ ಹಿಂಸೆ ನಡೆಯಲಿಕ್ಕೆ ಕಾರಣವಾಯ್ತು ಎಂಬ ಅಂತೆಕಂತೆಗಳು ಹಬ್ಬಿವೆ ಇದಕ್ಕೆ ಸರಿಯಾಗಿ ಸಾಂಕೇತಿಕವಾಗಿ ವಿಶ್ವ ಹಿಂದೂ ಪರಿಷತ್ ಮುಖ್ಯಸ್ಥರಾದ ಕೃಷ್ಣಭಟ್ಟರು ಬೆತ್ತಲೆ ಮಗುವೊಂದನ್ನು ಹೆಗಲ ಮೇಲೆ ಹೊತ್ತು ರೇಣುಕಾಂಬ ದೇವಾಲಯದ ಕಡೆ ಹೋಗುತ್ತಿದ್ದುದನ್ನು ಕಂಡು ಪರಿಸ್ಥಿತಿ ವಿಕೋಪಕ್ಕೆ ತಿರುಗಿದಾಗ ಇವರು ಅಭಿಪ್ರಾಯ ಬದಲಾವಣೆ (compromise) ಮಾಡಿಕೊಂಡಿರಬಹುದು. ಇದರ ದುರುಪಯೋಗ ಪಡೆದ ಗುಂಪೊಂದು ಹಿಂಸಾ ಪ್ರಚೋದನೆಗೆ ಪ್ರರೇಪಿಸಿರಬಹುದೆಂದು ದ.ಸಂ.ಸ.ಯ ಮುಖ್ಯಸ್ಥರ ವಾದವೂ ಆಗಿರುತ್ತದೆ.

ಅಂತೂ ಸಂಪೂರ್ಣ ರಕ್ಷಣೆ ಕೊಡುವುದಾಗಿ ಹೇಳಿ ಸರ್ಕಾರ ಯಾವ ರಕ್ಷಣೆಯನ್ನೂ ನೀಡದೆ ಕರ್ನಾಟಕದ ಹಲವಾರು ಸಮಾಜಸೇವಾ ಸಂಘ ಸಂಸ್ಥೆಯ ಮಹನೀಯರಿಗೆ ಮತ್ತು ಮಹಿಳೆಯರಿಗೆ, ರಕ್ಷಣಾ ಇಲಾಖೆಯವರಿಗೆ, ಸರ್ಕಾರಿ ನೌಕರರಿಗೆ, ಪತ್ರಿಕಾ ವರದಿಗಾರರಿಗೆ ಮುಂತಾದವರಿಗೆ ದೈಹಿಕವಾಗಿ ಮತ್ತು ಮಾನಸಿಕವಾಗಿ ದೊಡ್ಡ ಆಘಾತ ಉಂಟಾಗುವಂತೆ ಮಾಡಿದ್ದಾರೆ.

20ರಂದು ಸಂಜೆ 3 ಗಂಟೆ ಹೊತ್ತಿಗೆ ಶಿವಮೊಗ್ಗ ಜಿಲ್ಲಾ ಎಸ್ಪಿಯವರು ಮತ್ತು ಡಿ.ಸಿ.ಯವರು ತಳೆದ ನಿಲುವನ್ನು ಹಿಂದಿನ ದಿನದಿಂದಲೇ ಕೈಗೊಂಡಿದ್ದರೆ ಚಂದ್ರಗುತ್ತಿಯಲ್ಲಿ ಈ ರೀತಿಯ ಅಮಾನುಷ ಕೃತ್ಯ ಜರುಗುತ್ತಿರಲಿಲ್ಲ. ಇದು ಪ್ರತ್ಯಕ್ಷದರ್ಶಿಗಳೆಲ್ಲರಿಗೂ ಅನುಭವಕ್ಕೆ ಬಂದಂತಹ ವಿಚಾರವಾಗಿರುತ್ತದೆ.

ಪರಿಣಾಮ ಏನೇ ಆಗಿದ್ದರೂ ಈ ವರ್ಷದಿಂದಲಾದರೂ ಶತಮಾನಗಳಿಂದ ನಡೆದುಬಂದ ಸಮಾಜದ ಬೆತ್ತಲೆ ಸೇವೆಯಿಂದ ಅನಿಷ್ಟ ಪದ್ಧತಿಯನ್ನು ನಿಲ್ಲಿಸುವಲ್ಲಿ ದಿಟ್ಟ ಪ್ರಯತ್ನ ನಡೆಸಿದ ಕರ್ನಾಟಕ ದಲಿತ ಸಂಘರ್ಷ ಸಮಿತಿ ಸದಸ್ಯರಿಗೆ ಮತ್ತಿತರ ಸಮಾಜ ಸೇವಾ ಕಾರ್ಯಕರ್ತರಿಗೆ ಚರಿತ್ರೆ ಕೃತಜ್ಞತೆ ಹೇಳುವುದನ್ನು ಮರೆಯುವಂತಿಲ್ಲ. ಈ ಪ್ರಯತ್ನಕ್ಕೆ ತೊಡೆರುಗಾಲು ಹಾಕಿದ ದುಷ್ಟ ಶಕ್ತಿಗಳನ್ನೂ ಪತ್ತೆ ಮಾಡಿ ಹೇಳುವುದನ್ನೂ ಚರಿತ್ರೆ ಮರೆಯಬಾರದು. ಈ ಕೆಲ್ಸವನ್ನು ರಾಚಯ್ಯನವರ ನ್ಯಾಯಾಂಗ ತನಿಖೆಯ ವರದಿ ಮಾಡಬಹುದೆಂದು ಆಶಿಸೋಣವೇ?

*('ಚಂದ್ರಗುತ್ತಿಯ ವಿವರಗಳು' ಶೀರ್ಷಿಕೆಯಲ್ಲಿ ಪ್ರಕಟಿತ)*
*ಲಂಕೇಶ್ ಪತ್ರಿಕೆ, ಏಪ್ರಿಲ್ 6, 1986*

# ಓದು ಪಠ್ಯ :

# ಎತ್ತಣ ಮಾಮರ ಎತ್ತಣ ಕೋಗಿಲೆ

**–ಬೈರಮಂಗಲ ರಾಮೇಗೌಡ**

"ನಿಮ್ಮಮ್ಮನನ್ನು ಕ್ಯಾನ್ಸರ್ ಕಬಳಿಸಿ ಎಂಟು ವರ್ಷ ತುಂಬುತ್ತ ಬಂತು. ಅಂದಿನಿಂದ ಈ ಮನೆಯಲ್ಲಿ ಹೆಣ್ಣಿನ ಮಾತಿಲ್ಲದೆ, ನಗುವಿಲ್ಲದೆ, ಓಡಾಟವಿಲ್ಲದೆ, ಉಪಚಾರವಿಲ್ಲದೆ ನಾವಿಬ್ಬರೂ ಪ್ರೇತಗಳಂತೆ ಬದುಕುತ್ತಿದ್ದೇವೆ. ಐ.ಟಿ. ಸಂಸ್ಥೆಯಲ್ಲಿ ಇಂಜಿನಿಯರ್ ಆಗಿರುವ ನೀನು, ಇಪ್ಪತ್ತೈದು ವರ್ಷಗಳ ಸೇವೆ ಸಲ್ಲಿಸಿದ ಪ್ರಾಧ್ಯಾಪಕನಾಗಿ ನಾನು ಪಡೆಯುತ್ತಿರುವ ಸಂಬಳಕ್ಕಿಂತ ನಾಲ್ಕು ಪಟ್ಟು ಹೆಚ್ಚಿನ ಸಂಬಳ ಪಡೆಯುತ್ತಿರುವೆ. ಕನ್ಯಾಪಿತೃಗಳನೇಕರು ಈ ಮನೆಯ ಬಾಗಿಲನ್ನು ತಟ್ಟುತ್ತಿದ್ದಾರೆ. ನಿನ್ನ ಒಪ್ಪಿಗೆಯಿಲ್ಲದೆ ನಾನು ಮುಂದುವರಿಯಲಾರೆ. ನಿನಗೂ ಈಗ ಇಪ್ಪತ್ತಾರು ದಾಟಿದೆ. ಬೇಗ ಒಂದು ನಿರ್ಧಾರಕ್ಕೆ ಬಾ. ನೀನು ಹೂಂ ಎಂದರೆ ಹೆಣ್ಣುಗಳನ್ನು ನೋಡಿಕೊಂಡು ಬರೋಣ. ನಿನ್ನ ಮನಸ್ಸಿನಲ್ಲಿ ಯಾವುದಾದರೂ ಹುಡುಗಿಯಿದ್ದರೆ ಹೇಳು. ನಿನಗೊಪ್ಪಿದಂತೆ ಮದುವೆ ಮಾಡಿ ಸೊಸೆಯನ್ನು ಮನೆ ತುಂಬಿಸಿಕೊಳ್ಳುವ ಸಂತೋಷದ ಕೆಲಸ ನನ್ನದು".

ಮಗ ವಿಕಾಸನಿಗೆ ಅಪ್ಪ ದಿವಾಕರ ಒಂದು ವರ್ಷದಿಂದ ತಲೆ ಸವರಿ ಪ್ರೀತಿಯಿಂದ ಮಾಡುತ್ತಿದ್ದ ಒತ್ತಾಯ ಕೊನೆಗೆ ಫಲ ಕೊಡುವ ಸಂದರ್ಭ ಬಂತು. ಅಮ್ಮನ ವಾತ್ಸಲ್ಯದಿಂದ ವಂಚಿತನಾದ ಈ ಎಂಟು ವರ್ಷಗಳಲ್ಲಿ ವಿಕಾಸ ಅಪ್ಪನ ಮುದ್ದು, ಸಲುಗೆ. ಪ್ರೀತಿಯನ್ನು ಹೆಚ್ಚಾಗಿಯೇ ಪಡೆದಿದ್ದ. ಕಟುಮಾತುಗಳನ್ನು ಆಡಿಯೇ ಅಭ್ಯಾಸವಿಲ್ಲದಿದ್ದ ಅಪ್ಪ ತನ್ನನ್ನು ಗೆಳೆಯನಂತೆಯೇ ಕಾಣುತ್ತ ಸ್ವತಂತ್ರ ನಿರ್ಧಾರವನ್ನು ತೆಗೆದುಕೊಳ್ಳಲು, ಜವಾಬ್ದಾರಿ ಪ್ರಜ್ಞೆ ರೂಢಿಸಿಕೊಳ್ಳಲು, ಆತ್ಮವಿಶ್ವಾಸ ಬೆಳೆಸಿಕೊಳ್ಳಲು ಪ್ರೋತ್ಸಾಹಿಸುತ್ತಿದ್ದುದು ವಿಕಾಸನಿಗೂ ಚೆನ್ನಾಗಿ ಮನವರಿಕೆಯಾಗಿತ್ತು. ಅವನು ಎಂದಿಗಿಂತ ತನ್ನ ಧ್ವನಿಯನ್ನು ತಗ್ಗಿಸಿಕೊಂಡು ತಾನು ಮೆಚ್ಚಿಕೊಂಡಿರುವ ತನ್ನ ಸಹಪಾಠಿಯಾಗಿದ್ದ, ಈಗ ಡೆಲ್ ಕಂಪೆನಿಯಲ್ಲಿ ಉದ್ಯೋಗಿಯಾಗಿರುವ ಹುಡುಗಿಯನ್ನು ಭಾನುವಾರ ಮನೆಗೆ ಕರೆತರುವುದಾಗಿ ಅಪ್ಪನಿಗೆ ತಿಳಿಸಿದ. ದಿವಾಕರ ಉದ್ದೇಶಪೂರ್ವಕವಾಗಿ ಅಚ್ಚರಿ ವ್ಯಕ್ತಪಡಿಸಲಿಲ್ಲವಾದರೂ ತಾನು ಪಾಠ ಮಾಡುವಾಗ ಆಗಾಗ ಹೇಳುತ್ತಿದ್ದ "ಇಂದಿನ ಮಕ್ಕಳು ತಂದೆ ತಾಯಿಯರು ಭಾವಿಸಿರುವಷ್ಟು ಮುಗ್ಧರೇನೂ ಆಗಿರುವುದಿಲ್ಲ" ಎಂಬ ಮಾತನ್ನು ಅಚಾನಕವಾಗಿ ನೆನಪಿಗೆ ತಂದುಕೊಂಡ. ವಾಸ್ತವವಾಗಿ ಮಗನ ವಿಚಾರದಲ್ಲಿ ದಿವಾಕರನಿಗೆ ಹೆಮ್ಮೆಯೇ ಆಗಿತ್ತು.

ಹೆಂಡತಿ ಇರುವವರೆಗೆ ಕಾಲೇಜಿನ ಕೆಲಸ ಮುಗಿಸಿ ಸಾಮಾಜಿಕ ಚಟುವಟಿಕೆಗಳು,

ಸಭೆ ಸಮಾರಂಭಗಳು, ಗೆಳೆಯರ ಒಡನಾಟ ಎಂದು ರಾತ್ರಿ ಹತ್ತರ ಆಸುಪಾಸಿನಲ್ಲಿ ಮನೆಗೆ ಬರುತ್ತಿದ್ದ ದಿವಾಕರ ಹೆಂಡತಿ ಕಣ್ಮರೆಯಾದ ಮೇಲೆ ಮಗನಿಗಾಗಿ ಅವುಗಳನ್ನೆಲ್ಲಾ ಕೈ ಬಿಟ್ಟ. ಕಾಲೇಜು ಮುಗಿದ ಮೇಲೆ ಅವನಿಗೆ ಮನೆ ಮತ್ತು ಮಗನೇ ಸರ್ವಸ್ವ. ಅವನು ಹೊರಗೆ ಹೋಗುವುದೂ ಬೇರೆಯವರು ಅವನನ್ನು ಹುಡುಕಿಕೊಂಡು ಬರುವುದೂ ಇಲ್ಲವೇ ಇಲ್ಲ ಎನ್ನುವಷ್ಟು ಕಡಿಮೆ. ಮನೆಯಲ್ಲಿರುವಾಗ ಗೃಹಕೃತ್ಯಗಳನ್ನು ಬಿಟ್ಟರೆ ಅವನು ಪತ್ರಿಕೆ, ಪುಸ್ತಕಗಳಲ್ಲಿ ಮುಳುಗಿಬಿಡುತ್ತಿದ್ದ. ಭಾನುವಾರ ಕನ್ನಡದ, ಇಂಗ್ಲಿಷ್‌ನ ಎಲ್ಲ ಪತ್ರಿಕೆಗಳನ್ನು ರಾಶಿ ಹಾಕಿಕೊಂಡು ಓದುವುದು ಅವನಿಗೆ ಪ್ರಿಯವಾದ ಹವ್ಯಾಸ. ಅಂದೂ ಬೆಳಗಿನಿಂದ ಅದೇ ಕೆಲಸಗಳಲ್ಲಿ ಮುಳುಗಿ ಎಷ್ಟು ಸಮಯ ಸರಿದಿತ್ತೋ ಗೊತ್ತಿಲ್ಲ. ವಿಕಾಸ ಬಂದು "ಅಪ್ಪ ನಿಮಗೆ ಹೇಳಿದ್ದೇನಲ್ಲ. ಇವರೇ ನನ್ನ ಸಹಪಾಠಿಯಾಗಿದ್ದವರು, ಮಿಸ್ ಚಂದನಾ" ಎನ್ನುತ್ತಿದ್ದಂತೆ ತಲೆಯೆತ್ತಿ ಅತ್ತ ದೃಷ್ಟಿಹಾಯಿಸಿದ ದಿವಾಕರ ಒಂದು ಕ್ಷಣ ಸ್ತಂಭೀಭೂತನಾದ. ಮರುಕ್ಷಣವೇ ಎಚ್ಚತ್ತುಕೊಂಡು ಅವಳ ನಮಸ್ಕಾರಕ್ಕೆ ಪ್ರತಿಯಾಗಿ ನಮಸ್ಕರಿಸಿ, ಹಾರ್ದಿಕವಾದ ಮಂದಹಾಸ ಸೂಸಿ ಕುಳಿತುಕೊಳ್ಳಲು ಸೂಚಿಸಿದ. "ಈ ವಿಕಾಸ ನಿನ್ನ ಬಗ್ಗೆ ಇಲ್ಲಿಯವರೆಗೂ ಏನೂ ಹೇಳಿಲ್ಲಮ್ಮ. ಅದಕ್ಕೋಸ್ಕರ ನಾನೇ ಕೇಳ್ತಿದ್ದೀನಿ. ನಿಮ್ಮ ಮನೆ ಎಲ್ಲಿ? ನಿಮ್ಮ ತಂದೆ–ತಾಯಿ ಏನ್ಮಾಡ್ತಾರೆ?" ಎಂದು ಪ್ರಶ್ನಿಸಿದನಾದರೂ ದಿವಾಕರನ ಮನಸ್ಸಿನಲ್ಲಿ ಅದಾಗಲೇ ಅನುಮಾನದ ಹಾವೊಂದು ಹೆಡೆಯಾಡಿಸಲಾರಂಭಿಸಿತ್ತು. ಮೂವತ್ತು ವರ್ಷಗಳ ಹಿಂದೆ ತಾನು ಎಂ.ಎ. ಓದುತ್ತಿದ್ದಾಗ ಚಿಗುರಿ ಹೆಮ್ಮರವಾದ ಉತ್ಕಟ ಪ್ರೇಮಸಂಬಂಧವೊಂದರ ಕಹಿನೆನಪು ದಿವಾಕರನನ್ನು ಆಗಾಗ ಬಾಧಿಸುತ್ತಲೇ ಇದ್ದದ್ದು ಈಗ ಚಂದನಾಳನ್ನು ನೋಡಿ ಮತ್ತೆ ಸ್ಮರಣೆಗೆ ಬಂತು. ಅವಳಿ ಅಥವಾ ತದ್ರೂಪಿಗಳಲ್ಲಿ ಮಾತ್ರ ಕಾಣಿಸಬಹುದಾದ ಗುಣಲಕ್ಷಣಗಳ ಸಾಮ್ಯತೆ ಆ ಮುಖ ಮತ್ತು ಈ ಮುಖದ ನಡುವೆ ಇರುವುದು ಸ್ಪಷ್ಟವಾಗಿ ಗೋಚರವಾಗುತ್ತಿತ್ತು. ಎರಡು ವರ್ಷಗಳ ಒಡನಾಟ ಮಂಗಳೂರಿನ ಹೋಟೆಲ್. ಉದ್ಯಾನವನ, ಸಭೆ, ಸಮಾರಂಭ, ಬೀಚ್, ಸಿನಿಮಾ ಮಂದಿರ, ಅಕ್ಕಪಕ್ಕದ ಪ್ರೇಕ್ಷಣೀಯ ಸ್ಥಳಗಳು ಇಲ್ಲೆಲ್ಲ ಹೊಕ್ಕಾಡಿ ಪ್ರಣಯ ಪರಾಕಾಷ್ಠೆಗೇರಿತ್ತು. ಅಧ್ಯಯನ ಮುಗಿದ ಮೇಲೆ ಉದ್ಯೋಗ, ಆಮೇಲೆ ಮದುವೆ ಎಂದು ಮುನ್ನುಡಿ ಬರೆದುಕೊಂಡು ಹೊಂಗನಸುಗಳಲ್ಲಿ ತೇಲಾಡಿತ್ತು.

ಪರೀಕ್ಷೆ ಫಲಿತಾಂಶ ಬರುವವರೆಗೆ ಹಳ್ಳಿಗೆ ಹೋಗಿ ತಂದೆತಾಯಿಯರ ಜೊತೆ ಇದ್ದು ಬರುವುದಾಗಿ ಹೋದ ದಿವಾಕರ ಮರಳಿ ಮಂಗಳೂರಿಗೆ ಬರುವಷ್ಟರಲ್ಲಿ. ಅವನನ್ನು ಸುಲಭಕ್ಕೆ ಚೇತರಿಸಿಕೊಳ್ಳಲಾಗದ ಆಘಾತಕ್ಕೆ ದೂಡಿ ಕನಸಿನ ಹಕ್ಕಿ ಹಾರಿಹೋಗಿತ್ತು. ಅವನಿಗಾಗಿ ರೂಮ್‌ನಲ್ಲಿ ಕಾಯುತ್ತಿತ್ತು ಒಂದು ಪತ್ರ. ಇದರಲ್ಲಿ ವಂದನಳ ತಪ್ಪೇನೂ ಇಲ್ಲ. ಅವಳು ಪ್ರಣಯದ್ರೋಹಿಯೂ ಅಲ್ಲ. ಅನಿರೀಕ್ಷಿತ

ಒತ್ತಡಗಳನ್ನು ಎದುರಿಸುವ ಮಾರ್ಗೋಪಾಯಗಳಿಲ್ಲದೆ, ಅಸಹಾಯಕ ಸನ್ನಿವೇಶದಲ್ಲಿ ಪರಿಸ್ಥಿತಿಯ ಕೈಗೊಂಬೆಯಾಗಿದ್ದಾಳೆ. ರಾಜಕಾರಣಿಯಾದ ಅಪ್ಪ ಬೆಂಗಳೂರಿನ ಒಳ್ಳೆಯ ಸಂಬಂಧವೊಂದು ಕೂಡಿ ಬಂದಿತೆಂದು ಮಗಳ ಅಭಿಪ್ರಾಯವನ್ನು ಕೇಳದೆ ತರಾತುರಿಯಲ್ಲಿ ಮದುವೆ ನಿಶ್ಚಯಿಸಿದ್ದಾರೆ. ವಂದನ ಹಾಗೂ ಹೀಗೂ ಧೈರ್ಯ ಮಾಡಿ ತಾಯಿಯ ಬಳಿ ತನ್ನ ಪ್ರಣಯ ಕಥೆಯನ್ನು ನಿವೇದಿಸಿಕೊಂಡು ಗೋಳಾಡಿದ್ದಾಳೆ. ತಾಯಿಯ ಬೆಂಬಲ ಸಿಗದೆ, ವಿಳಾಸ ಗೊತ್ತಿಲ್ಲದಿದ್ದರೂ ನಾಯಕನನ್ನು ಹುಡುಕುವುದರಲ್ಲಿ ಯಶಸ್ವಿಯಾಗುವ ಸಿನೆಮಾ ನಾಯಕಿಯ ಸಾಹಸ ಮಾಡಲಾಗದೆ, ಮದುವೆಯ ಹಿಂದಿನ ದಿನದವರೆಗೂ ಮೌನವಾಗಿ ಅಳುತ್ತಲೇ ಇದ್ದು. ದಿವಾಕರನಿಗೆ ಬರೆದ ಪತ್ರದಲ್ಲೂ ಕಣ್ಣೀರಿನ ಕೆಲವು ಹನಿಗಳನ್ನು ಉದುರಿಸಿ, ಮಾರನೆಯ ದಿನ ಹಸೆಮಣೆಯೇರಿ ತಾಳಿ ಕಟ್ಟಿದವನ ಮಡದಿಯಾಗಿ ಬೆಂಗಳೂರು ಸೇರಿದ್ದಾಳೆ.

ದಿವಾಕರನಿಗೆ ಈ ಆಘಾತ ತಟ್ಟಿದ್ದು ಇದೆಲ್ಲ ನಡೆದು ಒಂದು ತಿಂಗಳಾದ ಮೇಲೆ. ಈಗಲೂ ಅವಕಾಶವಿದ್ದಿದ್ದರೆ ಅವನಿಗೆ ಹೋರಾಡುವ ಧೈರ್ಯ ಬರುತ್ತಿತ್ತೋ ಏನೋ. ಇನ್ನು ಅದರ ಬಗ್ಗೆ ಏನೇನೂ ಆಸೆ ಇರಿಸಿಕೊಳ್ಳುವಂತಿಲ್ಲ. ಯೋಚಿಸಿದಷ್ಟೂ ದುಃಖ, ನಿರಾಶೆ ತೀವ್ರವಾಗುತ್ತದೆ. ನಡೆದುಹೋದದ್ದೆಲ್ಲ ಒಂದು ಮಧುರ ಸ್ವಪ್ನವೆಂದು ಭಾವಿಸುವ ವೈರಾಗ್ಯಕ್ಕೆ ಅವನು ಶರಣಾದ. ತನ್ನಲ್ಲಿ ಸುಪ್ತವಾಗಿದ್ದ ಪ್ರಣಯಾಗ್ನಿಯನ್ನು ಜ್ವಲಿಸಿದ ಅವಳು ಎಲ್ಲಾದರೂ ಇರಲಿ, ಸುಖವಾಗಿರಲಿ ಎಂದು ಹಾರೈಸಿದ. ಹೊಟ್ಟೆಪಾಡಿನ ಹೋರಾಟದಲ್ಲಿ ಅವಳ ನೆನಪು ಒಮ್ಮೊಮ್ಮೆ ಬಾಧಿಸುತ್ತಿದ್ದುದನ್ನು ಬಿಟ್ಟರೆ ಕ್ರಮೇಣ ಮಾಸುತ್ತ ಹೋಯಿತು. ಫಲಿತಾಂಶವೂ ಬಂತು. ಅವನು ಇಷ್ಟಪಡುತ್ತಿದ್ದ ಕಾಲೇಜು ಅಧ್ಯಾಪಕನ ಕೆಸಲವೂ ಸಿಕ್ಕಿತು. ಕೈ ತುಂಬ ಸಂಬಳ. ಆಗಷ್ಟು ಈಗಷ್ಟು ಊರಿಗೆ ಕಳುಹಿಸುತ್ತಿದ್ದದ್ದು ಬಿಟ್ಟರೆ ಉಳಿದ ಹಣದಲ್ಲಿ ಅವನು ಐಷಾರಾಮದಿಂದ ಬದುಕಬಹುದಿತ್ತಾದರೂ ಸನ್ಯಾಸಿಯಂತಿರುವುದೇ ಅವನಿಗೆ ಇಷ್ಟವಾಗಿತ್ತು. ಹೀಗೆ ನಾಲ್ಕಾರು ವರ್ಷಗಳು ಕಳೆಯುವಷ್ಟರಲ್ಲಿ ತಾಯಿ ಮತ್ತು ಮದುವೆಯಾದ ತಂಗಿಯರು ಹತ್ತು ಹಲವು ಬಾರಿ ಅವನ ಬಳಿ ಬಂದು ಗೋಳಾಡಿದರು. ವಂಶೋದ್ಧಾರಕ ಒಬ್ಬನೇ ಆಗಿರುವುದರಿಂದಲೂ ಅವನಿಂದಲೇ ವಂಶದ ಕುಡಿ ಮುಂದುವರಿಯಬೇಕಿರುವುದರಿಂದಲೂ ಮದುವೆಯಾಗುವಂತೆ ಒತ್ತಾಯಿಸಿದರು. ಮೊದಮೊದಲು ನಿರಾಕರಿಸಿದರೂ ತಾನು ಅಮರಪ್ರೇಮಿ ಯಾಗಬೇಕಾದ ಅಗತ್ಯವಿಲ್ಲವೆಂದು ಜ್ಞಾನೋದಯವಾಗುತ್ತಿದ್ದಂತೆ ಮದುವೆಗೆ ಮನಸ್ಸು ಮಾಡಿದ. ಆದರೆ ಮದುವೆ ತಾನು ಒಪ್ಪಿದ ಹುಡುಗಿಯೊಡನೆ ತನ್ನಿಷ್ಟದಂತೆ ನಡೆಯಬೇಕೆಂದು ವಾದ ಹೂಡಿ ಗೆದ್ದ.

ಮದುವೆ ಮಾಡಿಕೊಳ್ಳುವ ನಿರ್ಧಾರ ತೆಗೆದುಕೊಳ್ಳುತ್ತಿದ್ದಂತೆ ಅಲ್ಲಿಯವರೆಗೆ

ಒಳಗೊಳಗೇ ಕಾವು ಕೂತಿದ್ದ ವಿಚಾರವೊಂದು ಗಟ್ಟಿಯಾಗತೊಡಗಿತು. ಅನಾಥೆಯೊಬ್ಬಳಿಗೆ ಬದುಕು ಕಟ್ಟಿಕೊಡಬೇಕೆಂದು ಸಂಕಲ್ಪಿಸಿದ ದಿವಾಕರ ಆ ಉದ್ದೇಶದ ಈಡೇರಿಕೆಗೆ ಬೆಂಗಳೂರಿಗೆ ವರ್ಗಾವಣೆ ಮಾಡಿಸಿಕೊಂಡ. ಅಲ್ಲಿದ್ದ ಗೆಳೆಯರ ನೆರವಿನಿಂದ ಹತ್ತಾರು ಅನಾಥಾಲಯಗಳನ್ನುಸುತ್ತಿ. ಒಂದು ಕಡೆ ತನಗೆ ಇಷ್ಟವಾದ ಆರತಿ ಎಂಬ ಹುಡುಗಿಯನ್ನು ಆಯ್ಕೆ ಮಾಡಿಕೊಂಡ. ಕೆಲವೇ ಬಂಧುಗಳ, ಗೆಳೆಯರ ಸಮ್ಮುಖದಲ್ಲಿ ರಿಜಿಸ್ಟರ್ಡ್ ಮದುವೆ ಮಾಡಿಕೊಂಡು ಮನೆ ತುಂಬಿಸಿಕೊಂಡ ಆರತಿಗೆ ತನ್ನೆಲ್ಲ ಪ್ರೀತಿಯನ್ನು ಮನಃಪೂರ್ವಕವಾಗಿ ಧಾರೆ ಎರೆದ. ಆರತಿ ನಾಗರಿಕ ಬದುಕಿನ ನಯ ನಾಜೂಕುಗಳನ್ನು ಅರಿಯುತ್ತ, ಗಂಡನ ಭಾವನೆಗಳಿಗೆ ಸ್ಪಂದಿಸುತ್ತ ಅತ್ಯುತ್ತಮ ಸಂಗಾತಿಯ ಪಾತ್ರವನ್ನು ನಿರ್ವಹಿಸಿ, ದಾಂಪತ್ಯ ಜೀವನದ ಎರಡನೆಯ ವರ್ಷದಲ್ಲೇ ವಿಕಾಸನಿಗೆ ಜನ್ಮ ನೀಡಿದಳಾದರೂ ಮುಂದಿನ ವರ್ಷಗಳಲ್ಲಿ ಅವಳ ಆರೋಗ್ಯ ಏರುಪೇರಾಗುತ್ತ ನಡೆಯಿತು. ಮಾಮೂಲಿ ಔಷಧೋಪಚಾರವೆಲ್ಲ ಮುಗಿದು ಕಟುಸತ್ಯ ಅರ್ಥವಾಗುವ ಹೊತ್ತಿಗೆ ಹತ್ತು ವರ್ಷಗಳು ಕಳೆದುಹೋಗಿದ್ದವು. ಬೆಳೆದುಬಿಟ್ಟಿದ್ದ ಕ್ಯಾನ್ಸರ್‌ದೊಂದಿಗೆ ಮತ್ತೆ ಹತ್ತು ವರ್ಷ ಹೋರಾಡಿ, ಮಗನನ್ನು ತಬ್ಬಲಿಯಾಗಿಸಿ, ದಿವಾಕರನನ್ನು ಮತ್ತೊಮ್ಮೆ ಶೋಕದ ಮಡುವಿಗೆ ನೂಕಿ, ಹಿಂದಿರುಗದ ಲೋಕಕ್ಕೆ ಪಯಣಿಸಿಬಿಟ್ಟಳು.

ಹೂತುಹೋದ ನೆನಪುಗಳೆಲ್ಲ ಕ್ಷಣವೊಂದರಲ್ಲಿ ಬುದಿಲ್ಲನೆ ಎದ್ದು ನಿಂತು, ಇವಳೂ ವಂದನಳ ಮಗಳೇ ಆಗಿರಬಹುದೇ? ಎತ್ತಣ ಮಾಮರ ಎತ್ತಣ ಕೋಗಿಲೆ! ಎಂದು ಆಶ್ಚರ್ಯಗೊಳ್ಳುತ್ತಿರುವಂತೆ, ತಾನೆಂದೂ ಮರೆಯಲು ಸಾಧ್ಯವೇ ಇಲ್ಲದ ಬಾಗು ಬಳುಕು ಮತ್ತು ಮಾತಿನ ಓಘದಲ್ಲಿ ತನಗೆ ಮಾತ್ರ ವಯಸ್ಸಾಗಿದೆ, ವಂದನಾ ಚಿರತರುಣಿ ಎನ್ನುವಂತೆ ಅವಳ ಸಾಕ್ಷಾತ್ಕಾರವೇ ಆಗಿದ್ದ ಚಂದನಾ ಮಾತಾಡತೊಡಗಿದಳು: "ಅಂಕಲ್ ನಮ್ಮನೆ ಇರೋದು ಬನಶಂಕರಿ ಎರಡನೇ ಸ್ಟೇಜ್‌ನಲ್ಲಿ. ಅಮ್ಮ ಮಂಗಳೂರಿನವರು, ಅಪ್ಪ ಬೆಂಗಳೂರಿನವರೇ. ಅವರು ಕಮರ್ಷಿಯಲ್ ಟ್ಯಾಕ್ಸ್ ಆಫೀಸರ್ ಆಗಿದ್ದರು. ಅಪ್ಪ ಅಮ್ಮನ ಮದುವೆಯಾಗಿ ಐದು ವರ್ಷಗಳ ಅನಂತರ ಹುಟ್ಟಿದ ನಾನು ಒಬ್ಬಳೇ ಮಗಳು. ನನಗೆ ನಾಲ್ಕು ವರ್ಷ ಆಗಿದ್ದಾಗ ಡ್ಯಾಡಿ ಆಕ್ಸಿಡೆಂಟ್‌ನಲ್ಲಿ ತೀರಿಕೊಂಡು ಬಿಟ್ಟರು. ಸ್ವಂತ ಮನೆ, ಅವರು ಮಾಡಿದ್ದ ಸಂಪಾದನೆ, ಇನ್ಶ್ಯೂರೆನ್ಸ್ ಇತ್ಯಾದಿಗಳಿಂದ ಜೀವನ ನಿರ್ವಹಣೆಗೇನೂ ತೊಂದರೆ ಇರಲಿಲ್ಲ. ನಾನು ಶಾಲೆಗೆ ಹೋಗೋಕೆ ಶುರು ಮಾಡಿದ ಮೇಲೆ ಮನೆಯಲ್ಲಿ ಒಬ್ಬಳೇ ಇದ್ದು ಮಾಡುವುದೇನು ಅಂತ ಅಮ್ಮ ಬಿ.ಎಡ್. ಮಾಡಿಕೊಂಡು ಪ್ರೈವೇಟ್ ಸ್ಕೂಲೊಂದರಲ್ಲಿ ಟೀಚರ್ ಆಗಿ ಕೆಲಸ ಮಾಡ್ತಿದ್ದಾರೆ. ನಾನು ಡ್ಯಾಡೀನ ಫೋಟೋದಲ್ಲಿ ಮಾತ್ರ ನೋಡಿದ್ದೀನಿ. ಅವರನ್ನ ಸರಿಯಾಗಿ ನೋಡಿದ ನೆನಪೇ ಇಲ್ಲ. ನಾನು ಕಂಪ್ಯೂಟರ್

ಇಂಜಿನಿಯರ್ ಆಗಿ ಅಮೆರಿಕಾಕ್ಕೆ ಹೋಗಬೇಕು ಅಂತ ಡ್ಯಾಡಿ ಆಸೆಯಾಗಿತ್ತಂತೆ. ಅಮ್ಮ ಅದನ್ನು ಮತ್ತೆ ಮತ್ತೆ ನೆನಪಿಸುತ್ತಿದ್ದರು. ಅಮೆರಿಕಾಕ್ಕೆ ಹೋಗ್ತಿನೋ ಇಲ್ವೋ ಗೊತ್ತಿಲ್ಲ. ಆದರೆ ಇಂಜಿನಿಯರ್ ಅಂತೂ ಆಗಿದ್ದೀನಿ."

ಮಾತನಾಡುವಾಗ ಕಣ್ಣುಗಳನ್ನು ಅರಳಿಸುವುದು, ಹೊರಳಿಸುವುದು, ಕತ್ತರಿಸಿದ ಹುಬ್ಬುಗಳ ವಕ್ರತೆ, ತುಟಿಯ ಕೊಂಕು ಎಲ್ಲದರಲ್ಲೂ ಅವಳು ವಂದನಳ ಪಡಿಯಚ್ಚೇ. ಚಂದನ ಇಲ್ಲಿಯವರೆಗೆ ಆಡಿದ ಮಾತಿನಿಂದ ಸರಪಳಿ ಪೂರ್ಣವಾಗಿತ್ತು. ಇನ್ನು ಅನುಮಾನಕ್ಕೆ ಆಸ್ಪದವೇ ಉಳಿಯಲಿಲ್ಲ. ತೀವ್ರವಾಗಿ ಪ್ರೀತಿಸಿದ ಎರಡು ಜೀವಗಳು ಮದುವೆಯ ಮೂಲಕ ಬೆಸೆದುಕೊಳ್ಳಲಾಗದೆ, ಇಬ್ಬರೂ ಪರಸ್ಪರರನ್ನು ಮನದ ಮೂಲೆಗೆ ಒತ್ತರಿಸಿ, ವಾನಪ್ರಸ್ಥಕ್ಕೆ ಸಜ್ಜಾಗಿರುವಾಗ ವಿಧಿ ನಮ್ಮ ಬದುಕಿನಲ್ಲಿ ಎಂಥ ಕ್ರೂರ ಆಟಕ್ಕೆ ಸಂಚು ನಡೆಸಿದೆ! ನಾನು ವಿಧುರನಾಗಿ, ಅವಳು ವಿಧವೆಯಾಗಿ, ಸಮಾನ ದುಃಖಿಗಳಾಗಿ, ನನ್ನಮಗ ಅವಳ ಮಗಳು ಪರಸ್ಪರ ಆಕರ್ಷಿತರಾಗಿ, ನಮ್ಮಿಂದ ಸಾಧ್ಯವಾಗದೇ ಹೋದುದನ್ನು ಅವರು ಮಾಡಹೊರಟಿದ್ದಾರೆಂದರೆ, ಜಾತಿ ಮತಗಳ ವ್ಯಾಪ್ತಿಯನ್ನು ಮೀರಿ ಲಕ್ಷ ಗಂಡುಗಳಿಗೆ ಲಕ್ಷ ಹೆಣ್ಣುಗಳು ಒಲಿಯುವ ಸಾಧ್ಯತೆಯಿರುವಾಗಲೂ ಇವರಿಬ್ಬರೇ ಹತ್ತಿರ ಬಂದಿದ್ದಾರೆಂದರೆ, ಇದರಲ್ಲಿ ಅಡಗಿ ಕುಳಿತಿರುವ ನಿಗೂಢತೆ ಏನನ್ನು ಬಯಲಾಗಿಸಲು ಹೊರಟಿದೆ?

ಒಂದರ ಹಿಂದೊಂದರಂತೆ ಮೇಲೇಳುತ್ತಿದ್ದ ವಿಚಾರ ಸರಣಿಯನ್ನು ತುಂಡರಿಸಿ ದಿವಾಕರ ಚಂದನಳೊಡನೆ ಲೋಕಾಭಿರಾಮವಾಗಿ ಮಾತು ಮುಂದುವರಿಸಿದ. "ನನ್ನ ಮಗ ಒಪ್ಪಿದ ಮೇಲೆ ಅದಕ್ಕೆ ನಾನು ಸಂತೋಷದಿಂದ ಅಸ್ತು ಎನ್ನುವವನೇ. ಆದರೆ ನಿಮ್ಮ ಮನೆಯಲ್ಲಿ ಅಮ್ಮನಿಗೆ ಈ ಸಂಬಂಧದ ಸುಳಿವೇನಾದರೂ ಸಿಕ್ಕಿದೆಯೋ? ಈ ಮದುವೆಗೆ ಅಮ್ಮನ ಒಪ್ಪಿಗೆ ಉಂಟೋ? ಮುಂದಿನ ಮಾತುಕತೆಗೆ ಅಮ್ಮ ಇಲ್ಲಿಗೆ ಬರುತ್ತಾರೋ ಅಥವಾ ನಾನೇ ಅಲ್ಲಿಗೆ ಬರಬೇಕೋ?"

"ಸಹಪಾಠಿಯಾಗಿ, ಸ್ನೇಹಿತನಾಗಿ ವಿಕಾಸನ ಹೆಸರು ಅಮ್ಮನಿಗೆ ಗೊತ್ತು. ಶಾಲೆಯ ಕೆಲಸ ಮತ್ತು ಮನೆಯ ನಡುವೆ ಅಮ್ಮ ಯಾವ ಸಾಮಾಜಿಕ ಸಂಬಂಧಗಳನ್ನೂ ಇಟ್ಟುಕೊಂಡವರಲ್ಲ. ಹಾಗಾಗಿ ವಿಕಾಸ್‌ನ್ನು ಅಮ್ಮನಿಗೆ ತೋರಿಸುವ ಸಂದರ್ಭ ಬರಲಿಲ್ಲ. ಬಹುಮಟ್ಟಿಗೆ ಮೌನಿಯಾಗೇ ಇರುವ ಅಮ್ಮನದು ಎಷ್ಟು ಬೇಕೋ ಅಷ್ಟೇ ಮಾತು. ಅಂತ ಅಮ್ಮನೆದುರು ಇದನ್ನೆಲ್ಲ ಹೇಳಿಕೊಳ್ಳುವಷ್ಟು ಧೈರ್ಯ ನನಗಿಲ್ಲ. ಅಮ್ಮನೊಂದಿಗೆ ಅಪ್ಪನೂ ಆಗಿ ನನ್ನನ್ನು ಈ ಸ್ಥಿತಿಗೆ ಮುಟ್ಟಿಸಿರುವ ಅವರಿಗೆ ಇಷ್ಟವಾಗದಿರುವುದನ್ನು ನಾನು ಖಂಡಿತ ಮಾಡಲಾರೆ. ಆದ್ದರಿಂದ ಈ ವಿಚಾರದಲ್ಲಿ ನೀವೇ ಮುತುವರ್ಜಿ ತೆಗೆದುಕೊಳ್ಳಬೇಕು".

ಇಂಜಿನಿಯರ್ ಹುಡುಗಿ ಜಗತ್ತು ಹೇಗೆ ಸಾಗುತ್ತಿದೆ ಎನ್ನುವುದನ್ನು ಬಲ್ಲ ಜಾಣೆ.

ತನ್ನ ಕಷ್ಟದ ಹೊರೆ ಇಳಿಸಿಕೊಂಡು ಅವಳೇನೋ ಹಗುರಾಗಿಬಿಟ್ಟಳು. ಆದರೆ ದಿವಾಕರ 'ನಾನೀಗ ನಿಮ್ಮಮ್ಮನನ್ನು ಭೇಟಿಯಾದರೆ ಜ್ವಾಲಾಮುಖಿ ಯೊಡಲಿನಿಂದ ಲಾವಾರಸ ಉಕ್ಕಿದಂಥ ಆಘಾತವೇ ಆಗಬಹುದು' ಎಂದು ಹೇಳಲು ಸಾಧ್ಯವಿರಲಿಲ್ಲ. ಒಲಿದ ಹೃದಯಗಳನ್ನು ಕೂಡಿಸುವುದರ ಜತೆಗೆ, ತಾನೆಂದೂ ಅಪರಾಧಿ ಸ್ಥಾನದಲ್ಲಿ ನಿಲ್ಲಿಸದ ವಂದನಳನ್ನು ಇಷ್ಟೆಲ್ಲ ವರ್ಷಗಳ ಅನಂತರ, ಬದಲಾದ ಸನ್ನಿವೇಶದಲ್ಲಿ ಭೇಟಿಯಾಗಿ ಸಾಂತ್ವನ ಹೇಳುವುದೋ ಬೇಡಿಕೊಳ್ಳುವುದೋ ಏನಾದರೊಂದನ್ನು ಮಾಡಲು. ಅದಕ್ಕಾಗಿ ಬಿರುಗಾಳಿಗೆ ಬೇಕಾದರೂ ತಲೆಯೆಡ್ಡಲು ದಿವಾಕರ ಸಿದ್ಧನಾದ. "ಮುಂದಿನ ಭಾನುವಾರ ಮಧ್ಯಾಹ್ನ 12 ಗಂಟೆಯ ಹೊತ್ತಿಗೆ ನಾನು ನಿಮ್ಮ ಮನೆಗೆ ಬರುತ್ತೇನೆ. ಈ ಬಗ್ಗೆ ಅಮ್ಮನಿಗೆ ಯಾವ ಸುಳಿವನ್ನೂ ಕೊಡಬೇಡ. ಆ ಸಮಯದಲ್ಲಿ ನೀನು ಯಾವುದಾದರೂ ಕೆಲಸದ ನೆಪ ಹೇಳಿ ಮನೆಯಿಂದ ಹೊರಗಿರು. ಉಳಿದದ್ದನ್ನೆಲ್ಲ ನಾನು ಸರಿ ಮಾಡುತ್ತೇನೆ, ನಿಶ್ಚಿಂತೆಯಿಂದಿರು" ಎಂದುಹೇಳಿ ಚಂದನಳಿಂದ ಮನೆಯ ವಿಳಾಸ ಪಡೆದುಕೊಂಡ.

ವಿಳಾಸ ಸರಿಯಾಗಿದೆಯೇ ಎಂಬುದನ್ನು ದಿವಾಕರ ಎರಡೆರಡು ಬಾರಿ ಖಾತ್ರಿಪಡಿಸಿಕೊಂಡು ಕರೆಘಂಟೆಯೊತ್ತಿದ. ಒಳಗೆ ಮೃದುವಾದ ಸಂಗೀತ ಅಲೆಅಲೆಯಾಗಿ ಹರಡಿಕೊಳ್ಳುತ್ತಿದ್ದಂತೆ ಐವತ್ಮೂರರ ಇಳಿವಯಸ್ಸಿನಲ್ಲೂ ಎದೆ ಢವಗುಟ್ಟ ತೊಡಗಿ ಸೂಕ್ಷ್ಮವಾಗಿ ಕಂಪಿಸಿದ. ಒಳಗಿನಿಂದ ಹೆಜ್ಜೆಯ ಸಪ್ಪಳ ಬಾಗಿಲವರೆಗೆ ಸಾಗಿ ಬಂತು. 'ಯಾರು?' ಎನ್ನುವ ಧ್ವನಿಯೊಡನೆ ಬಾಗಿಲು ತೆರೆದುಕೊಳ್ಳಲು, ಆಚೆಈಚೆ ನಿಂತವರಿಬ್ಬರೂ ಪರಸ್ಪರರನ್ನು ನೋಡಿ, ಹೌದೋ ಅಲ್ಲವೋ ಎಂದು ಅನುಮಾನಿಸಿ, ಆಮೇಲೆ ಹೌದು ಹೌದು ಎನ್ನಿಸಿ, ಕ್ಷಣ ಹೊತ್ತು ತಾಂಡವವಾಡಿದ ಮೌನದಲ್ಲಿ ಬೆಚ್ಚಿದರು. ವಂದನಳ ಕಾಂತಿಹೀನ ಕಣ್ಣುಗಳ ಮೇಲೆ ಕನ್ನಡಕ ಕುಳಿತಿತ್ತು. ಅನಾಸಕ್ತಿಯಿಂದ ಬಾಚಿಕೊಂಡ ತಲೆಯಲ್ಲಿ ಅಲ್ಲಲ್ಲಿ ಬೆಳ್ಳಿಕೂದಲು ಇಣುಕುತ್ತಿದ್ದವು. ಮಂದಹಾಸದಿಂದ ಬಿರಿಯುವುದನ್ನು ಮರೆತ ತುಟಿಗಳು ಬಲವಂತವಾಗಿ ಆ ಪ್ರಯತ್ನ ಮಾಡುತ್ತಿರುವಂತೆ ದಿವಾಕರ ಎಚ್ಚತ್ತು ಕೊಂಡ. "ವಂದನಾ ಒಳಗೆ ಬರಬಹುದೇ?" ಅಂದ. 'ಆಂ, ಹಾಂ, ಬನ್ನಿ ಬನ್ನಿ' ಎಂದು ಮುನ್ನಡೆದ ವಂದನಳನ್ನು ದಿವಾಕರ ಅನುಸರಿಸಿದ. ಅವಳು ತೋರಿಸಿದ ಕಡೆ ಸೋಫಾದ ಮೇಲೆ ಕುಳಿತ. ಕಾಲೇಜಿನ ದಿನಗಳ ನೆನಪಿನಲ್ಲಿ ಇಬ್ಬರೂ ಕರಗಿ ಪಶ್ಚಾತ್ತಾಪಪಡುವ ಸನ್ನಿವೇಶಕ್ಕೆ ಈಗ ಅವಕಾಶ ಮಾಡಿಕೊಡುವುದು ಬೇಡ ಎನ್ನಿಸಿ ದಿವಾಕರ ಮಾತಿಗೆ ತೊಡಗಿದ–

"ವಂದನಾ, ಸುಮಾರು ಮೂವತ್ತು ವರ್ಷಗಳ ಅನಂತರ ನಿನ್ನನ್ನು ನೋಡುವ ಸಂದರ್ಭ ಬಂದುದಕ್ಕಾಗಿ ನನಗೆ ಒಂದು ರೀತಿಯ ಸಮಾಧಾನವಾಗುತ್ತಿದೆ. ಈ ಅವಧಿಯಲ್ಲಿ ಸಂಭವಿಸಿದ ಆಕಸ್ಮಿಕಗಳು ನಮಗಿಷ್ಟವಿಲ್ಲದಂತೆ ನಮ್ಮ ಪಾತ್ರಗಳನ್ನು

ನಿರ್ವಹಿಸಲು ಒತ್ತಾಯಿಸಿವೆ. ನಾನು ನಿನ್ನ ಕಡೆಗಾಗಲೀ ನೀನು ನನ್ನ ಕಡೆಗಾಗಲೀ ಅಪರಾಧಿ ಎಂದು ಬೆರಳು ತೋರಿಸುವ ಸ್ಥಿತಿಯಲ್ಲಿ ನಾವಿಲ್ಲ. ಹೆಂಡತಿಯನ್ನು ಕಳೆದುಕೊಂಡ ನಾನು, ಗಂಡನನ್ನು ಕಳೆದುಕೊಂಡ ನೀನು ಹಳೆಯ ದಿನಗಳಿಗೆ ಮರಳಲಾಗದಷ್ಟು ಮುಂದೆ ಬಂದುಬಿಟ್ಟಿರುವ ಒಂದೇ ದೋಣಿಯ ಪಯಣಿಗರಾಗಿದ್ದೇವೆ. ಪರಸ್ಪರರಿಗೆ ಒಳ್ಳೆಯದಾಗಲೆಂದು ಹಾರೈಸುವುದು, ಮುಂದಿನ ದಿನಗಳಿಗೆ ಬೇಕಾಗುವ ಆತ್ಮವಿಶ್ವಾಸವನ್ನು ತುಂಬುವ ಸಾಂತ್ವನವನ್ನು ಹೇಳುವುದು ಇದಿಷ್ಟೇ ನಾವು ಮಾಡಬಹುದಾದ ಕೆಲಸ. ಇಷ್ಟೆಲ್ಲ ಆದ ಮೇಎಲೆ ನಾವು ಪರಸ್ಪರರನ್ನು ನೋಡುವಷ್ಟು, ಮಾತಾಡುವಷ್ಟು ಹತ್ತಿರವಾಗಿದ್ದೇವೆನ್ನುವುದು ಯಾರಿಗೆ ಪ್ರಿಯವಾದದ್ದು? ಇದು ವಿಧಿಯೇ, ಆಕಸ್ಮಿಕವೇ ನನಗೆ ಗೊತ್ತಿಲ್ಲ. ಬದುಕು ಎಷ್ಟುವಿಚಿತ್ರ ಎಂದರೆ, ಇಬ್ಬರೂ ಮಂಗಳೂರು ಬಿಟ್ಟು ಬೆಂಗಳೂರಿಗೆ ಬಂದು ಬಿದ್ದಿದ್ದೇವೆ. ನನ್ನ ಮಗ, ನಿನ್ನ ಮಗಳು ಒಂದೇ ಕಾಲೇಜಿನಲ್ಲಿ ಓದಿದ್ದಾರೆ. ಪರಸ್ಪರ ಆಕರ್ಷಿತರಾಗಿದ್ದಾರೆ. ಸಂಗಾತಿಗಳಾಗಲು ನಮ್ಮ ಮನಃಪೂರ್ವಕ ಆಶೀರ್ವಾದಕ್ಕಾಗಿ ಕಾಯುತ್ತಿದ್ದಾರೆ. ಇವುಗಳಲ್ಲಿ ಯಾವುದೊಂದು ವ್ಯತ್ಯಾಸವಾಗಿದ್ದರೂ ಈ ಜೀವಮಾನದಲ್ಲಿ ನಾವಿಬ್ಬರೂ ಮತ್ತೆ ಭೇಟಿಯಾಗುವ ಸಂದರ್ಭವೇ ಬರುತ್ತಿರಲಿಲ್ಲವೇನೋ? ಆಗ ನಾವು ಏನನ್ನು ಕಳೆದುಕೊಂಡೆವೋ ಅದನ್ನು ಮರಳಿ ನಮ್ಮ ಮಕ್ಕಳು ಗಳಿಸಿಕೊಟ್ಟಿದ್ದಾರೆಂದು ನಾವು ಸಂತಸಪಡೋಣ. ಅವರ ಸಂತೋಷಮಯ ಬದುಕಿಗೆ ನೆರವಾಗೋಣ. ಈ ಬಗ್ಗೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳುವುದು ಏನೂ ಇಲ್ಲ. ಮುಂದಿನ ತಿಂಗಳಲ್ಲಿ ನಮಗೆ ಅನುಕೂಲವಾಗುವ ಒಂದು ದಿನ ಆಪ್ತೇಷ್ಟರೆದುರಿಗೆ ಸರಳವಾಗಿ ವಿವಾಹ ನೆರವೇರಿಸೋಣ. ವಿಕಿ ಮತ್ತು ಚಂದನಾಳ ಗೆಳೆಯ ಗೆಳತಿಯರಿಗಾಗಿ ರಿಸೆಪ್ಶನ್ ಬೇಕಾದರೆ ಇಟ್ಟುಕೊಳ್ಳೋಣ. ಈ ಎಲ್ಲ ವ್ಯವಸ್ಥೆಯನ್ನು ನಾನೇ ಮುಂದೆ ನಿಂತುಮಾಡುತ್ತೇನೆ. ನೀನು ನಿಶ್ಚಿಂತೆಯಿಂದಿರು. ನಾವು ಹಳೆಯ ಪ್ರೇಮಿಗಳು ಎನ್ನುವ ಗುಟ್ಟನ್ನು ನಮ್ಮ ಎದೆಗೂಡಲ್ಲಿ ಬೆಚ್ಚಗೆ ಕಾಪಿಟ್ಟುಕೊಳ್ಳೋಣ. ಮಕ್ಕಳ ಪಾಲಿಗೆ ತಂದೆ–ತಾಯಿ ಜತೆಗೆ ಅತ್ತೆ–ಮಾವ ಕೂಡ ಆಗಿ ನಮ್ಮ ಕರ್ತವ್ಯವನ್ನು ಪ್ರಾಮಾಣಿಕವಾಗಿ ಮಾಡೋಣ. ಅವರ ಬದಕನ್ನು ಸುಂದರವಾಗಿ ಕಟ್ಟೋಣ."

ದಿವಾಕರನ ಹೃದಯದಿಂದ ಬಂದ ಭಾವಾವೇಶದ ಮಾತುಗಳಿಗೆ ವಂದನಾ ಕರಗಿದ್ದುದು ಸ್ಪಷ್ಟವಾಗಿತ್ತು. ಅವಳೇನೂ ಮಾತಾಡುವ ಸ್ಥಿತಿಯಲ್ಲಿರಲಿಲ್ಲವಾದರೂ ಸಾರ್ಥಕತೆಯ ಮಿಂಚೊಂದು ಅವಳ ಕಣ್ಣುಗಳಿಂದ ಸ್ಫೂರಿಸುತ್ತಿತ್ತು. "ಮುಂದಿನ ಕೆಲಸಗಳಿಗಾಗಿ ನಾನು ಮತ್ತೆ ಬರುತ್ತೇನೆ" ಎಂದು ಮೇಲೆದ್ದ ದಿವಾಕರ ಬಾಗಿಲು ದಾಟಿ ರಸ್ತೆಗಿಳಿದು ಹೆಜ್ಜೆ ಹಾಕತೊಡಗಿದ. ರಸ್ತೆಯ ತಿರುವಿನಲ್ಲಿ ಮರೆಯಾಗುವಾಗ, ಕಾಂಪೌಂಡ್‌ನ ಗೇಟಿಗೊರಗಿ ತನ್ನತ್ತಲೇ ದೃಷ್ಟಿ ನೆಟ್ಟಿರುವ ವಂದನಳನ್ನು ಕಲ್ಪಿಸಿಕೊಂಡ.

# ಘಟಕ – 4

# ಆಶಯ – ಸಂಕೀರ್ಣ

ವಿಜ್ಞಾನಕ್ಕೆ ಜಾತಿ ಭೇದವಿಲ್ಲ, ರಾಷ್ಟ್ರ ಭೇದವಿಲ್ಲ; ಅದು ಅಂತರಾಷ್ಟ್ರೀಯವಾದುದು ಎಂದು ವೈಜ್ಞಾನಿಕರು ಹೇಳುವುದುಂಟು. ವಿಜ್ಞಾನ ಇರಬೇಕಾದುದ್ದು ಹಾಗೆಯೇ. ಆದರೆ ವಾಸ್ತವ ಹಾಗಿಲ್ಲ. ವಿಜ್ಞಾನಿಗಳು ತಾವು ಕಂಡು ಹಿಡಿದ ವಿಷಯವನ್ನೆಲ್ಲಾ ಪ್ರಕಟನೆ ಮಾಡುವುದಿಲ್ಲ. ಕಾರ್ಖಾನೆಯಲ್ಲಿ ಕೆಲಸ ಮಾಡುವ ವಿಜ್ಞಾನಿಗಳು ತಾವು ಕಂಡುಹಿಡಿದುದನ್ನು ಗೋಪ್ಯವಾಗಿ ಇಟ್ಟುಕೊಳ್ಳುತ್ತಾರೆ. ಹಾಗೆಯೇ ಯುದ್ಧದ ಇಲಾಖೆಯಲ್ಲಿ ಕೆಲಸ ಮಾಡುವವರು ತಿಳಿದ ವಿಷಯಗಳನ್ನು ಬಹಿರಂಗ ಪಡಿಸುವುದಿಲ್ಲ, ವಿಜ್ಞಾನವು ಒಂದು ಪವಿತ್ರವಾದ ಬೆಳಕು. ಬೆಳಕಿನ ಕೆಲಸ ಬೆಳಗುವುದು. ಆದರೆ ಈಗಿನ ವಿಜ್ಞಾನಿಗಳು ಅದನ್ನು ಬುಟ್ಟಿಯ ಕೆಳಗೆ ಇಡುತ್ತಿರುವರು.

**–ಜಿ. ಹನುಮಂತರಾವ್**

# ಪುರಾಣಗಳಲ್ಲಿ ಭೂಮಿಯ ಪರಿಕಲ್ಪನೆ

**– ಡಾ. ಟಿ.ಆರ್. ಅನಂತರಾಮು**

ಜಗತ್ತಿನ ಅನೇಕ ಪುರಾಣಗಳಲ್ಲಿ ಭೂಮಿಗೆ ಬಹು ದೊಡ್ಡ ಸ್ಥಾನವನ್ನು ನೀಡಲಾಗಿದೆ. ಮನುಷ್ಯನ ಬದುಕು ಭೂಮಿಯನ್ನೇ ಆಧರಿಸಿದೆ. ಆಹಾರ, ನೀರು, ನೆಲೆಗೆ ಭೂಮಿಯನ್ನೇ ಅವಲಂಬಿಸಬೇಕು. ಭೂಮಿಯು ಜೀವರಕ್ಷಕ, ಜೀವಪೋಷಕ ಎಂದೇ ಮನುಷ್ಯ ಭಾವಿಸಿದ್ದಾನೆ. ಹೀಗಾಗಿ ಜಗತ್ತಿನ ಅನೇಕ ಪುರಾಣಗಳಲ್ಲಿ ಭೂಮಿ ತಾಯಿಯಾಗಿ ಕಂಡಿರುವುದು ಆಶ್ಚರ್ಯವೇನಲ್ಲ. ಇದಕ್ಕೆ ಒಂದು ಅಪವಾದವೆಂದರೆ ಈಜಿಪ್ಟಿನ ಪುರಾಣ. ಈಜಿಪ್ಟಿನ ಪುರಾಣದಲ್ಲಿ ಭೂಮಿ ಹೆಣ್ಣಲ್ಲ, ಬದಲು ಗಂಡು. ಹೆಸರು 'ಜೇಬ್'. ಆಕಾಶವೇ ಹೆಣ್ಣು ಹೆಸರು 'ನೆಟ್'. ವಿಶ್ವ ಹುಟ್ಟುವ ಮೊದಲೇ ಜೇಬ್ ಮತ್ತು ನೆಟ್ ಇದ್ದರೆಂದು ಅಲ್ಲಿನ ಪ್ರಾಚೀನರ ನಂಬಿಕೆ. ಇದನ್ನು ಚಿತ್ರಿಸಿರುವ ಬಗ್ಗೆಯೂ ಒಂದು ಕಥೆ ಇದೆ. ಜೇಬ್ ಮತ್ತು ನೆಟ್ ಅವರ ನಡುವೆ ಬಂದ ಶೂ, ಇಬ್ಬರನ್ನೂ ಬೇರ್ಪಡಿಸಿದನಂತೆ. ನೆಟ್‌ನ ಕೈ ಮತ್ತು ಪಾದ ಜೇಬ್ ಮೇಲೆ ಬಿತ್ತು. ಇದನ್ನೇ ಕಮಾನಿನಂತೆ ಚಿತ್ರಿಸಲಾಗಿದೆ. ಇದರ ಅರ್ಥ ಸ್ಪಷ್ಟವಾಗಿದೆ. ಭೂಮಿ ಮತ್ತು ಆಕಾಶ ಪರಸ್ಪರ ಬಂಧಿಗಳು–ಅವರದು ಅನ್ಯೋನ್ಯ ಬದುಕು. ಭೂಮಿಯ ಮೇಲಿನ ಜೀವಿಗಳನ್ನು ಈ ದಂಪತಿ ಸುಖವಾಗಿ ಇಟ್ಟಿದ್ದಾರೆ.

ಭಾರತೀಯರಿಗೆ ಪ್ರಕೃತಿಯು ದೇವತೆಯಾಗಿ ಕಂಡಿದ್ದಾಳೆ. ಋಗ್ವೇದದಲ್ಲಿ ಭೂಮಿ ಮತ್ತು ಆಕಾಶಗಳನ್ನು ದ್ಯಾವ–ಪೃಥ್ವಿ ಎಂದೇ ಸಂಬೋಧಿಸಿದೆ. ದ್ಯಾವ ಎಂದರೆ ಆಕಾಶ, ಪೃಥ್ವಿ–ಭೂಮಿಯೇ. ಇಲ್ಲಿ ಭೂಮಿಯನ್ನು ಹೆಣ್ಣು ಎಂದು ಕರೆಯಲಾಗಿದೆ. ಭೂತಾಯಿ ಎಂಬುದು ಭಾರತೀಯರು ಭೂಮಿಗೆ ಸಲ್ಲಿಸಿರುವ ಗೌರವ. ಪೃಥ್ವಿ ಫಲವತ್ತಾಗಲು ಆಕಾಶ ಮಳೆಗರೆಯಬೇಕು. ಋತುಗಳ ಒಡೆಯ ವರುಣ ಇವರಿಬ್ಬರನ್ನೂ ಬೇರ್ಪಡಿಸಿದ್ದಾನೆ ಎಂಬುದು ಋಗ್ವೇದದಲ್ಲಿನ ಪರಿಕಲ್ಪನೆ. ಆಕಾಶ ಮತ್ತು ಭೂಮಿಗೆ ಸೂರ್ಯನೇ ಸಂಪರ್ಕ ಸೇತು. ಮರುದ್ದೇವತೆಗಳು ಸೂರ್ಯ ಮತ್ತು ಪೃಥ್ವಿಯ ಮಕ್ಕಳೆಂದು ವೇದಕಾಲದ ನಂಬಿಕೆ. ಭಾರತದಲ್ಲಿ ಅಷ್ಟಾದಶ (ಹದಿನೆಂಟು) ಪುರಾಣಗಳಿವೆ. ಇದರಲ್ಲಿ ಬ್ರಹ್ಮಾಂಡ ಪುರಾಣ ಕೂಡ ಒಂದು. ಬ್ರಹ್ಮಾಂಡವೆಂದರೆ ಚಿನ್ನದ ಮೊಟ್ಟೆ, ಅದು ಒಡೆದು ಇಡೀ ಜಗತ್ತನ್ನು ಸೃಷ್ಟಿಸಿದೆ ಎಂಬ ಕಲ್ಪನೆ ಅದರಲ್ಲಿದೆ. ಇದರಲ್ಲೇ ಇನ್ನೂ ಒಂದು ವಿಚಿತ್ರ ಸನ್ನಿವೇಶವನ್ನು ಕಲ್ಪಿಸಲಾಗಿದೆ. ಭೂಮಿ ಸಾಗರದಲ್ಲಿ ಮುಳುಗುತ್ತಿರುವಾಗ, ವಿಷ್ಣು ವರಾಹ ಅವತಾರ ತಾಳಿ ತನ್ನ ಕೋರೆಯ ಹಲ್ಲಿನಿಂದ ಭೂಮಿಯನ್ನು ಎತ್ತಿ ಹಿಡಿದ ಎಂಬ ಕಥೆ ಅದರಲ್ಲಿದೆ.

ಗ್ರೀಕ್ ಪುರಾಣಗಳಂತೂ ಜಗತ್ಪ್ರಸಿದ್ಧ. ಮಾನವರು–ದಾನವರು ಎಂಬ ಅಲ್ಲಿನ ಪರಿಕಲ್ಪನೆಗೆ ಪಾಪ–ಪುಣ್ಯ ಎಂಬ ವಿಶೇಷವೂ ಸೇರಿದೆ. ಗ್ರೀಕ್ ಪುರಾಣಗಳ ಪ್ರಕಾರ ಇಡೀ ವಿಶ್ವವೇ ಅಯೋಮಯ ವಾಗಿದ್ದಾಗ ಕೆಯಾಸ್ ಎಂಬ ದೇವತೆ ಎಲ್ಲವನ್ನೂ ನಿಯಂತ್ರಿಸಿ ಸೃಷ್ಟಿ ಬೀಜಗಳನ್ನು ತನ್ನ ಬಳಿಯೇ ಇಟ್ಟುಕೊಂಡಿದ್ದ. ಅನಂತರ ಗೀಯಾ ಸೇರಿದಂತೆ ಅನೇಕ ಮಕ್ಕಳನ್ನು ಸೃಷ್ಟಿಸಿದ. ಗೀಯಾ ಗ್ರೀಕ್ ಪುರಾಣದ ಆದಿದೇವತೆಗಳಲ್ಲಿ ಒಬ್ಬಳು. ಭೂಮಿಗೆ ಅಧಿಪತಿಯಷ್ಟೇ ಅಲ್ಲ, ಅವಳೇ ಭೂಮಿ. ಮುಂದೆ ಯುರೇನಸ್‌ನನ್ನು ಮದುವೆಯಾಗಿ ಮಕ್ಕಳನ್ನು ಹಡೆದಳು. ಸೈಕ್ಲೋಪ್ ಹೆಸರಿನ ಒಕ್ಕಣ್ಣಿನ ರಾಕ್ಷಸರನ್ನೂ ಹೆತ್ತಳು ಎಂದು ಕಥೆ ಸಾಗುತ್ತದೆ. ನಮ್ಮ ಪುರಾಣಗಳಲ್ಲಿ ಇರುವಂತೆ ನಿಸರ್ಗದ ಒಂದೊಂದು ಅಂಶಗಳಿಗೂ ಒಬ್ಬೊಬ್ಬ ದೇವತೆಯುಂಟು. ಗಾಳಿಗೆ, ನೀರಿಗೆ, ಬೆಂಕಿಗೆ–ಹೀಗೆ. ಗ್ರೀಕ್ ಪುರಾಣದಲ್ಲಿ ಭೂಮಿ ಚಪ್ಪಟೆಯಾಗಿದೆಯೆಂದು ಕಲ್ಪಿಸಲಾಗಿದೆ. ಭೂಮಿಯ ಸುತ್ತ ಸಾಗರ ಹಬ್ಬಿದೆ ಎಂಬುದು ಗ್ರೀಕರ ಕಲ್ಪನೆ. ಆ ಸಾಗರದ ಹೆಸರು 'ಓಷಿಯಾನಿಸ್', ಅದನ್ನೇ ಈಗ 'ಓಷನ್' ಎನ್ನಲಾಗುತ್ತಿದೆ. ಅಲ್ಲದೆ ಭಾರತೀಯ ಪುರಾಣಗಳು ಚಿತ್ರಿಸಿರುವಂತೆ ಅಲ್ಲೂ ಸ್ವರ್ಗ, ಮರ್ತ್ಯ, ಪಾತಾಳ ಎಂಬ ಕಲ್ಪನೆಗಳುಂಟು. ಗೀಯಾ ದೇವತೆ ಇಲ್ಲಿ ಹಲವು ಲೌಕಿಕ ಕ್ರಿಯೆಗಳನ್ನು ಮಾಡುತ್ತಾಳೆ. ವಿಶೇಷವಾಗಿ ಭೂಮಿಯ ಮೇಲಿನ ಜೀವಿಗಳನ್ನು ರಕ್ಷಿಸುತ್ತಾಳೆ; ಬೇಡಿದ್ದನ್ನು ಕರುಣಿಸುತ್ತಾಳೆ. ಗೀಯಾಗೆ 'ಅನಸಿಡೋನ್' ಎಂಬ ಹೆಸರೂ ಉಂಟು. ಅಂದರೆ, ಬಯಸಿದ್ದನ್ನು ಕೊಡುವವಳು ಎಂಬ ಅರ್ಥವಿದೆ. ಗ್ರೀಕ್

ಪುರಾಣಗಳಲ್ಲಿ ಬರುವ ದಾನವರಲ್ಲಿ ಸ್ಯೂಸ್‌ಗೆ ಪರಮಸುಂದರಿಯಾದ ಅಲ್ಕ್‌ಮೀನಿಯಾಳಲ್ಲಿ ಹುಟ್ಟಿದ ಮಕ್ಕಳಲ್ಲಿ ಹೆರಾಕ್ಲೀಸ್ ಕೂಡ ಒಬ್ಬ. ಅವನು ಗ್ರೀಸ್ ದೇಶಕ್ಕೆ ಪ್ರಭುವಾಗುತ್ತಾನೆಂದು ತಿಳಿದಾಗ, ಸವತಿ ಹೀರಾದೇವಿ ಅದನ್ನು ತಡೆಯಲು ಹಲವು ಯೋಜನೆಗಳನ್ನು ಹಾಕುತ್ತಾಳೆ. ಹೀರಾದೇವಿಯ ಕೃಪೆಯಲ್ಲಿದ್ದ ಯೂರಿಸ್‌ಸ್ಯೂನಸ್‌ಗೆ ಗ್ರೀಸ್ ದೇಶವನ್ನು ಆಳಲು ಅವಕಾಶ ಸಿಕ್ಕುತ್ತದೆ. ಅದನ್ನು ದುರ್ಬಳಕೆ ಮಾಡಿಕೊಂಡ ಹೀರಾದೇವಿ ಹೆರಾಕ್ಲೀಸ್‌ನನ್ನು ಕೊಲ್ಲುವ ಉಪಾಯ ಮಾಡುತ್ತಾಳೆ. ತನ್ನ ಮಕ್ಕಳನ್ನೇ ಕೊಂದು ಪಶ್ಚಾತ್ತಾಪಪಡುತ್ತ ಯೂರಿಸ್ಯೂನಸ್‌ನ ಗುಲಾಮ ನಾಗುತ್ತಾನೆ. ಅವನಿಗೆ ವಿಧಿಸಿದ ಹನ್ನೆರಡು ಕೆಲಸ ಗಳಲ್ಲಿ, ಹಾವುಗಳಿರುವ ತೋಟದಲ್ಲಿ ಮೂರು ಚಿನ್ನದ ಸೇಬುಗಳನ್ನು ತರುವುದೂ ಒಂದು. ಆ ಹೊತ್ತಿಗೆ ಇಡೀ ಸ್ವರ್ಗವನ್ನೇ ಹೊತ್ತು ನಿಂತಿದ್ದ ಅಟ್ಲಾಸನ ನೆರವು ಪಡೆದು ಸ್ವಲ್ಪ ಕಾಲ ಸ್ವರ್ಗವನ್ನು ಹೊತ್ತು ಅನಂತರ ಅಟ್ಲಾಸ್‌ಗೆ ವರ್ಗಾಯಿಸಿ ತಪ್ಪಿಸಿಕೊಳ್ಳುತ್ತಾನೆ. ನಾವು ಅಟ್ಲಾಸ್‌ನನ್ನು ನೋಡುವುದು ತನ್ನ ಬೆನ್ನ ಮೇಲೆ ಹೊತ್ತ ಸ್ವರ್ಗದ ಚಿತ್ರಣದಲ್ಲೇ. ವಾಸ್ತವವಾಗಿ ಮುಂದೆ ಅಟ್ಲಾಸ್ ಭೂಮಿಯನ್ನು ಹೊತ್ತಿರುವುದಾಗಿ ಕಲ್ಪನೆಗಳು ಬದಲಾದವು. ಇವನ ಹೆಸರಿನಲ್ಲೇ ಉತ್ತರ ಆಫ್ರಿಕಾದ ಬಹುದೊಡ್ಡ ಪರ್ವತವನ್ನು 'ಅಟ್ಲಾಸ್' ಎಂದು ಕರೆಯಲಾಗಿದೆ.

ಮೆಕ್ಸಿಕೋದ ಒಂದು ಬುಡಕಟ್ಟಿನಲ್ಲಿ ಭೂಮಿಯ ಬಗ್ಗೆ ಭಯಂಕರ ಕಲ್ಪನೆ ಇದೆ. ಅಲ್ಲಿ ಭೂಮಿ ರಕ್ಕಸಿ. ಅವಳಿಗೆ ಹಲವು ಬಾಯಿ. ನೀರಲ್ಲಿ ಈಜಿ, ಏನೇ ಕಾಣಲಿ ಅವಳು ನುಂಗಿ ಹಾಕುತ್ತಿದ್ದಳು. ಇಬ್ಬರು ದೈವ ಸಂಭೂತರು ರಕ್ಕಸಿಯನ್ನು ಹಿಡಿದು ಅವಳಿಗೊಂದು ರೂಪ ಕೊಡಲು ನಿರ್ಧರಿಸಿದರು. ಅವರು ಎರಡು ಸರ್ಪಗಳಾಗಿ ರೂಪಾಂತರ ಹೊಂದಿದರು. ಮೊದಲನೆಯ ಸರ್ಪ ರಕ್ಕಸಿಯ ಬಲಗೈ ಹಾಗೂ ಎಡಗಾಲನ್ನು ಹಿಡಿದುಕೊಂಡರೆ, ಮತ್ತೊಂದು ಎಡಗೈ ಹಾಗೂ ಬಲಗಾಲನ್ನು ಹಿಡಿದು ಸೀಳಿದಾಗ, ಆ ರಕ್ಕಸಿ ಎರಡು ಹೋಳಾದಳು. ಅದರ ಒಂದು ಭಾಗವೇ ಭೂಮಿ, ಮತ್ತೊಂದು ಭಾಗವೇ ಆಕಾಶ.

ಮೆಸೊಪೊಟೇಮಿಯ ನಾಗರಿಕತೆಯಲ್ಲೂ (ಕ್ರಿ.ಪೂ. 3000–ಕ್ರಿ.ಪೂ. 400, ಪ್ರಮುಖವಾಗಿ ಅರೇಬಿಯನ್ ಪರ್ಯಾಯ ದ್ವೀಪ, ಇರಾನ್, ಸೈಪ್ರಸ್ ದ್ವೀಪ ಒಳಗೊಂಡ ಭಾಗ) ಭೂಮಿಯ ಬಗ್ಗೆ ವಿಚಿತ್ರ ಕಲ್ಪನೆಗಳಿವೆ. ದೇವರಿಗಿದ್ದ ಕೆಲಸದ ಭಾರವನ್ನು ಕಡಿಮೆ ಮಾಡಲು 'ಮಾಮಿ' ಎಂಬ ದೇವತೆ ಜೇಡಿಮಣ್ಣು ಮತ್ತು ಮಾಂಸದಿಂದ ಮನುಷ್ಯರನ್ನು ಸೃಷ್ಟಿಸಿ ಭೂಮಿಗೆ ಕಳಿಸಿದಳಂತೆ. 'ಎನಿಲ್' ಎಂಬ ದೇವತೆ ಭೂಮಿಯಲ್ಲಿ ಮನುಷ್ಯರು ದೊಡ್ಡ ಪ್ರಮಾಣದಲ್ಲಿ ವೃದ್ಧಿಸಿದಾಗ, ಬರ–ಅತಿವೃಷ್ಟಿ, ಅಂತಿಮವಾಗಿ ಮಹಾಪ್ರಳಯ ಉಂಟಾಯಿತಂತೆ. ಆದರೆ 'ಎನ್ಕೀ' ಎಂಬ

ದೇವತೆ ದೋಣಿಗಳನ್ನು ನೀಡಿ ಜನರು ಪ್ರವಾಹದಿಂದ ಪಾರಾಗುವಂತೆ ಮಾಡಿದನಂತೆ. 'ಎಲಿಬ್' ಎಂಬ ದೇವತೆ ಗಾಳಿ, ಭೂಮಿ ಪ್ರತಿನಿಧಿಸುವ ಸರ್ವಶಕ್ತ ದೇವತೆ ಎಂಬ ಉಲ್ಲೇಖವಿದೆ. ಭೂಮಿಯನ್ನು ಕುರಿತೇ ವಿಶೇಷ ಸಂಗತಿಗಳೇನೂ ಈ ನಾಗರಿಕತೆಯಲ್ಲಿ ಕಂಡುಬಂದಿಲ್ಲ.

**ತರ್ಕದ ಮೂಸೆಯಲ್ಲಿ :**

ಪುರಾಣ ಕಲ್ಪನೆಗಳನ್ನು ಬದಿಗಿಟ್ಟು ವೈಜ್ಞಾನಿಕ ತರ್ಕವನ್ನು ಮುಂದಿಡುವ ಪ್ರವೃತ್ತಿಯು ಗ್ರೀಸ್‌ನ ಹಲವು ಚಿಂತಕರಲ್ಲಿತ್ತು. ಎಲ್ಲವನ್ನೂ ದೈವಕ್ಕೆ ಆರೋಪಿಸುವ ಬದಲು ಅನೇಕ ವೈಜ್ಞಾನಿಕ ಪ್ರಕ್ರಿಯೆಗಳನ್ನು ವಿಶ್ಲೇಷಣಾ ದೃಷ್ಟಿಯಿಂದ ನೋಡುವುದು ತರ್ಕದ ಒಂದು ಭಾಗವೇ ಆಗಿತ್ತು. ಈಗಿನ ಟರ್ಕಿಯ ಪಶ್ಚಿಮ ಭಾಗದಲ್ಲಿರುವ ಕೊಲೋಫೋನ್ ಎಂಬಲ್ಲಿ ಜನಿಸಿದ ದಾರ್ಶನಿಕರಲ್ಲಿ ಒಬ್ಬನಾದ 'ಕ್ಸೀನೋಫೇನ್ಸ್' (ಕ್ರಿ.ಪೂ. 570–475) ಪುರಾಣಗಳನ್ನು ಪಕ್ಕಕ್ಕೆ ಸರಿಸಿ ಭೂಮಿಯ ವಿವಿಧ ಭಾಗಗಳಲ್ಲಿ ಅಡ್ಡಾಡಿ ಕಲ್ಲಿನಲ್ಲಿ ಪ್ರಾಚೀನ ಜೀವಿಯ ಅವಶೇಷಗಳು ಅಂಟಿ ಕೊಂಡಿದ್ದನ್ನು ಕಂಡ. ಸಾಗರದ ಜೀವಿಗಳು ಬೆಟ್ಟದ ಮೇಲೆ ಹೇಗೆ ಬರಲು ಸಾಧ್ಯ ಎಂದು ಯೋಚಿಸಿದ. ಬಹುಶಃ ಹಿಂದೊಮ್ಮೆ ಈ ಬೆಟ್ಟಗಳು ಸಾಗರ ತಳವಾಗಿರಬಹುದು ಎಂದೂ, ಮುಂದೆ ಒತ್ತಡಕ್ಕೆ ಸಿಕ್ಕಿ ಸಾಗರ ತಳ ಮೇಲೆದ್ದು ಪರ್ವತ, ಬೆಟ್ಟ, ಗುಡ್ಡಗಳಾಗಿರಬಹುದೆಂದೂ ಯೋಚಿಸಿದ. ಭೂಮಿಯ ಎಲ್ಲ ಪ್ರಕ್ರಿಯೆಗಳೂ ಬಹುನಿಧಾನ. ಅಲ್ಲದೆ ಮನುಷ್ಯನ ಜೀವಿತಾವಧಿಯೂ ಕಡಿಮೆಯೇ. ಹೀಗಾಗಿ ಭೂಮಿಯ ಹಲವು ಕ್ರಿಯೆಗಳು ನಮಗೆ ಕಾಣಿಸುವುದಿಲ್ಲ ಎಂಬ ಅಭಿಪ್ರಾಯಕ್ಕೆ ಬಂದ. ಇದು ಆ ಕಾಲಕ್ಕೆ ಸಂಪೂರ್ಣವಾಗಿ ಭಿನ್ನವಾದ ದೃಷ್ಟಿ. ಇದು ಮುಂದೆ ಅನೇಕ ಚಿಂತನೆಗಳನ್ನು ಹುಟ್ಟುಹಾಕಿತು. ಪುರಾಣಗಳ ಪರಿಕಲ್ಪನೆಯೇ ಬೇರೆ, ವಾಸ್ತವತೆಯೇ ಬೇರೆ ಎಂಬ ಅಭಿಪ್ರಾಯಕ್ಕೆ ಚಾಲನೆ ಸಿಕ್ಕಿತು. ಆದರೆ ಮುಂದೆ ಅರಿಸ್ಟಾಟಲ್ ಆಗಲಿ, ಪ್ಲೇಟೋ ಆಗಲಿ, ಇವನ ಆಲೋಚನೆಗಳನ್ನು ಗಂಭೀರವಾಗಿ ಪರಿಗಣಿಸಿದಂತೆ ಕಾಣುವುದಿಲ್ಲ.

ಜಗತ್ತಿನ ವಸ್ತುಗಳೆಲ್ಲವೂ ಅತಿ ಚಿಕ್ಕ ಘಟಕಗಳಿಂದಾಗಿವೆ (ಇಂದಿನ ಪರಿಕಲ್ಪನೆಯಲ್ಲಿ ಪರಮಾಣು). ಇಡೀ ಜಗತ್ತಿನಲ್ಲಿ ಐದು ಪ್ರಧಾನ ಘಟಕಗಳಿವೆ. ಭೂಮಿ, ಗಾಳಿ, ಬೆಂಕಿ, ನೀರು, ವಿಶ್ವ ಇವೇ ಆ ಐದು ಘಟಕಗಳು. ಇವೆಲ್ಲವೂ ಘನ ಆಕೃತಿಯಲ್ಲಿವೆ ಎಂದು ಸಾರಿದ ಮೊದಲಿಗ ಪ್ಲೇಟೋ (ಕ್ರಿ.ಪೂ. 428–348). ಆತ ಬಹುದೊಡ್ಡ ದಾರ್ಶನಿಕ. ಈಗಲೂ ಜ್ಯಾಮಿತಿ ಯಲ್ಲಿ 'ಪ್ಲೇಟೋಘನ' ಎಂಬ ಪರಿಕಲ್ಪನೆ ಇದೆ. ಮೆಸೊಪೊಟೇಮಿಯ ನಾಗರಿಕತೆಯುದ್ದಕ್ಕೂ ಭೂಮಿ ಚಪ್ಪಟೆಯಾಗಿದೆ ಎಂದೇ ಪ್ರತಿಪಾದಿಸಲಾಗಿತ್ತು. ಈ ಪರಿಕಲ್ಪನೆಯನ್ನು ಮೊದಲು ಬುಡಸಹಿತ ಅಲ್ಲಾಡಿಸಿದವನು ಅರಿಸ್ಟಾಟಲ್ (ಕ್ರಿ.ಪೂ. 385–323). ಅಷ್ಟೇ ಅಲ್ಲ, ಭೂಮಿ ಗುಂಡಾಗಿದೆಯೆಂದು

ಮೊದಲು ಪ್ರತಿಪಾದಿಸಿದವನೂ ಅವನೇ. ಅದಕ್ಕೆ ವೈಜ್ಞಾನಿಕ ಸಾಕ್ಷಿಗಳನ್ನೂ ಅವನು ನೀಡಿದ. ಚಂದ್ರಗ್ರಹಣವಾದಾಗ ಭೂಮಿಯ ನೆರಳು ಗುಂಡಗಿರುತ್ತದೆ. ಅಂದರೆ ಭೂಮಿ ಗುಂಡಾಗಿರದಿದ್ದರೆ ನೆರಳು ಹೀಗೇಕೆ ಇರುತ್ತಿತ್ತು? ಎನ್ನುವುದು ಅವನ ಅತ್ಯಂತ ವೈಜ್ಞಾನಿಕ ತರ್ಕ.

ಗ್ರೀಕ್‌ನ ಮಹಾ ಮೇಧಾವಿಗಳಲ್ಲಿ ಎರಟೋಸ್ಥನೀಸ್‌ನ (ಕ್ರಿ. ಪೂ. 278–194) ಹೆಸರು ಚಿರವಾಗಿ ನಿಲ್ಲುತ್ತದೆ (ಕ್ರಿ.ಪೂ. 278–194). ಈತ ಅನೇಕ ಕ್ಷೇತ್ರಗಳಲ್ಲಿ ಪರಿಣತಿ ಹೊಂದಿದ್ದ. ಭೂಗೋಳ, ಗಣಿತ, ಖಗೋಳವಿಜ್ಞಾನ, ಸಂಗೀತ–ಏನೆಲ್ಲ. ಭೂಮಿಯ ಸುತ್ತಳತೆಯನ್ನು ಲೆಕ್ಕ ಹಾಕಿದವರಲ್ಲಿ ಇವನು ಅನುಸರಿಸಿದ ತಂತ್ರ ಅಪೂರ್ವವಾದುದು. ಅಷ್ಟೇ ಅಲ್ಲ, ಅದು ತುಂಬ ಸರಳ ಕೂಡ. ಅಲೆಕ್ಸಾಂಡ್ರಿಯ ಮತ್ತು ಸಿಯೆನ್ ನಗರಗಳಲ್ಲಿ ಎರಡು ಸರಳುಗಳನ್ನು ನೆಟ್ಟು ಕರ್ಕಸಂಕ್ರಾಂತಿ (ಜೂನ್ 22) ದಿನದಂದು ವೀಕ್ಷಿಸಿದಾಗ ಒಂದು ವಿಚಾರ ಹೊಳೆಯಿತು. ಸಿಯೆನ್‌ನಲ್ಲಿ ನೆಟ್ಟ ಸರಳು ನೆರಳು ಮೂಡಿಸಿರಲಿಲ್ಲ, ಆದರೆ ಅಲೆಕ್ಸಾಂಡ್ರಿಯದಲ್ಲಿಟ್ಟ ಸರಳು ನೆರಳು ಮೂಡಿಸಿತ್ತು. ಈ ವ್ಯತ್ಯಯ ಭೂಮಿಯ ವಕ್ರತೆಯಿಂದ ಆಗಿದೆ ಎಂಬ ವೈಜ್ಞಾನಿಕ ಸತ್ಯವನ್ನು ಕಂಡುಕೊಂಡ. ಅಲೆಕ್ಸಾಂಡ್ರಿಯದಲ್ಲಿ ಸೂರ್ಯಕಿರಣ ಮಧ್ಯದಿಂದ ಏಳು ಡಿಗ್ರಿ ಕೋನದಲ್ಲಿದೆಯೆಂದು ಅಳೆದು ಖಚಿತಪಡಿಸಿಕೊಂಡ. ಎರಡೂ ನಗರಗಳ ನಡುವಿನ ಅಂತರ 500 ಸ್ಟೇಡಿಯಮ್ ಎಂಬುದು ಒಂಟೆಸವಾರರಿಂದ ತಿಳಿದುಬಂದಿತ್ತು (ಒಂದು ಸ್ಟೇಡಿಯಂ ಎಂದರೆ 157.6 ಮೀಟರ್). ಈ ಲೆಕ್ಕದಲ್ಲಿ ಅವನ ಪ್ರಕಾರ ಭೂಮಿಯ ಸುತ್ತಳತೆ 250,000 ಸ್ಟೇಡಿಯಂ ಅಂದರೆ 39,375 ಕಿಲೋಮೀಟರ್. ಈಗಿನ ಖಚಿತ ಅಳತೆ 40,076 ಕಿಲೋಮೀಟರ್. ಅಂದರೆ ವ್ಯತ್ಯಾಸ ತೀರ ನಗಣ್ಯ. ಇದು ಎರಾಟೋಸ್ಥನಿಸ್‌ನ ಬುದ್ಧಿಮತ್ತೆಯ ಪ್ರತೀಕ.

ಭಾರತದಲ್ಲೂ ಆರನೇ ಶತಮಾನದಲ್ಲಿ (ಕ್ರಿ.ಶ. 505) ಇದ್ದ ವರಾಹಮಿಹಿರ ಎಂಬ ಮೇಧಾವಿ ಭೂಮಿ ಕುರಿತು ಹಳೆಯ ನಂಬಿಕೆಗಳನ್ನು ಬದಿಗೆ ಸರಿಸಿದ. ಅಂದರೆ ಅಷ್ಟದಿಗ್ಗಜ, ಆದಿಶೇಷಗಳು ಭೂಮಿಯನ್ನು ಹೊತ್ತಿವೆ ಎಂಬ ತಿಳಿವನ್ನು ಪೂರ್ಣ ನಿರಾಕರಿಸಿದ. ತಾನು ಮಾಡಿರುವ ತರ್ಕದಿಂದ ಹಾಗೂ ಹಿಂದಿನವರ ಅನುಭವಗಳನ್ನು ಕೂಡಿಸಿ ಹೇಳುವುದಾದರೆ ಭೂಮಿ ನಿಸ್ಸಂಶಯವಾಗಿ ಗೋಲಾಕಾರದಲ್ಲಿದೆ. ಇದು ಮಹೀಗೋಲ ಅಂದರೆ ಮನುಷ್ಯರಿರುವ ಸ್ಥಳ. ಪಂಚಭೂತಗಳಿಂದಾಗಿದೆ, ಅಯಸ್ಕಾಂತದ ಪಂಜರದ ಮಧ್ಯದಲ್ಲಿ ತೂಗಿಬಿಟ್ಟ ಕಬ್ಬಿಣದ ಚೆಂಡಿನಂತೆ ಭೂಮಿ ಆಕಾಶದಲ್ಲಿ ತೇಲುತ್ತಿದೆ ಎಂದು ತನ್ನ 'ಪಂಚ ಸಿದ್ಧಾಂತಿಕ' ಎಂಬ ಕೃತಿಯಲ್ಲಿ ಸ್ಪಷ್ಟವಾಗಿ ಹೇಳಿದ್ದಾನೆ. ಭೂಮಿ ಕುರಿತು ಅತ್ಯಂತ ಖಚಿತ ಅಭಿಪ್ರಾಯವನ್ನು ವ್ಯಕ್ತಪಡಿಸಿದವರಲ್ಲಿ ಭಾರತದಲ್ಲಿ ಏಳನೇ ಶತಮಾನದಲ್ಲಿದ್ದ ಮೊದಲನೇ ಭಾಸ್ಕರನ ಚಿಂತನೆಗಳು ಅತ್ಯಮೂಲ್ಯವಾದವು. ಈ ಪಂಡಿತ ರಚಿಸಿದ 'ಆರ್ಯಭಟೀಯ' ಎಂಬ ಗ್ರಂಥದ

'ಗೋಲಪಾದ' ಎಂಬ ಅಧ್ಯಾಯದಲ್ಲಿ–ಭೂಮಿ, ಗ್ರಹಗಳು ಹಾಗೂ ನಕ್ಷತ್ರಗಳು ತಮ್ಮದೇ ನೆರಳಿನಿಂದಾಗಿ ಅರ್ಧಭಾಗ ಕತ್ತಲೆಯಲ್ಲೂ, ಸೂರ್ಯನಿಗೆ ಎದುರಾದ ಭಾಗದಲ್ಲಿ ಪ್ರಕಾಶಮಾನವಾಗಿಯೂ ಕಾಣುತ್ತವೆ ಎಂದು ಉಲ್ಲೇಖಿಸಿದ್ದಾನೆ. ಅದೇ ಅಧ್ಯಾಯದಲ್ಲಿ ಭೂಗೋಲವು ನೀರು, ಭೂಮಿ, ಅಗ್ನಿ ಮತ್ತು ವಾಯು ಗೋಲಗಳನ್ನು ಒಳಗೊಂಡಿದೆ. ಅದು ಗೋಲಾಕಾರದ್ದು. ಆಕಾಶದಲ್ಲಿ ಯಾವ ಅವಲಂಬನೆಯೂ ಇಲ್ಲದೆ ಸ್ವತಂತ್ರವಾಗಿ ನಿಂತಿದೆ. ಅದರ ಸುತ್ತ ಬೇರೆ ಗ್ರಹಗಳು ತಮ್ಮ ಕಕ್ಷೆಯಲ್ಲಿ ಸುತ್ತುತ್ತವೆ ಎಂದು ಖಚಿತ ಅಭಿಪ್ರಾಯವನ್ನು ದಾಖಲಿಸಿದ್ದಾನೆ. ವಿಷಾದವೆಂದರೆ ಭಾರತೀಯರ ಇಂಥ ಕೊಡುಗೆಗಳು ಆ ಕಾಲದಲ್ಲಿ ಪಾಶ್ಚಾತ್ಯರಿಗೆ ತಿಳಿಯದೇ ಹೋಯಿತು.

# ಕಾದಿರುವನು ಕ್ಯೂರಿ

**–ನೇಮಿಚಂದ್ರ**

ಲ್ಹೊ ಮಂಡ್ ಬೀದಿಯ 'ಭೌತ–ರಸಾಯನ ಶಾಸ್ತ್ರಗಳ ಶಾಲೆ'ಯಲ್ಲಿ ಕೆಲಸ ಮಾಡುತ್ತಿದ್ದ ಪಿಯರ್ ತನ್ನ ದಿನಚರಿಯಲ್ಲೊಮ್ಮೆ ಬರೆದಿದ್ದ – 'ಮೇಧಾವಿ ಮಹಿಳೆಯರು ಅತಿ ವಿರಳ. ಸಾಧನೆಯ ಹಾದಿಯಲ್ಲಿ ಮಹಿಳೆಯರು ದೊಡ್ಡ ತೊಡಕಾಗುತ್ತಾರೆ.'

ವರ್ಷಗಳುರುಳಿದ್ದವು, ಪಿಯರ್ ಕ್ಯೂರಿ ತನ್ನ ತನು–ಮನಗಳನ್ನು ವಿಜ್ಞಾನಕ್ಕೆ ಮೀಸಲಿಟ್ಟ. ತನ್ನ ಹಾದಿಯತ್ತ ಹಾಯ್ದ ಯಾವ ಸಾಮಾನ್ಯ ಹುಡುಗಿಯನ್ನೂ ವಿವಾಹವಾಗಿರಲಿಲ್ಲ. ಮೇರಿ–ಪಿಯರ್, ಈ ಮೇಧಾವಿ ವ್ಯಕ್ತಿಗಳ ಬದುಕು ಹಾಯಲಿತ್ತು, ಪರಸ್ಪರರ ಭೇಟಿಯಲ್ಲಿ, ಒಂದಾಗಲಿತ್ತು, ವಿಜ್ಞಾನದ ಉತ್ಕಟ ಪ್ರೀತಿಯಲ್ಲಿ ಜೊತೆಗೆ ಅವರ ಸಾಂಗತ್ಯ ಹೆತ್ತು ಕೊಡಲಿತ್ತು, ಹೊಸದೊಂದು ಮೂಲಧಾತುವನ್ನು. ವಿಜ್ಞಾನದ ಹೊಚ್ಚ ಹೊಸರಂಗವನ್ನು.

1894 ಆರಂಭ. ಪೋಲೆಂಡಿನ ವಿಜ್ಞಾನಿ ಎಮ್. ಕೋವೆಲ್‌ಸ್ಕಿ ತನ್ನ ನವವಧುವಿನೊಡನೆ ಪ್ಯಾರೀಸಿಗೆ ಬಂದಿಳಿದಿದ್ದರು. ಭೌತಶಾಸ್ತ್ರದಲ್ಲಿ ಮೊದಲಿಗಳಾಗಿ ಹೊರಬಂದ ಮೇರಿಗೆ, ವಿವಿಧ ಬಗೆಯ ಉಕ್ಕಿನ, ಅಯಸ್ಕಾಂತ ಗುಣಗಳನ್ನು ಕುರಿತಂತೆ ಸಂಶೋಧನೆ ನಡೆಸಲು ಕೇಳಿಕೊಳ್ಳಲಾಗಿತ್ತು. ಆದರೆ ಅವಳ ಪ್ರಯೋಗದ ತೊಡಕಿನ ಸಲಕರಣೆಗಳನ್ನು ಜೋಡಿಸಿಡಲು ಸ್ಥಳವಿರಲಿಲ್ಲ. ಮೇರಿಯ ಸಮಸ್ಯೆಯನ್ನು ಅರಿತ ಕೋವೆಲ್‌ಸ್ಕಿ, ಪಿಯರ್ ಕ್ಯೂರಿಯ ಬಳಿ ಒಂದಿಷ್ಟು ಸ್ಥಳಾವಕಾಶವಿರಬಹುದೆಂದು ಸೂಚಿಸಿದರು. ಹಾಗೆಯೇ ಅವರಿಬ್ಬರನ್ನು ಭೇಟಿ ಮಾಡಿಸಿದರು.

ಮೇರಿ ಒಳ ಬಂದಾಗ, ಪಿಯರ್ ಕಿಟಕಿಗೆ ಬೆನ್ನಿಟ್ಟು ನಿಂತಿದ್ದ. ಮೂವತ್ತೈದರ ಹರಯದಲ್ಲೂ ಯುವಕನಂತೆ ಕಂಡ ಎತ್ತರದ ವ್ಯಕ್ತಿ. ವಿಶಾಲ ಹಣೆಯ ಮೇಲೆ ಕೆದರಿ ತೂರಿದ ಕೂದಲು, ಯಾವುದೋ ಚಿಂತನೆಯಲ್ಲಿ ಲೋಕ ಮರೆತ ಆಳ ಕಣ್ಣುಗಳು. ಅವನ ಮಾತು ನಿಧಾನವಿತ್ತು. ತೋರಿಕೆ ಇಲ್ಲದೆ ಸರಳವಿತ್ತು. ಲೋಕಾಭಿರಾಮವಾಗಿ ಆರಂಭವಾದ ಸಂಭಾಷಣೆ ಕ್ಷಣದಲ್ಲಿ ವಿಜ್ಞಾನದತ್ತ ತಿರುಗಿತು. ಮೇರಿ ತನ್ನ ಸಂಶೋಧನೆ – ಅಧ್ಯಯನಗಳನ್ನು ಕುರಿತು ಹೇಳುತ್ತಿದ್ದಂತೆ, ಪಿಯರ್ ತನ್ನ ಸ್ಫಟಿಕಗಳನ್ನು ಕುರಿತ ಸಂಶೋಧನೆಯನ್ನು ಕುರಿತು ಮಾತನಾಡಿದ. ಒಂದು ಕ್ಷಣ 35ರ ಭೌತಶಾಸ್ತ್ರಜ್ಞನಿಗೆ, ಓರ್ವ ಮಹಿಳೆಯೊಡನೆ ತನ್ನ ಅದ್ಭುತರಂಗವನ್ನು ಕುರಿತು ಮಾತನಾಡುತ್ತಿರುವುದು, ಅದರೆಲ್ಲ ತಾಂತ್ರಿಕ ಪದಗಳು, ಕ್ಲಿಷ್ಟ ಸಮೀಕರಣಗಳು ಅತಿ ಸುಲಭವಾಗಿ ಈ ಹುಡುಗಿಗೆ

ಅರ್ಥವಾಗುತ್ತಿರುವುದು, ಬಲು ವಿಚಿತ್ರವಾಗಿ ಕಂಡಿತು. ಪ್ರಥಮ ಭೇಟಿಯಲ್ಲೆ ತನಗಿಂತ ಎಂಟು ವರ್ಷಕ್ಕೆ ಕಿರಿಯವಳಾದ ಈ ಪೋಲೆಂಡಿನ ಹುಡುಗಿ, ಪಿಯರಿಯ ಮನಸೆಳೆದಳು.

ಮೇರಿಯನ್ನು ಮೊದಲ ಬಾರಿಗೆ ಭೇಟಿಯಾದ ಪಿಯರ್ ಕ್ಯೂರಿ ಅದಾಗಲೇ ಪ್ರಸಿದ್ಧಿ ಪಡೆದ ವಿಜ್ಞಾನಿ, ಭೌತಶಾಸ್ತ್ರಜ್ಞ, ವಿದೇಶಗಳಲ್ಲಿ ವಿಶೇಷ ಮನ್ನಣೆ ಪಡೆದಿದ್ದ. 1859ರಲ್ಲಿ ಹುಟ್ಟಿದ ಪಿಯರ್, ಡಾ. ಐಗೀನ್‌ಕ್ಯೂರಿಯ ಎರಡನೇ ಮಗ. ಕ್ಯೂರಿ ಕುಟುಂಬ ವಿಜ್ಞಾನ, ಮೇಧಾವಿತನಕ್ಕೆ ಹೆಸರಾಗಿತ್ತು.

ಪಿಯರಿಯ ತಂದೆ ವೃತ್ತಿಯಿಂದ ವೈದ್ಯರಾದರೂ, ತಮ್ಮ ಸಮಯದ ಬಹುಪಾಲು ಸಂಶೋಧನೆಯಲ್ಲಿ ಕಳೆದವರು. ಆತನ ಇಬ್ಬರೂ ಮಕ್ಕಳು ಜಾಕೋಸ್ ಹಾಗೂ ಪಿಯರ್ ಅದೇ ವಿಜ್ಞಾನದ ಕುತೂಹಲಕ್ಕೆ ತೆತ್ತುಕೊಂಡವರು. ಪಿಯರ್ ಹದಿನೆಂಟನೇ ವಯಸ್ಸಿಗೇ ಭೌತಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಗಳಿಸಿದ್ದ. ಅಣ್ಣನೊಡನೆ ಸಂಶೋಧನೆಯಲ್ಲಿ ತೊಡಗಿದ ಪಿಯರ್ 'ಪೀಡನ ವಿದ್ಯುತ್' ಸಿದ್ಧಾಂತವನ್ನು ಕಂಡುಹಿಡಿದು, ವಿಜ್ಞಾನಿಗಳಲ್ಲಿ ಪ್ರಮುಖನಾಗಿದ್ದನು. 'ಪೀಡನ ವಿದ್ಯುತ್' ಅಂದರೆ ಫಿಝೋಇಲೆಕ್ಟ್ರಿಸಿಟಿ (piezo-electricity) ಗುಣವುಳ್ಳ ಹರಳುಗಳನ್ನು ಒತ್ತಡಕ್ಕೆ ಒಳಪಡಿಸಿದರೆ ವಿದ್ಯುತ್ ಉತ್ಪನ್ನವಾಗುವುದು. ನಂತರ ಪಿಯರ್, ಅತಿ ನಿಖರವಾದ 'ಕ್ಯೂರಿ ಅಳೆಯುವ ವಿಧಾನ'ವನ್ನು ಕಂಡುಹಿಡಿದಿದ್ದ. ಕಾಂತತ್ವವನ್ನು ಕುರಿತಂತೆ ಸಂಶೋಧನೆ ನಡೆಸಿ ಅತ್ಯಂತ ಮೂಲಭೂತ ನಿಯಮವನ್ನು ಕಂಡುಹಿಡಿದಿದ್ದ. 'ಅದು 'ಕ್ಯೂರಿ ನಿಯಮ'ವೆಂದೇ ಪ್ರಸಿದ್ಧವಾಗಿತ್ತು. ಆತನ ಇಂತೆಲ್ಲಾ ವಿಜ್ಞಾನದ ಇತಿಹಾಸ, ಪ್ರಮುಖ ಆವಿಷ್ಕಾರಗಳ ಹಿನ್ನೆಲೆಯಲ್ಲೂ ಪಿಯರ್ ಸಂಬಳ ತಿಂಗಳಿಗೆ ಮುನ್ನೂರು ಫ್ರಾಂಕ್ ಮಾತ್ರ. ದಿನದ ಬಹುಭಾಗ ತನ್ನ ವಿದ್ಯಾರ್ಥಿಗಳಿಗೆ ಮೀಸಲಿಟ್ಟು, ತನ್ನ ಸಂಶೋಧನೆಗೆ ಸಹಾಯಕರಿಲ್ಲದೆ, ಅತ್ಯಂತ ಅನುಕಂಪನೀಯ ವ್ಯವಸ್ಥೆಯಲ್ಲಿ ಸಿಕ್ಕಿಹಾಕಿಕೊಂಡು ದುಡಿಯುತ್ತಿದ್ದ.

ಸರಳ ಸ್ವಭಾವದ ಸಹಜ ವಿಜ್ಞಾನಿ ಮೇರಿ, ಪಿಯರ್‌ನನ್ನು ಆಕರ್ಷಿಸಿದ್ದಳು. ಪಿಯರ್ ಮೇರಿಯನ್ನು ಮತ್ತೆ ಮತ್ತೆ ಭೇಟಿಯಾದ. ಅವಳ ಕೋಣೆಯನ್ನು ಹುಡುಕಿ ಹೋದ. ಅಲ್ಲಿಯ ಬಡತನ ಅವನ ಹೃದಯವನ್ನು ಹಿಂಡಿತ್ತು. ಆ ಬಡತನದೊಡನೆ ಗುದ್ದಾಡದೆ, ಸ್ವಯಂ ಮರುಕ ಪಡದೆ, ಅತಿ ಸಹಜವಾಗಿ ರಾಜಿಯಾದ ಈ ಎಳೆಯ ಯುವತಿಯ ಮೊಂಡುತನದ ಮುಖದಲ್ಲಿ ಎಂಥ ಅಯಸ್ಕಾಂತೀಯ ಶಕ್ತಿಯಿತ್ತು!

ತಿಂಗಳುಗಳುರುಳಿದವು. ವಿಜ್ಞಾನದ ಹಸಿವಿನ ಈ ಇಬ್ಬರ ನಡುವೆ ಸ್ನೇಹ ಗಾಢವಾಯಿತು. ಪರಸ್ಪರ, ಗೌರವ, ಅಭಿಮಾನ, ಆರಾಧನೆಯಲ್ಲಿ ಆ ಸ್ನೇಹ ಬೆಳೆಯಿತು. ಈ ಬಲು ಚುರುಕಿನ ಪೋಲರ ಹುಡುಗಿ ಅದಾಗಲೆ ಪಿಯರಿಯ ಹೃದಯವನ್ನು

ಆವರಿಸಿದ್ದಳು. ಅವಳ ಸಲಹೆಯಂತೆ ಪಿಯರ್ ತನ್ನ ಇತರ ಕೆಲಸವನ್ನು ಅತ್ತಸರಿಸಿ, ಕಾಂತತ್ವವನ್ನು ಕುರಿತ ತನ್ನ ಸಂಶೋಧನೆಯನ್ನು ಬರೆದಿಟ್ಟು ಡಾಕ್ಟರ್ ಡಿಗ್ರಿಗೆ ಒಪ್ಪಿಸಿದ್ದ. ಈಗ ಪಿಯರ್, ತುಟಿಯ ತುದಿಯಲ್ಲಿದ್ದ ಎದೆಯ ಮಾತುಗಳನ್ನು ಹೊರಹಾಕಲು ಚಡಪಡಿಸಿದ. ಅವರ ನಡುವೆ ಅಂತರವಿತ್ತು.... ದೇಶ, ಭಾಷೆ, ಪರಿಸರ, ಸಂಸ್ಕೃತಿಗಳ ಅಂತರ. ಆದರೆ ಈ ಇಬ್ಬರ ಹಿನ್ನೆಲೆಯಲ್ಲಿ ಎಂಥಾ ಸಾಮ್ಯವೂ ಇತ್ತು! ಮೇರಿಯ ಹಿನ್ನೆಲೆಯೇ ಪಿಯರಿಯದೂ ಆಗಿತ್ತು. ಉನ್ನತ ಆದರ್ಶಗಳ ಗೌರವಾನ್ವಿತ ಕುಟುಂಬ. ಅದೇ ಪ್ರೀತಿಯ ಸೆಳೆ, ಅದೇ ವಿಜ್ಞಾನದತ್ತಲ ಅಗಾಧ ಆಸಕ್ತಿ.

ಮೇರಿ ಹೇಳಿಕೊಂಡಳು ತನ್ನ ಬಾಲ್ಯದ ಬಗ್ಗೆ, ತನ್ನ ತಾಯಿನಾಡಿನ ಬಗ್ಗೆ, ತಮ್ಮ ಬೆನ್ನೆಲುಬಾದ ತನ್ನ ತಂದೆಯ ಬಗ್ಗೆ. ಮತ್ತೆ ಕೆಲವೇ ದಿನಗಳಲ್ಲಿ ಪರೀಕ್ಷೆ ಮುಗಿಸಿ ತಾನು ಹೋಗಲಿದ್ದ ಮಾತೃಭೂಮಿಯ ಬಂಧಮುಕ್ತಿಯ ಬಗ್ಗೆ. ಪೋಲೆಂಡಿಗೆ ಹೋಗಲಿರುವ ಮೇರಿ ಪ್ಯಾರೀಸ್‌ಗೆ ಹಿಂದಿರುಗುವಳೇ? ಪಿಯರ್ ಆತಂಕಗೊಂಡ. 'ಮತ್ತೆ ಅಕ್ಟೋಬರ್‌ಗೆ ಬರುತ್ತೀಯಲ್ಲ?' ಕೇಳಿದ. ನಿಖರ ಉತ್ತರವಿಲ್ಲದ ಮೇರಿಯನ್ನು ಒತ್ತಾಯಿಸಿದ. 'ನೀನು ಪೋಲೆಂಡಿನಲ್ಲೇ ಉಳಿದರೆ ನಿನ್ನ ಅಧ್ಯಯನ ಮುಂದುವರಿಯಲಾರದು, ವಿಜ್ಞಾನವನ್ನು ತ್ಯಜಿಸುವ ಹಕ್ಕು ನಿನಗಿಲ್ಲ', ಪಿಯರಿಯ ಮಾತುಗಳಲ್ಲಿ ಅವನ ಹೃದಯದ ದನಿ ಇತ್ತು. 'ವಿಜ್ಞಾನವನ್ನು ತ್ಯಜಿಸುವ ಅಧಿಕಾರವಿಲ್ಲ' ಎಂದ ಪಿಯರಿಯ ಮಾತುಗಳು 'ನನ್ನನ್ನು ತೊರೆವ ಅಧಿಕಾರವಿಲ್ಲ' ಎಂದೇ ಧ್ವನಿಸಿದ್ದರೆ ಅದು ಸುಳ್ಳಿರಲಿಲ್ಲ. ಮತ್ತೆ ಅಸ್ಪೃಶ್ಯತೆಗೆ ಅವಕಾಶ ಕೊಡದೆ ಮೇರಿಯನ್ನು ತನ್ನ ಪತ್ನಿಯಾಗಲು ಕೇಳಿಕೊಂಡ. ಆತ ಬಯಸಿದ ಉತ್ತರವಿರಲಿಲ್ಲ. ಫ್ರೆಂಚನನ್ನು ಮದುವೆಯಾಗಿ ತನ್ನ ದೇಶ, ಕುಟುಂಬ ಎಲ್ಲವನ್ನೂ ತೊರೆದು, ತನ್ನ ತಾಯಿನಾಡಿನ ಸ್ವಾತಂತ್ರ್ಯಕ್ಕೆ ಹೋರಾಡದೆ, ಎಲ್ಲಾ ರಾಜಕೀಯ ಚಟುವಟಿಕೆಗಳಿಂದ ದೂರ ಉಳಿದು ತನ್ನ ಸ್ವಂತ ಸುಖವೊಂದನ್ನು ಅರಸಿಹೋಗುವುದು ಬಲುದೊಡ್ಡ ದೇಶದ್ರೋಹವೆನಿಸಿತು ಮೇರಿಗೆ. ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕಗಳನ್ನು ಪಡೆದು, ಉತ್ತೀರ್ಣಳಾಗಿದ್ದಳು. ಈಗ ವಾರ್ಸಾಗೆ ಹೊರಟ ಮೇರಿ ಮತ್ತೆ ಹಿಂದಿರುಗುವ ಸಾಧ್ಯತೆ ಇರಲಿಲ್ಲ. ಮೇರಿ ಪಿಯರಿಗೆ ಕೇವಲ ಸ್ನೇಹದ ಆಶ್ವಾಸನೆ ನೀಡಿದಳು. ಪಿಯರಿಗೆ ಅದು ಸಾಲದಿತ್ತು. ಅವಳನ್ನು, ಅವಳ ಪ್ರೀತಿಯನ್ನು ಇಡಿ ಇಡಿಯಾಗಿ ಹಿಡಿದಿಡುವ ತವಕ ಆತನದು. ಯಾವೊಂದು ಭರವಸೆ ನೀಡದೆ ಮೇರಿ ರೈಲು ಹತ್ತಿದಳು. ನಿರಾಶನಾದ ಪಿಯರಿಯ ಹೃದಯದಲ್ಲಿ ತೀವ್ರವೇದನೆ. ತಾನು ಕನಸಿನಲ್ಲೂ ಕಲ್ಪಿಸದ ಮೇಧಾವಿ ಮಹಿಳೆ ದೊರೆತು ತನ್ನವಳಾಗದೆ ದೂರವಾಗುವ ಈ ಕ್ಷಣ ನೋವಿನದಾಗಿತ್ತು. ತನ್ನ ಮೂವತ್ತೈದು ವರ್ಷಗಳ ಬಂಜರು ಬದುಕಲ್ಲಿ ಮೊದಲ ಬಾರಿಗೆ ಪ್ರೀತಿಯನ್ನು ಚಿಮ್ಮಿಸಿದ ಅದ್ಭುತವಿಜ್ಞಾನಿ ದೂರ ಸರಿಯುವವಳಿದ್ದಳು. ತನ್ನ ಆಸೆ, ಆಸಕ್ತಿ

ಪೂರ್ವಾಕ್ರಮ, ತನ್ನ ಸಂಶೋಧನೆ ಎಲ್ಲವನ್ನೂ ಅರ್ಥಮಾಡಿಕೊಳ್ಳಬಲ್ಲ. ಹಂಚಿಕೊಳ್ಳಬಲ್ಲ ಸಾಮರ್ಥ್ಯದ ಏಕೈಕ ಹೆಣ್ಣು ಕೈ ತಪ್ಪುತ್ತಿದ್ದಳು. ಆ ಬೇಸಿಗೆಯ ತಿಂಗಳು ಅವಳ ಹಿಂದೆ ಅವನ ಮನಸ್ಸು ಹಿಂಬಾಲಿಸಿತು. ಮೇರಿ ರಜೆಗೆ ಹೋದಾಗಲೆಲ್ಲಾ ಪಿಯರಿಯ ಪತ್ರಗಳು ಬೆನ್ನಟ್ಟಿದ್ದವು. ಪತ್ರದ ತುಂಬಾ ಅವಳನ್ನು ಮತ್ತೆ ಎಳೆದು ತರುವ ಪ್ರಯತ್ನವಿತ್ತು. ಮತ್ತೆ ಮತ್ತೆ ಬರೆದ. 'ಪಿಯರ್, ನಿನಗಾಗಿ ಕಾದಿರುವನೆಂದು' ನೆನಪಿಸಿದ. ಅವಳು ಬರಬಹುದೆಂಬ ಬರಲಾರಳೆಂಬ ಅನಿಶ್ಚಯದಲ್ಲಿ ತಾಕಲಾಡಿದ ಮನಸ್ಸು. ತಮ್ಮ ಸ್ನೇಹದ ಪ್ರಮಾಣವನ್ನಾದರೂ ಸುಳ್ಳಾಗಿಸದೆ ಬರಲು ಬೇಡಿದ, ಒತ್ತಾಯಿಸಿದ.

ಮೇರಿಯ ಮನಸ್ಸಿನಲ್ಲೀಗ ಅಲ್ಲೋಕಲ್ಲೋಲ. ಯಾವ ನಿರ್ಧಾರವನ್ನೂ ಕೈಗೊಳ್ಳಲಾರದ ಚಡಪಡಿಕೆ. ತನ್ನ ತಾಯಿನಾಡನ್ನು ತೊರೆಯುವ, ತನ್ನ ಪ್ರೀತಿಯ ತಂದೆಯಿಂದ ದೂರವಾಗಿ ಶಾಶ್ವತವಾಗಿ ವಿದೇಶದಲ್ಲುಳಿವ ಸಾಧ್ಯತೆ ಅಸಾಧುವೆನಿಸಿದರೆ, ಮತ್ತೊಂದೆಡೆ ಪಿಯರಿಯ ಅಗಾಧ ಪ್ರೀತಿ, ಅಂಥಾ ಮೇಧಾವಿಯ ಸಾಂಗತ್ಯದಲ್ಲಿ ಅರಳುವ ಕ್ಷಣ ಕ್ಷಣಗಳನ್ನು ಕಳೆದುಕೊಳ್ಳುವುದೂ ಕಷ್ಟವೆನಿಸಿತು. ಕಡೆಗೆ ಅಕ್ಟೋಬರಿಗೆ ವ್ಯಾಸಂಗ ಮುಂದುವರೆಸಲು ಮೇರಿ ಪ್ಯಾರೀಸಿಗೆ ಹಿಂತಿರುಗಿದಳು. ಪಿಯರ್, ಅವಳನ್ನು ಒಲಿಸುವ ಪ್ರಯತ್ನಗಳನ್ನು ಮುಂದುವರೆಸಿದ. ಪಿಯರಿಗೆ ಇದುವರೆಗೂ ವಿಜ್ಞಾನವೊಂದೇ ಗುರಿಯಾಗಿತ್ತು. ಈಗ ಮೇರಿಯತ್ತಲ ಸೆಳೆತ, ಅವಳ ಅಗತ್ಯ, ಬಹು ಹೆಚ್ಚಿನದೆನಿಸಿತ್ತು. ಪಿಯರ್ ಈಗ ಅವಳ ತಳಮಳವನನ್ನು ಪರಿಹರಿಸಲು ಅವಳೊಡನೆ ಪೋಲೆಂಡಿಗೆ ಹೋಗಿ ನೆಲೆಸಲು ಸಿದ್ಧನಾದ 'ಒಂದಿಷ್ಟು ಫ್ರೆಂಚ್ ಭಾಷೆಯನ್ನು ಹೇಳಿಕೊಟ್ಟು ಹೊಟ್ಟೆ ಹೊರೆಯಬಲ್ಲೆ'ನೆಂದ 'ನಮಗೊದಗುವ ಸಲಕರಣೆ, ಅನುಕೂಲಗಳಲ್ಲೇ ಸಂಶೋಧನೆ ಮುಂದುವರೆಸೋಣ' ಎಂದ. ಪಿಯರ್ ಈ ಕಟ್ಟ ಕಡೆಯ ತ್ಯಾಗಕ್ಕೂ ಸಿದ್ಧವಿದ್ದ.

ಪಿಯರಿಯ ಪ್ರೀತಿ ಮೇರಿಯನ್ನು ಅಲುಗಿಸಿತು. ಇಂಥಾ ಶ್ರೇಷ್ಠ ವಿಜ್ಞಾನಿಯಿಂದ ವಿಜ್ಞಾನದ ತ್ಯಾಗವನ್ನು ಬಯಸುವುದು ಅಮಾನವೀಯವಿತ್ತು. ಪೋಲೆಂಡಿನಲ್ಲಿ ಆತನ ಸಂಶೋಧನೆಗೆ ಯಾವ ಅನುಕೂಲ, ಅವಕಾಶಗಳಿರಲಿಲ್ಲ. ಮೇರಿ ಸೋತಳು ಪಿಯರಿಯ ಪ್ರೀತಿಗೆ, ವಿಶ್ವಾಸಕ್ಕೆ, ಸ್ನೇಹಕ್ಕೆ, ಸಾಂಗತ್ಯಕ್ಕೆ.

ಮೇರಿ ವಿಷಯ ತಿಳಿಸಿ ತನ್ನ ತಂದೆ ಮತ್ತು ಅಣ್ಣನಿಗೆ ಪತ್ರ ಬರೆದಳು. ಜಾತಿ, ದೇಶ, ಭಾಷೆಗಳ ಅಂತರವರಿಯದ, ಪರಸ್ಪರ ಪ್ರೀತಿ ಗೌರವದಲ್ಲಿ ನೆರವಾಗುವುದನ್ನೇ ಅರಿತ ಆ ವಿಶಾಲ ಹೃದಯಿಗಳು, ತುಂಬು ಮನಸ್ಸಿನಿಂದ ಶುಭ ಹಾರೈಸಿದರು. 'ನೀನೆಲ್ಲಿದ್ದರೂ ನಮ್ಮವಳು' ಎಂದು ಅವಳೆದೆಯ ಸಂಕಟವನ್ನು ಅಪರಾಧೀ ಪ್ರಜ್ಞೆಯನ್ನು ಶಮನಗೊಳಿಸಿದರು. ಪ್ರೀತಿಸಿದವರ ಸಂತೋಷವನ್ನು ಆಶಿಸುವ ಹಾರೈಸುವ, ಹಮ್ಮು ಬಿಮ್ಮುಗಳಿಲ್ಲದೆ ಬರೀ ಒಲವಿನಿಂದ ಹಿಡಿದಿಟ್ಟ ಕುಟುಂಬವದು. ಸಾವಿರಾರು

ಮೈಲಿಗಳಂತರದಲ್ಲೂ ನಿಕಟವಾಗಿ, ಆಪ್ತವಾಗಿ, ಆತ್ಮೀಯರಾಗುಳಿದ ತಂದೆ–ಮಕ್ಕಳು, ಅಣ್ಣ–ತಂಗಿಯರು, ಪರಸ್ಪರರಿಗೆ, ತೊಡಕಾಗದೆ, ತಡೆಯಾಗದೆ, ಪರಸ್ಪರರ ಅಭ್ಯುದಯವನ್ನಷ್ಟೆ ಬಯಸಿದ ವಿಶಿಷ್ಟ ಸ್ನೇಹ ಅವರದು.

ಜುಲೈ 26, 1895, ಯಾವುದೇ ಅಂಧ ಶ್ರದ್ಧೆಯಲ್ಲಿ, ಮತಾಚರಣೆಯಲ್ಲಿ ಸಂಪ್ರದಾಯಗಳಲ್ಲಿ ನಂಬಿಕೆ ಇರಿಸದ ಈ ಇಬ್ಬರು ವಿಜ್ಞಾನಿಗಳು ಬೆರಳಿಗೊಂದು ಉಂಗುರ ತೊಡಿಸದೆಯೇ ವಿವಾಹವಾದರು. ಜಾತಿ, ಮತ, ಧರ್ಮಗಳು ಸ್ಪರ್ಶಿಸದ ಈ ಇಬ್ಬರು ಸ್ವತಂತ್ರ ಜೀವಿಗಳು. ತಮ್ಮ ಕೆಲವು ಆಪ್ತರೆದುರು, ಕುಟುಂಬದವರೆದುರು ಪತಿ–ಪತ್ನಿಯರಾದರು. ಮದುವೆಗೆ ಉಡುಗೊರೆಯಾಗಿ ಬಂದ ಎರಡು ಸೈಕಲ್‌ಗಳ ಮೇಲೆ, ಮಧುಚಂದ್ರಕ್ಕೆ ಹೊರಟರು.

# ಕರ್ನಾಟಕದಲ್ಲಿ ಅಂತರ್ಜಲ ಅಧ್ಯಯನ, ಅಂತರ್ಜಲ ಮಾಲಿನ್ಯ ಸಮಸ್ಯೆ ಮತ್ತು ಪರಿಹಾರ

**– ಕೆ.ಸಿ. ಸುಭಾಷ್ ಚಂದ್ರ**

ಸ್ವಾತಂತ್ರ್ಯಾ ನಂತರದ ದಿನಗಳಲ್ಲಿ ಅನೇಕ ಅಭಿವೃದ್ಧಿ ಕಾರ್ಯಕ್ರಮಗಳ ಪೈಕಿ ಸಣ್ಣ ನೀರಾವರಿ, ನೈಸರ್ಗಿಕ ಹಾಗೂ ನಗರಾಭಿವೃದ್ಧಿ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ– ಇವುಗಳ ಅಡಿಯಲ್ಲಿನ ಯೋಜನಾ ಕಾರ್ಯಕ್ರಮಗಳು ಅಂತರ್ಜಲ ಅವಲಂಬಿತವಾದವು. ಆದರೆ, ಕರ್ನಾಟಕದ ಪೂರ್ವ ವಿಶಾಲ ಬಯಲುಪ್ರದೇಶ ಬರಗಾಲ ಪೀಡಿತವಾಗಿದೆ ಹಾಗೂ ಗಡಸು ಶಿಲಾಭಾಗವಾಗಿದೆ. ಬೇಡಿಕೆಗೆ ಅನುಗುಣವಾಗಿ ಅಂತರ್ಜಲ ಲಭ್ಯತೆ ಹಾಗೂ ಅದರ ಗುಣಮಟ್ಟದ ಭೂಮ್ಯಂತರ್ಗತ ಜಲಧರಗಳನ್ನು ಕ್ಷೇತ್ರಾಧ್ಯಯನದ ಮೂಲಕ ಗುರುತಿಸುವ ಜವಾಬ್ದಾರಿ ಭೂವಿಜ್ಞಾನಿಯದಾಯಿತು. ಅಂತರ್ಜಲಪೂರಕ ಪ್ರದೇಶಗಳನ್ನು, ತೋಡು ಬಾವಿಗಾಗಲಿ ಅಥವಾ ಕೊಳವೆ ಬಾವಿಗಾಗಲಿ ಗುರುತಿಸುವಲ್ಲಿ, ಜನಸಾಮಾನ್ಯರಲ್ಲಿ ಕೆಲವು ಮೂಢನಂಬಿಕೆಗೆ ಅವಲಂಬಿತವಾಗಿದ್ದ ದಿನಗಳು ಅವು. ಹಾಗಾಗಿ, ಗಡಸು ಶಿಲಾಪ್ರದೇಶದಲ್ಲಿನ ಜಟಿಲತೆ, ಅಂತರ್ಜಲ ಮರುಪೂರಣ ಹಾಗೂ ಪುನಶ್ಚೇತನದ ಸಂಕೀರ್ಣವನ್ನು ಅಧ್ಯಯನ ಮಾಡಿ, ವೈಜ್ಞಾನಿಕ ಅರಿವು ಮೂಡಿಸುವ ಜವಾಬ್ದಾರಿ ಬಹುಮುಖ್ಯವೆಂಬ ಅಂಶ ಆಡಳಿತಾಧಿಕಾರಿಗಳಿಗೆ ಮನವರಿಕೆ ಯಾಯಿತು. ಕಳೆದ ಶತಮಾನದ 60–70ರ ದಶಕಗಳಲ್ಲಿ, ಅಂತರ್ಜಲಾಧಾರಿತ ಯೋಜನೆಗಳು ತೋಡು ಬಾವಿಗಳಿಂದಾಗಿದ್ದು, ದಿನನಿತ್ಯದ ಅಂತರ್ಜಲ ಮರುಗಳಿಕೆ ಬೇಸಿಗೆಯ ದಿನಗಳಲ್ಲಿ ಕುಂಠಿತವಾಗಿ, ಕ್ಲಿಷ್ಟ ಪರಿಸ್ಥಿತಿಯನ್ನು ಎದುರಿಸುವ ಕಾಲ ಸರ್ವಸಾಮಾನ್ಯವಾಗಿ ಎಲ್ಲೆಡೆ ಕಾಣಬರುತ್ತಿತ್ತು. ಆ ದಿನಗಳಲ್ಲಿ ಜನಸಾಮಾನ್ಯರಿಗೆ ಕೇವಲ 6 ಅಂಗುಲ ವ್ಯಾಸದ ಕೊಳವೆ ಬಾವಿಯು ಆಳದಲ್ಲಿನ ಜಲಧರಗಳನ್ನು ಭೇದಿಸಿ, ನೀರಿನ ಬೇಡಿಕೆಯನ್ನು ಪೂರೈಸುವುದರ ಬಗ್ಗೆ ನಂಬಿಕೆ ಮೂಡದಾಗಿತ್ತು. ಇದೆಲ್ಲದರ ಬಗ್ಗೆ ದೀರ್ಘ ಭೂಜಲ ವೈಜ್ಞಾನಿಕ ಸಮೀಕ್ಷೆಗಳನ್ನು ನಡೆಸಿ, ಕ್ಷೇತ್ರಾವಲಂಬಿತ ವಿವರಗಳ ಅಧ್ಯಯನಮಾಡಿ, ಜಲಾನಯನ ಪ್ರದೇಶಗಳಲ್ಲಿನ ಅಂತರ್ಜಲಪೂರಕ ಕ್ಷೇತ್ರಗಳನ್ನು ಗುರುತಿಸಿ, ಸಲಹಾ ಸೂತ್ರಗಳನ್ನು ಜನಸಾಮಾನ್ಯರಿಗೆ ತಿಳಿವು ನೀಡುವ ತುರ್ತು ಎದುರಾಯಿತು. ಅಲ್ಲದೆ, ದೊಡ್ಡ ನೀರಾವರಿ (Major irrigation) ಪ್ರದೇಶಗಳಲ್ಲಿ ಅಂತರ್ಜಲ ಮರುಪೂರಣ ಅಧಿಕವಾಗಿ, ಬಳಕೆಯ ಅವಶ್ಯಕತೆ ಇಲ್ಲವಾಗಿ, ಕಣಿವೆ ಹಾಗೂ ತಗ್ಗು ಪ್ರದೇಶಗಳು ಜವುಗು (Water logged) ಪ್ರದೇಶವಾಗಿ, ಅದರಿಂದಾಗಿ ಚೌಳುಭೂಮಿಯಾಗಿ

ಪರಿವರ್ತಿತವಾಗಿದ್ದು, ವ್ಯವಸಾಯ ಕುಂಠಿತವಾಗಿ, ವೈಜ್ಞಾನಿಕ ಸಲಹೆ ಹಾಗೂ ಪರಿಹಾರದ ಅವಶ್ಯಕತೆಗಳಿಗೆ ಗಮನ ನೀಡಬೇಕಾದ ಪ್ರಸಂಗ ಮೂಡಿತು. ಇವೆಲ್ಲದರ ನಿಟ್ಟಿನಲ್ಲಿ ಜಲವಿಭಜಕ (Watershed) ಪ್ರದೇಶಗಳನ್ನು ಮೂಲವಾಗಿ ಪರಿಗಣಿಸಿ, ಮಳೆ ನೀರಿನ ಕೊಯ್ಲಿನ ಪ್ರಮಾಣ, ಮೇಲು ಹರಿವು (Run-off), ಜಲಪಥ, ಜಲಚಕ್ರ, ಜಲಮಟ್ಟದ ಏರಿಳಿತ, ಅಂತರ್ಜಲದ ಸ್ಥಾಯಿ ಪ್ರಮಾಣ (Static resource), ಜಲಸಸ್ಯ–ಬಾಷ್ಪೀಕರಣ (evapotranspiration), ಅಂತರ್ಜಲ ಪೂರಕ–ವಿಸರ್ಜಕದ (Recharge-discharge) ಬಗ್ಗೆ ಅಂದಾಜೀಕರಣ (estimation), ನಿರ್ದಿಷ್ಟ ವಿಸರ್ಜಕ ಜಲಾಂಶ (specific yield), ಮಣ್ಣಿನ ಸರಂಧ್ರತೆ (Soil porosity), ಶಿಲಾ ಸರಂಧ್ರತೆ (Rock porosity) ಮತ್ತು ವ್ಯಾಪ್ಯಶೀಲತೆ (Permeability) ಮಟ್ಟ, ಮಣ್ಣಿನ ಪರ್ಯಾಪ್ತತೆ (Soil saturation), ಅಂತರ್ಜಲದ ರಾಸಾಯನಿಕ ಗುಣಮಟ್ಟ, ಅಂತರ್ಜಲ ಮಾಲಿನ್ಯ ಈ ನಿಟ್ಟಿನ ಅಧ್ಯಯನ ಎಲ್ಲೆಡೆ ಅತಿ ಅವಶ್ಯಕವಾಗಿ ಕಂಡುಬಂತು. ಈ ಹಿನ್ನೆಲೆಯಲ್ಲಿ, ಕ್ಷೇತ್ರಾಧ್ಯಯನದ ಕಾರ್ಯಕ್ರಮಗಳನ್ನು ನಿರೂಪಿಸಿ, ರಾಜ್ಯಮಟ್ಟದಲ್ಲಿ ದೀರ್ಘಾಧ್ಯಯನಕ್ಕಾಗಿ ಸರ್ಕಾರದ ವತಿಯಿಂದ 1965ರಲ್ಲಿ "ಅಂತರ್ಜಲ ಸಮೀಕ್ಷಣಾ ಘಟಕ"ವನ್ನು ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಒಂದು ಅಂಗವಾಗಿ ಸ್ಥಾಪಿಸಲಾಯಿತು. ಇದೇ ಹಿನ್ನಲೆಯಲ್ಲಿ 1971ನೇ ಇಸವಿಯಲ್ಲಿ ಕೇಂದ್ರ ಸರ್ಕಾರ "ಸೆಂಟ್ರಲ್ ಗ್ರೌಂಡ್ ವಾಟರ್ ಬೋರ್ಡ್"ನ ಒಂದು ಪ್ರಾದೇಶಿಕ ಕಚೇರಿಯನ್ನು ಬೆಂಗಳೂರು ಕೇಂದ್ರ ಸ್ಥಾನವಾಗಿರಿಸಿ ರಾಜ್ಯದಲ್ಲಿ ಜಲಸ್ತರ ಅನ್ವೇಷಣೆ ಮತ್ತು ಅನ್ವೇಷಣಾ ತಾಂತ್ರಿಕತೆಯ ಮೂಲ ಕಾರ್ಯನಿರ್ವಹಣೆಗಾಗಿ ತೆರೆಯಲಾಯಿತು. ಆ ಸಮಯದಿಂದ ಈ ತನಕ ಯಾವುದೇ ರಾಜ್ಯಮಟ್ಟದ ಅಂತರ್ಜಲಕೇಂದ್ರಿತ ಯೋಜನಾ ಕಾರ್ಯಗಳಲ್ಲಿ ಇವೆರಡು ಘಟಕಗಳು ಪರಸ್ಪರ ಸಹಯೋಗದಿಂದ ಕಾರ್ಯನಿರ್ವಹಿಸುತ್ತಿದೆ.

**ಜಲಚಕ್ರ ಒಂದು ಪ್ರಾಕೃತಿಕ ಕ್ರಿಯೆ :**

ಯಾವುದೇ ಪ್ರದೇಶದಲ್ಲಿ ಜನಸಂಖ್ಯೆ ಹೆಚ್ಚಿದಂತೆ ನೀರಿನ ಬೇಡಿಕೆ ಕೂಡ ನಿರಂತರವಾಗಿ ಹೆಚ್ಚುವುದು ಸಹಜ. ಬೇಸಿಗೆ ಸಮೀಪಿಸುತ್ತಿದ್ದಂತೆ ನೀರಿನ ಕೊರತೆಯಿಂದಾಗಿ ಎಲ್ಲೆಲ್ಲೂ ಹಾಹಾಕಾರ! ಜನರ ನೀರಿನ ಮೊರೆ ಮೂಲವಾಗಿ ಕುಡಿಯುವ ಹಾಗೂ ವ್ಯವಸಾಯದ ಬಳಕೆಗಾಗಿ. ಇದರ ಕೊರತೆ ಇಲ್ಲವಾದಲ್ಲಿ ಮನುಷ್ಯನ ಜೀವನ ಒಂದು ಸಂತೃಪ್ತ ಜೀವನ. ಕರ್ನಾಟಕ ರಾಜ್ಯದಲ್ಲಿ ನೀರಿನ ಸೌಲಭ್ಯಕ್ಕೆ ಮೂಲಾಧಾರ ಮಳೆ. ಬಿಸಿಲಿನ ತಾಪದಿಂದ ಸಮುದ್ರದ ಮೇಲ್ಮೈನ ನೀರು ಆವಿಯಾಗಿ, ಮೋಡವಾಗಿ ಮಾರ್ಪಟ್ಟು, ಮಳೆಯಾಗಿ, ನೆಲಮುಟ್ಟಿ ಹರಿವಾಗಿ,

ಮಣ್ಣಿನಕಣ–ವಿನ್ಯಾಸ (texture) ಹಾಗೂ ಶಿಲಾಕಣ–ವಿನ್ಯಾಸ (rock texture) ಇವುಗಳಿಗೆ ಅನುಗುಣವಾಗಿ ಸ್ವಲ್ಪ ಭಾಗ ಭೂಮಿಯಲ್ಲಿ ಇಂಗಿ, ಶಿಲಾರಂಧ್ರ ಹಾಗೂ ಶಿಲಾ ಬಿರುಕುಗಳಲ್ಲಿ (fracture and joints) ಜಿನುಗಿ ಅಂತರ್ಜಲವಾಗುವುದು ಒಂದು ಪ್ರಾಕೃತಿಕ ಕ್ರಿಯೆ. ಭೂಮೇಲ್ಮೈನ ಹರಿವಿನ ಭಾಗ ಹಳ್ಳ–ತೊರೆಗಳಲ್ಲಿ ಹರಿದು ನದಿಗಳಲ್ಲಿ ಲೀನವಾಗಿ, ಮಾನವನಿರ್ಮಿತ ಕೆರೆ–ಕಟ್ಟೆ, ಅಣೆಕಟ್ಟೆಗಳು ಯಾವುದಾದರೂ ಇದ್ದಲ್ಲಿ ಶೇಖರ ಗೊಳ್ಳುತ್ತದೆ. ಅಂತರ್ಜಲ ಮರುಪೂರೈಕೆಗೆ ಅನುವುಮಾಡಿ, ಕೆಲವೆಡೆ ಅಂತರ್ಜಲವು ಚಿಲುಮೆಯಾಗಿ ಹೊರ ಬಂದು ನದಿಯ ಪಾತ್ರದಲ್ಲಿ ಲೀನವಾಗಿ ಸಾಗರ–ಸಮುದ್ರವನ್ನು ಸೇರುವುದು ಪ್ರಕೃತಿಯ ಒಂದು ಚಕ್ರೀಯ–ಪ್ರಕ್ರಿಯೆ. ಈ ಪ್ರಾಕೃತಿಕ ಕ್ರಿಯಾರೂಪವೇ 'ಜಲಚಕ್ರ'.

ಭಾರತ ದೇಶದ, ದಕ್ಷಿಣ ಪರ್ಯಾಯ ಪ್ರದೇಶದಲ್ಲಿನ ಪೂರ್ವ ಬಯಲು ಪ್ರದೇಶವು 200–300 ಕಿ.ಮೀ. ವ್ಯಾಪ್ತಿಯನ್ನು ಹೊಂದಿದ್ದು, ಆಯಾ ಪ್ರದೇಶದ ಸಾಮಾನ್ಯ (normal) ಪ್ರಮಾಣಕ್ಕಿಂತ ಸತತ ಒಂದೆರಡು ವರ್ಷ ಮಳೆಯ ಪ್ರಮಾಣ ಕಡಿಮೆಯಾದಲ್ಲಿ, ನೀರಿನ ಸೌಲಭ್ಯದ ಕೊರತೆ ಬಹುತೇಕ ಖಚಿತ. ಆ ಸಮಯದಲ್ಲಿ, ಎಲ್ಲಾ ಮೂಲಗಳಲ್ಲೂ ನೀರಿನ ಲಭ್ಯತೆಯಲ್ಲಿ ಕೊರತೆ ಉಂಟಾಗಿ ದಿನನಿತ್ಯದ ಜನಜೀವನದಲ್ಲಿ ಅಸ್ತವ್ಯಸ್ತ ಪರಿಸ್ಥಿತಿ ಉಂಟಾಗುವುದು ಕೂಡ. ಈ ಪೂರ್ವ ಬಯಲುಸೀಮೆಯಲ್ಲಿ 6–7 ವರ್ಷಗಳಿಗೊಮ್ಮೆ ಬರಗಾಲದ ಪರಿಸ್ಥಿತಿ ಮರುಕಳಿಸುವುದು ಸರ್ವಸಾಮಾನ್ಯ. ಇಂತಹ ಸಮಯದಲ್ಲಿ ಕೆರೆ ಕುಂಟೆಗಳಲ್ಲಿ ನೀರಿಲ್ಲ. ಅಂತರ್ಜಲ ಮರುಪೂರೈಕೆ ಆ ವರ್ಷಗಳಲ್ಲಿ ಕ್ಷೀಣಿತವಾಗಿ ಸ್ಥಿರ ಅಂತರ್ಜಲ (Static resource) ಸಂಪನ್ಮೂಲದ ಮೇಲೆ ಪೂರ್ಣಾವಲಂಬನೆಯ ಪರಿಸ್ಥಿತಿ ಉದ್ಭವವಾಗುತ್ತದೆ. ಇದರಿಂದಾಗಿ, ಸ್ಥಿರ ಅಂತರ್ಜಲ ಪ್ರಮಾಣ ಕೂಡ ಕುಗ್ಗಿ ಜಲಸ್ತರ (aquifer) ಶುಷ್ಕವಾಗುವ ಪರಿಸ್ಥಿತಿ ಸಂಭವಿಸುತ್ತದೆ. ಕೃಷಿ ಉತ್ಪನ್ನಗಳಲ್ಲಿ ಕೊರತೆ ಉಂಟಾಗಿ ದನಕರುಗಳಿಗೆ ಮೇವಿಲ್ಲದ ಪರಿಸ್ಥಿತಿ ಎದುರಾಗುತ್ತದೆ. ಜೀವನೋಪಾಯಕ್ಕಾಗಿ ರೈತನ ಬವಣೆ, ಎಲ್ಲದಕ್ಕೂ ಮಿಗಿಲಾಗಿ, ಜನಸಾಮಾನ್ಯನಿಗೆ ಕುಡಿಯುವ ನೀರಿನ ಕೊರತೆ ಉಂಟಾಗುತ್ತದೆ. ಈ ಬರಗಾಲ ಪರಿಸ್ಥಿತಿಯನ್ನು ಎದುರಿಸಲು ಸದಾಕಾಲ ಸಾಮಾನ್ಯ ವರ್ಷಗಳಲ್ಲಿ ಪಡೆಯಲಾಗುವ ಮಳೆಯ ನೀರಿನ ವಿವಿಧ ರೀತಿಯ ಸಂಗ್ರಹಣಾಕಾರ್ಯ ನಿರ್ವಹಿಸುವಲ್ಲಿ ಆಡಳಿತ ವರ್ಗದವರೇ ಆಗಲೀ ಅಥವಾ ಜನಸಾಮಾನ್ಯನೇ ಆಗಲೀ ಸನ್ನದ್ಧರಾಗಿರಬೇಕು.

**ಕರ್ನಾಟಕ ರಾಜ್ಯದ ಭೂಭೌತ ಲಕ್ಷಣಗಳು :**

ಕರ್ನಾಟಕ ರಾಜ್ಯದಲ್ಲಿ, ಅರಬ್ಬೀ ಸಮುದ್ರದ ಕರಾವಳಿ ಪ್ರದೇಶದ ಪೂರ್ವಕ್ಕೆ ಹೊಂದಿಕೊಂಡಿರುವ ಪಶ್ಚಿಮ ಘಟ್ಟಗಳ ಪರ್ವತಶ್ರೇಣಿಯು ದಟ್ಟ ಅರಣ್ಯದ

ಬೀಡಾಗಿರುವುದು ಪ್ರಕೃತಿ ನೀಡಿರುವ ಕೊಡುಗೆ. ಕರಾವಳಿಯಲ್ಲಿ ಮುಂಗಾರು ಮಳೆ ಮೋಡ ಮೂಡಿಬಂದು, ಕರಾವಳಿ ಹಾಗೂ ಘಟ್ಟಪ್ರದೇಶದಲ್ಲಿ ವರ್ಷದ ಜೂನ್ ತಿಂಗಳಿಂದ ಸೆಪ್ಟೆಂಬರ್ ಮಧ್ಯದವರೆಗೆ ಹೇರಳವಾಗಿ ಮಳೆ ಸುರಿದು (2000–4000 ಮಿಲಿ ಮೀಟರ್), ಅದೇ ಸಮಯದಲ್ಲಿ ಅಧಿಕವಾಗಿ ಮೂಡಿಬಂದ ದಟ್ಟ ಮುಂಗಾರುಮೋಡ ಘಟ್ಟದ ಶ್ರೇಣಿಯನ್ನು ದಾಟಿ ಕರ್ನಾಟಕದ ವಿಶಾಲ ಬಯಲು ಸೀಮೆಯನ್ನು (eastern plains) ಪ್ರವೇಶಿಸುತ್ತಿದ್ದಂತೆ, ಚದುರಿದ ಮೋಡವಾಗಿ ಮಳೆಗಾಲ ಪ್ರವೇಶಿಸುತ್ತದೆ.

ರಾಜ್ಯದ ಪೂರ್ವಪ್ರದೇಶದ ಸುಮಾರು 200–300 ಕಿ.ಮೀ. ಹರಡಿರುವ ಬಯಲುಪ್ರದೇಶ; ಭೂಭೌಗೋಳಿಕವಾಗಿ ಉತ್ತರಾರ್ಧ ಭಾಗ ಸಮತಟ್ಟಾದ, ಕಪ್ಪು ಜೇಡಿಮಣ್ಣಿನಿಂದ ಆವೃತವಾಗಿರುವ ಕೃಷ್ಣ ಹಾಗೂ ಗೋದಾವರಿ ನದಿಗಳ ಒಂದು ಜಲಾನಯನ ಭಾಗ. ಆದರೆ, ದಕ್ಷಿಣಾರ್ಧ ಭಾಗ ಮರಳುಮಿಶ್ರಿತ ಹಾಗೂ ಅಲ್ಲಲ್ಲಿ ಜೇಡಿಮಿಶ್ರಿತ ಕೆಂಪುಮಣ್ಣಿನ ಗುಡ್ಡ ಕಣಿವೆಗಳ ಪ್ರದೇಶವಾಗಿದ್ದು, ಕೆಲವೆಡೆ ನದಿ ಹರಿವಿನಲ್ಲಿ ಜಲಪಾತಗಳು ಕಾವೇರಿ ಜಲಾನಯನದಲ್ಲಿ ಸಾಕಷ್ಟಿವೆ. ಉತ್ತರ ಬಯಲು ಪ್ರದೇಶದಲ್ಲಿ ವಾರ್ಷಿಕ ಸಾಮಾನ್ಯ ಮಳೆಯ ಪ್ರಮಾಣ 550–650 ಮಿಲಿ ಮೀಟರ್ ಆಗಿದ್ದಲ್ಲಿ, ದಕ್ಷಿಣ ಬಯಲುಪ್ರದೇಶದಲ್ಲಿ ಸುಮಾರು 650–850 ಮಿಲಿಮೀಟರ್ ಆಗಿದೆ. ಕರ್ನಾಟಕದಲ್ಲಿ ಪೂರ್ವ ಮುಖವಾಗಿ ಹರಿಯುವ ನದಿಗಳ ಉಗಮ ಪಶ್ಚಿಮ ಘಟ್ಟಗಳ ಸಾಲಿನಲ್ಲಿ. ಆದರೆ, ಇದಕ್ಕೆ ಹೊರತಾಗಿ ಬೆಂಗಳೂರು ನಗರದಿಂದ ಸುಮಾರು 60 ಕಿ.ಮೀ. ಉತ್ತರಕ್ಕೆ, ಬಯಲುಪ್ರದೇಶದಲ್ಲಿನ ಸುಮಾರು 1485 ಮೀಟರ್ ಸಮುದ್ರಮಟ್ಟದಿಂದ ಮೇಲಿರುವ, ಏಕಶಿಲಾ 'ನಂದಿಬೆಟ್ಟ' ಹಾಗೂ ಅದರೊಡನಿರುವ ಬೆಟ್ಟಗಳ ಸಾಲು ಅರ್ಕಾವತಿ, ಪಾಲಾರ್, ಉತ್ತರ ಪಿನಾಕಿನಿ ಹಾಗೂ ದಕ್ಷಿಣ ಪಿನಾಕಿನಿ (ಪೊನ್ನಯ್ಯಾರ್) ನದಿಗಳ ಉಗಮ ಸ್ಥಾನವಾಗಿದೆ. ಈ ನದಿಗಳ ಪೈಕಿ ಅರ್ಕಾವತಿ ನದಿಯು ಕಾವೇರಿಯ ಉಪನದಿ. ಇದೇ ರೀತಿ ತುಮಕೂರು ಬಳಿ ಇರುವ ದೇವರಾಯನ ದುರ್ಗದಲ್ಲಿ ಕಾವೇರಿಯ ಉಪನದಿ ಶಿಂಷಾದ ಉಗಮ ಸ್ಥಾನವಿದೆ.

ಪಶ್ಚಿಮಘಟ್ಟದ ಪ್ರದೇಶದ ದಟ್ಟ ಅರಣ್ಯದಿಂದ, ಮಣ್ಣಿನ ಸವಕಳಿಗೆ (erosion) ಅವಕಾಶ ನೀಡದೆ, ಮಣ್ಣಿನ ತೇವಾಂಶ ದೀರ್ಘಕಾಲ ಉಳಿಯಲು ಸಹಾಯಕವಾಗಿದೆ. ಅಷ್ಟೇ ಅಲ್ಲದೆ, ಅಂತರ್ಜಲ ಪೂರೈಕೆಗೆ ಘಟ್ಟಪ್ರದೇಶದಲ್ಲಿ ಅನುವುಮಾಡಿ, ಬೇಸಿಗೆಯಲ್ಲಿ ಪ್ರಾಕೃತಿಕ ಚಿಲುಮೆಗಳ ಹರಿವಿಗೆ ಅನುಕೂಲತೆಯನ್ನು ನೀಡಿದೆ. ಇಂತಹ ಪ್ರಾಕೃತಿಕ ಅರಣ್ಯವನ್ನು ನಾಶಮಾಡಿ ಘಟ್ಟಪ್ರದೇಶವನ್ನು ಬಯಲು ಮಾಡಿದಲ್ಲಿ, ಸಹಸ್ರಾರು ವರ್ಷಗಳಿಂದ ಮೈದಳೆದ ಮಣ್ಣು ಕೊಚ್ಚಿಹೋಗಿ ಕೊರಕಲು ಉಂಟಾಗಿ, ಹೂಳಿನ ಪ್ರಮಾಣ ನದಿಪಾತ್ರಗಳಲ್ಲಿ ಅಧಿಕವಾಗಿ, ಭೂಮೇಲ್ಮೈ ಹರಿವು ಜಾಸ್ತಿಯಾಗಿ, ಮಳೆಯ

ಪ್ರಮಾಣವು, ಘಟ್ಟ ಹಾಗೂ ಮೈದಾನ ಪ್ರದೇಶಗಳಲ್ಲಿ ಕ್ಷೀಣಿಸುವ ಪರಿಸ್ಥಿತಿ ಬಹುತೇಕ ಖಚಿತ. ಪ್ರಾಕೃತಿಕ ಪರಿಸರದಲ್ಲಿ ಏರುಪೇರು ಉಂಟಾಗುವುದು ಜನಸಾಮಾನ್ಯರ ಅರಿವಿಗೂ ಬಂದಿದೆ.

**ಕರ್ನಾಟಕದಲ್ಲಿ ಕ್ಷೀಣಿಸುತ್ತಿರುವ ಅಂತರ್ಜಲ :**

ಯಾವುದೇ ಪ್ರದೇಶದಲ್ಲಿ ಅಂತರ್ಜಲದ ಲಭ್ಯತೆ ಜಲಾನಯನಪ್ರದೇಶದ ಭೂಸ್ವರೂಪ, ಭೂಸ್ಥಿತಿ, ಭೂಸವೆತ (denudation), ಭೂವೈಜ್ಞಾನಿಕ ಹಾಗೂ ಭೂಚಲನೆಯ (geotectonic) ಸ್ಥಿತಿಗತಿ, ಭೂಮೇಲ್ಮೈ ಲಕ್ಷಣ, ಶಿಲಾರಚನೆ, ಮಣ್ಣಿನ ಹಾಗೂ ಶಿಲಾಕಣ ವಿನ್ಯಾಸ (textural property), ಮಳೆಯ ಪ್ರಮಾಣ, ವಾಯು ಗುಣ ಸ್ಥಿತಿಗತಿ ಇವೇ ಮುಂತಾದ ಲಕ್ಷಣಗಳನ್ನು ಅವಲಂಬಿಸಿರುತ್ತದೆ. ಪ್ರದೇಶದ ಪ್ರತಿ ಶಿಲಾರಚನೆಗೆ ಅನುಗುಣವಾಗಿ 'ಜಲಧಾರಣ' ಶಕ್ತಿ (water holding property of the aquifer) ಅವಲಂಬಿತವಾಗಿರುತ್ತದೆ. ಕರ್ನಾಟಕದಲ್ಲಿ ಕರಾವಳಿ ಪ್ರದೇಶ ಹಾಗೂ ನದಿಪಾತ್ರದಲ್ಲಿ, ಸಂಗ್ರಹಿತವಾಗಿರುವ ಮೆಕ್ಕಲನ್ನು ಬಿಟ್ಟರೆ, ಉಳಿದೆಲ್ಲ ಭಾಗ ಗಡಸುಶಿಲೆಯ ವ್ಯಾಪ್ತಿ ಪ್ರದೇಶವಾಗಿದೆ. ಈ ಗಡಸುಶಿಲೆಗಳ ಪೈಕಿ ನೈಸ್ (gneiss), ಗ್ರನೈಟ್, ಶಿಸ್ಟ್ (schist), ಮರಳು ಕಲ್ಲು (sandstone, quartzite), ಸುಣ್ಣಕಲ್ಲು (limestone), ಡೆಕ್ಕನ್‌ಟ್ರಾಪ್ (Deccan basalt), ಮುರಕಲ್ಲು (laterite) ಶಿಲೆಗಳು ಪ್ರಮುಖವಾಗಿವೆ. ಅಂತರ್ಜಲ ಪೂರೈಕೆ ಆಯಾ ಸ್ಥಳದಲ್ಲಿನ ಶಿಲಾ ರಚನೆಯನ್ನು ಅವಲಂಬಿಸಿರುತ್ತದೆ. ಸಾಮಾನ್ಯವಾಗಿ, ಗಡಸುಶಿಲೆಯ ಮೇಲ್ಭಾಗದ ಶಿಥಿಲ ಶಿಲಾ ಭಾಗದವರೆವಿಗೂ ಜಲಧಾರಣವಾಗಿದ್ದಲ್ಲಿ ಎತ್ತರದ ಮೇಲ್ಮೈ ಪ್ರದೇಶದಿಂದ ಇಳಿಜಾರಿನ ಪ್ರದೇಶವನ್ನು ಅನುಸರಿಸಿ, ಕೆಲವೊಮ್ಮೆ ಹಳ್ಳ–ತೊರೆಗಳ ಪಾತ್ರದಲ್ಲಿ ನೀರಿನ ಹರಿವಾಗಿ ಮಾರ್ಪಡುತ್ತದೆ. ಇದನ್ನು 'ತ್ಯಾಜ್ಯ ಝರಿ' (effluent stream) ಎಂದು ಕರೆಯಲಾಗುವುದು. ಕೆಲವೊಮ್ಮೆ ತ್ಯಾಜ್ಯ ಹರಿವು ಅಥವಾ ನದಿ ಹರಿವಿನಲ್ಲಿ ನದಿ ಮೆಕ್ಕಲು ಅಥವಾ ಪೂರ್ಣ ಶಿಥಿಲ ಶಿಲಾಭಾಗವಾಗಿದ್ದಲ್ಲಿ ಅಂತರ್ಜಲ ಪೋಷಕ ಜಲಹರಿವು (influent flow) ಉಂಟಾಗಬಹುದು. ಅಂದರೆ, ಸಂದರ್ಭೋಚಿತವಾಗಿ ಒಂದು ನದಿಯ ಪಾತ್ರ ಒಂದೆಡೆ ತ್ಯಾಜ್ಯ ಝರಿ (effluent stream) ಆಗಿದ್ದಲ್ಲಿ ಮತ್ತೊಂದೆಡೆ ಅಂತರ್ಜಲ ಪೋಷಕ (influent stream) ಆಗಬಹುದು. ಆದರೆ, ಅಂತರ್ಜಲ ಮಟ್ಟ ಹಳ್ಳ–ತೊರೆಗಳ ಅಥವಾ ನದಿ ಪಾತ್ರಕ್ಕಿಂತ ಕೆಳಗಿದ್ದಲ್ಲಿ ತ್ಯಾಜ್ಯ ಝರಿಯ ಹರಿವು ಕಾಣಬರುವುದಿಲ್ಲ. ಅಂದರೆ, ನದಿಗಳಲ್ಲಿ ಅಂತರ್ಜಲ ಪೋಷಕ ಜಲಹರಿವಿನ ಸಾಧ್ಯತೆ ಇರುವುದಿಲ್ಲ. ಸಾಮಾನ್ಯವಾಗಿ ಜಲಾನಯನದ ಆಯಕಟ್ಟು ಹೆಚ್ಚಾದಂತೆ, ಕಣಿವೆ ಜಲಾನಯನ ಪ್ರದೇಶ (valley zone) ವಿಶಾಲವಾದಂತೆ, ಗಡಸು

ಶಿಲೆಗಳಾದ ಗ್ರನೈಟ್, ನೈಸ್, ಶಿಸ್ಟ್ ಇವುಗಳು ಅಧಿಕವಾಗಿ ಶಿಥಿಲವಾಗಿರುತ್ತವೆ. ಇಂತಹ ಪ್ರದೇಶಗಳಲ್ಲಿ ಶಿಲಾ ಶಿಥಿಲತೆ (weathering) ಭೂಮಟ್ಟದಿಂದ ಸುಮಾರು 20–25 ಮೀಟರ್ ಆಳದವರೆವಿಗೂ ಕಾಣಬಹುದು. ಅದರ ಕೆಳಗೆ ಮತ್ತೆ ಸುಮಾರು 30 ಮೀಟರ್ ಆಳದವರೆವಿಗೆ ಶಿಲಾಭಾಗದಲ್ಲಿ ಅತಿಯಾದ ಶಿಥಿಲತೆ ಇಲ್ಲದಿದ್ದರೂ ಸಾಧಾರಣವಾಗಿ ಸೀಳು, ಬಿರುಕು, ಛಿದ್ರತೆಗಳು ಪ್ರಧಾನವಾಗಿ ಕಾಣಬರುತ್ತವೆ. ಇದರ ನಂತರ, ಅಂದರೆ ಭೂಮಟ್ಟದಿಂದ 60–65 ಮೀಟರ್‌ನಿಂದ ಸುಮಾರು 300 ಮೀಟರ್‌ವರೆಗೆ ಗಟ್ಟಿ ಶಿಲಾಭಾಗವಾಗಿದ್ದು, ಶಿಲೆಯಲ್ಲಿನ ಖನಿಜಗಳ ಅಂತರ್‌ಕಣ ಸರಂಧ್ರತೆ ಕ್ಷೀಣಿತವಾಗಿದ್ದು (interstitial porosity), ಸರಂಧ್ರಿತ ಸ್ತರಜಲ ಇಲ್ಲದಂತಾಗಿ (interstitial water), ಮೂಲ ಸರಂಧ್ರತೆ (decrease in porosity because of inter-granular compactness of minerals) ಶೂನ್ಯವಾಗಿ, ಸೀಳು, ಬಿರುಕುಗಳ (joints /fractures) ಸಾಂದ್ರತೆ ಕಡಿಮೆ ಯಾಗಿರುತ್ತದೆ. ಭೂಮಟ್ಟದಿಂದ ಸುಮಾರು 300 ಮೀಟರ್ ಕೆಳಗಿನ ಭಾಗ ಬಹುತೇಕ ಹಾಸುಗಲ್ಲಿನ ಪ್ರದೇಶವಾಗಿರುತ್ತದೆ. ಮಳೆಯ ನೀರು ನೆಲಮುಟ್ಟಿದಂತೆ ಶಿಥಿಲ ಶಿಲಾಭಾಗದ ಮೇಲಿನ ಮಣ್ಣಿನ ಪದರವು ಪರ್ಯಾಪ್ತವಾದ ನಂತರ (after saturation), "ಅನಿರ್ಬಂಧಿತ ಜಲಧರದ (unconfined aquifer)" ಶಿಲಾರಂಧ್ರಗಳಲ್ಲಿ ಜಿನುಗಿ, ನಂತರ ಪಾರ್ಶ್ವಶಿಲಾ ಶಿಥಿಲತೆ (partially weathered) ಮತ್ತು ಸೀಳು ಬಿರಕುಗಳನ್ನೊಳಗೊಂಡ "ಪಾರ್ಶ್ವ ಅನಿರ್ಬಂಧಿತ ಜಲಧರ" (semi unconfined aquifer)" ಮುಖಾಂತರವಾಗಿ ಕೆಳಗಿನ ಶಿಥಿಲತೆ ಇಲ್ಲದ ಕೇವಲ ಸೀಳು ಬಿರುಕುಗಳನ್ನೊಳ ಗೊಂಡ "ಪಾರ್ಶ್ವಬಂಧಿತ ಜಲಧರದ (semi confined)" ಗುರಿಮುಟ್ಟುತ್ತದೆ. ಪಾರ್ಶ್ವಬಂಧಿತ ಜಲಧರವು ಹಾಸು ಬಂಡೆಯ ಸಂಪರ್ಕ ಮುಟ್ಟಿದಂತೆ, ಮಳೆಯ ಪ್ರಮಾಣ ಹಾಗೂ ಶಿಲಾ–ಜಲಧಾರಣ ರಚನೆಗೆ ಅನುಗುಣವಾಗಿ ಪಾರ್ಶ್ವಬಂಧಿತ, ಪಾರ್ಶ್ವ ಅನಿರ್ಬಂಧಿತ ಹಾಗೂ ಸಹಸಂಪರ್ಕಿತ (interconnected) ಜಲಸ್ತರಗಳು ಕ್ರಮವಾಗಿ ಪರ್ಯಾಪ್ತಗೊಳ್ಳುತ್ತವೆ. ಇದು ನೈಸರ್ಗಿಕ ಅಂತರ್ಜಲ ಮರುಪೂರಣ ಹಾಗೂ ಪುನಶ್ಚೇತನದ (recharge) ಪ್ರಕ್ರಿಯೆ. ಅಂತರ್ಜಲ ಪುನರ್ಲಭ್ಯತೆ ಒಂದು ಪ್ರದೇಶದ ಮಳೆಯ ಕಾಲಾವಧಿ, ತೀವ್ರತೆ ಮತ್ತು ವ್ಯಾಪ್ತಿಯನ್ನು ಅವಲಂಬಿಸಿರುತ್ತವೆ. ಅಂತರ್ಜಲ ಎಷ್ಟು ಆಳದ ವರೆವಿಗೆ ದೊರಕುತ್ತದೆ ಎಂಬುದು ಸಾಮಾನ್ಯ ಪ್ರಶ್ನೆ. ಶಿಲೆಯ ಶಿಥಿಲಭಾಗ, ಬಿರುಕು–ಸೀಳುಗಳು ಶಿಲಾಭಾಗದಲ್ಲಿ ಸಹ ಸಂಪರ್ಕಿತವಾಗಿ ಎಲ್ಲಿಯವರೆಗೆ ಇರುತ್ತದೋ ಅಲ್ಲಿಯವರೆವಿಗೆ 'ಜಲಧಾರಣ' ಸನ್ನಿವೇಶ ಇರುತ್ತದೆ. ಸಾಮಾನ್ಯವಾಗಿ ಶಿಲಾ ಭಾಗದಲ್ಲಿ ಸೀಳು–ಬಿರುಕುಗಳು (joints and fractures) ಭೂಮಟ್ಟದಿಂದ 100–150 ಮೀಟರ್ ನಿಂದ ಕೆಳಗೆ ಸಾಂದ್ರತೆ ಕ್ಷೀಣಗೊಂಡು ನಿಬಿಡ (compact)ವಾಗುವುದೇ ಅಲ್ಲದೆ ಅಂತರ್ಜಲ

ಲಭ್ಯತೆ ಕೂಡ ಕ್ಷೀಣಿಸುತ್ತದೆ; ಹಾಸುಬಂಡೆಯಾದಲ್ಲಿ ಅಂತರ್ಜಲ ಲಭ್ಯತೆಗೆ ಅವಕಾಶವಿರುವುದಿಲ್ಲ.

ಸುಮಾರು 40 ವರ್ಷಗಳ ಹಿಂದೆ, ವ್ಯವಸಾಯದ ಅಥವಾ ಕುಡಿಯುವ ನೀರಿನ ಬಳಕೆ ತೋಡು ಬಾವಿಗಳ ಮೇಲೆ ಅವಲಂಬಿತವಾಗಿತ್ತು. ಆದರೆ 1970ರಲ್ಲಿ, ಶೀಘ್ರಗತಿ ಕೊರೆಯುವ ಯಂತ್ರಗಳು ಕರ್ನಾಟಕಕ್ಕೆ ಬಂದ ಮೇಲೆ, ದೊಡ್ಡ ನೀರಾವರಿ ಯೋಜನೆ ಅಡಿಯಲ್ಲಿನ ನೀರಾವರಿ ಪ್ರದೇಶಗಳು ಹೊರತುಪಡಿಸಿ, ಬಯಲುಪ್ರದೇಶದಲ್ಲಿ (easternplains) ಯಾವುದೇ ನೀತಿ ನಿಯಮವಿಲ್ಲದೇ ಕೊಳವೆ ಬಾವಿಗಳು ನಿರ್ಮಾಣವಾಗಿ ವಾರ್ಷಿಕ ಅಂತರ್ಜಲ ಪೂರಣ ವನ್ನು (annual ground water recharge) ಮೀರಿ, ವಿಸರ್ಜಿತ (ground water withdrawal) ಪ್ರಮಾಣ ಸತತವಾಗಿ ಹೆಚ್ಚಾಗುತ್ತಾ ಬಂತು, ಅಂತರ್ಜಲ ಮಟ್ಟ ಕುಸಿದು, ಅಂತರ್ಜಲ ಲಭ್ಯತೆ ಕ್ಷೀಣಗೊಂಡು, ಅಂತರ್ಜಲ ಗಣಿಗಾರಿಕೆಯ (mining of ground water) ಹಂತ ಬಹು ವರ್ಷಗಳಿಂದ ಸ್ಥಿರವಾಗಿ ಮುನ್ನಡೆದು, ಸ್ಥಾಯಿ ನಿಕ್ಷೇಪ (static resource) ಬತ್ತಲಾಗಿ, ಕೊಳವೆ ಬಾವಿಗಳಲ್ಲಿನ ನೀರಿನ ಸೆಲೆ ಇಲ್ಲದಂತಾಯಿತು, ಅಂತರ್ಜಲದ ಮೇಲೆ ಅವಲಂಬಿತವಾಗಿರುವ ಜನರ ಪರಿಸ್ಥಿತಿ ಬಹು ಕ್ಲಿಷ್ಟಕರವಾಯಿತು. ಇದು ಮಾನವನಿರ್ಮಿತ ಕ್ರಿಯೆ ಆಗಿದ್ದಲ್ಲಿ, ಮತ್ತೊಂದೆಡೆ ಸಾಮಾನ್ಯ (normal) ಪ್ರಮಾಣಕ್ಕಿಂತ ವಾರ್ಷಿಕ ಮಳೆಯ ಪ್ರಮಾಣ ಕ್ಷೀಣಿತವಾದ ಅಂತರ್ಜಲ ಸ್ತರ ಯಾವುದೇ ಸಮಯದಲ್ಲಿ ಶುಷ್ಕವಾಗುವುದರಲ್ಲಿ ಸಂದೇಹವಿಲ್ಲ. ಈಗಿನ ಪರಿಸ್ಥಿತಿಯಲ್ಲಿ ಅಂತರ್ಜಲ ಅವಲಂಬಿತ ಯೋಜನೆಗಳು ಸುಸ್ಥಿರವಲ್ಲ ಎಂಬುದನ್ನು ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ.

**ಅಂತರ್ಜಲ ಗುಣಮಟ್ಟ ಹಾಗೂ ಮಾಲಿನ್ಯ :**

ಮಳೆಗಾಲದಲ್ಲಿ ಶಿಥಿಲ ಶಿಲೆಯ ಮೇಲಿನ ಹೊದಿಕೆಯಾಗಿರುವ ಮಣ್ಣಿನ ಪದರ, ಪರ್ಯಾಪ್ತವಾಗಿ ನೀರು ಅಂತರ್ಜಲ ಪೂರಕವಾಗುವ ಕ್ರಿಯೆ ಆರಂಭವಾದಲ್ಲಿ, ಮಣ್ಣಿನಲ್ಲಿರುವ ಹಾಗೂ ಶಿಥಿಲ ಶಿಲಾಭಾಗದಲ್ಲಿನ ವಿಲೇಯ (soluble) ಲವಣಾಂಶ ನೀರಿನೊಡನೆ ಬೆರತು, ದ್ರಾವಣವಾಗಿ ಜಲಸ್ತರವನ್ನು ಸೇರುತ್ತದೆ. ಅಂದರೆ ಅಂತರ್ಜಲದ ಲವಣಾಂಶ ಬಹುವಾಗಿ ಮಣ್ಣಿನ ಹಾಗೂ ಶಿಲಾಭಾಗದಲ್ಲಿನ ಲವಣಾಂಶದ ಮೇಲೆ ಅವಲಂಬಿತವಾಗಿರುತ್ತದೆ. ಸಾಧಾರಣವಾಗಿ ಅಂತರ್ಜಲದ ಗುಣಮಟ್ಟವನ್ನು ವಿಲೀನವಾದ ಘನ ಲವಣದ (total dissolved salts/solids) ಮೊತ್ತದಿಂದ ತಿಳಿಯಬಹುದು. ಲವಣ–ಕ್ಷಾರ ಕವಚ (salt or saline crust) ಇದ್ದಲ್ಲಿ, ಅಂತರ್ಜಲದಲ್ಲೂ ಕೂಡ ಲವಣಾಂಶ ಬಹುವಾಗಿರುತ್ತದೆ. ಮೈದಾನ ಪ್ರದೇಶದ ಬಳ್ಳಾರಿ, ರಾಯಚೂರು, ಕೊಪ್ಪಳ, ಗದಗ, ಧಾರವಾಡ, ಹಾವೇರಿ ಜಿಲ್ಲೆಗಳಲ್ಲಿನ

ಎರೆಮಣ್ಣಿನಲ್ಲಿ ಲವಣಾಂಶ ಬಹುವಾಗಿದ್ದು, ಅಂತರ್ಜಲ ಮೂಲತಃ ಲವಣ ಜಲ (salt water) ಆಗಿರುತ್ತದೆ. ಇಂತಹ ಪ್ರದೇಶಗಳಲ್ಲಿ ನೀರಾವರಿ ಅಚ್ಚುಕಟ್ಟು ಸೌಲಭ್ಯವಿದ್ದಲ್ಲಿ, ಅಂತರ್ಜಲ ಮಟ್ಟ ಅನಿರ್ಬಂಧಿತ ಜಲಸ್ತರವು ಪರ್ಯಾಪ್ತವಾದಾಗ, ಕೆಲವೆಡೆ ಜವುಗುಪ್ರದೇಶವಾಗಿ ಮಾರ್ಪಟ್ಟು ನೀರಿನಂಶ ಆವಿಯಾದಂತೆ, ಲವಣಾಂಶಗಳು ಮಣ್ಣಿನ ಮೇಲೆ ಪದರವಾಗಿ ಉಳಿಯುತ್ತದೆ. ಈ ಪ್ರದೇಶವು ವ್ಯವಸಾಯಕ್ಕೆ ಅಪ್ರಯೋಜಕ ಸ್ಥಿತಿಯಿಂದ ಕೂಡಿರುತ್ತದೆ. ಸರ್ವಸಾಮಾನ್ಯವಾಗಿ, ಕೆಂಪು ಮಣ್ಣಿನ ಪ್ರದೇಶಗಳಲ್ಲಿ ಅಂತರ್ಜಲದ ಗುಣಮಟ್ಟ ಬಳಕೆಗೆ ಯೋಗ್ಯವಾಗಿರುತ್ತದೆ.

**ಅಂತರ್ಜಲದಲ್ಲಿ ಫ್ಲೋರೈಡ್ :**

ಫ್ಲೋರೀನ್ ಧಾತು ಮತ್ತೊಂದು ಧಾತುವಿನೊಂದಿಗೆ ಸೇರಿ ರೂಪಗೊಂಡ ದ್ವಿಸಂಯುಕ್ತ ಹೈಡ್ರೋಫ್ಲೋರಿಕ್ ಆಮ್ಲದ ಲವಣವೇ 'ಫ್ಲೋರೈಡ್'. ಫ್ಲೋರೈಡ್ ಅಂಶವು ಒಂದು ಲೀಟರ್ ನೀರಿನಲ್ಲಿ 1.5 ಮಿಲಿಗ್ರಾಂಗಿಂತ ಅಧಿಕವಾದಲ್ಲಿ ಮನುಷ್ಯರು 'ಫ್ಲೋರೋಸಿಸ್' ಎಂಬ ರೋಗಕ್ಕೆ ಒಳಗಾಗುವರು. ಅಂತರ್ಜಲದಲ್ಲಿ ಫ್ಲೋರೈಡ್ ಅಂಶ ಭೂವೈಜ್ಞಾನಿಕ, ಭೌಗೋಳಿಕ, ಭೂಸ್ವರೂಪ, ಜಲವೈಜ್ಞಾನಿಕ, ಜಲ ಭೂವೈಜ್ಞಾನಿಕ ಸ್ಥಿತಿಗತಿಯನ್ನು ಅವಲಂಬಿಸಿರುತ್ತದೆ.

ಕರಾವಳಿ ಹಾಗೂ ಪಶ್ಚಿಮಘಟ್ಟ ಪ್ರದೇಶಗಳಲ್ಲಿ ಫ್ಲೋರೈಡ್ ಅಂಶ ಒಂದು ಲೀಟರ್‌ನಲ್ಲಿ ಒಂದು ಮಿಲಿಗ್ರಾಂಗಿಂತ ಸಾಮಾನ್ಯವಾಗಿ ಕಡಿಮೆ ಇದ್ದರೆ ಕುಡಿಯಲು ಯಾವ ತೊಂದರೆಯೂ ಇರುವುದಿಲ್ಲ. ಆದರೆ, ಪೂರ್ವ ಮೈದಾನ ಪ್ರದೇಶದಲ್ಲಿ ಮಂಡ್ಯ, ರಾಮನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ತುಮಕೂರು, ಚಿತ್ರದುರ್ಗ, ದಾವಣಗೆರೆ, ಹಾವೇರಿ, ಕೊಪ್ಪಳ, ರಾಯಚೂರು, ಗುಲ್ಬರ್ಗ ಜಿಲ್ಲಾ ಭಾಗಗಳಲ್ಲಿ, ಅಂತರ್ಜಲದಲ್ಲಿ ಫ್ಲೋರೈಡ್ ಅಂಶ ಒಂದು ಲೀಟರ್‌ನಲ್ಲಿ 2 ರಿಂದ 7 ಮಿಲಿಗ್ರಾಂವರೆಗೆ ಇದೆ. ಈ ಜಾಗಗಳಲ್ಲಿ ಮೂಲವಾಗಿ ಅಗ್ನಿಶಿಲೆ ಪ್ರಾಧಾನವಾಗಿದ್ದು ಅದರಲ್ಲಿನ ಕೆಲವು ಫ್ಲೋರೈಡ್ ಅಂಶ ಇರುವ ಖನಿಜಗಳಿಂದಾಗಿ ನೀರಿನಲ್ಲಿ ಅದರ ಅಂಶ ಹೆಚ್ಚಾಗಿರುವುದು ಅಧ್ಯಯನಗಳ ಮೂಲಕ ತಿಳಿದುಬಂದಿದೆ.

ಬೆಂಗಳೂರು ಮಹಾನಗರದಲ್ಲಿ, ನೂರಾರು ವರ್ಷಗಳಿಂದ ನೀರಿನ ಸೌಕರ್ಯ ನೀಡುತ್ತಿದ್ದ ಕೆರೆ–ಕಟ್ಟೆಗಳು ನಾನಾ ಭಾಗಗಳಲ್ಲಿ ಒತ್ತುವರಿಯಾಗಿರುವ ಪರಿಣಾಮವಾಗಿ ಅದೃಶ್ಯವಾಗಿವೆ. ನಿಸರ್ಗ ಸಹಜ ಹಳ್ಳ–ಕೊಳ್ಳಗಳು ಕೂಡ ಒತ್ತುವರಿಗೆ ಒಳಪಟ್ಟಿವೆ. ನೈಸರ್ಗಿಕ ತೊರೆಗಳಲ್ಲಿ ನಗರದ ಮಳೆಯ ನೀರು ಹರಿಯಬೇಕಾಗಿದ್ದು ನಗರದ ಚರಂಡಿ ಮತ್ತು ಕೈಗಾರಿಕಾ ತ್ಯಾಜ್ಯ ನೀರು ವರ್ಷಪೂರ್ತ ಹರಿಯುತ್ತಿರುವುದರಿಂದ ಅಳಿದುಳಿದ ಕೆರೆಗಳು ಕಲುಷಿತ ನೀರಿನ ತಾಣವಾಗಿ ನಿಂತಿವೆ. ಬೆಂಗಳೂರು ವ್ಯಾಪ್ತಿಗೆ ಒಳಪಟ್ಟ 110 ಹಳ್ಳಿಪ್ರದೇಶಗಳಲ್ಲಿ ಕಾವೇರಿ ನೀರಿನ ಸರಬರಾಜು ವ್ಯವಸ್ಥೆ ಅಪೂರ್ಣ

ಹಾಗೂ ಅಸಮರ್ಪಕವಾಗಿದ್ದು, ಅಂತರ್ಜಲದ ಮೇಲೆ ಅವಲಂಬಿತವಾಗಿ ಸುಮಾರು 3,60,000 ಕೊಳವೆ ಬಾವಿಗಳು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಇವೆ. ಇದರ ಪರಿಣಾಮವಾಗಿ ವಾರ್ಷಿಕ ಅಂತರ್ಜಲದ ಪೂರಣದ ನಾಲ್ಕುಪಟ್ಟು ವಿಸರ್ಜಿತ (exploitation) ಕ್ರಿಯೆಗೆ ಒಳಗಾಗಿ, ಅನೇಕ ಕೊಳವೆ ಬಾವಿಗಳಲ್ಲಿ 280–300 ಮೀಟರ್ ಆಳದಲ್ಲೂ ನೀರು ಸಿಗದ ಪರಿಸ್ಥಿತಿ ಈಗ ಮೂಡಿಬಂದಿದೆ. ಬೆಂಗಳೂರಿನ ಪೂರ್ವ ಭಾಗವು, ಪೊನ್ನಯಾರ್ ನದಿಯ ಜಲಾನಯನದ ಒಂದು ಭಾಗವಾಗಿದ್ದು ಕೊಳವೆ ಬಾವಿಗಳನ್ನು 400–450 ಮೀಟರ್ ಆಳದವರೆವಿಗೆ ಕೊರೆದರೂ ನೀರು ಸಿಕ್ಕದೆ, ಜನ, ಅದರಲ್ಲೂ ಅಪಾರ್ಟ್‌ಮೆಂಟ್ ವಾಸಿಗಳು, ಮತ್ತೆಲ್ಲಿಂದಲೋ ಒಂದು ಟ್ಯಾಂಕರ್ ನೀರಿಗೆ ಸುಮಾರು ರೂ. 1500ರಿಂದ 2000ದವರೆಗೆ ಕೊಟ್ಟು ದಿನ ನೂಕುವ ಪರಿಸ್ಥಿತಿಯಲ್ಲಿದ್ದಾರೆ. ಈ ನೀರಿನ ಗುಣಮಟ್ಟ ಪರೀಕ್ಷೆ ಇಲ್ಲದೆ, ಅನೇಕ ವತಿಯಿಂದ ಮಾಲಿನ್ಯ ಹೊಂದಿದ ನೀರು ಸರಬರಾಜು ಆಗುತ್ತಿರುವುದು ತಿಳಿದುಬಂದಿದೆ.

ಉಸಿರಾಟಕ್ಕೂ ಸ್ಥಳವಿಲ್ಲದಂತೆ ಕಟ್ಟಡಗಳ ನಿರ್ಮಾಣ ಆಗಿರುವುದರಿಂದ, ಬೆಂಗಳೂರು ನಗರ "ಕಾಂಕ್ರೀಟ್ ಕಾಡು" ಎಂದು ಕುಖ್ಯಾತಿಯಾಗಿದೆ. ಹಳ್ಳ–ತೊರೆಗಳ, ಕೆರೆ–ಕುಂಟೆಗಳ ಒತ್ತುವರಿಯಿಂದಾಗಿ ಮಳೆ ಭೂಮಿಯೊಳಗೆ ಸೋಸುವುದಕ್ಕೆ ಅವಕಾಶವಿಲ್ಲದೆ, ಜಲಸ್ತರ ಸಧ್ಯದಲ್ಲಿಯೇ ಶುಷ್ಕವಾದಲ್ಲಿ ಆಶ್ಚರ್ಯವೇನಲ್ಲ. ಅಲ್ಪಸ್ವಲ್ಪ ಲಭ್ಯವಿರುವ ಅಂತರ್ಜಲವು ಮಾನವ ನಿರ್ಮಿತ ಕ್ರಿಯೆಗಳಿಂದಾಗಿ ಕಲುಷಿತಗೊಂಡಿದ್ದು ಕುಡಿಯುವ ನೀರಿನ ಬಳಕೆಗೆ ಯೋಗ್ಯವಾಗಿರುವುದಿಲ್ಲ.

ಜಲಮಾಲಿನ್ಯ, ಭೂವೈಜ್ಞಾನಿಕ, ಪ್ರಾಕೃತಿಕ ಕಾರಣದಿಂದ ಆಗಿದ್ದಲ್ಲಿ, ಆಧುನಿಕ ತಾಂತ್ರಿಕತೆಯಿಂದ ಮಾಲಿನ್ಯದ ಕಾರಣವನ್ನು ಅಧ್ಯಯನಮಾಡಿ ಬಳಕೆಗೆ ಯೋಗ್ಯ ಮಾಡಬಹುದು. ಆದರೆ ಮಾನವ ನಿರ್ಮಿತ ಜಲಮಾಲಿನ್ಯಕ್ಕೆ ಉತ್ತರ ಎಂತು? ಪರಿಹಾರ ಎಂತು? ಬೆಂಗಳೂರು ನಗರದ ಪರಿಸ್ಥಿತಿಯನ್ನು ಮತ್ತೊಮ್ಮೆ ಪರಿಶೀಲಿಸಿ ವಿಮರ್ಶಿಸಿದಲ್ಲಿ, ಪ್ರಾಕೃತಿಕ ಹಳ್ಳ–ತೊರೆಗಳಲ್ಲಿ ನಗರದ ಚರಂಡಿಯ ನೀರನ್ನು ಹಾಗೂ ಕೈಗಾರಿಕಾ ತ್ಯಾಜ್ಯ ನೀರನ್ನು ವರ್ಷಪೂರ ಹರಿಯ ಬಿಟ್ಟು, 400–500 ವರ್ಷಗಳ ಹಿಂದೆಯೇ, ಯಾವ ಇಂಜಿನೀಯರಿಂಗ್ ಜ್ಞಾನದ ನೆರವಿಲ್ಲದೆ, ಅಂದಿನ ದಿನದ ಒಂದು ಸಾಮಾನ್ಯ ವೈಜ್ಞಾನಿಕ ಪ್ರಜ್ಞೆಯಿಂದ ಒಂದರಿಂದ ಮತ್ತೊಂದಕ್ಕೆ ನೀರು ಹರಿಯುವಂತೆ ಯೋಜಿಸಿದ್ದರು. ವ್ಯವಸಾಯಕ್ಕಾಗಿ ಹಾಗೂ ಜನರ ನೀರಿನ ದಾಹ ತೀರಿಕೆಗಾಗಿ ನಿರ್ಮಿಸಲಾದ ಕೆರೆ ಕಟ್ಟೆಗಳನ್ನು ನಮ್ಮ ಈಗಿನ ನಾಗರಿಕ ಸಮಾಜ ಕಳೆದ ಸುಮಾರು 40 ವರ್ಷಗಳಲ್ಲಿ ಹಾಳುಗೆಡವಿದೆ. ನಗರೀಕರಣದ ನೆವ ಒಡ್ಡಿ, ಹಳ್ಳ–ತೊರೆಗಳ ಹಾಗೂ ಮಳೆ ನೀರಿನ ಸಂಗ್ರಹಣಾ ತಾಣವಾದ ಕೆರೆ–ಕಟ್ಟೆಗಳನ್ನು ಒತ್ತುವರಿ ಮಾಡಿ,

ಚರಂಡಿ ನೀರಿನ ಹಾಗೂ ಕಲುಷಿತ ತ್ಯಾಜ್ಯ ವಸ್ತುಗಳ ಸಂಗ್ರಾಹಕ ನೆಲೆಯನ್ನಾಗಿ ಪರಿವರ್ತಿಸಿ, ಜೈವಿಕ ಮಾಲಿನ್ಯದ ಬೀಡಾಗಿ, ತಗ್ಗು ಪ್ರದೇಶಗಳಲ್ಲಿ ಚರಂಡಿಯ ನೀರುಮಿಶ್ರಿತ ಮಳೆ ಮುಂದೆ ಹೋಗಲು ಸ್ಥಳವಿಲ್ಲದೇ ಪ್ರವಾಹಪೀಡಿತ ಪ್ರದೇಶವನ್ನಾಗಿ ಬದಲಿಸಿರುವುದು ಆತಂಕದ ವಿಷಯ, ಶುಷ್ಕ ಪರಿಸ್ಥಿತಿಯನ್ನು ಮುಟ್ಟಲಿರುವ ಅಂತರ್ಜಲ ಜಲಧರವನ್ನು ಮಾಲಿನ್ಯಗೊಳಿಸಿರುವ ಹಾಗೂ ಮಾಲಿನ್ಯಗೊಳಿಸಲಿರುವ ಸ್ಥಿತಿಗತಿ ಬಹು ವಿಷಾದಕರ. ಪ್ರತಿಯೊಬ್ಬ ಪ್ರಜೆಯ ಹಾಗೂ ಆಡಳಿತ ವರ್ಗದವರ ಜವಾಬ್ದಾರಿಯುತ ಹಾಗೂ ಪಾರದರ್ಶಕ ಕಾರ್ಯ ನಿರ್ವಹಣೆ ಇದ್ದಲ್ಲಿ ಮಾತ್ರ ಪರಿಹಾರ ದೊರೆತೀತು.

# ಓದು ಪಠ್ಯ :

# ಆಹಾರದ ಅವಾಸ್ತವ ಕಲ್ಪನೆಗಳು

**–ವಸುಂಧರಾ ಭೂಪತಿ**

ವೈದ್ಯಕೀಯ ಸಲಹೆಗಳ ಪ್ರಕಾರ, ನೀವು ವರ್ಷಗಳ ಹಿಂದೆಯೇ ಮೊಟ್ಟೆಯನ್ನು ಸೇವಿಸುವುದನ್ನು ನಿಲ್ಲಿಸಿದ್ದಲ್ಲಿ ಆ ಅವಾಸ್ತವ ಸಲಹೆಯನ್ನು ಮರೆಯಲು ಇಲ್ಲೊಂದು ಅವಕಾಶವನ್ನು ಕೊಡುತ್ತಿದ್ದೇವೆ. ಬ್ರೊಕ್ಲೀ ಹಸಿರು ತರಕಾರಿಯನ್ನು ಬೇಯಿಸುವುದರಿಂದ ಅದರಲ್ಲಿರುವ ಪೌಷ್ಠಿಕಾಂಶಗಳೆಲ್ಲವೂ ಖಾಲಿಯಾಗಿ ಬಿಡುತ್ತವೆ ಎನ್ನುವ ಮಾತನ್ನು ನಂಬಿ ನೀವು ಕಷ್ಟಪಟ್ಟು ಹಸಿ ಬ್ರೋಕ್ಲಿ ತಿನ್ನುತ್ತಿದ್ದಲ್ಲಿ ತಕ್ಷಣವೇ ನಿಮ್ಮ ಸ್ಟೌವ್ ಆನ್ ಮಾಡಿ ಬೇಯಿಸಲು ಮಿಥ್ಯೆಗಳನ್ನು ವಿವರಿಸಿ ವಾಸ್ತವವೇನೆನ್ನುವುದನ್ನು ತಿಳಿಸಲಿದ್ದೇವೆ.

ವರುಷಗಳಿಂದ ವೈದ್ಯಕೀಯ ಸಲಹೆಗಳು ಬದಲಾಗುತ್ತವೇ ಇವೆ. ಕೆಲವೊಂದು ಕಾಲಘಟ್ಟದಲ್ಲಿ ಹೇಳಿದ ಸತ್ಯಗಳು ನಂತರದ ದಿನಗಳಲ್ಲಿ ತಪ್ಪೆಂದು ತಿಳಿದು ಹೊಸ ಅಧ್ಯಯನಗಳು ಹೊಸ ವಿಚಾರವನ್ನು ನಮ್ಮ ಮುಂದೆ ಇಟ್ಟಿವೆ. ನಮ್ಮಲ್ಲಿ ಕೆಲವರು ಕಾಫಿಯಿಂದ ಕ್ಯಾನ್ಸರ್ ಬರುತ್ತದೆ ಎನ್ನುವ ಕಾರಣದಿಂದ ಅದನ್ನು ಕುಡಿಯುವುದನ್ನೇ ಬಿಟ್ಟಿದ್ದಾರೆ. ಹಾಗೆಯೇ ನೆಲಗಡಲೆ ತಿನ್ನುವುದನ್ನೂ ಬಿಟ್ಟಿದ್ದಾರೆ. ಹೀಗಾಗಿ ಹಲವರ ಅಡುಗೆ ಮನೆಯಲ್ಲಿ ನಿರಾಶೆಗಳು ಆವರಿಸಿರುವುದು ಸುಳ್ಳಲ್ಲ.

ನಿರ್ದಿಷ್ಟ ಆಹಾರಗಳಿಗೆ ಸಂಬಂಧಿಸಿ ವರುಷಗಳಿಂದ ಹಲವಾರು ತಪ್ಪು ಕಲ್ಪನೆಗಳು ಹುಟ್ಟಿಕೊಂಡಿರುವುದು ಸುಳ್ಳೇನಲ್ಲ. ಭಯಾನಕ ಮತ್ತು ಅಪಾಯಕಾರಿ ರೋಗಗಳು ಹರಡುತ್ತಿರುವ ಸಮಯದಲ್ಲಿ ಇಂತಹ ಭಯ ತಪ್ಪು ಎಂದು ಹೇಳುವ ಹಾಗೂ ಇಲ್ಲ. ವಿಷಯವನ್ನು ಇನ್ನಷ್ಟು ಕೆಡಿಸಿದ್ದೆಂದರೆ ಬೀನ್ಸ್‌ನಂತಹ ಆಹಾರದ ಮೇಲೂ ಪ್ರಶ್ನೆಗಳು ಎದ್ದಿವೆ ಎನ್ನುವುದು. ತಪ್ಪು ಮತ್ತು ಸುಳ್ಳು ಕಲ್ಪನೆಗಳು ಮತ್ತು ಹೇಳಿಕೆಗಳು ಕೆಲವು ಪ್ರಿಯ ಆಹಾರವನ್ನು ನಮ್ಮ ಪಥ್ಯದಿಂದ ಹೊರಗಿಟ್ಟಿರುವುದು ಸುಳ್ಳಲ್ಲ. ಆದರೆ ಅದರಲ್ಲಿ ಕೆಲವು ನಿಮ್ಮ ಆರೋಗ್ಯದಲ್ಲಿ ಉತ್ತಮ ಪರಿಣಾಮವನ್ನೂ ಬೀರಿರಬಹುದು. ಆದರೆ ವ್ಯಾಪಕ ಅಧ್ಯಯನಗಳು ಪರಿಸ್ಥಿತಿಯನ್ನು ಬದಲಿಸಿವೆ. ಅಂತಹುದೇ ಒಂದು ಅಧ್ಯಯನವು ನಾಲ್ಕು ಕಪ್‌ಗಳಷ್ಟು ಕಾಫಿಯನ್ನು ನಿತ್ಯವೂ ಕುಡಿಯುವ ಮಹಿಳೆಯರು ಶೇ. 47ರಷ್ಟು ತಮ್ಮಲ್ಲಿ ಮಧುಮೇಹದ ಅಪಾಯವನ್ನು ಕಡಿಮೆ ಮಾಡುತ್ತಾರೆ ಎನ್ನುವುದನ್ನು ಪತ್ತೆ ಹಚ್ಚಿದೆ. ಇಲ್ಲಿ ನಾವು ಇಂತಹ ಕೆಲವು ಮಿಥ್ಯೆಗಳನ್ನು ಮತ್ತು ನೀವು ಈ ಹಿಂದೆ ಕೇಳಿರಬಹುದಾದ ಸಲಹೆಗಳನ್ನು ಸುಳ್ಳು ಮಾಡುವಂತಹ ವಿಚಾರಗಳನ್ನು ನೀಡಲಾಗಿದೆ.

**ಮೊಟ್ಟೆ ಆರೋಗ್ಯಕರವೇ? ಅನಾರೋಗ್ಯಕರವೇ?**

ಮೊಟ್ಟೆ ಆರೋಗ್ಯಕ್ಕೆ ಕೆಡುಕು ಉಂಟು ಮಾಡುತ್ತದೆ ಎನ್ನುವ ಒಂದು ನಂಬಿಕೆಯನ್ನು ವಿಜ್ಞಾನವು ಅದನ್ನು ಸುಳ್ಳೆಂದು ಸಾಬೀತು ಮಾಡಿದೆ. ವರ್ಷಗಳಿಂದ ವೈದ್ಯರು ಮೊಟ್ಟೆ ಅನಾರೋಗ್ಯಕರ ಎನ್ನುವ ವಿಚಾರವನ್ನು ಹೇಳುತ್ತಲೇ ಬಂದಿದ್ದರು. ಮೊಟ್ಟೆ ಕೊಲೆಸ್ಟ್ರಾಲ್‌ನ ಅತೀ ದೊಡ್ಡ ಮೂಲವಾಗಿರುವ ಕಾರಣದಿಂದ ವೈದ್ಯರ ಸಲಹೆಯ ಕುರಿತು ಅಚ್ಚರಿಪಡಬೇಕಾಗಿಲ್ಲ. ಕೊಲೆಸ್ಟ್ರಾಲ್ ರಕ್ತನಾಳಗಲ್ಲಿ ಕುಳಿತು ಸಮಸ್ಯೆಯೊಡ್ಡಿದಲ್ಲಿ ಹೃದಯ ರೋಗಗಳು ಮತ್ತು ಹೃದಯಾಘಾತದ ಸಮಸ್ಯೆ ಬರುವುದು ಸಹಜವೇ ಅಲ್ಲವೆ?

ಆದರೆ ಈ ವಾದ ಸಂಪೂರ್ಣ ತಪ್ಪು. ಹೊಸ ಅಧ್ಯಯನಗಳು ಈ ಸಿದ್ಧಾಂತದಲ್ಲಿ ಬಹಳಷ್ಟು ಲೋಪಗಳಿರುವುದನ್ನು ಪತ್ತೆಹಚ್ಚಿವೆ. ಉದಾಹರಣೆಗೆ ಅಮೆರಿಕದ ಅಧ್ಯಯನವೊಂದು ಅತೀ ರಕ್ತದ ಕೊಲೆಸ್ಟ್ರಾಲ್ ಹೃದಯಾಘಾತಕ್ಕೆ ಕಾರಣವಾಗುವುದನ್ನು ತಿಳಿಸಿತ್ತು. ಆದರೆ ಮೊಟ್ಟೆಗಳನ್ನು ತಿನ್ನುವುದು ಮತ್ತು ಹೃದಯದ ನಡುವೆ ಯಾವುದೇ ಸಂಬಂಧವನ್ನೂ ಅದು ತಿಳಿದುಕೊಳ್ಳಲಿಲ್ಲ. ಮತ್ತೊಂದು ಅಧ್ಯಯನವು 1,70,000 ಪುರುಷ ಮತ್ತು ಮಹಿಳೆಯರ ಮೇಲೆ ಸಮೀಕ್ಷೆ ನಡೆಸಿದರೂ ನಿತ್ಯ ಮೊಟ್ಟೆ ತಿನ್ನುವ ವ್ಯಕ್ತಿಗಳನ್ನು ಮತ್ತು ವಾರಕ್ಕೆ ಒಂದೆರಡು ಮತ್ತು ಅದಕ್ಕಿಂತ ಕಡಿಮೆ ಮೊಟ್ಟೆ ತಿಂದವರಿಗೆ ಹೋಲಿಸಿ ನೋಡಿ ಹೃದಯಾಘಾತದ ಸಮಸ್ಯೆ ಬಂದಿರುವುದನ್ನು ತೋರಿಸಲು ವಿಫಲವಾಗಿದೆ.

ಇದಕ್ಕೆ ಕಾರಣವೇನೆಂದು ಪರಿಶೀಲಿಸಿದಾಗ ತಿಳಿದುಬಂದ ವಿಚಾರವೆಂದರೆ ನಿಮ್ಮ ಆರೋಗ್ಯಕ್ಕೆ ಆಹಾರದಿಂದ ಕೇವಲ ಶೇ. 25ರಷ್ಟು ಕೊಲೆಸ್ಟ್ರಾಲ್ ಮಾತ್ ಹೋಗುತ್ತದೆ. ಉಳಿದ ಶೇ.75ರಷ್ಟು ಕೊಲೆಸ್ಟ್ರಾಲ್‌ಅನ್ನು ಪಿತ್ತಜನಕಾಂಗ ಸೃಷ್ಟಿಸುತ್ತದೆ. ಕೊಬ್ಬು ತುಂಬಿದ ಹಂದಿಮಾಂಸ, ವಡೆ ಹಾಗೂ ಇತರ ಸ್ಯಾಚುರೇಟೆಡ್ ಕೊಬ್ಬಿನ ಮೂಲಗಳನ್ನು ತಿಂದಾಗ ನಿಮ್ಮ ಪಿತ್ತಜನಕಾಂಗ ಈ ಕೊಲೆಸ್ಟ್ರಾಲ್‌ನ್ನು ಸೃಷ್ಟಿಸುತ್ತದೆ. ಆದರೆ ಮೊಟ್ಟೆಯಲ್ಲಿ ಸ್ಯಾಚುರೇಟೆಡ್ ಕೊಬ್ಬು ಕಡಿಮೆ ಇರುತ್ತದೆ. ಮೊಟ್ಟೆಯಲ್ಲಿ ಬಹಳ ಪೌಷ್ಠಿಕಾಂಶಗಳು ಇರುವ ಕಾರಣದಿಂದ ಅದರಿಂದ ಸಿಗುವ ಕೊಲೆಸ್ಟ್ರಾಲ್ ನಷ್ಟದ ಪ್ರಮಾಣವನ್ನು ಕರಗಿಸಿಬಿಡುತ್ತದೆ. ಫೋಲೇಟ್ ಮತ್ತು ಇತರ 'ಬಿ' ವಿಟಮಿನ್‌ಗಳು ಮತ್ತು ಮಿನರಲ್‌ಗಳು ಮೊಟ್ಟೆಯಲ್ಲಿ ಭರಪೂರ ತುಂಬಿಕೊಂಡಿರುತ್ತವೆ. ಅಲ್ಲದೆ ಒಮೆಗಾ: ಫ್ಯಾಟಿ ಆಸಿಡ್‌ಗಳು ಹೆಚ್ಚಿರುವ ಮೊಟ್ಟೆಗಳನ್ನೇ ನೀವು ಆರಿಸಿ ತಿನ್ನಬಹುದು.

ಮೊಟ್ಟೆ ಸಮತೋಲಿತ ಡಯಟ್‌ನಲ್ಲಿ ಸೇರಿರುತ್ತದೆ. ದಿನಕ್ಕೆ ಎರಡು ಮೊಟ್ಟೆಗಳನ್ನು ಸೇವಿಸಿದರೂ ಸಹ ನಿಮ್ಮ ದೇಹಕ್ಕೆ ಹೆಚ್ಚೇನೂ ಕೊಲೆಸ್ಟ್ರಾಲ್ ಹೋಗುವುದಿಲ್ಲ. ಪ್ರತಿ ಮೊಟ್ಟೆಯಲ್ಲೂ 200 ಗ್ರಾಂ ಕೊಲೆಸ್ಟ್ರಾಲ್ ಇರುತ್ತದೆ ಎನ್ನುವುದನ್ನು ತಿಳಿದುಕೊಳ್ಳಿ.

ಹೃದಯಸಂಸ್ಥೆಯ ಪ್ರಕಾರ, ದಿನಕ್ಕೆ 300 ಗ್ರಾಂಗಿಂತ ಹೆಚ್ಚು ಕೊಲೆಸ್ಟಿರಾಲ್ ಸೇವಿಸಬಾರದು. ಹೀಗಾಗಿ ಮಾಂಸದ ಬದಲಾಗಿ ನೀವು ಆಮ್ಲೆಟ್ ಮಾಡಿ ತಿನ್ನಬಹುದು.

**ಕಾಫಿಯಿಂದ ಕ್ಯಾನ್ಸರ್ ಬರುತ್ತದೆಯೇ?**

ನಾವು ಉಪಾಹಾರದ ವಿಚಾರ ಮಾತನಾಡುವಾಗ ಕಾಫಿಯ ಬಗ್ಗೆ ನಾವು ಸಾಕಷ್ಟು ತಪ್ಪು ತಿಳಿವಳಿಕೆ ಹೊಂದಿದ್ದೇವೆ ಎನ್ನುವುದನ್ನು ಹೇಳಲೇಬೇಕು. ಕಾಫಿಯ ಕುರಿತು ಸಂದೇಹ ಯಾವಾಗ ಬರಲು ಆರಂಭವಾಗಿದೆ ಎಂದು ಹೇಳುವುದು ಕಷ್ಟವಾದರೂ ಸಾಮಾನ್ಯವಾಗಿ ಕಾಫಿಯು ಕ್ಯಾನ್ಸರ್‌ಗೆ ಕಾರಣವಾಗುತ್ತದೆ ಎಂದು ಹೇಳುವುದನ್ನು ಕೇಳಿದ್ದೇವೆ.

1970ರ ಕಾಲಘಟ್ಟದಲ್ಲಿ ಕೆಫೀನ್‌ನಿಂದ ಸ್ತನದ ಅಂಗಾಂಶಗಳಲ್ಲಿ ಗಡ್ಡೆ ಮೂಡುತ್ತದೆ ಎಂದು ಅಧ್ಯಯನಕಾರರು ಹೇಳಿದ್ದರು. ಮಹಿಳೆಯರಿಗೆ ಸಾಮಾನ್ಯವಾಗಿ ಗಡ್ಡೆ ಕಂಡುಬರುತ್ತಿದ್ದ ಮಂದಿಗೆ ಸ್ತನ ಕ್ಯಾನ್ಸರ್ ಬರುತ್ತಿರುವುದು ಆ ಸಂಶೋಧನೆಗೆ ಪೂರಕವಾಯಿತು. 1981ರ ಅಧ್ಯಯನವೊಂದು ಕಾಫಿ ಕುಡಿಯುವವರಲ್ಲಿ ಮೇದೋಜೀರಕ ಗ್ರಂಥಿ ಕ್ಯಾನ್ಸರ್ ಕಾಣಿಸಿಕೊಳ್ಳುವುದು ಸಾಮಾನ್ಯವೆಂದು ಹೇಳಿತ್ತು. ಆದರೆ ನಂತರದ ಸಂದರ್ಭದಲ್ಲಿ ಕಾಫಿ ಮತ್ತು ಕ್ಯಾನ್ಸರ್ ನಡುವೆ ಸಂಬಂಧ ಹುಡುಕಿದ ಸಂಶೋಧಕರಿಗೆ ಯಾವುದೇ ಸಾಕ್ಷಿ ಸಿಕ್ಕಿರಲಿಲ್ಲ. ಸಮೀಕ್ಷೆಗೆ ಹೆಚ್ಚು ಜನರನ್ನು ಬಳಸಿಕೊಂಡು ಅತ್ಯಾಧುನಿಕ ತಂತ್ರಜ್ಞಾನ ಬಳಸಿದಾಗ ಕಾಫಿಯಿಂದ ಕ್ಯಾನ್ಸರ್ ಬರುವುದಕ್ಕೆ ಯಾವುದೇ ಪುರಾವೆ ಸಿಗಲಿಲ್ಲ. ಇತರ ಯಾವುದಾದರೂ ಕ್ಯಾನ್ಸರ್ ಕಾಫಿಯಿಂದ ಬರುತ್ತದೆಯೇ ಎಂದು ತಿಳಿಯಲು ಪ್ರಯತ್ನಿಸಿದ ಸಂಶೋಧಕರಿಗೂ ಯಾವುದೇ ಸಾಕ್ಷ್ಯ ಸಿಗಲಿಲ್ಲ. 1990ರಿಂದ 2003 ಒಳಗೆ ನಡೆದ 17 ಅಧ್ಯಯನಗಳಲ್ಲಿ ನಿತ್ಯವೂ ಕಾಫಿ ಕುಡಿಯುತ್ತಿದ್ದ ಜನರಲ್ಲಿ ದೊಡ್ಡ ಕರುಳು ಕ್ಯಾನ್ಸರ್ ಕಡಿಮೆಯಾಗಿರುವುದು ಕಂಡುಬಂದಿದೆ.

ಅಲ್ಲದೆ ಕಾಫಿ ಕುಡಿಯುವುದರಿಂದ ಇತರ ಕೆಲವು ಅನಾರೋಗ್ಯ ಸ್ಥಿತಿಯಿಂದಲೂ ಮುಕ್ತಿ ಸಿಗುತ್ತದೆ ಎನ್ನುವುದನ್ನು ಅಧ್ಯಯನಗಳು ಹೇಳಿವೆ. ಮೂಳೆರೋಗಗಳು ಮತ್ತು ಟೈಪ್ 2 ಮಧುಮೇಹಗಳನ್ನು ಕಡಿಮೆ ಮಾಡಿಕೊಳ್ಳಲು ದಿನಕ್ಕೆ ಆರು ಕಪ್‌ಗಳಿಗಿಂತಲೂ ಅಧಿಕ ಕಾಫಿ ಕುಡಿಯಬೇಕು. ಆದರೆ ಕೆಲವರು ಅತಿಯಾದ ಕಾಫಿ ಕುಡಿಯುವುದರಿಂದ ರಕ್ತದೊತ್ತಡ ಅಧಿಕವಾಗುತ್ತದೆ ಎಂದು ಭಯಪಡುತ್ತಾರೆ. ಕೆಫಿನ್‌ನಿಂದ ಒತ್ತಡ ಅಧಿಕವಾದರೂ 1,565,00 ಮಹಿಳೆಯರ ಮೇಲೆ ನಡೆಸಿದ ಅಧ್ಯಯನದಲ್ಲಿ ಕಾಫಿ ಕುಡಿಯುವವರ ರಕ್ತದ ಒತ್ತಡ ಅಧಿಕವಾಗಿರುವ ಯಾವುದೇ ಸೂಚನೆ ಕಂಡು ಬಂದಿಲ್ಲ.

## ಹೃದಯವನ್ನು ರಕ್ಷಿಸುವ ಏಕೈಕ ಆಲ್ಕೋಹಾಲಿಕ್ ಪೇಯ ರೆಡ್ ವೈನ್

ಸಾಮಾನ್ಯವಾಗಿ ಹೃದಯವನ್ನು ರಕ್ತಿಸುವ ಏಕೈಕ ಆಲ್ಕೋಹಾಲಿಕ್ ಪೇಯ ರೆಡ್ ವೈನ್ ಎನ್ನುವ ನಂಬಿಕೆ ಇದೆ. ಇದನ್ನು ಫ್ರೆಂಚ್ ಪ್ಯಾರಡಾಕ್ಸ್ ಎಂದು ಕರೆಯಲಾಗುತ್ತದೆ.

ಫ್ರೆಂಚ್ ಮಹಿಳೆ ಮತ್ತು ಪುರುಷರಿಗೆ ಅನಾರೋಗ್ಯಕರ ಜೀವನ ಶೈಲಿಯ ಹೊರತಾಗಿಯೂ ಹೃದಯ ರೋಗ ಕಡಿಮೆಯಾಗಿರುತ್ತದೆ. ಉದಾಹರಣೆಗೆ ಅವರು ಜಗತ್ತಿನ ಇತರೆಲ್ಲರಿಗಿಂತ ಅತ್ಯಧಿಕ ಮಟ್ಟದಲ್ಲಿ ಸಿಗರೇಟು ಸೇವಿಸುತ್ತಾರೆ. ಹೀಗಾಗಿ ಕೆಲವು ವಿಜ್ಞಾನಿಗಳು ಅವರು ಹೆಚ್ಚಾಗಿ ವೈನ್ ಸೇವಿಸುವುದರಿಂದ ಮತ್ತು ರೆಡ್ ವೈನ್ ಸೇವಿಸುವುದರಿಂದ ಹೃದಯ ರೋಗದಿಂದ ದೂರವಿರುತ್ತಾರೆ ಎಂದುಕೊಂಡಿದ್ದರು. ರೆಡ್‌ವೈನ್‌ನಲ್ಲಿ ಉರಿಯೂತವನ್ನು ಕಡಿಮೆ ಮಾಡಬಲ್ಲ ಅಂಟಿ ಆಕ್ಸಿಡಂಟ್ ಆಗಿರುವ ರೆಸ್ವರಟ್ರಾಲ್ ಎನ್ನುವ ಫೈಟೋಕೆಮಿಕಲ್‌ಗಳು ಅತ್ಯಧಿಕ ಪ್ರಮಾಣದಲ್ಲಿ ಇರುವ ಕಾರಣದಿಂದಾಗಿ ಅವರ ನಂಬಿಕೆಗೆ ಸಾಕ್ಷ್ಯಗಳೂ ಇದ್ದವು. ಅಲ್ಲದೆ ಇತ್ತೀಚೆಗಿನ ಅಧ್ಯಯನಗಳ ಪ್ರಕಾರ, ರೆಸ್ವೆರಟ್ರಾಲ್ ಮುಪ್ಪಾಗುವಿಕೆಯನ್ನು ತಡೆಯುವ ಮಟ್ಟಿಗೂ ಬಹಳ ಪರಿಣಾಮಕಾರಿಯಾಗಿದೆ.

ಆದರೆ ಅಧ್ಯಯನದ ಪ್ರಕಾರ ತಿಳಿದುಬಂದಿರುವುದೇನೆಂದರೆ ರೆಡ್‌ವೈನ್, ವೈಟ್‌ವೈನ್, ಬೀರ್ ಮತ್ತು ಮಧ್ಯಗಳಲ್ಲಿರುವ ಆಲ್ಕೋಹಾಲ್ ಹೃದಯ ಸಂಬಂಧಿತ ರೋಗಗಳಿಂದ ಮುಕ್ತಿ ನೀಡುತ್ತದೆ. ಅಧ್ಯಯನಗಳ ಪ್ರಕಾರ ಯಾವುದೇ ರೀತಿಯ ಆಲ್ಕೋಹಾಲನ್ನು ಅಲ್ಪಪ್ರಮಾಣದಲ್ಲಿ ಊಟದ ಜೊತೆಗೆ ಸೇವಿಸಿದರೂ ಜನರಿಗೆ ಹೃದಯಕ್ಕೆ ಸಂಬಂಧಿಸಿದ ಲಾಭವಾಗುತ್ತದೆ. ಫ್ರಾನ್ಸ್‌ನಲ್ಲಿ ಹೀಗೆ ಅಲ್ಪಪ್ರಮಾಣದಲ್ಲಿ ಆಲ್ಕೋಹಾಲನ್ನು ಊಟದ ಜೊತೆಗೆ ಸೇವಿಸುವ ಅಭ್ಯಾಸವೇ ಅಲ್ಲಿನ ಆರೋಗ್ಯದ ಗುಟ್ಟು ಎನ್ನಲಾಗಿದೆ.

ಹಾರ್ವರ್ಡ್ ಸ್ಕೂಲ್ ನಡೆಸಿರುವ ಸಮೀಕ್ಷೆಯೊಂದರಲ್ಲಿ 38,000 ಮಂದಿಯ ಪಾನೀಯ ಸೇವನೆಯ ಅಭ್ಯಾಸದ ಕುರಿತು ಪ್ರಶ್ನಿಸಿದೆ. ನಂತರ ಅವರನ್ನು 12 ವರ್ಷಗಳ ನಂತರ ಪರೀಕ್ಷೆ ನಡೆಸಿದೆ. ದಿನಕ್ಕೆ ಒಂದು ಅಥವಾ ಎರಡು ಬಾರಿ ಆಲ್ಕೋಹಾಲ್ ಸೇವಿಸುತ್ತಿದ್ದ ಜನರು ಯಾವುದೇ ಆಲ್ಕೋಹಾಲ್ ಸೇವಿಸದೆ ಇದ್ದ ಜನರಿಗೆ ಹೋಲಿಸಿದಲ್ಲಿ ಶೇ.37ರಷ್ಟು ಕಡಿಮೆ ಹೃದಯರೋಗಕ್ಕೆ ತುತ್ತಾಗಿರುವುದು ಕಂಡುಬಂದಿದೆ.

ಆಲ್ಕೋಹಾಲನ್ನು ಹೇಗೆ ಸೇವಿಸಿದರೂ ಸಹ ಇದು ನಿಮ್ಮಲ್ಲಿ ಎಚ್‌ಡಿಎಲ್ ಅಂದರೆ ಉತ್ತಮ ಕೊಲೆಸ್ಟಿರಾಲ್‌ನ್ನು ಏರಿಸುತ್ತದೆ. ಹೀಗಾಗಿ ರಕ್ತ ಹೆಪ್ಪುಗಟ್ಟುವಿಕೆಯ ಅವಕಾಶ ಕಡಿಮೆ ಇರುತ್ತದೆ. ನೀವು ಆಲ್ಕೋಹಾಲಿಕ್ ಪಾನೀಯಗಳನ್ನು ಇಷ್ಟಪಡುತ್ತೀರೆಂದಾದಲ್ಲಿ ದಿನಕ್ಕೆ ಎರಡು ಡ್ರಿಂಕ್‌ಗಿಂತ ಅಧಿಕ ಸೇವಿಸಬಾರದು. ಇದರಿಂದ ನಿಮಗೆ ಉತ್ತಮ ಆರೋಗ್ಯಕರ ಜೀವನ ಸಿಗುತ್ತದೆ. ಆದರೆ ಈ ಶಿಫಾರಸ್ಸು ಗರ್ಭಿಣಿಸ್ತ್ರೀಯರು, ವೃದ್ಧರು

ಮತ್ತು 18 ವರ್ಷಕ್ಕಿಂತ ಕಡಿಮೆ ವಯಸ್ಸು ಇರುವವರಿಗೆ ಹೊಂದಿಕೊಳ್ಳುವುದಿಲ್ಲ. ಅಲ್ಲದೆ ಆಲ್ಕೋಹಾಲ್ ಅತಿಯಾಗಿ ಸೇವಿಸುವ ಇತಿಹಾಸ ಇರುವವರಿಗೂ ಇದು ಅನ್ವಯಿಸುವುದಿಲ್ಲ.

## ಕೊಬ್ಬುರಹಿತ ಮತ್ತು ಕಡಿಮೆ ಕೊಬ್ಬು ಆಹಾರಗಳು ಸಂಪೂರ್ಣ ಕೊಬ್ಬಿನ ಆಹಾರಕ್ಕಿಂತ ಉತ್ತಮ

ಡೈರಿ ಆಹಾರಗಳು ಮತ್ತು ಇತರ ಕೆಲವು ಆಹಾರಗಳಾದ ಮಾಂಸಗಳ ವಿಚಾರಕ್ಕೆ ಬಂದಲ್ಲಿ ನೀವು ಸರಳವಾದ ಕೆಲವು ನಿಯಮಗಳನ್ನು ಹಾಕಿಕೊಳ್ಳುತ್ತೀರಿ. ಕಡಿಮೆ ಕೊಬ್ಬು ಸೇವಿಸಿದಷ್ಟು ಒಳಿತು ಎನ್ನುವುದು. ಆದರೆ ಇತರ ಆಹಾರಗಳ ವಿಚಾರಕ್ಕೆ ಬಂದಲ್ಲಿ ಇದು ಅನ್ವಯವಾಗುವುದಿಲ್ಲ. ಉದಾಹರಣೆಗೆ ಸಲಾಡ್‌ಗೆ ಹಾಕುವ ಒಗ್ಗರಣೆಯನ್ನು ತೆಗೆದುಕೊಳ್ಳಿ. ನೀವು ತೂಕ ಕಳೆದುಕೊಳ್ಳಲು ಪ್ರಯತ್ನಿಸುತ್ತಿದ್ದೀರಿ ಎಂದಾದಲ್ಲಿ ತೈಲ ಆಧಾರಿತವಾಗಿ ಒಗ್ಗರಣೆಗಿಂತ ಕಡಿಮೆ ಕೊಬ್ಬಿನ ಅಥವಾ ಕೊಬ್ಬು ರಹಿತ ಪದಾರ್ಥಗಳನ್ನು ಬಳಸುವುದೇ ಉತ್ತಮ ಎಂದು ಅನಿಸಬಹುದು. ಆದರೆ ಇದರಿಂದ ನೀವು 420 ಕಿಲೋಜ್ಯೂಲ್‌ಗಳನ್ನು ಬಿಟ್ಟುಬಿಡುತ್ತೀರಿ.

ಆರಂಭದಲ್ಲಿ ಸಲಾಡ್‌ಗೆ ಸೇರಿಸುವ ಒಗ್ಗರಣೆಯಲ್ಲಿ ಆರೋಗ್ಯಕರ ಮೋನೋಸ್ಯಾಚುರೇಟೆಡ್ ಕೊಬ್ಬುಗಳಾದ ಆಲಿವ್ ತೈಲ ಅಥವಾ ಕನೋಲಾ ತೈಲ ಜನತೆಗೆ ಬೆಳ್ಳುಳ್ಳಿ ಅಥವಾ ಸೊಪ್ಪುಗಳನ್ನು ಸೇರಿಸುವುದರಿಂದ ಹೃದಯ ರೋಗಗಳು ಮತ್ತು ಇತರೆ ಸ್ಥಿತಿಗಳಿಂದ ರಕ್ಷಣೆ ಪಡೆದುಕೊಳ್ಳಬಹುದು. ತೈಲವನ್ನೇ ಬಳಸದೆ ಇರುವುದರಿಂದ ನೀವು ಪ್ರಮುಖ ರೋಗ ನಿರೋಧಕ ವೊಂದನ್ನು ಕಳೆದುಕೊಳ್ಳುತ್ತೀರಿ ಎಂದು ಇತ್ತೀಚಿಗಿನ ಅಧ್ಯಯನವೊಂದು ಹೇಳಿದೆ. ಸೊಪ್ಪುಗಳು ಮತ್ತು ಸಲಾಡ್‌ನಲ್ಲಿರುವ ಪೌಷ್ಠಿಕಾಂಶಗಳನ್ನು ಹೀರಿಕೊಳ್ಳಲು ನಿಮಗೆ ತೈಲವು ನೆರವಾಗುವುದೇ ಅದಕ್ಕೆ ಕಾರಣವಾಗಿದೆ.

ಅಧ್ಯಯನಕಾರರು ಪ್ರತಿನಿಧಿಗಳಿಗೆ ಮೂರು ವಿಭಿನ್ನ ರೀತಿಯ ಸಲಾಡ್‌ಗಳನ್ನು ತಿನ್ನಲು ಹೇಳಿ ಈ ಅಧ್ಯಯನ ಕೈಗೊಂಡಿದ್ದಾರೆ. ಪ್ರತಿಯೊಂದರಲ್ಲೂ ಕೋಸ್ ಲೆಟಿಸ್, ಎಳೆಯ ಪಾಲಕ ಸೊಪ್ಪುಗಳು, ಸಣ್ಣದಾಗಿ ಕತ್ತರಿಸಿದ ಕ್ಯಾರೆಟ್ ಮತ್ತು ಸಣ್ಣ ಸಣ್ಣ ಚೆರ್ರಿ ಟೊಮ್ಯಾಟೋಗಳನ್ನು ಹಾಕಲಾಗಿತ್ತು. ಮೊದಲ ಸಲಾಡನ್ನು ಇಟಾಲಿಯನ್ ಕೊಬ್ಬು ರಹಿತ ಪದಾರ್ಥಗಳಿಂದ ಒಗ್ಗರಣೆ ನೀಡಲಾಗಿತ್ತು. ಎರಡನೆಯದರಲ್ಲಿ ಕಡಿಮೆ ಕೊಬ್ಬಿನ ಒಗ್ಗರಣೆ ಮತ್ತು ಮೂರನೆಯದರಲ್ಲಿ ಸಾಂಪ್ರದಾಯಿಕ ಸಂಪೂರ್ಣ ಕೊಬ್ಬಿನ ಒಗ್ಗರಣೆ ನೀಡಲಾಗಿತ್ತು. ಇದನ್ನು ಸೇವಿಸಿದ ಪ್ರತಿನಿಧಿಗಳ ರಕ್ತದ ಮಾದರಿಗಳನ್ನು ಪಡೆದ ಅಧ್ಯಯನಕಾರರು ಅವರ ದೇಹದಲ್ಲಿದ್ದ ಬೀಟಾ ಕೆರೋಟಿನ್ ಮತ್ತು ಲಿಕೋಪಿನ್‌ಗಳು

ಸೇರಿ ಕೆರೋಟಿನಾಯ್ಡುಗಳನ್ನು ಪರಿಶೀಲಿಸಿದರು. ಕಡಿಮೆ ಕೊಬ್ಬಿನ ಸಲಾಡ್ ಸೇವಿಸಿದವರಲ್ಲಿ ಈ ಅಂಶಗಳು ಸ್ವಲ್ಪಮಟ್ಟಿಗೆ ಅಭಿವೃದ್ಧಿಯಾಗಿತ್ತು. ಆದರೆ ಪೂರ್ಣ ಕೊಬ್ಬಿನ ಆಹಾರ ಸೇವಿಸಿದ ಪ್ರತಿನಿಧಿಯ ದೇಹದಲ್ಲಿ ಅತೀ ಹೆಚ್ಚು ಕೆರೋಟಿನಾಯ್ಡುಗಳು ಇರುವುದು ಪತ್ತೆಯಾಗಿತ್ತು. ಹೀಗಾಗಿ ನಿಮ್ಮ ಹಸಿರು ತರಕಾರಿಗಳಿಂದ ತೈಲವನ್ನು ಹಿಂದಕ್ಕೆ ತೆಗೆದುಕೊಳ್ಳುವ ಅಗತ್ಯವಿಲ್ಲ. ಒಂದು ತಟ್ಟೆ ಸಲಾಡ್‌ನಲ್ಲಿ ಒಂದೆರಡು ಸ್ಪೂನ್ ತೈಲವನ್ನು ಬಳಸುವುದು ಒಳಿತು ಮತ್ತು ಅದನ್ನು ಪ್ರತೀ ಎಲೆಗೂ ತಾಗುವಂತೆ ಚೆನ್ನಾಗಿ ಮಿಶ್ರಣ ಮಾಡುವ ಅಗತ್ಯವಿದೆ.

## ಹಸಿ ತರಕಾರಿ ಮತ್ತು ಹಣ್ಣುಗಳ ಸೇವನೆ ಬೇಯಿಸಿದ ತರಕಾರಿಗಳಿಗಿಂತ ಉತ್ತಮವೇ?

ಆಹಾರವನ್ನು ಬೇಯಿಸಿದಲ್ಲಿ ಅವುಗಳಲ್ಲಿರುವ ಪೌಷ್ಟಿಕಾಂಶ ಕಡಿಮೆಯಾಗುತ್ತದೆ ಎನ್ನುವ ನಂಬಿಕೆಯೂ ಸುಳ್ಳು. ಹಸಿ ಆಹಾರವನ್ನು ಸೇವಿಸಬೇಕೆನ್ನುವವರು ಬೇಯಿಸಿದ ಆಹಾರದಿಂದ ಎನ್‌ಜೈಮ್‌ಗಳು ನಷ್ಟವಾಗುತ್ತದೆ ಎನ್ನುವ ವಾದವನ್ನು ಮುಂದಿಡುತ್ತಾರೆ. ಆದರೆ ಬಹಳಷ್ಟು ಎನ್‌ಜೈಮ್‌ಗಳು ನಿಮ್ಮ ಹೊಟ್ಟೆಯಲ್ಲಿರುವ ಆಸಿಡ್‌ಗಳಿಂದಲೇ ನಷ್ಟವಾಗುತ್ತವೆ ಮತ್ತು ಜೀರ್ಣ ಕ್ರಿಯೆಗೆ ಲಭ್ಯವಿರುವುದಿಲ್ಲ. ಅಡುಗೆಯು ಫೈಬರ್‌ಗಳನ್ನು ಮೃದುಗೊಳಿಸುವ ಮೂಲಕ ಮತ್ತು ಅಗಿಯಲು ಸರಳಗೊಳಿಸುವ ಮೂಲಕ ಪೌಷ್ಟಿಕಾಂಶಗಳನ್ನು ಹೆಚ್ಚು ಹೊರಹಾಕಿ ಜೀರ್ಣಕ್ರಿಯೆಯಲ್ಲಿ ನೆರವಾಗುತ್ತದೆ. ಅಲ್ಲದೆ ಬೇಯಿಸಿದ ತರಕಾರಿಗಿಂತ ಹಸಿ ಹಣ್ಣುಗಳನ್ನು ಸೇವಿಸುವುದು ಆರೋಗ್ಯಕರವಾಗಲು ಬಯಸುವ ನಿಮ್ಮ ಆಶಯಕ್ಕೆ ಏಟು ಬೀಳಬಹುದು.

ಜರ್ಮನ್ ಅಧ್ಯಯನಕಾರರು ಹಸಿ ತರಕಾರಿ ಪಥ್ಯವನ್ನು ಮಾಡಿದ 201 ಮಂದಿಯ ಮೇಲೆ ನಡೆಸಿದ ಅಧ್ಯಯನದಲ್ಲಿ ಒಟ್ಟು ಕೊಲೆಸ್ಟಿರಾಲ್ ಮತ್ತು ಟ್ರೈಗ್ಲಿಸರಾಯ್ಡುಗಳು ಇಳಿದಿರುವುದನ್ನು ಕಂಡುಕೊಂಡಿದ್ದಾರೆ. ಆದರೆ ಅವರಲ್ಲಿ ಎಚ್‌ಡಿಎಲ್ ಕೊಲೆಸ್ಟಿರಾಲ್ ಮಟ್ಟವೂ ಕಡಿಮೆಯಾಗಿರುವುದು ಕಂಡಿದೆ. ಈ ನಡುವೆ ಅವರಲ್ಲಿ ಹೋಮೋಸೈಟೀನ್ ಎನ್ನುವ ಹೃದಯ ರೋಗದ ಜೊತೆ ತಳಕು ಹಾಕಲಾಗುತ್ತಿರುವ ಅಮೈನೋ ಆಸಿಡ್ ಪ್ರಮಾಣ ಅಧಿಕವಾಗಿರುವುದು ಕಂಡು ಬಂದಿದೆ.

ಇತ್ತೀಚೆಗೆ ಆಹಾರ ತಜ್ಞರು ಬೇಯಿಸುವುದರಿಂದ ಹಣ್ಣುಗಳು ಮತ್ತು ತರಕಾರಿಗಳಲ್ಲಿ ಪ್ರಮುಖ ಸಂಯುಕ್ತಗಳು ಉದ್ದೀಪನಗೊಳ್ಳುತ್ತವೆ ಎಂದು ಕಂಡುಕೊಂಡಿದ್ದಾರೆ. ಉದಾಹರಣೆಗೆ ಟೊಮ್ಯಾಟೊ ಸಾಸ್‌ನಲ್ಲಿ ಐದರಿಂದ ಆರು ಪಟ್ಟು ಅಧಿಕ ಪ್ರಮಾಣದಲ್ಲಿ ಆಂಟಿ ಆಕ್ಸಿಡಂಟ್ ಲೈಕೋಪಿನ್ ಇರುತ್ತದೆ ಎನ್ನುವುದು

ತಿಳಿದುಬಂದಿದೆ. ಇದರಿಂದ ಪ್ರಾಸ್ಟೇಟ್ ಕ್ಯಾನ್ಸರ್ ರೋಗಕ್ಕೆ ಹೆಚ್ಚು ಟೊಮ್ಯಾಟೋ ಸಾಸ್ ಸೇವನೆ ಒಳಿತು.

ಬೇಯಿಸುವುದರಿಂದ ಕೆಲವು ಪೌಷ್ಠಿಕಾಂಶಗಳ ತಾಜಾತನ ಹೋಗುತ್ತದೆ. ಮುಖ್ಯವಾಗಿ ಕೆಲವು ವಿಟಮಿನ್‌ಗಳು ಬೆಂಕಿಗೆ ಸಂವೇದನೆಗೊಳ್ಳುತ್ತದೆ ಅಥವಾ ನೀರಿನಲ್ಲಿ ಕರಗುತ್ತವೆ. ಉದಾಹರಣೆಗೆ ತರಕಾರಿ ಮತ್ತು ಹಣ್ಣುಗಳನ್ನು ಬೇಯಿಸುವುದರಿಂದ ಅವುಗಳಲ್ಲಿನ ವಿಟಮಿನ್ ಬಿ6 ಮತ್ತು ವಿಟಮಿನ್ ಸಿ ಹಾಗೂ ಫೋಲೇಟ್ ಮಟ್ಟ ಕಡಿಮೆಯಾಗುತ್ತದೆ. ಈ ನಷ್ಟಗಳನ್ನು ಹೆಚ್ಚು ನೀರು ಬಳಸದೆ ಕಾಯಿಸುವುದು ಅಥವಾ ಮೈಕ್ರೋವೇವ್‌ನಲ್ಲಿ ಬೇಯಿಸುವ ಮೂಲಕ ಕಡಿಮೆ ಮಾಡಬಹುದು. ಜೋಳಿ ಮತ್ತು ಕ್ಯಾರೆಟ್‌ನಂತಹ ಕೆಲವು ತರಕಾರಿಗಳಲ್ಲಿ ಆಂಟಿ ಆಕ್ಸಿಡಂಟ್ ಪ್ರಮಾಣ ಬೇಯಿಸುವುದರಿಂದ ಹೆಚ್ಚಾಗುತ್ತದೆ. ಹೀಗಾಗಿ ನಿಮಗೆ ಹಸಿ ತರಕಾರಿ ಇಷ್ಟವಿದ್ದಲ್ಲಿ ಸೇವಿಸಿ ಆದರೆ ತಪ್ಪು ಕಾರಣಗಳನ್ನು ನೀಡಿ ಬೇಯಿಸುವುದನ್ನು ಬಿಡಬೇಡಿ.

## ಸಂಸ್ಕರಿತ ಆಹಾರದಲ್ಲಿ ತಾಜಾ ಆಹಾರಕ್ಕಿಂತ ಕಡಿಮೆ ಪೌಷ್ಠಿಕಾಂಶವಿರುತ್ತದೆ

ವಾಣಿಜ್ಯ ಮಾರುಕಟ್ಟೆಗಳಲ್ಲ ಸಿಗುವ ಬೇಯಿಸಿದ ಆಹಾರ, ಸಂಸ್ಕರಿತ ಸ್ನಾಕ್‌ಗಳಂತಹ ಆಹಾರ, ಮೈಕ್ರೋವೇವ್ ಪಾಪ್‌ಕಾರ್ನ್ ಮತ್ತು ಇತರ ಶೂನ್ಯ ಕಿಲೋಜೂಲ್ ಟ್ರೀಟ್‌ಗಳಲ್ಲಿ ಟ್ರಾನ್ಸ್ ಕೊಬ್ಬು ಅಧಿಕವಾಗಿ ಇರುತ್ತವೆ ಎನ್ನುವುದು ಸಂಶೋಧನೆಗಳು ಹೇಳಿರುವ ಕಾರಣದಿಂದ ಜನರಲ್ಲಿ ಸಂಸ್ಕರಿತ ಆಹಾರವನ್ನು ಸೇವಿಸುವ ಕುರಿತು ಭಯವಿದೆ. ಆದರೆ ಇದೇ ಮಾತು ಹಣ್ಣುಗಳು ಮತ್ತು ತರಕಾರಿಗಳಿಗೆ ಅನ್ವಯವಾಗುವುದಿಲ್ಲ. ತಾಜಾ ಆಹಾರದಲ್ಲಿ ಸಂಸ್ಕರಿತ ಆಹಾರಕ್ಕಿಂತ ಹೆಚ್ಚು ಪೌಷ್ಟಿಕಾಂಶವಿರುತ್ತದೆ ಎಂದು ಚಾಲ್ತಿಯಲ್ಲಿರುವ ಸಾಮಾನ್ಯ ನಂಬಿಕೆ ಸುಳ್ಳು. ನೀವು ಸೂಪರ್ ಮಾರುಕಟ್ಟೆಗಳಲ್ಲಿ ಕೊಂಡುಕೊಳ್ಳುವ ತಾಜಾ ಹಣ್ಣುಗಳು ಸಾಮಾನ್ಯವಾಗಿ ಗಿಡದಿಂದ ಹೊರಬಂದು ವಾರಗಟ್ಟಲೆ ಪ್ರಯಾಣಿಸಿ ಪ್ಯಾಕ್ ಮಾಡಿದ ಸ್ಥಿತಿಯಲ್ಲಿ ಮಾರುಕಟ್ಟೆ ಪ್ರವೇಶಿಸಿರುತ್ತವೆ. ಸಾಗಾಟ ಸಮಯದಲ್ಲಿ ಮತ್ತು ಸಂಗ್ರಹದಲ್ಲಿ ತಾಜಾ ಹಣ್ಣುಗಳು ಮತ್ತು ತರಕಾರಿಗಳಲ್ಲಿರುವ ಪ್ರಾಕೃತಿಕ ಎನ್‌ಜೈಮ್‌ಗಳು ಹೋಗಿರುತ್ತವೆ ಮತ್ತು ಅವುಗಳಲ್ಲಿರುವ ಪೌಷ್ಟಿಕಾಂಶಗಳು ಕಡಿಮೆಯಾಗುವಂತೆ ಮಾಡಿರುತ್ತವೆ.

ಇದಕ್ಕೆ ವ್ಯತಿರಿಕ್ತವಾಗಿ ಆಹಾರ ತಯಾರಕರು ಸಾಮಾನ್ಯವಾಗಿ ತಾಜಾವಾಗಿ ಕೊಯ್ದ ಹಣ್ಣುಗಳನ್ನು ತಕ್ಷಣವೇ ಸಂಸ್ಕರಿಸುತ್ತಾರೆ. ಹೀಗಾಗಿ ಅವುಗಳಲ್ಲಿನ ವಿಟಮಿನ್ ಮತ್ತು ಲವಣಗಳು ಶ್ರೀಮಂತವಾಗಿ ಇರುತ್ತವೆ. ಉದಾಹರಣೆಗೆ 1992ರ ಅಮೆರಿಕ

ಅಧ್ಯಯನವೊಂದರಲ್ಲಿ ಸಂಸ್ಕರಿಸಿದ ಬೀನ್ಸ್‌ಗಳು ವಿಟಮಿನ್ 'ಸಿ'ಗಳನ್ನು ಸೂಪರ್ ಮಾರುಕಟ್ಟೆಯಲ್ಲಿ ಸಿಗುವ ತಾಜಾ ಹಣ್ಣುಗಳಿಗಿಂತ ಹೆಚ್ಚು ಹೊಂದಿರುವುದು ಪತ್ತೆಯಾಗಿದೆ. ಸಾಮಾನ್ಯ ನಂಬಿಕೆಗೆ ವ್ಯತಿರಿಕ್ತವಾಗಿ ಸಂಸ್ಕರಿಸುವುದರಿಂದ ಹಣ್ಣುಗಳು ಅಥವಾ ತರಕಾರಿಗಳ ಪೌಷ್ಟಿಕಾಂಶವು ಸಾಕಷ್ಟು ಪ್ರಮಾಣದಲ್ಲಿ ಸುರಕ್ಷಿತವಾಗಿರುವುದು ಕಂಡುಬಂದಿದೆ. ಆದರೆ ಕಾಯಿಸುವುದು ಅಥವಾ ಬೇಯಿಸುವುದರಿಂದ ಕೆಲವು ವಿಟಮಿನ್‌ಗಳ ಪ್ರಮಾಣವನ್ನು ಕಡಿಮೆ ಮಾಡಿರುವುದು ತಿಳಿದುಬಂದಿದೆ. ಸಂಸ್ಕರಿತ ಪಾಲಕ್‌ಗಳು ಮತ್ತು ಸಿಹಿಗುಂಬಳಗಳಲ್ಲಿ ತಾಜಾ ಸೊಪ್ಪು ಮತ್ತು ಹಣ್ಣುಗಳಿಗಿಂತ ಹೆಚ್ಚು ಪ್ರಮಾಣದಲ್ಲಿ ವಿಟಮಿನ್ ಎ ಹೊಂದಿರುವುದು ಪತ್ತೆಯಾಗಿದೆ.

ಆದರೆ ರುಚಿಯ ಬಗ್ಗೆ ಏನು ಹೇಳಬಹುದು? ಯಾವತ್ತೂ ನಿಮಗೆ ಸಂಸ್ಕರಿತ ಸ್ಟ್ರಾಬೆರಿ ಮತ್ತು ತಾಜಾ ಸ್ಟ್ರಾಬೆರಿಯ ನಡುವೆ ಹೆಚ್ಚಿಗೆ ರುಚಿಯಲ್ಲಿ ಅಂತರವಿರುವುದಿಲ್ಲ. ಇತ್ತೀಚೆಗಿನ ದಿನಗಳಲ್ಲಿ ಸಂಸ್ಕರಿತ ಆಹಾರಗಳಿಗೆ ಮಹತ್ವ ಹೆಚ್ಚಾಗಿದೆ ಮತ್ತು ಹಣ್ಣು ಮತ್ತು ತರಕಾರಿಗಳನ್ನು ಸಂಸ್ಕರಿಸುವ ಮೂಲಕವೇ ಮಾರಲಾಗುತ್ತದೆ.

**ಕಡಲೆಕಾಯಿಗಳನ್ನು ತಿನ್ನುವುದರಿಂದ ಕೊಬ್ಬು ಹೆಚ್ಚುತ್ತದೆಯೇ?**

ಹೌದು, ಕಡಲೆಕಾಯಿಯಲ್ಲಿ ಬಹಳಷ್ಟು ಕೊಬ್ಬು ಇದೆ ಎನ್ನುವುದು ನಿಜ. ಆದರೆ ಬಹಳಷ್ಟು ಕಡಲೆಕಾಯಿಗಳಲ್ಲಿ ಉತ್ತಮ ಕೊಬ್ಬು ಅಡಗಿರುತ್ತದೆ. ಒಣಗಿದ ರೋಸ್ಟ್ ಮಾಡಿದ ಮ್ಯಾಕಡೇಮಿಯ ಅಥವಾ ನೆಲಗಡಲೆಗಳಲ್ಲಿ ಸ್ಯಾಚುರೇಟೆಡ್ ಕೊಬ್ಬಿಗಿಂತ ಮೂರು ಅಥವಾ ನಾಲ್ಕುಪಟ್ಟು ಅಧಿಕ ಹೃದಯಕ್ಕೆ ಆರೋಗ್ಯಕರವಾಗಿರುವ ಮೋನೋಸ್ಯಾಚುರೇಟೆಡ್ ಕೊಬ್ಬು ಇರುತ್ತದೆ. ಸಂಶೋಧನೆಗಳ ಪ್ರಕಾರ ಆರೋಗ್ಯಕರ ಡಯಟ್‌ನಲ್ಲಿ ಸಣ್ಣ ಪ್ರಮಾಣದಲ್ಲಿ ಕಡಲೆ ಬೀಜಗಳನ್ನು ತಿನ್ನುವುದರಿಂದ ತೂಕ ಕಳೆದುಕೊಳ್ಳಲು ಸಾಧ್ಯ.

ಅಧ್ಯಯನಕಾರರು ಹೇಳುವ ಪ್ರಕಾರ ಕಡಲೆಕಾಯಿಗಳಲ್ಲಿರುವ ಕೊಬ್ಬಿನಿಂದ ಹೆಚ್ಚು ಆರೋಗ್ಯಕರ ಭಾವನೆ ಬರುತ್ತದೆ. ಬ್ರಿಟಿಷ್ ಅಧ್ಯಯನವೊಂದು ಅತ್ಯಧಿಕ ಪ್ರೋಟಿನ್ ಆಹಾರಗಳು ಹಸಿವೆಯನ್ನು ಕಡಿಮೆ ಮಾಡುವ ಹಾರ್ಮೋನನ್ನು ಬಿಡುಗಡೆ ಮಾಡುವುದರಲ್ಲಿ ನೆರವಾಗುತ್ತದೆ ಎಂದು ಹೇಳಿದ್ದಾರೆ.

ಕಡಲೆಬೀಜಗಳಲ್ಲಿರುವ ಆರೋಗ್ಯಕರ ಕೊಬ್ಬಿನ ಅತಿಯಾದ ಸಂಗ್ರಹವು ಕೊಲೆಸ್ಟಿರಾಲ್ ಅಥವಾ ಇತರ ರಕ್ತದ ಕೊಬ್ಬುಗಳನ್ನು ಹೆಚ್ಚಿಸದೆಯೇ ಹಸಿವೆಯನ್ನು ನೀಗಿಸುವಲ್ಲಿ ನೆರವಾಗುತ್ತದೆ. ಅವು ಅತ್ಯುತ್ತಮ ಫೈಬರ್ ಮೂಲಗಳೂ ಆಗಿವೆ. ಅಲ್ಲದೆ ವಿಟಮಿನ್ ಇ, ಮೆಗ್ನೀಷಿಯಂ, ಫೋಲೇಟ್, ತಾಮ್ರ ಸೇರಿದಂತೆ ಪೂರ್ಣವಾಗಿ ಪೌಷ್ಟಿಕಾಂಶಗಳನ್ನು ಹೊಂದಿವೆ. ನಿತ್ಯವೂ ಸ್ವಲ್ಪಮಟ್ಟಿಗೆ ಕಡಲೆಬೀಜಗಳನ್ನು ತಿನ್ನುವ

ಮಹಿಳೆಯರು ಕಡಲೆಬೀಜವನ್ನು ತಿನ್ನದೇ ಇರುವ ಮಹಿಳೆಯರಿಗೆ ಹೋಲಿಸಿದರೆ ಶೇ. 35ರಷ್ಟು ಹೃದಯದ ರೋಗದ ಅಪಾಯದಿಂದ ಬಚಾವಾಗುತ್ತಾರೆ. ದ್ವಿದಳ ಧಾನ್ಯಗಳು, ಕಡಲೆಕಾಯಿ ಮತ್ತು ಕಡಿಮೆ ಕೊಬ್ಬಿನ ಡೈರಿ ಆಹಾರಗಳು ಸುರಕ್ಷಿತವಾಗಿ ತೂಕ ಕಡಿಮೆ ಮಾಡುತ್ತವೆ ಮತ್ತು ಹೃದಯ ರೋಗ ಬಾರದಂತೆಯೂ ನಿಮ್ಮನ್ನು ಕಾಪಾಡುತ್ತವೆ. ಕಡಲೆಬೀಜಗಳ ವಿಷಯಕ್ಕೆ ಬಂದಲ್ಲಿ ಅಕ್ರೋಟುಗಳು ಅತ್ಯುತ್ತಮ ಆಂಟಿ ಆಕ್ಸಿಡಂಟ್‌ಗಳಾಗಿವೆ. ಕೆಲವು ಬೀಜಗಳು ವಿಟಮಿನ್‌ಗಳಿಂದ ಶ್ರೀಮಂತವಾಗಿದ್ದರೆ, ಇನ್ನು ಕೆಲವು ಬೀಜಗಳಲ್ಲಿ ಮೊನೋಸ್ಯಾಚುರೇಟೆಡ್ ಪ್ರಮಾಣ ಅಧಿಕವಾಗಿರುತ್ತವೆ. ಇನ್ನು ಕೆಲವು ಬೀಜಗಳಲ್ಲಿ ಕ್ಯಾಲ್ಸಿಯಂ ಅಂಶವಿರುತ್ತದೆ. ಹೀಗಾಗಿ ಯಾವ ಬೀಜಗಳಲ್ಲಿ ಏನಿದೆ ಎಂದು ತಿಳಿದುಕೊಂಡು ಆರೋಗ್ಯವನ್ನು ಉತ್ತಮಪಡಿಸಿಕೊಳ್ಳಬಹುದಾಗಿದೆ. ಹೃದಯದ ಸಮಸ್ಯೆಗಳನ್ನು ನಿವಾರಿಸಲು, ಮಧುಮೇಹವನ್ನು ಮತ್ತು ರಕ್ತದೊತ್ತಡವನ್ನು ನಿವಾರಿಸುವಲ್ಲಿ ಹಾಗೂ ದೇಹದ ತೂಕವನ್ನು ಕಡಿಮೆ ಮಾಡಿಕೊಳ್ಳುವಲ್ಲಿ ಈ ಕಡಲೆ ಬೀಜಗಳು ಬಹಳ ಉಪಯೋಗಕ್ಕೆ ಬರುತ್ತವೆ.

**ಕಚ್ಚಾ ಸಕ್ಕರೆ ಆರೋಗ್ಯಕ್ಕೆ ಉತ್ತಮ**

ನೀವು ಕಚ್ಚಾ ಸಕ್ಕರೆ ಪಡೆದುಕೊಳ್ಳಲು ಅಗತ್ಯಕ್ಕಿಂತ ಹೆಚ್ಚು ದುಡ್ಡು ಖರ್ಚು ಮಾಡುತ್ತೀರಾ? ಸಕ್ಕರೆಯ ರುಚಿ ಮತ್ತು ರೂಪ ನಿಮಗೆ ಹಿಡಿಸಿದಲ್ಲಿ ಖಂಡಿತಾ ಅಗತ್ಯಕ್ಕಿಂತ ಹೆಚ್ಚು ಖರ್ಚು ಮಾಡಿದರೆ ತಪ್ಪೇನಿಲ್ಲ. ಆದರೆ ಕಚ್ಚಾ ಸಕ್ಕರೆಯು ಹೆಚ್ಚು ಪೌಷ್ಠಿಕಾಂಶಗಳನ್ನು ಹೊಂದಿರುತ್ತದೆ ಮತ್ತು ನಯವಾದ ಬಿಳಿ ಸಕ್ಕರೆಗಿಂತ ಆರೋಗ್ಯಕ್ಕೆ ಒಳ್ಳೆಯದು ಎನ್ನುವ ಮಾತನ್ನು ನಂಬಿ ಅದನ್ನು ಖರೀದಿಸಲು ಅಗತ್ಯಕ್ಕಿಂತ ಹೆಚ್ಚು ದುಡ್ಡು ಸುರಿಯುವುದು ಮಾತ್ರ ಮೂರ್ಖತನ ಆದೀತು.

ವಿದೇಶಗಳಲ್ಲಿ ಹೆಚ್ಚಾಗಿ ಜನಪ್ರಿಯವಾಗಿರುವ ಕಚ್ಚಾ ಸಕ್ಕರೆ ಟರ್ಬಿನಾಡೋ ಸಕ್ಕರೆಯಾಗಿರುತ್ತದೆ. ಇವುಗಳನ್ನು ಅರೆಯಾಗಿ ಟರ್ಬೈನ್‌ಗಳಲ್ಲಿ ಅಥವಾ ಸೆಂಟ್ರಿಫ್ಯೂಜ್‌ಗಳಲ್ಲಿ ಸಂಸ್ಕರಿಸಲಾಗುವ ಕಾರಣ ಈ ಹೆಸರು ಬಂದಿದೆ. ಬಿಳಿ ಸಕ್ಕರೆ ಹುಡಿಗಳು ಸಂಸ್ಕರಣೆಯ ಸಮಯದಲ್ಲಿ ಮೊಲಾಸಸ್‌ಗಳಿಂದ ಭಿನ್ನ ಮಾಡಲಾಗಿರುತ್ತದೆ. ಡೆಮರಾರಾ ಮತ್ತು ಮಸ್ಕೊವಾಡೋ ಸಕ್ಕರೆಗಳಲ್ಲೂ ಇದೇ ಮಾದರಿಯ ಸಿಹಿ ಇದೆ.

ಈ ಸಕ್ಕರೆಗಳಲ್ಲಿ ಅನೂಹ್ಯ ರುಚಿ ಇರುವ ಜೊತೆಯಲ್ಲಿಯೇ ಅಡುಗೆಗೆ ಬಳಸಿದಾಗ ಇವು ಇತರ ಸಕ್ಕರೆಗಳಿಗೆ ಹೋಲಿಸಿದಲ್ಲಿ ಹೆಚ್ಚು ಆರೋಗ್ಯಕರ ಮತ್ತು ಸಿಹಿಯಾಗಿರುತ್ತದೆ. ಬಿಳಿ ಸಕ್ಕರೆಯಂತಲ್ಲದೆ ಇವು ಲವಣಗಳನ್ನು ಹೊಂದಿರುತ್ತದೆಯಾದರೂ ಸ್ವಲ್ಪ ಮಟ್ಟಿಗೆ ಮಾತ್ರ. ಆದರೆ ತೂಕ ಕಳೆದುಕೊಳ್ಳಲು

ಬಯಸುವ ಜನರಿಗೆ ಟರ್ಬಿನಾಡೋ ಅಥವಾ ಇನ್ಯಾವುದೇ ರೀತಿಯ ಸಕ್ಕರೆ ಯಾವುದೇ ರೀತಿಯಲ್ಲೂ ನೆರವಾಗುವುದಿಲ್ಲ. ಬಿಳಿ ಸಕ್ಕರೆಯಂತೆಯೇ ಅವು ಕೂಡ ಒಂದು ಟೀ ಸ್ಪೂನ್‌ಗೆ 45 ಕಿಲೋ ಜೂಲ್‌ಗಳನ್ನು ಹೊಂದಿರುತ್ತವೆ.

ಸಕ್ಕರೆಯನ್ನು ಮಾರುವಾಗ ಅದಕ್ಕೆ ಕಚ್ಚಾ ಎನ್ನುವ ಶಬ್ದವನ್ನು ಸೇರಿಸುವ ಮೂಲಕ ಜಾಹೀರಾತು ನೀಡುವುದು ದಾರಿ ತಪ್ಪಿಸುವ ಪ್ರಯತ್ನವೇ ಆಗಿದೆ. ವಾಸ್ತವದಲ್ಲಿ ಹೇಳಬೇಕೆಂದರೆ ಕಚ್ಚಾ ಸಕ್ಕರೆ ಎನ್ನುವ ಶಬ್ದವನ್ನು ಕಾರ್ಖಾನೆಗಳು ಕಬ್ಬಿನ ಜಲ್ಲೆಗಳನ್ನು ಸಂಸ್ಕರಿಸುವಾಗ ಬರುವ ಕಂದು ಬಣ್ಣದ ಹರಳುಗಳಿಗೆ ಬಳಸುತ್ತಾರೆ. ಕಚ್ಚಾ ಸಕ್ಕರೆಯನ್ನು ನಂತರ ಇನ್ನಷ್ಟು ನಯಗೊಳಿಸಿ ಇತರ ಸಿಹಿ ರೂಪಕ್ಕೆ ತರಲಾಗುತ್ತದೆ. ನಿಜವಾದ ಕಚ್ಚಾ ಸಕ್ಕರೆಯನ್ನು ಮಾನವ ಸೇವನೆಗೆ ಸೂಕ್ತವಲ್ಲ ಎಂದುಕೊಂಡಿರುವುದರಿಂದ ಅದನ್ನು ಮಾರುವುದಿಲ್ಲ. ಅಲ್ಲದೆ ಅದರಲ್ಲಿ ಹುದುಗಿನ ಹುಡಿ (ಯೀಸ್ಟ್), ಪುಡಿ ಮಣ್ಣು, ಬ್ಯಾಕ್ಟೀರಿಯಾ, ಧೂಳು, ಕೀಟಗಳ ಭಾಗಗಳು ಮತ್ತು ಇತರ ಬಳಸಲು ಸಾಧ್ಯವಿಲ್ಲದ ವಸ್ತುಗಳು ಇರುತ್ತವೆ.